ವಿಶ್ವವಾಣಿ

ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ಪ್ರತಿ ದಿನವೂ ನಿಮ್ಮ ಪಾಲಿಗೆ ಒಂದು ಒಳ್ಳೆಯ ಅವಕಾಶವಾಗಲಿ. ಉತ್ತಮ ವ್ಯಕ್ತಿಯಾಗಲು, ತಪ್ಪುಗಳನ್ನು ತಿದ್ದಿಕೊಳ್ಳಲು, ನಿನ್ನೆಯ ಸಾಧನೆಯನ್ನು ಮತ್ತಷ್ಟು ಉತ್ತಮಪಡಿಸಿಕೊಳ್ಳಲು, ಇನ್ನಷ್ಟು ಪರೋಪಕಾರಿಯಾಗಲು, ಸಮಾಜಮುಖಿಯಾಗಲು ಅವಕಾಶವಾಗಲಿ. ಅದನ್ನು ನೀವು ಸಮರ್ಥವಾಗಿ ಬಳಸಿಕೊಳ್ಳುವಂತಾಗಲಿ.

ವಕ್ರತುಂಡೋಕ್ತಿ

ಕೆಲವು ಹೆಂಗಸರನ್ನು ಅವರ ಡ್ರೆಸ್ಸಿನಿಂದ ಅಳೆಯಬಾರದು. ಕಾರಣ ಅವರು ಅದನ್ನು ಅತಿ ಕಡಿಮೆ ಬಳಸಿರುತ್ತಾರೆ.

ಸ್ವತಂತ್ರ ಭಾರತದ 51ನೇ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾ.ಸಂಜೀವ್ ಖನ್ನಾ(64) ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಮಾಣ ವಚನ ಬೋಧಿಸಿದರು.

ಪುಟ ತೆರೆದಂತೆ...

ಪ್ರತಿಷ್ಠೆಯೇ ಈ ಉಪಸಮರದ ಮೂಲ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ

ನಮಗೆ ಬೇಕಾದ್ದನ್ನು ಪಡೆವ ದಾರಿಯಿದು!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ

ಮಾತಂದ್ರೆ ಮಾತು

ನೀವು ನನ್ನನ್ನು ತುಂಬಾ ಪ್ರೀತಿಸುತ್ತೀರಿ. ಆದರೆ ನನ್ನ ನ್ಯೂನತೆಗಳ ಬಗ್ಗೆ ನನಗೆ ಅರಿವಿದೆ. ಯಾವುದೇ ಕಲಾವಿದ ತನ್ನ ಕಲೆಗಿಂತ ದೊಡ್ಡವನಾಗಬಾರದು. ನಾನು ಇನ್ನೂ ಕಲಿಯಲು ಬಯಸುತ್ತೇನೆ. ಕಲೆಯೊಂದಿಗೆ ಸಂಪರ್ಕದಲ್ಲಿರಲು ನಾನು ಬಯಸುತ್ತೇನೆ. ದಯವಿಟ್ಟು ಇನ್ನು ಮುಂದೆ ನನ್ನನ್ನು ಉಳಗನಾಯಗನ್ (ವಿಶ್ವನಾಯಕ) ಎಂದು ಕರೆಯಬೇಡಿ. ನಿಮ್ಮ ಪ್ರೀತಿಗೆ ನಾನು ಸದಾ ಚಿರಋಣಿ.

-ಕಮಲ್ ಹಾಸನ್ ಹಿರಿಯ ನಟ

ಮೂರು ಕ್ಷೇತ್ರಗಳಲ್ಲಿ ನಾಳೆ ಮತದಾನ | ತಾರಕಕ್ಕೇರಿದ ಆರೋಪ-ಪ್ರತ್ಯಾರೋಪ

ಬಹಿರಂಗ ಪ್ರಚಾರಕ್ಕೆ ತೆರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮೂರೂ ಪಕ್ಷಗಳಿಗೆ ಪ್ರತಿಷ್ಠೆಯ ಕಣವಾಗಿದ್ದ ಉಪಸಮರದ ಬಹಿರಂಗ ಪ್ರಚಾರಕ್ಕೆ ತೆರೆಬಿದ್ದಿದ್ದು, ಮನೆ ಮನೆ ಪ್ರಚಾರ ಹಾಗೂ ಕತ್ತಲ ರಾತ್ರಿಯ ಚಮತ್ಕಾರದ ಲೆಕ್ಕಾಚಾರಗಳು ಶುರುವಾಗಿವೆ.

ಕೊನೆ ದಿನದ ಹೈಲೈಟ್ಸ್

- ಚನ್ನಪಟ್ಟಣ ಕ್ಷೇತ್ರದಲ್ಲಿ ಮೂರೂ ಪಕ್ಷಗಳ ಪ್ರಮುಖರ ಸಮಾಗಮ
- ದೇವೇಗೌಡರ ವಿರುದ್ಧ ಏಕವಚನದಲ್ಲೇ ಸಿದ್ದು ವಾಗ್ದಾಳಿ
- ಚನ್ನಪಟ್ಟಣದಲ್ಲಿಯೇ 3 ಪಕ್ಷಗಳ ಶಕ್ತಿ ಪ್ರದರ್ಶನ
- ಸಂಜೆ 4ರ ಬಳಿಕ ಮೂರು ಕ್ಷೇತ್ರವನ್ನು ಖಾಲಿ ಮಾಡಿದ ನಾಯಕರು
- ಡಿಕೆಶಿ, ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ ಮಾಜಿ ಪ್ರಧಾನಿ ದೇವೇಗೌಡ

ಕಾಂಗ್ರೆಸ್ ಮತ್ತು ಮೈತ್ರಿ ಪಕ್ಷಗಳ ನಾಯಕರು ಚನ್ನಪಟ್ಟಣ, ಶಿಗ್ಗಾವಿ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಲ್ಲಿ ಅಬ್ಬರದ ಪ್ರಚಾರ ನಡೆಸಿ ಕೊನೆ ಗಳಿಗೆಯ ಮತ ಭೇಟೆ ನಡೆಸಿದರು. ಬುಧವಾರ ಮೂರು ಕ್ಷೇತ್ರಗಳಿಗೆ ಮತದಾನ ನಡೆಯಲಿದ್ದು, ನ.23ರಂದು ಫಲಿತಾಂಶ ಪ್ರಕಟವಾಗಲಿದೆ.

ನಿಖಿಲ್ ಕುಮಾರಸ್ವಾಮಿ ಪತ್ನಿ ರೇವತಿ ನಿಖಿಲ್ ಕುಮಾರ ಸ್ವಾಮಿ ಅವರು ಸೋಮವಾರ ಬೆಳಗ್ಗೆ ಚನ್ನಪಟ್ಟಣದ ವಿವಿಧೆಡೆ ಮತ ಯಾಚಿಸಿ, ವಿದ್ಯಾರ್ಥಿಗಳ ಜತೆ ಸೆಲ್ಫಿ ಕ್ಲಿಕ್ಕಿಸಿಕೊಂಡರು.

ಮಂಗಳವಾರ ಮನೆ ಮನೆಗೆ ತೆರಳಿ ಅಭ್ಯರ್ಥಿಗಳು ಪ್ರಚಾರ ನಡೆಸಲು ಮಾತ್ರ ಅವಕಾಶವಿದೆ. ಚನ್ನಪಟ್ಟಣದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಿದ್ದು, ಕಾಂಗ್ರೆಸ್‌ನಿಂದ ಸಿ.ಪಿ.ಯೋಗೇಶ್ವರ ಅಖಾಡಕ್ಕಿಳಿದ್ದಿದ್ದಾರೆ. ಈ ಕ್ಷೇತ್ರದ ಚುನಾವಣೆ ಕಾಂಗ್ರೆಸ್ ಮತ್ತು ಎನ್‌ಡಿಎ ಮೈತ್ರಿಕೂಟಕ್ಕೆ ಸವಾಲಾಗಿ ಪರಿಣಿಮಿಸಿದ್ದು, ಕ್ಷೇತ್ರದಲ್ಲಿ ಪ್ರಚಾರ ಹಾಗೂ ರಾಜಕೀಯ ಪಕ್ಷಗಳ ನಡುವೆ ಆರೋಪ ಪ್ರತ್ಯಾರೋಪಗಳು ತಾರಕಕ್ಕೇರಿವೆ.

ಈ ಬಾರಿಯ ಶಿಗ್ಗಾವಿ ಕ್ಷೇತ್ರದಲ್ಲೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಪೈಪೋಟಿ ಕಂಡು ಬಂದಿವೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುತ್ರ ಭರತ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್‌ನಿಂದ ಯಾಸಿರ್ ಅಹ್ಮದ್ ಪಠಾಣ ಸ್ಪರ್ಧಿಸಿದ್ದು, ಇಬ್ಬರ ನಡುವೆ ತೀವ್ರ ಪೈಪೋಟಿ ನಡೆದಿದೆ. ಮತ್ತೊಂದೆಡೆ ಸಂಡೂರಿನಲ್ಲಿ ಸಂಸದ ತುಕಾರಾಂ ಪತ್ನಿ ಅನ್ನಪೂರ್ಣ ಕಣಕ್ಕಿಳಿದ್ದಿದ್ದರೆ ಬಿಜೆಪಿಯಿಂದ ಬಂಗಾರು ಹನುಮಂತು ಸ್ಪರ್ಧಿಸಿದ್ದಾರೆ. ಈ ಕ್ಷೇತ್ರದಲ್ಲಿ ರಾಜಕೀಯ ನಾಯಕರು ಬಿರುಸಿನ ಪ್ರಚಾರ ನಡೆಸಿ ಮತಯಾಚಿಸಿದ್ದಾರೆ.

ಕೊನೆಯ ದಿನವೂ ಚನ್ನಪಟ್ಟಣವನ್ನೇ ಕೇಂದ್ರೀಕರಿಸಿ ಮೂರು ಪಕ್ಷದ ನಾಯಕರು ಪ್ರಚಾರ ನಡೆಸಿದ್ದು, ನಿಖಿಲ್ ಕುಮಾರಸ್ವಾಮಿ ಪರವಾಗಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಚಾರ ನಡೆಸಿದರೆ, ಸಿ.ಪಿ.ಯೋಗೇಶ್ವರ ಪರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕೈ ನಾಯಕರು ಅಂತಿಮ ಕ್ಷಣದ ಒಲೈಕೆ ನಡೆಸಿದರು.

ನಾಯಕರ ಮಾತಿನೇಟು

- ದೇವೇಗೌಡರು, ಕುಮಾರಸ್ವಾಮಿ ಅವರು ಒಬ್ಬನೇ ಒಬ್ಬ ಒಕ್ಕಲಿಗರನ್ನೂ ಬೆಳೆಯಲು ಬಿಡಲ್ಲ: ಸಿದ್ದರಾಮಯ್ಯ
- ಸಿದ್ದರಾಮಯ್ಯ ಅವರನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದೇ ಈ ದೇವೇಗೌಡ: ಎಚ್.ಡಿ.ದೇವೇಗೌಡ
- ಸಿಎಂ ಆದಿಯಾಗಿ ಸುಳ್ಳು ಹೇಳುತ್ತಿದ್ದಾರೆ: ಬೊಮ್ಮಾಯಿ

ದೇವೇಗೌಡರು ಮತ್ತು ಕುಮಾರ ಸ್ವಾಮಿ ಅವರು ಒಬ್ಬನೇ ಒಬ್ಬ ಒಕ್ಕಲಿಗರನ್ನೂ ಬೆಳೆಯಲು ಬಿಡಲ್ಲ. ಬುದ್ಧಿವಂತ ಒಕ್ಕಲಿಗರು, ರಾಜಕೀಯ ಪ್ರಜ್ಞೆಯಿರುವ ಒಕ್ಕಲಿಗರನ್ನು ದೇವೇಗೌಡರು ಮುಗಿಸುತ್ತಾರೆ. ಈಗ ಡಿಕೆ ಸಹೋದರರನ್ನು ಮುಗಿಸುವ ಪ್ರಯತ್ನ ಮಾಡ್ತಿದ್ದಾರೆ. ಸಿದ್ದರಾಮಯ್ಯ ಅವರು ಎರಡನೇ ಬಾರಿ ಮುಖ್ಯಮಂತ್ರಿ ಆದ್ರೆ ಅಂತ ದೇವೇಗೌಡರಿಗೆ ಹೊಟ್ಟೆಯುರಿ. ಅದಕ್ಕೇ ನಮ್ಮ ಸರಕಾರ ಕಿತ್ತಾಕುತ್ತೇವೆ ಎನ್ನುತ್ತಿದ್ದಾರೆ.

- ಸಿದ್ದರಾಮಯ್ಯ ಮುಖ್ಯಮಂತ್ರಿ

ಸಿದ್ದರಾಮಯ್ಯ ಅವರನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದೇ ಈ ದೇವೇಗೌಡ. ಮತ್ತೆ ಅವರೇನು ಎಂದು ಹೇಳಲು ನಾನು ಹೋಗಲ್ಲ. ನಿಖಿಲ್ ನನ್ನ ಮೊಮ್ಮಗ ಎನ್ನುವ ಮಾತು ಬೇಕಿಲ್ಲ. ನಾಮಪತ್ರ ಸಲ್ಲಿಸುವವರೆಗೂ ನಿಖಿಲ್ ಹೆಸರನ್ನು ನಾನು ಉಲ್ಲೇಖಿಸಲೇ ಇಲ್ಲ. ಮಹಾನುಭಾವ ಎನ್ನುವ ಡಿಕೆಶಿಯ ಸೊಕ್ಕು ಮುರಿಯಲು ನಿಖಿಲ್ ಗೆಲುವು ಅನಿವಾರ್ಯ. ಪುಣ್ಯಾತ್ಮರಾದ ಮತದಾರರ ನಿರ್ಣಯವೇ ಎಲ್ಲದಕ್ಕೂ ಉತ್ತರ.

- ಎಚ್.ಡಿ.ದೇವೇಗೌಡ ಮಾಜಿ ಪ್ರಧಾನಿ

ಈ ಸರಕಾರಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆಯೊ ಇಲ್ಲವೋ ಗೊತ್ತಿಲ್ಲ. ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿ, ಸ್ವೇಚ್ಛಾಚಾರದಿಂದ ಎಲ್ಲ ಮಂತ್ರಿಗಳು ಅವರ ಜಾತಿ ಆಧಾರದಲ್ಲಿ ಮತ ಕೇಳುವುದಲ್ಲದೇ ಹಣ ಹಂಚಿಕೆ ಮಾಡುತ್ತಿದ್ದಾರೆ. ಸಿಎಂ ಆದಿಯಾಗಿ ಹಸಿ ಸುಳ್ಳು ಹೇಳುತ್ತಿದ್ದಾರೆ. ಸಿಎಂ ಒಂದು ದಿನವೂ ಈ ಕ್ಷೇತ್ರಕ್ಕೆ ಏನು ಮಾಡಿದ್ದೇನೆ ಎಂದು ಹೇಳಲಿಲ್ಲ . ನಾನೇನು ಮಾಡಿದ್ದೇನೆ ಎನ್ನುವುದಕ್ಕೆ ದಾಖಲೆಯಿದೆ, ಪರಿಶೀಲಿಸಿ.

- ಬಸವರಾಜ ಬೊಮ್ಮಾಯಿ ಮಾಜಿ ಮುಖ್ಯಮಂತ್ರಿ

ಕಾಲಾ ಕುಮಾರಸ್ವಾಮಿ ಹೇಳಿಕೆಗೆ ತೀವ್ರ ಆಕ್ಷೇಪ

ಜಮೀರ್ ಅಹ್ಮದ್‌ಗೆ ಮತ್ತೊಂದು ಸಂಕಷ್ಟ

ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು 'ಕಾಲಾ(ಕರಿಯ) ಕುಮಾರಸ್ವಾಮಿ' ಎಂದೂ ಹಾಗೂ ಇಡೀ ದೇವೇಗೌಡರ ಕುಟುಂಬವನ್ನೇ ಖರೀದಿ ಮಾಡುತ್ತೇನೆ ಎನ್ನುವ ಸಚಿವ ಜಮೀರ್ ಅಹ್ಮದ್ ಹೇಳಿಕೆ ಇದೀಗ ಭಾರಿ ವಿವಾದಕ್ಕೆ ಕಾರಣವಾಗಿದೆ. ಬಿಜೆಪಿಯ ಕೇಂದ್ರ ನಾಯ ಕರು ಜಮೀರ್ ವಿರುದ್ಧ ಜನಾಂಗೀಯ ನಿಂದನೆಯ ಆರೋಪವನ್ನು ಮಾಡುವ ಮೂಲಕ ರಾಷ್ಟ್ರಮಟ್ಟದಲ್ಲಿ ಸದ್ದಾಗುತ್ತಿದೆ.

ಜಮೀರ್ ಚುನಾವಣಾ ಪ್ರಚಾರದ ವೇಳೆ 'ಬಿಜೆಪಿಯನ್ನು ನಂಬಿದರೂ ಕಾಲಾ ಕುಮಾರಸ್ವಾಮಿಯನ್ನು ನಂಬಬಾರದು' ಎಂದು ಹೇಳಿರುವುದು ಇದೀಗ ವಿವಾದಕ್ಕೆ ಕಾರಣವಾಗಿದೆ. ಆದರೆ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ಜಮೀರ್ ಅಹ್ಮದ್, ನಾನು ಮೊದಲಿನಿಂದಲೂ ಕುಮಾರಸ್ವಾಮಿ ಅವರನ್ನು ಕರಿಯಣ್ಣ ಎಂದು ಕರೆಯುತ್ತಿದ್ದು, ಅವರು ನನ್ನನ್ನು ಕುಳ್ಳ ಎನ್ನುತ್ತಾರೆ. ಮೊದಲಿನಿಂದಲೂ ಅದೇ ಶಬ್ದದಲ್ಲಿ ಕರೆಯುವುದರಿಂದ ಉರ್ದುವಿನಲ್ಲಿ ಮಾತನಾಡುವಾಗ ಸ್ವಾಭಾವಿಕವಾಗಿ ಆ ಹೇಳಿಕೆ ಬಂದಿದೆ. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಜಮೀರ್ ತಮ್ಮ ಹೇಳಿಕೆಯನ್ನು ಸಮರ್ಥಿ ಸಿಕೊಂಡರೂ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸಚಿವರನ್ನು ಈ ರೀತಿ ವರ್ಣನಿಂದಕ ಹಾಗೂ ಜನಾಂಗೀಯ ನಿಂದನೆ ಮಾಡುವುದು ಸರಿಯಲ್ಲ. ಅವರ ವಿರುದ್ಧ ಕೂಡಲೇ ದೂರು ದಾಖಲಿಸಬೇಕು ಎಂದು ಆಗ್ರಹಿಸಿದ್ದಾರೆ.

→ 4

ಕುಮಾರ ಸ್ವಾಮಿ ಅವರನ್ನು ಮೊದಲಿನಿಂದಲೂ 'ಕರಿಯಣ್ಣ' ಅಂತಲೇ ಕರೆಯೋದು. ಅದನ್ನು ಉರ್ದುವಿನಲ್ಲಿ ಹೇಳಿದ್ದೇನೆ. ಮುಂಚೆಯಿಂದಲೂ ಕರೆಯುವುದರಿಂದ ಸ್ವಾಭಾವಿಕವಾಗಿ ಆ ಪದ ಬಂದಿದೆ. ಇನ್ನು ದೇವೇಗೌಡರನ್ನು ಖರೀದಿಸುವ ಅಥವಾ ಒಕ್ಕಲಿಗರನ್ನು ಖರೀದಿಸುತ್ತೇನೆ ಎಂದಿಲ್ಲ. ಆದರೆ ನಮ್ಮ ಸಮಾಜವನ್ನು ಖರೀದಿ ಮಾಡಲು ಆಗಲ್ಲ ಅಂದಿದ್ದೇನೆ.

- ಜಮೀರ್ ಅಹ್ಮದ್ ಸಚಿವ

ಸಚಿವ ಜಮೀರ್ ಅಹ್ಮದ್ ಅವರು ಒಕ್ಕಲಿಗರನ್ನು ಅಥವಾ ಹಿಂದೂಗಳನ್ನು ಖರೀದಿಸುತ್ತೇನೆ ಎಂದು ಹೇಳುತ್ತಿದ್ದಾರೆಯೇ? ದೇವೇಗೌಡರು ಚಾಮರಾಜಪೇಟೆಗೆ ಹೋಗಿ ರ‍್ಯಾಲಿ ಮಾಡಿ ಜಮೀರ್‌ರನ್ನು ಗೆಲ್ಲಿಸಿ ಜೀವನ ನೀಡಿದ್ದಾರೆ. ಆದರೀಗ ಅದೇ ಜಮೀರ್, ದೇವೇಗೌಡರ ಕುಟುಂಬವನ್ನು ಖರೀದಿಸುತ್ತೇವೆ ಎಂದು ಹೇಳಿದ್ದಾರೆ. ಇದು ಖಂಡನೀಯ.

- ಆರ್.ಅಶೋಕ ಪ್ರತಿಪಕ್ಷ ನಾಯಕ

11 ಶಂಕಿತ ಉಗ್ರರ ಹತ್ಯೆ

ಇಂಫಾಲ್: ಮಣಿಪುರದ ಜಿರಿಬಾಮ್ ಜಿಲ್ಲೆಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ 11 ಶಂಕಿತ ಉಗ್ರರನ್ನು ಹತ್ಯೆ ಮಾಡಲಾಗಿದೆ. ಕೇಂದ್ರ ಮೀಸಲು ಪಡೆಗಳು ಮತ್ತು ಉಗ್ರರ ನಡುವೆ ಎನ್‌ಕೌಂಟರ್ ನಡೆದಿದೆ. ಶಂಕಿತ ಉಗ್ರರು ಮೈತೇಯಿ ಸಮುದಾಯದ ಮಹಿಳೆಯೊಬ್ಬರನ್ನು ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕಳೆದ ವರ್ಷ ಮೇ 3ರಂದು ಮಣಿಪುರದಲ್ಲಿ ಕುಕಿ ಮತ್ತು ಮೈತೇಯಿ ಸಮುದಾಯಗಳ ನಡುವೆ ಸಂಘರ್ಷ ಆರಂಭವಾದಾಗಿನಿಂದಲೂ ನೂರಾರು ಮಂದಿಯನ್ನು ಹತ್ಯೆ ಮಾಡಲಾಗಿದೆ.

ಗುಂಡೇಟಿಗೆ ಯುವಕ ಬಲಿ

ಖಾನಾಪುರ: ಖಾನಾಪುರ ತಾಲೂಕಿನ ಐತಿಹಾಸಿಕ ಹಲಸಿ ಗ್ರಾಮ ವ್ಯಾಪ್ತಿಯಲ್ಲಿ ಸೋಮವಾರ ನಸುಕಿನಲ್ಲಿ ಅಪರಿಚಿತರು ಗುಂಡು ಹಾರಿಸಿದ್ದು ಯುವಕ ಮೃತಪಟ್ಟಿದ್ದಾನೆ. ಹಲಸಿ ನಿವಾಸಿ ಅಲ್ತಾಫ್ ಮಕಾನದಾರ (30) ಸಾವಿಗೀಡಾದವರು. ಕಾಡಂಚಿಗೆ ಇರುವ ರಸ್ತೆ ಪಕ್ಕದ ಮರಳು ತೆಗೆಯುವ ಸ್ಥಳದಲ್ಲಿ ಘಟನೆ ನಡೆದಿದೆ. ಗುಂಡು ನೇರವಾಗಿ ಯುವಕನ ಎದೆಭಾಗದ ಕೆಳಗೆ ಬಿದ್ದಿದ್ದರಿಂದ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನೆ ಹೇಗೆ ನಡೆಯಿತು ಎಂಬ ಬಗ್ಗೆ ಪೊಲೀಸರಿಗೆ ಸ್ಪಷ್ಟವಾಗಿ ಗೊತ್ತಾಗಿಲ್ಲ.

ಇರಾನ್ ಯೋಧರ ಬಲಿ

ಟೆಹ್ರಾನ್: ಇರಾನ್‌ನೊಂದಿಗಿನ ಪಾಕಿಸ್ತಾನದ ಗಡಿಯಲ್ಲಿ ಉಗ್ರರು ನಡೆಸಿದ ದಾಳಿಯಲ್ಲಿ ಐವರು ಇರಾನಿನ ಯೋಧರು ಸಾವನ್ನಪ್ಪಿದ್ದಾರೆ. ಮೃತರು ಅರೆಸೈನಿಕ ರೆವಲ್ಯೂಷನರಿ ಗಾರ್ಡ್‌ನ ಸ್ವಯಂಸೇವಕ ಬಸಿಜ್ ಪಡೆಯ ಬಲೂಚ್ ಜನಾಂಗೀಯ ಸದಸ್ಯರು ಎಂದು ಗುರುತಿಸಲಾಗಿದೆ. ಈ ದಾಳಿಯ ಹೊಣೆಯನ್ನು ಯಾವುದೇ ಗುಂಪು ತಕ್ಷಣವೇ ಹೊತ್ತುಕೊಂಡಿಲ್ಲ. ಕಳೆದ ತಿಂಗಳು, ಅಪರಿಚಿತ ಬಂದೂಕುಧಾರಿಗಳು ಪ್ರಾಂತ್ಯದ ರೆವಲ್ಯೂಷನರಿ ಗಾರ್ಡ್ ಮುಖ್ಯಸ್ಥ ಸೇರಿದಂತೆ ನಾಲ್ವರನ್ನು ಕೊಂದಿದ್ದರು.

ನ್ಯಾ.ಮೈಕಲ್ ಡಿ. ಕುನ್ಹಾ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗೆ ಕಾಂಗ್ರೆಸ್ ಖಂಡನೆ

ಜೋಶಿ ವಿರುದ್ಧ ರಾಜ್ಯಪಾಲರಿಗೆ ದೂರು

ಬೆಂಗಳೂರು: ಕೋವಿಡ್ ಅಕ್ರಮದ ಮಧ್ಯಂತರ ವರದಿ ನೀಡಿದ್ದ ನಿವೃತ್ತ ನ್ಯಾ.ಮೈಕಲ್ ಡಿ. ಕುನ್ಹಾ ಅವರ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿದ್ದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸಚಿವ ದಿನೇಶ್ ಗುಂಡೂರಾವ್ ಹಾಗೂ ಕೃಷ್ಣಬೈರೇಗೌಡ ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದಾರೆ.

ಕೋವಿಡ್ ಹಗರಣದಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಶ್ರೀರಾಮುಲು ಅವರ ಹೆಸರು ಉಲ್ಲೇಖವಾಗಿರುವುದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸುವ ವೇಳೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು, 'ಕುನ್ಹಾ ಅವರು ಕಾಂಗ್ರೆಸ್ ಏಜೆಂಟ್ ರೀತಿ ವರದಿ ನೀಡಿದ್ದಾರೆ' ಎನ್ನುವ ಹೇಳಿಕೆ ನೀಡಿದ್ದರು. ಈ ಹೇಳಿಕೆ ತೀವ್ರ ವಿವಾದಕ್ಕೆ ಕಾರಣವಾಗಿದೆ.

ಕೇಂದ್ರ ಸಚಿವರಾಗಿ, ಜವಾಬ್ದಾರಿಯುತ ಸ್ಥಾನದಲ್ಲಿರುವ ವರು ನಿವೃತ್ತ ನ್ಯಾಯಮೂರ್ತಿಗಳ ಬಗ್ಗೆ ಈ ರೀತಿ ಹೇಳಿಕೆ ನೀಡುವುದು ಸರಿಯಲ್ಲ. ಇದರಿಂದ ಸಮಾಜಕ್ಕೆ ಕೆಟ್ಟ ಸಂದೇಶ ರವಾನೆಯಾಗುತ್ತದೆ ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ. ಇದೇ ವಿಷಯವಾಗಿ ಸೋಮವಾರ ರಾಜಭವನದಲ್ಲಿ ರಾಜ್ಯಪಾಲರ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಭೇಟಿಯಾದ ಸಚಿವ ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್ ಅವರು ಪ್ರಲ್ಹಾದ್ ಜೋಶಿ ವಿರುದ್ಧ ಕ್ರಮವಹಿಸುವಂತೆ ಮನವಿ ಮಾಡಿದರು. ನಿವೃತ್ತ ನ್ಯಾಯ ಮೂರ್ತಿಗಳ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿರುವ ಪ್ರಲ್ಹಾದ್ ಜೋಶಿ ವಿರುದ್ಧ ಕ್ರಮಕ್ಕೆ ರಾಷ್ಟ್ರಪತಿಗಳಿಗೆ ಶಿಫಾರಸು ಮಾಡಬೇಕು ಎಂದು ಆಗ್ರಹಿಸಿದರು.

ರಾಜಭವನದಲ್ಲಿ ರಾಜ್ಯಪಾಲರ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಭೇಟಿಯಾದ ಸಚಿವ ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್ ಅವರು ಪ್ರಲ್ಹಾದ್ ಜೋಶಿ ವಿರುದ್ಧ ಕ್ರಮವಹಿಸುವಂತೆ ಮನವಿ ಮಾಡಿದರು

ಕುನ್ಹಾ ಅವರನ್ನು ಏಜೆಂಟ್ ಎಂದಿಲ್ಲ: ದೂರು ದಾಖಲಾಗುತ್ತಿದ್ದಂತೆ ಈ ಬಗ್ಗೆ ಹಾವೇರಿಯಲ್ಲಿ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು, ನಾನು ಕುನ್ಹಾ ಅವರಿಗೆ ಏಜೆಂಟ್ ಅಂತ ಹೇಳಿಲ್ಲ. ಏಜೆಂಟರ ರೀತಿ ನಡೆದುಕೊಳ್ಳಬೇಡಿ ಅಂದಿದ್ದೇನೆ. ಅವರ ಮೇಲೆ ನನಗೆ ವೈಯಕ್ತಿಕ ದ್ವೇಷ, ಅಸೂಯೆಯಿಲ್ಲ ಎಂದು ಸ್ಪಷ್ಟಪಡಿಸಿದರು.
ಕಾಂಗ್ರೆಸ್‌ನವರು ತರಾತುರಿಯಲ್ಲಿ ವರದಿ ಕೊಡಿಸಿದ್ದಾರೆ. ಯಡಿಯೂರಪ್ಪ ಅವರಿಗೆ ನೋಟಿಸ್ ಬಂದಿಲ್ಲ. ಪ್ರಕ್ರಿಯೆ ನಡೆದಿಲ್ಲ. ಈ ರೀತಿ ಮಾಡಬೇಡಿ, ಪಾರದರ್ಶನವಾಗಿ ತನಿಖೆ ಮಾಡಿ ಅಂದಿದ್ದೇನೆ. ಕುನ್ಹಾ ಅವರಿಗೆ ಬೇಸರವಾಗಿದ್ದರೆ ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದಿದ್ದಾರೆ.

ಪ್ರಲ್ಹಾದ್ ಜೋಶಿ ನ್ಯಾಯಾಂಗ ತನಿಖಾ ಆಯೋಗದ ಬಗ್ಗೆ ಹಾಗೂ ನಿವೃತ್ತ ನ್ಯಾಯಮೂರ್ತಿಯವರ ಬಗ್ಗೆ ನಿಂದಿಸಿ ಕೆಟ್ಟದಾಗಿ ಮಾತನಾಡಿದ್ದಾರೆ. ಇದು ಅಹಂಕಾರದ ಪರಮಾವಧಿ. ಜೋಶಿ ಸಾಮಾನ್ಯ ವ್ಯಕ್ತಿಯಲ್ಲ, ಅವರೊಬ್ಬ ಕೇಂದ್ರ ಸಚಿವರು. ಸಂವಿಧಾನದಲ್ಲಿ ಸ್ವಾಯತ್ತ ಸಂಸ್ಥೆಗಳು, ಆಯೋಗಗಳ ಬಗ್ಗೆ ವೈಯುಕ್ತಿಕ ಟೀಕೆ ಸರಿಯಲ್ಲ. ಇದು ಪ್ರಜಾಪ್ರಭುತ್ವ ಮೌಲ್ಯಗಳಿಗೆ ವಿರುದ್ಧವಾಗಿದೆ. ಕಾನೂನು ಬಾಹಿರವಾಗಿದೆ.

- ದಿನೇಶ್ ಗುಂಡೂರಾವ್ ಆರೋಗ್ಯ ಸಚಿವ

ಪ್ರಜ್ವಲ್‌ಗಿಲ್ಲ ಜಾಮೀನು

ಬೆಂಗಳೂರು: ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ. ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ತನಗೆ ಜಾಮೀನು ನೀಡಲು ನಿರಾಕರಿಸಿದ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾ.ಬೇಲಾ ಎಂ ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಅವರನ್ನೊಳಗೊಂಡ ಪೀಠ, ಹೈಕೋರ್ಟ್ ಆದೇಶವನ್ನು ಎತ್ತಿ ಹಿಡಿದಿದೆ.

ಮಗು ಸಾವು: ಬಾಣಂತಿ ಆತ್ಮಹತ್ಯೆ

ಮಂಗಳೂರು: ನಗರದ ಲೇಡಿಗೋಷನ್ ಹೆರಿಗೆ ಆಸ್ಪತ್ರೆಯ ನಾಲ್ಕನೇ ಮಹಡಿಯಿಂದ ಜಿಗಿದು ಬಾಣಂತಿಯೊಬ್ಬರು ಸೋಮವಾರ ಆತ್ಮಹತ್ಯೆಮಾಡಿಕೊಂಡಿದ್ದಾರೆ. ಉಡುಪಿ ಜಿಲ್ಲೆಯ ಕಾರ್ಕಳದ ರಂಜಿತಾ ಆಚಾರ್ಯ (28) ಮೃತರು. ರಂಜಿತಾ ಅವರಿಗೆ ಅವಧಿ ಪೂರ್ವ ಪ್ರಸವವಾಗಿತ್ತು. ಅ.30ರಂದು ಸಿಸೇರಿಯನ್ ಮೂಲಕ ಹೆರಿಗೆ ನಡೆದಿತ್ತು. ಐಸಿಯುವಿನಲ್ಲಿ ಆರೈಕೆಯಲ್ಲಿದ್ದ ಶಿಶು ನ.3ರಂದು ಮೃತಪಟ್ಟಿತ್ತು. ಅದರಿಂದ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ತಿಳಿದುಬಂದಿದೆ.

ಗೋಯಲ್‌ಗೆ ಕಾಯಂ ಜಾಮೀನು

ಮುಂಬೈ: ಅಕ್ರಮ ಹಣ ವರ್ಗಾವಣೆ ಪ್ರಕರಣದ ಆರೋಪಿ, ಜೆಟ್ ಏರ್‌ವೇಸ್ ಸಂಸ್ಥಾಪಕ ನರೇಶ್ ಗೋಯಲ್ ಅವರಿಗೆ ಬಾಂಬೆ ಹೈಕೋರ್ಟ್ ಸೋಮವಾರ ಕಾಯಂ ಜಾಮೀನು ಮಂಜೂರು ಮಾಡಿದೆ.

ಈ ವರ್ಷದ ಮೇನಲ್ಲಿ ನ್ಯಾ. ಎನ್. ಜೆ.ಜಮಾದಾರ್ ಅವರ ಏಕ ಸದಸ್ಯ ಪೀಠ ವೈದ್ಯಕೀಯ ಕಾರಣಗಳಿಗಾಗಿ ಗೋಯಲ್ ಅವರಿಗೆ ಮಧ್ಯಂತರ ಜಾಮೀನು ನೀಡಿತ್ತು. ನ್ಯಾ. ಜಮಾದಾರ್ ಅವರು ಸೋಮವಾರ ಮಧ್ಯಂತರ ಆದೇಶವನ್ನು ಕಾಯಂಗೊಳಿಸಿದ್ದಾರೆ.

ಗೋಯಲ್ (75) ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಚಿಕಿತ್ಸೆ ಪಡೆಯಲು ಜಾಮೀನು ಕೋರಿದ್ದರು. ಜಾರಿ ನಿರ್ದೇಶನಾಲಯ ಅವರ ಮನವಿಯನ್ನು ವಿರೋಧಿಸಿತ್ತು ಮತ್ತು ಕಸ್ಟಡಿಯಲ್ಲಿರುವಾಗ ಅವರ ಆಯ್ಕೆಯ ಆಸ್ಪತ್ರೆಗೆ ದಾಖಲಿಸಬಹುದು ಮತ್ತು ಚಿಕಿತ್ಸೆ ಪಡೆಯಬಹುದು ಎಂದು ಹೇಳಿತ್ತು. ಆದರೆ ಮೇ ತಿಂಗಳಲ್ಲಿ, ಹೈಕೋರ್ಟ್ 2 ತಿಂಗಳ ಅವಧಿಗೆ ಗೋಯಲ್ ಅವರಿಗೆ ಮಧ್ಯಂತರ ಜಾಮೀನು ನೀಡಿತ್ತು. ನಂತರ ಅದನ್ನು ನಾಲ್ಕು ವಾರಗಳವರೆಗೆ, ನಂತರ ಮತ್ತೆ 2 ತಿಂಗಳವರೆಗೆ ವಿಸ್ತರಿಸಲಾಯಿತು.

ಕೆನರಾ ಬ್ಯಾಂಕ್‌ನಿಂದ ಜೆಟ್ ಏರ್‌ವೇಸ್‌ಗೆ 538.62 ಕೋಟಿ ರು. ಸಾಲ ಪಡೆದು ವಂಚಿಸಿದ್ದಾರೆ ಮತ್ತು ಅಕ್ರಮ ಹಣ ವರ್ಗಾವಣೆ ಮಾಡಿದ ಆರೋಪದ ಮೇಲೆ ಜಾರಿ ನಿರ್ದೇಶನಾಲಯವು ಸೆಪ್ಟೆಂಬರ್ 2023 ರಲ್ಲಿ ಗೋಯಲ್ ಅವರನ್ನು ಬಂಧಿಸಿತ್ತು.

ನಟ ವಿಜಯ್ ಜೈಲಿಂದ ಬಿಡಿಸಿದ್ದ ಆರೋಪಿಯಿಂದ ಜೋಡಿ ಕೊಲೆ

ಬೆಂಗಳೂರು: ನಗರದ ಹೊರವಲಯದಲ್ಲಿ ನಡೆದಿದ್ದ ಜೋಡಿ ಕೊಲೆ ಪ್ರಕರಣಕ್ಕೆ ತಿರುವು ಸಿಕ್ಕಿದೆ. ಡಬಲ್ ಮರ್ಡರ್ ಮಾಡಿರುವ ಆರೋಪಿಯನ್ನು ಈ ಹಿಂದೆ ಪ್ರಕರಣ ವೊಂದರಲ್ಲಿ ಸ್ಯಾಂಡಲ್‌ವುಡ್ ನಟ ದುನಿಯಾ ವಿಜಯ್ ಜೈಲಿಂದ ಬಿಡಿಸಿ ದ್ದರು ಎಂಬ ಮಾಹಿತಿ ಹೊರಬಿದ್ದಿದೆ. ಆದರೆ, ದುನಿಯಾ ವಿಜಿ ಅವರ ಆಶಯವನ್ನು ಕೊಲೆ ಪಾತಕಿ ವ್ಯರ್ಥ ಮಾಡಿದ್ದಾನೆ.

ಬಾಗಲೂರು ಡಬಲ್ ಮರ್ಡರ್ ಆರೋಪಿ ಸುರೇಶ್‌ಗೆ ಈ ಹಿಂದೆ ಪ್ರಕರಣವೊಂದರಲ್ಲಿ ಶ್ಯೂರಿಟಿ ಹಣ ನೀಡಿ ದುನಿಯಾ ವಿಜಯ್ ಬಿಡಿಸಿದ್ದರು. ಈ ಹಿಂದೆ ಡಬಲ್ ಮರ್ಡರ್ ಪ್ರಕರಣ ಹಾಗೂ ಅತ್ಯಾಚಾರ ಪ್ರಕರಣದಲ್ಲಿ ಆರೋಪಿ ಸುರೇಶ್ ಜೈಲು ಸೇರಿದ್ದ. 10 ವರ್ಷ ಶಿಕ್ಷೆ ಅನುಭವಿಸಿದ್ದ ಅಪರಾಧಿಗೆ ಶ್ಯೂರಿಟಿ ಹಣ ನೀಡಲು ಯಾರೂ ಇರಲಿಲ್ಲ. ಈ ಸಮಯದಲ್ಲಿ ಒಂದಷ್ಟು ಅಪರಾಧಿಗಳಿಗೆ ತಲಾ ಮೂರು ಲಕ್ಷದಂತೆ ಶ್ಯೂರಿಟಿ ಹಣವನ್ನು ನಟ ವಿಜಯ್ ಕಟ್ಟಿದ್ದರು. ಈ ವೇಳೆ ಸುರೇಶ್‌ಗೂ ಮೂರು ಲಕ್ಷ ಶ್ಯೂರಿಟಿ ಹಣ ನೀಡಿ ಜೈಲಿಂದ ಬಿಡುಗಡೆಗೊಳಿಸಿದ್ದರು.

ಪುಟಿನ್‌ಗೆ ಟ್ರಂಪ್ ಕರೆ: ಯುದ್ಧ ವಿರಾಮಕ್ಕೆ ಸಲಹೆ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷರಾಗಿ ಚುನಾಯಿತರಾದ ಡೊನಾಲ್ಡ್ ಟ್ರಂಪ್, ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಉಕ್ರೇನ್‌ನಲ್ಲಿ ಯುದ್ಧವನ್ನು ಕೊನೆಗೊಳಿಸುವ ಕುರಿತು ಮತ್ತು ಹಲವು ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ಯುರೋಪ್‌ನಲ್ಲಿ ಶಾಂತಿ ಸ್ಥಾಪನೆ, ಉಕ್ರೇನ್ ಯುದ್ಧ ಅಂತ್ಯಕ್ಕೆ ತಂತ್ರಗಳು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ. ಉಕ್ರೇನ್‌ನಲ್ಲಿ ಯುದ್ಧವನ್ನು ಹೆಚ್ಚಿಸದಂತೆಯೂ ಪುಟಿನ್‌ಗೆ ಟ್ರಂಪ್ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಪಟಾಕಿ ನಿಷೇಧ: ದೆಹಲಿ ಪೊಲೀಸರಿಗೆ ಸುಪ್ರೀಂ ತರಾಟೆ

ದೆಹಲಿ: ದೆಹಲಿಯಲ್ಲಿ ಪಟಾಕಿ ನಿಷೇಧವನ್ನು ಜಾರಿಗೊಳಿಸಲು ವಿಫಲರಾಗಿರುವ ಪೊಲೀಸರನ್ನು ಸುಪ್ರೀಂಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ತಕ್ಷಣವೇ ಪಟಾಕಿ ನಿಷೇಧ ಆದೇಶದ ಬಗ್ಗೆ ಸಂಬಂಧಿಸಿದ ಎಲ್ಲ ಪಟಾಕಿ ತಯಾರಕರಿಗೆ ತಿಳಿಸಲು ಮತ್ತು ಪಟಾಕಿಗಳ ಮಾರಾಟ ಹಾಗೂ ತಯಾರಿಕೆಯನ್ನು ಖಚಿತಪಡಿಸಿಕೊಳ್ಳುವಂತೆ ದೆಹಲಿ ಪೊಲೀಸ್ ಕಮಿಷನರ್‌ಗೆ ನಿರ್ದೇಶಿಸಿದೆ. ನ.25ರೊಳಗೆ ಪಟಾಕಿ ತಯಾರಕೆದಾರರೊಂದಿಗೆ ಚರ್ಚೆ ನಡೆಸಿ ಶಾಶ್ವತ ಪಟಾಕಿ ನಿಷೇಧದ ಬಗ್ಗೆ ನಿರ್ಧರಿಸುವಂತೆ ದೆಹಲಿ ಸರಕಾರಕ್ಕೂ ತಾಕೀತು ಮಾಡಿದೆ.

ಆರ್‌ಜಿಕರ್ ಹತ್ಯಾಚಾರ ಸಂತ್ರಸ್ತೆ ಪ್ರತಿಮೆ ಧ್ವಂಸ

ದೆಹಲಿ: ಕೋಲ್ಕತ್ತಾದ ಆರ್‌ಜಿ ಕರ್ ಆಸ್ಪತ್ರೆಯಲ್ಲಿ ಆಗಸ್ಟ್‌ನಲ್ಲಿ ಅತ್ಯಾಚಾರಕ್ಕೊಳಗಾಗಿ ಕೊಲೆಯಾದ ಕಿರಿಯ ವೈದ್ಯರನ್ನು ಚಿತ್ರಿಸುವ ಪ್ರತಿಮೆಯನ್ನು ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಭಾನುವಾರ ತುಂಡು ತುಂಡುಗಳಾಗಿ ಒಡೆಯಲಾಗಿದೆ ಎಂದು ವರದಿ ಆಗಿದೆ. ಗ್ಯಾಲರಿಯ ಮಧ್ಯಭಾಗದಲ್ಲಿ ಇರಿಸಲಾಗಿದ್ದ ಪ್ರತಿಮೆಯನ್ನು ಭಾನುವಾರ ಬೆಳಗ್ಗೆ ಕಿರಿಯ ವೈದ್ಯೆಯ ಪ್ರತಿಮೆ ನೆಲದ ಮೇಲೆ ಬಿದ್ದಿದ್ದು, ಮುಖ ಒಡೆದು ಬಿದ್ದಿರುವುದು ಕಂಡುಬಂದಿದೆ, ಇದು ಆಕಸ್ಮಿಕವೇ ಅಥವಾ ವಿಧ್ವಂಸಕ ಕೃತ್ಯವೇ ಎಂದು ಖಚಿತವಾಗಿಲ್ಲ.

ಫನ್‌ತರಂಗ

- ರಘುಪತಿ ಶೃಂಗೇರಿ -



ಸನಾತನ ಹಿಂದೂ ಮಂಡಳಿ ರಚನೆ ಮಾಡಲು ಕೇಂದ್ರಕ್ಕೆ ಶಿಫಾರಸ್ಸು ಪತ್ರ ಬರೆಯಲು ಒತ್ತಾಯ

ವಕ್ಫ್ ಬೋರ್ಡ್ ವಿರುದ್ಧ ಮಠಾಧೀಶರ ಆಕ್ರೋಶ

ಕಲಬುರಗಿ: ನೂರಾರು ವರ್ಷಗಳಿಂದ ಉಳುಮೆ ಮಾಡುತ್ತಿರುವ ರೈತರ ಜಮೀನು, ಮಠ, ಮಂದಿರಗಳ ಆಸ್ತಿಗಳ ಮೇಲೆ ವಕ್ಫ್ ಬೋರ್ಡ್ ಹೆಸರನ್ನು ಬದಲಾವಣೆ ಮಾಡುತ್ತಿರುವುದನ್ನು ತಡೆಹಿಡಿದು, ಕೂಡಲೇ ವಕ್ಫ್ ಆಸ್ತಿ ರಾಷ್ಟ್ರೀಕರಣಗೊಳಿಸಬೇಕು ಎಂದು ಆಗ್ರಹಿಸಿ ಹಿಂದೂ ನಾಗರಿಕ ವೇದಿಕೆ ನೇತೃತ್ವದಲ್ಲಿ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಸೋಮವಾರ ನಗರದ ಸರ್ದಾರ್ ವಲ್ಲಭ ಭಾಯಿ ಪಟೇಲ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೂ ಹತ್ತಾರು ಮಠಾಧೀಶರು ಹಾಗೂ ನೂರಾರು ಹಿಂದೂ ನಾಗರಿಕ ವೇದಿಕೆಯ ಕಾರ್ಯಕರ್ತರು ವಕ್ಫ್ ಬೋರ್ಡ್ ಹಾಗೂ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಘೋಷಣೆ ಕೂಗುತ್ತಾ ಆಕ್ರೋಶ ಹೊರಹಾಕಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ವಕ್ಫ್ ಬೋರ್ಡ್‌ನ ಆಸ್ತಿ ರಾಷ್ಟ್ರೀಕರಣಗೊಳಿಸದಿದ್ದರೆ, ಬೋರ್ಡ್ ಅನ್ನು ತಕ್ಷಣವೇ ರದ್ದು ಮಾಡಬೇಕು. ಒಂದು ವೇಳೆ ಬೋರ್ಡ್ ರದ್ದಾಗದಿದ್ದರೆ, ಹಿಂದುಗಳಿಗೂ ಸನಾತನ ಹಿಂದೂ ಮಂಡಳಿ ರಚನೆ ಮಾಡಲು ರಾಜ್ಯ ಸರಕಾರ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಪತ್ರ ಬರೆಯಬೇಕು ಎಂದು ಒತ್ತಾಯಿಸಿದರು.

ವಕ್ಫ ಆಸ್ತಿ ರಾಷ್ಟ್ರೀಕರಣಗೊಳಿಸಬೇಕು ಎಂದು ಹಿಂದೂ ನಾಗರಿಕ ವೇದಿಕೆ ನೇತೃತ್ವದಲ್ಲಿ ವಿವಿಧ ಮಠಾಧೀಶರು ಆಗ್ರಹಿಸಿದರು.

→ 4

ಸ್ವಾಮೀಜಿ ವಿರುದ್ಧ ಎಫ್‌ಐಆರ್

ಅಫಜಲಪುರ: ವಕ್ಫ್ ಬೋರ್ಡ್ ವಿರುದ್ಧ ಪ್ರತಿಭಟನೆ ನಡೆಸುವ ವೇಳೆ 'ಎಲ್ಲ ಯುವಕರ ಮನೆಯಲ್ಲಿ ತಲ್ವಾರ್ ಇವೆ, ಯಾರು ಬರುತ್ತಾರೆ ಅವರನ್ನು ಕಡಿಯುತ್ತೇವೆ ಎಂದು ಕೆಲವರು ಹೇಳುತ್ತಿದ್ದಾರೆ. ಹಾಗಾಗಿ ಇನ್ಮುಂದೆ ಮಕ್ಕಳ ಕೈಯಲ್ಲಿ ಪೆನ್ ಕೊಡುವ ಬದಲು ತಲ್ವಾರ್ ಕೊಡಬೇಕಾ ಗುತ್ತದೆ' ಎಂದು ಹೇಳಿರುವ ಮಾಶಾಳದ ಶ್ರೀ ಮರುಳಾರಾಧ್ಯ ಸ್ವಾಮೀಜಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.



ಸಮಾಚಾರ ಸಣ್ಣದಲ್ಲ

ಜನಸಂಪರ್ಕ ಸಭೆ ನಾಳೆ

ಚಿಕ್ಕಮಗಳೂರು: ನಗರಸಭೆ ವತಿಯಿಂದ ನ.13 ರಂದು ಚಿಕ್ಕಮಗಳೂರು ವಿಧಾನ ಸಭಾಕ್ಷೇತ್ರದ ಶಾಸಕ ಎಚ್.ಡಿ. ತಮ್ಮಯ್ಯ ಹಾಗೂ ನಗರಸಭೆ ಅಧ್ಯಕ್ಷ ಬಿ.ಸಿ. ಸುಜಾತ ಶಿವಕುಮಾರ್, ನೇತೃತ್ವದಲ್ಲಿ ನಗರಸಭಾ ವ್ಯಾಪ್ತಿಯ ವಾರ್ಡ್ ನಂ.26 ಮತ್ತು 27ಕ್ಕೆ ಸಂಬಂಧಿಸಿದಂತೆ ಬೆಳಿಗ್ಗೆ 7.30 ರಿಂದ 8.30 ಗಂಟೆಗೆಅರವಿಂದ ನಗರ ಮತ್ತು ಬಸವನಹಳ್ಳಿ ಬಡಾವಣೆಗಳ ಸ್ಥಳ ಪರಿವೀಕ್ಷಣೆ ಹಾಗೂ ಬೆಳಿಗ್ಗೆ 8.30 ಗಂಟೆಗೆ ಸೋಮೇಶ್ವರ ದೇವಸ್ಥಾನದ ಆವರಣ, ಅರವಿಂದ ನಗರ ಇಲ್ಲಿ ಸ್ವಚ್ಛತೆ, ಬೀದಿ ದೀಪ ವ್ಯವಸ್ಥೆ, ಕುಡಿಯುವ ನೀರು, ರಸ್ತೆ ಮತ್ತು ಚರಂಡಿಗಳ ಅಭಿವೃದ್ಧಿ, ಕಚೇರಿಯಲ್ಲಿ ಇ-ಸ್ವತ್ತು, ಖಾತಾ ಬದಲಾವಣೆ, ಕಟ್ಟಡ ಪರವಾನಗಿ, ಉದ್ದಿಮೆ ಪರವಾನಗಿ, ಇತರೆ ಸಾರ್ವಜನಿಕ ಸೇವೆಗಳಿಗೆ ಸಂಬಂಧಿಸಿದಂತೆ ಜನಸಂಪರ್ಕ ಸಭೆ ಆಯೋಜಿಸಲಾಗಿದೆ ಎಂದು ನಗರಸಭೆ ಪೌರಾಯುಕ್ತರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ನೇಕಾರರ ಪ್ಯಾಕೆಜ್ ಯೋಜನೆ

ಚಿಕ್ಕಮಗಳೂರು: ರಾಜ್ಯ ಜವಳಿ ಉದ್ದಿಮೆಯಲ್ಲಿ ವೈಯಕ್ತಿಕ ಫಲಾನುಭವಿ, ಪಾಲುಗಾರಿಕೆ ಸಂಸ್ಥೆ, ಕಂಪನಿ, ಜವಳಿ ಸಹಕಾರ ಸಂಸ್ಥೆಯ ವತಿಯಿಂದಅತಿ ಸಣ್ಣ(ಎಸ್ಎಂಇ) ಘಟಕಗಳನ್ನು ಪ್ರಾರಂಭಿಸಲು ಉತ್ತೇಜಿಸುವ ಸಲುವಾಗಿ ನೇಕಾರರ ಪ್ಯಾಕೆಜ್ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಜಿಲ್ಲೆಗೆ ವಿಶೇಷ ಘಟಕಯೋಜನೆಯಡಿ 01 ಮತ್ತು ಗಿರಿಜನ ಉಪಯೋಜನೆ ಯಡಿ 01 ಗುರಿಯನ್ನು ಕೇಂದ್ರ ಕಚೇರಿಯಿಂದ ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೈಮಗ್ಗ ಮತ್ತು ಜವಳಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ನ.16ಕ್ಕೆ

ಚಿಕ್ಕಮಗಳೂರು: ಚಿಕ್ಕಮಗಳೂರು ತಾಲೂಕು ಪಂಚಾಯಿತಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ(ಕೆಡಿಪಿ) ನ.16 ರಂದು ಬೆಳಿಗ್ಗೆ 11.30 ಗಂಟೆಗೆ ಜಿಲ್ಲಾ ಪಂಚಾಯಿತಿ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಚಿಕ್ಕಮಗಳೂರು ವಿಧಾನ ಸಭಾ ಕ್ಷೇತ್ರದ ಶಾಸಕ ಎಚ್.ಡಿ. ತಮ್ಮಯ್ಯರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಮತ್ತುವಿಧಾನ ಪರಿಷತ್ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ಶಾಸಕ ಟಿ.ಡಿ. ರಾಜೇಗೌಡ,ನಯನ ಮೋಟಮ್ಮ, ವಿಧಾನ ಪರಿಷತ್ ಶಾಸಕ ಎಸ್.ಎಲ್. ಭೋಜೆಗೌಡ, ವಿಧಾನ ಪರಿಷತ್ ಶಾಸಕ ಸಿ.ಟಿ. ರವಿ, ವಿಧಾನ ಪರಿಷತ್ ಶಾಸಕ ಡಾ. ಧನಂಜಯ ಸರ್ಜಿ ಇವರುಗಳ ಸಹ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆ ಹಮ್ಮಿಕೊಳ್ಳಲಾಗಿದೆ. ಎಂದು ತಾಲೂಕು ಮಟ್ಟದ ತ್ರೈಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ತಾಲೂಕು ಪಂಚಾಯತಿಕಾರ್ಯ ನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಸಭ್ಯವಾಗಿ ವರ್ತಿಸಿ: ಅತ್ಯಾಚಾರಕ್ಕೆ ಯತ್ನ

ಜಯಪುರ: ಬೀದಿ ನಾಯಿ ಜತೆ ಅಸಭ್ಯವಾಗಿ ವರ್ತಿಸಿದ್ದಲ್ಲದೆ ಅತ್ಯಾಚಾರಕ್ಕೆ ಯತ್ನಿಸಿರುವ ಆರೋಪವೊಂದು ಜಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೇಳಿಬಂದಿದೆ. ಏನಿದು ಘಟನೆ: ಜಯಪುರ ಪಟ್ಟಣದ ಬಸ್ ನಿಲ್ದಾಣದ ಬಳಿ ವ್ಯಕ್ತಿಯೊಬ್ಬ ನಾಯಿಯನ್ನು ಹಿಡಿದುಕೊಂಡು ಅದರೊಂದಿಗೆ ಅಸಭ್ಯ ವರ್ತಿಸಿದ್ದಾನೆ. ಬೀದಿ ನಾಯಿಗೆ ಉಪದ್ರವ ಮಾಡುವುದರ ಜೊತೆಗೆ ಪ್ರಾಣಿ ಹಿಂಸೆ ಮಾಡಿರುವುದು ನಿಲ್ದಾಣದಲ್ಲಿರುವ ಜಯಪುರ ಎಂಟರ್ ಪ್ರೈಸಸ್ ಅಂಗಡಿಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮರದಲ್ಲಿ ಸೆರೆಯಾಗಿದೆ. ಯುವಕ ಬೀದಿ ನಾಯಿ ಜೊತೆ ಅಸಭ್ಯವಾಗಿ ವರ್ತಿಸಿ ಅತ್ಯಾಚಾರಕ್ಕೆ ಯತ್ನಿಸಿರುವ ವಿಡಿಯೋ ಜಯಪುರ, ಕೊಪ್ಪ ಭಾಗದಲ್ಲಿ ವೈರಲ್ ಆಗುತ್ತಿದೆ. ಜಯಪುರ ಪಟ್ಟಣದ ಬಸ್ ನಿಲ್ದಾಣದಲ್ಲಿ ಇರುವ ಜಯಪುರ ಎಂಟರ್ ಪ್ರೈಸಸ್ ಎಂದು ಹೆಸರಿರುವ ಅಂಗಡಿಯ ಮುಂಭಾಗದ ಕಟ್ಟೆಯ ಮೇಲೆ ಯಾರೋ ಒಬ್ಬ ವ್ಯಕ್ತಿಯು ಕುಳಿತು ಸಾರ್ವಜನಿಕ ಸ್ಥಳದಲ್ಲಿ ಬೀದಿ ನಾಯಿಯನ್ನು ಹಿಡಿದುಕೊಂಡು ಆದರೊಂದಿಗೆ ಅಸಭ್ಯವಾಗಿ ವರ್ತಿಸಿ ಪ್ರಾಣಿಗೆ ಹಿಂಸೆ ಹಾಗೂ ಉಪದ್ರವ ನೀಡುತ್ತಿರುವುದು ಕಂಡು ಬಂದಿದೆ. ಅಸಭ್ಯವಾಗಿ ವರ್ತಿಸುತ್ತಿದ್ದ ವ್ಯಕ್ತಿಯ ವಿಳಾಸದ ಬಗ್ಗೆ ಪರಿಶೀಲನೆ ನಡೆಸಿದಾಗ ಆತ ಕಟ್ಟಿ ಮನೆ ವಾಸಿ ಶಿವರಾಜ ಎಂದು ದೃಢಪಟ್ಟಿದೆ ಎನ್ನಲಾಗಿದೆ.

ಕಿಶೋರ್ ಶೆಟ್ಟಿ ವ್ಯಕ್ತಿತ್ವ ಕಲಾವಿದರಿಗೆ ಸ್ಫೂರ್ತಿ: ಡಾ.ಸಂಜೀವ ದಂಡಕೇರಿ

ಹಿರಿಯ ರಂಗಕರ್ಮಿ ಲಯನ್ ಕಿಶೋರ್ ಡಿ.ಶೆಟ್ಟಿಗೆ ರಂಗಚಾವಡಿ ಪ್ರಶಸ್ತಿ ಪ್ರದಾನ

ಮಂಗಳೂರು: 'ರಂಗಚಾವಡಿ' ಆಶ್ರಯದಲ್ಲಿ ಸುಭಾಷಿತನಗರ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ಸಹಯೋಗದಲ್ಲಿ ರಂಗಚಾವಡಿ ವರ್ಷದ ಹಬ್ಬ ಸುರತ್ಕಲ್ ಬಂಟರ ಭವನದಲ್ಲಿ ಜರುಗಿತು.

ಚಲನಚಿತ್ರ ನಿರ್ಮಾಪಕ ಡಾ.ಸಂಜೀವ ದಂಡೆಕೇರಿ ಉದ್ಘಾಟಿಸಿ ಮಾತನಾಡಿದರು. ರಂಗಚಾವಡಿ ಪ್ರಶಸ್ತಿ ಸ್ವೀಕರಿಸುತ್ತಿರುವ ಹಿರಿಯ ರಂಗಕರ್ಮಿ ಕಿಶೋರ್ ಡಿ. ಶೆಟ್ಟಿ ಅವರದು ಸಾವಿರಾರು ಕಲಾವಿದರಿಗೆ ಸ್ಫೂರ್ತಿ ತುಂಬುವ ವ್ಯಕ್ತಿತ್ವ. ಅವರನ್ನು ಪಡೆದಿರುವುದು ನಮ್ಮ ತುಳುನಾಡಿನ ಸಮಸ್ತ ಕಲಾವಿದರ ಪುಣ್ಯ. ಬಡಹೆಣ್ಣುಮಕ್ಕಳ ಮದುವೆ, ಬಡಕುಟುಂಬದ ಆರ್ಥಿಕ ಸಂಕಷ್ಟಕ್ಕೆ ಕಿಶೋರ್ ಶೆಟ್ಟಿ ಅವರು ಸದಾ ನೆರವು ನೀಡಿದವರು. ಅವರಿಗೆ ಅರ್ಹವಾಗಿಯೇ ಈ ಪ್ರಶಸ್ತಿ ಸಂದಿದೆ. ಸಂಘಟನೆಯ ಈ ಕ್ರಮ ಶ್ಲಾಘನೀಯವಾದುದು ಎಂದರು.

ವೇದಿಕೆಯಲ್ಲಿ ಹಿರಿಯ ರಂಗಕರ್ಮಿ ಲಯನ್ ಕಿಶೋರ್ ಡಿ.ಶೆಟ್ಟಿ ಅವರಿಗೆ ರಂಗಚಾವಡಿ ಪ್ರಶಸ್ತಿ-2024 ಪ್ರದಾನ ಮಾಡಲಾಯಿತು.

ಉದ್ಯಮಿ ಶ್ರೀಡೆವಲಪರ್ಸ್ ಸಂಸ್ಥೆಯ ಮಾಲೀಕ ಗಿರೀಶ್.ಎಂ.ಶೆಟ್ಟಿ ಕಟೀಲು ಅವರು, ಬಾಳ ಜಗನ್ನಾಥ ಶೆಟ್ಟಿ ಅವರು ರಂಗಭೂಮಿ ಕಲಾವಿದರನ್ನು ಗುರುತಿಸಲು ಹುಟ್ಟುಹಾಕಿದ ರಂಗಚಾವಡಿ ಸಂಘಟನೆ ಇಂದು ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಕಲಾವಿದರನ್ನು ಗುರುತಿಸಿ ಬೆನ್ನು ತಟ್ಟುತ್ತಿರುವ ಇಂತಹ ಸಂಘಟನೆಯ ಕಾರ್ಯ ಶ್ಲಾಘನೀಯ ಎಂದರು.

ಉದ್ಯಮಿ ಸಮಾಜಸೇವಕ ಅನಿಲ್ ಶೆಟ್ಟಿ ತೇವು-ಸೂರಿಂಜೆ, ಬಂಟರ ಸಂಘ ಸುರತ್ಕಲ್ ಇದರ ನಿರ್ದೇಶಕ ಜಗದೀಶ್ ಶೆಟ್ಟಿ ಪೆರ್ಮುದೆ, ಜಯಕಿರಣ ಪತ್ರಿಕೆ ಮಾಲಕ ಪ್ರಕಾಶ್ ಪಾಂಡೇಶ್ವರ್, ಸುಭಾಷಿತನಗರ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ಇದರ ಅಧ್ಯಕ್ಷ ರಮೇಶ್ ಶೆಟ್ಟಿ, ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಸುರತ್ಕಲ್ ಘಟಕದ ಅಧ್ಯಕ್ಷ ಸುಧಾಕರ ಎಸ್. ಪೂಂಜ, ಉದ್ಯಮಿ ಜಯರಾಮ ಶೇಖ, ಸುರತ್ಕಲ್ ಬಂಟರ ಸಂಘದ ಅಧ್ಯಕ್ಷ ಲೋಕಯ್ಯ ಶೆಟ್ಟಿ, ರಂಗಚಾವಡಿ ಸಂಸ್ಥೆಯ ಸಂಚಾಲಕ ಬಾಳ ಜಗನ್ನಾಥ ಶೆಟ್ಟಿ, ಚಿತ್ರಾ.ಜೆ.ಶೆಟ್ಟಿ ಉಪಸ್ಥಿತರಿದ್ದರು.

ಗಿರೀಶ್ ಸಾಗರ ದೇವರನ್ನು ಸ್ತುತಿಸಿದರು. ಪತ್ರಕರ್ತ ಶರತ್ ಶೆಟ್ಟಿ ಕಿನ್ನಿಗೋಳಿ ಅಭಿನಂದನಾ ಭಾಷಣಗೈದರು. ನಿತೇಶ್ ಶೆಟ್ಟಿ ಎಕ್ಕಾರ್ ನಿರೂಪಿಸಿದರು.

ಗಾನಲಹರಿ, ಲಯನ್ ಕಿಶೋರ್ ಶೆಟ್ಟಿಯವರ ಸಾರಥ್ಯದ ಶ್ರೀ ಲಲಿತೆ ಕಲಾವಿದರಿಂದ ನವನೀತ ಶೆಟ್ಟಿ ರಚಿಸಿರುವ ಶನಿ ಮಹಾತ್ಮೆ ತುಳು ಪೌರಾಣಿಕ ನಾಟಕ ಪ್ರದರ್ಶನ ನಡೆಯಿತು.

ರಂಗಚಾವಡಿ ವರ್ಷದ ಹಬ್ಬ ಸುರತ್ಕಲ್ ಬಂಟರ ಭವನದಲ್ಲಿ ಚಲನಚಿತ್ರ ನಿರ್ಮಾಪಕ ಡಾ.ಸಂಜೀವ ದಂಡೆಕೇರಿ ಮಾತನಾಡಿದರು.

> ನನ್ನ ತಂಡದ ಕಲಾವಿದರಿಂದ ನಾನಿದ್ದೇನೆ, ಅವರಿಲ್ಲದೆ ನಾನೇನೂ ಇಲ್ಲ. ನಾನು ಮಾಡಿರುವ ದಾನ ಧರ್ಮ ಏನೂ ಇಲ್ಲ. ನೊಂದವರಿಗೆ ನೆರವಾಗುವುದು ದೇವರ ಸೇವೆ. ಇದು ನನಗೆ ಅಪ್ಪ ಅಮ್ಮ ಕಲಿಸಿದ್ದು. ಈ ಪ್ರಶಸ್ತಿಯನ್ನು ಬಹಳ ಖುಷಿಯಿಂದ ಸ್ವೀಕರಿಸುತ್ತಿದ್ದೇನೆ. ಇಂತಹ ಪ್ರಶಸ್ತಿ ನನ್ನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ.
> -ಕಿಶೋರ್ ಡಿ.ಶೆಟ್ಟಿ, ಹಿರಿಯ ರಂಗಕರ್ಮಿ

14ರಿಂದ ಉಣ್ಣಕ್ಕಿ ಜಾತ್ರೆ

ಕೊಟ್ಟಿಗೆಹಾರ: ಮಲೆನಾಡಿನಲ್ಲಿ ಅನೇಕ ಧಾರ್ಮಿಕ ಪವಾಡಗಳು ಎಲೆಮರೆಯಲ್ಲಿ ನಡೆಯುತ್ತಲೇ ಇವೆ. ಕೆಲವು ಮಾತ್ರ ಜನರ ಕಣ್ಣಿಗೆ ಗೋಚರಿಸಿದರೆ, ಉಳಿದವುಗಳು ಮಾತ್ರ ಜನರಿಗೆ ಗೋಚರಿಸುವುದೇ ಇಲ್ಲ. ಅಂತಹ ಸರದಿಯಲ್ಲಿ ಮೂರು ಶತಮಾನಗಳಿಂದ ಮಂಗಳಾರತಿಯ ಸಮಯದಲ್ಲಿ ಮಾತ್ರ ಉಣ್ಣಕ್ಕಿ ಹುತ್ತ ಅಲುಗಾಡಿ ವಿಸ್ಮಯ ಸೃಷ್ಟಿಸಿ ಜನರನ್ನು ಮೂಕವಿಸ್ಮಿತರನ್ನಾಗಿ ಮಾಡುವುದಲ್ಲದೇ ಅಚ್ಚರಿಯನ್ನು ಮೂಡಿಸುತ್ತದೆ.

ನ.14ರಂದು ಗುರುವಾರ ಬಾನಹಳ್ಳಿಯಲ್ಲಿ ಅಲುಗಾಡುವ ಹುತ್ತದ ಪವಾಡ ನೋಡಲು ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಕಾತುರರಾಗಿದ್ದಾರೆ. ಮೂರು ಶತಮಾನದ ಹಿಂದೆ ಮಣ್ಣಿನಲ್ಲಿಯೇ ನಿರ್ಮಾಣವಾದ ಈ ಹುತ್ತ 10 ಅಡಿ ಎತ್ತರದಲ್ಲಿದ್ದು, ಮಳೆ, ಗಾಳಿಗೂ ಅಲುಗಾಡದೇ ಶತಮಾನ ಕಂಡರೂ ಶಿಥಿಲವಾಗದೇ ಜನರನ್ನು ತನ್ನೆಡೆಗೆ ಆಕರ್ಷಿಸಿ ಭಕ್ತಿ ಪರವಶರಾಗಲೂ ಸೆಳೆಯುತ್ತಿದೆ.

ಮುಖಂಡರಾದ ಬಗ್ಗಸಗೋಡು ಪ್ರತಾಪ್ ಗೌಡ ಮಾತನಾಡಿ, ಉಣ್ಣಕ್ಕಿ ಹುತ್ತದ ವಿಶೇಷವೆಂದರೆ, ಈ ಭಾಗದ ಜನರಿಗೆ, ಜಾನುವಾರುಗಳಿಗೆ ಕಾಯಿಲೆ ಬಂದರೆ ಹುತ್ತದ ಮಣ್ಣು ಮೈಗೆ ಹಚ್ಚಿದರೆ ಕಾಯಿಲೆ ಗುಣವಾಗುತ್ತದೆ ಎಂಬ ಅಚಲ ನಂಬಿಕೆ ಸ್ಥಳೀಯರದ್ದು ಹಾಗೂ ನಂಬಿದ ಭಕ್ತರದ್ದು. ಹೊಸತಾಗಿ ಮದುವೆಯಾದ ನವ ದಂಪತಿಗಳು ಕೂಡ ಇಲ್ಲಿ ಹರಕೆ ಸಲ್ಲಿಸುವುದು ವಾಡಿಕೆಯಲ್ಲಿದೆ. ದೀಪಾವಳಿ ಬಳಿಕ ಬರುವ ಹುಣ್ಣಿಮೆ ದಿನ ಅಂದರೆ ನ.14ರ ಗುರುವಾರ ಉಣ್ಣಕ್ಕಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ ಎಂದು ಹೇಳುತ್ತಾರೆ.

ಹುತ್ತದ ಸುತ್ತ ಕರು ಪ್ರದಕ್ಷಿಣೆ

ಅಂದು ರಾತ್ರಿ ಮಹಾಮಂಗಳಾರತಿ ಸಮಯದಲ್ಲಿ ವಿದ್ಯುತ್ ಮತ್ತು ಹೂಗಳಿಂದ ಅಲಂಕೃತವಾದ ಹುತ್ತದ ಸುತ್ತ ಕರುವೊಂದನ್ನು ಪ್ರದಕ್ಷಿಣೆ ಹಾಕಿ ಭಕ್ತರು ಮಂಡಕ್ಕಿ ಎರಚುವ ಹರಕೆ ನೆರವೇರಿಸಲಾಗುತ್ತದೆ. ಬಳಿಕ ರಾತ್ರಿ ನಡೆಯುವ ಮಹಾಮಂಗಳಾರತಿ ಸಮಯದಲ್ಲಿ ಹುತ್ತ ಕ್ಷಣಾರ್ಧದಲ್ಲಿ ಅಲುಗಾಡಿ ಭಕ್ತರನ್ನು ವಿಸ್ಮಯ ಗೊಳಿಸುತ್ತದೆ. ಜಾತ್ರೆಗೆ ಬಂದ ಭಕ್ತರಿಗೆ ಹಾಲಕ್ಕಿಯನ್ನು ವಿತರಿಸಲಾಗುತ್ತದೆ. ಜನರು ಅದನ್ನು ಮನೆಗೆ ಕೊಂಡು ಹೋಗಿ ಹೊಲ, ಗದ್ದೆ ತೋಟಗಳಿಗೆ ಹಾಕಿ ಶುದ್ದೀಕರಣವಾಗತ್ತದೆ ಎಂಬ ನಂಬಿಕೆಯಿದೆ. ಈ ಹುತ್ತದ ಪೂಜೆಯಿಂದ ನರ, ಹುಣ್ಣು ಕುರ, ಸರ್ಪಸುತ್ತು ಮತ್ತಿತರ ಕಾಯಿಲೆಗಳು ಗುಣವಾಗುತ್ತವೆ ಎಂದು ಸ್ಥಳೀಯರಾದ ಶಿವೇಗೌಡ ಹೇಳುತ್ತಾರೆ.

27ಪದಕದೊಂದಿಗೆ ಆಳ್ವಾಸ್‌ಗೆ ಸಮಗ್ರಪ್ರಶಸ್ತಿ

ಮೂಡುಬಿದಿರೆ: ನ.8 ರಿಂದ 10ರವರೆಗೆ ನಡೆದ ಶಾಲಾ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ, ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ, ಕೋಲಾರ ಜಿಲ್ಲೆ, ಇವರ ಸಂಯುಕ್ತ ಆಶ್ರಯದಲ್ಲಿ ರಾಜ್ಯ ಮಟ್ಟದ 17 ವರ್ಷ ವಯೋಮಿತಿಯ ಪ್ರೌಢಶಾಲಾ ಬಾಲಕ ಬಾಲಕಿಯರ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಿದ ಆಳ್ವಾಸ್ ಶಾಲೆಯ ಕ್ರೀಡಾಪಟುಗಳು ಒಟ್ಟು 14 ಚಿನ್ನ, 08 ಬೆಳ್ಳಿ ಮತ್ತು 05 ಕಂಚಿನ ಪದಕಗಳೊಂದಿಗೆ 27 ಪದಕದೊಂದಿಗೆ ನಾಗಿಣಿ 800ಮೀ. 1500ಮೀನಲ್ಲಿ ನೂತನ ದಾಖಲೆ, ಜಾಸ್ಮಿನ ಹ್ಯಾಮರ್ ತ್ರೋನಲ್ಲಿ ಕ್ರೀಡಾಕೂಟದ ನೂತನ ಕೂಟ ದಾಖಲೆಯೊಂದಿಗೆ 17ವರ್ಷ ವಯೋಮಿತಿಯ ತಂಡ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ.

ಪ್ರೌಢ ಶಾಲಾ 17 ವರ್ಷ ವಯೋಮಿತಿಯ ಬಾಲಕಿಯರ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿ: ಬಾಲಕಿಯರ ವಿಭಾಗ: ನಾಗಿಣಿ .10 ಅಂಕ

ನವೆಂಬರ್ ತಿಂಗಳಿನಲ್ಲಿ ನಡೆಯುವ ರಾಷ್ಟ್ರ ಮಟ್ಟದ ಕ್ರೀಡಾಕೂಟಕ್ಕೆ ಒಂದೇ ಶಾಲೆಯಿಂದ 16 ಕ್ರೀಡಾಪಟುಗಳು ಆಯ್ಕೆಯಾಗಿರುವುದು ಹೆಮ್ಮೆಯ ವಿಚಾರವಾಗಿದೆ. ವಿಜೇತ ಕ್ರೀಡಾಪಟುಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ. ಮೋಹನ ಆಳ್ವ ಅಭಿನಂದಿಸಿದ್ದಾರೆ.

ಫಲಿತಾಂಶ

ಪ್ರೌಢ ಶಾಲಾ 17 ವರ್ಷ ವಯೋಮಿತಿಯ ಬಾಲಕ ಮತ್ತು ಬಾಲಕಿಯರ ಫಲಿತಾಂಶ : ಇಶಾನಿ ಅರುಣ್-ಚಕ್ರ ಎಸೆತ (ದ್ವಿತೀಯ), ಚಸ್ಮಿತಾ-ಚಕ್ರ ಎಸೆತ (ತೃತೀಯ), ನಾಗಿಣಿ 800ಮೀ (ಪ್ರಥಮ), 1500ಮೀ (ಪ್ರಥಮ), ಕಿರಣ 1500ಮೀ (ದ್ವಿತೀಯ), ಪ್ರಿಯಾಂಕ800ಮೀ (ದ್ವಿತೀಯ), 3000ಮೀ (ದ್ವಿತೀಯ), ಜಾಸ್ಮಿನ್-ಹ್ಯಾಮರ್ ತ್ರೋ (ಪ್ರಥಮ), ಸ್ಫೂರ್ತಿ-ಹ್ಯಾಮರ್ ತ್ರೋ (ತೃತೀಯ), ಗೋಪಿಕಾ 100ಮೀ (ಪ್ರಥಮ), 4x100ಮೀ ರಿಲೇ (ಪ್ರಥಮ), ಪ್ರೀತಿ-400ಮೀ ಹರ್ಡಲ್ಸ್ (ಪ್ರಥಮ), ವರ್ಷಾ-400ಮೀ ಹರ್ಡಲ್ಸ್ (ತೃತೀಯ), ಚಿನ್ಮಯಿ-4x100ಮೀ ರಿಲೇ (ಪ್ರಥಮ), ಸಹನಾ-4x100ಮೀ ರಿಲೇ (ಪ್ರಥಮ), ನಯೋನಿಕ-4x100ಮೀ ರಿಲೇ (ಪ್ರಥಮ), ಗೌತಮ್ ರೈ 110ಮೀ ಹರ್ಡಲ್ಸ್ (ದ್ವಿತೀಯ), 4x100ಮೀ ರಿಲೇ (ಪ್ರಥಮ), ಧನುಷ್‌ಚಂದ್ರ-ಚಕ್ರ ಎಸೆತ (ತೃತೀಯ), ಗುಂಡು ಎಸೆತ-(ದ್ವಿತೀಯ), ಸಮರ್ಥ್800ಮೀ (ದ್ವಿತೀಯ), ಪೃಥ್ವಿಕ್‌ತ್ರಿವಿಧ ಜಿಗಿತ (ತೃತೀಯ), ಸಾಹಿಲ್ 100ಮೀ (ದ್ವಿತೀಯ), 4x100ಮೀ ರಿಲೇ (ಪ್ರಥಮ), ಆಕಾಶ್400ಮೀ ಹರ್ಡಲ್ಸ್ (ಪ್ರಥಮ), 4x100ಮೀ ರಿಲೇ (ಪ್ರಥಮ), ರಿನೀಶ್-4x100ಮೀ ರಿಲೇ (ಪ್ರಥಮ)

ಹ್ಯಾಮರ್ ತ್ರೋನ ಕ್ರೀಡಾಕೂಟದ 17ವರ್ಷ ವಯೋಮಿತಿಯ ಬಾಲಕ ಬಾಲಕಿಯರ ತಂಡ ಪ್ರಶಸ್ತಿ ಆಳ್ವಾಸ ತಂಡ

ವೀರತನದ ಪ್ರತೀಕ ಓಬವ್ವ ಜಯಂತಿ ಆಚರಣೆ

ಚಿಕ್ಕಮಗಳೂರು: ವೀರತನದ ಪ್ರತೀಕ ಒನಕೆ ಓಬವ್ವ, ಆಕೆಯ ಸಾಹಸಮಯ ಜೀವನವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ನಮ್ಮೆಲ್ಲರ ಕರ್ತವ್ಯ.ಎಂದು ಚಿಕ್ಕಮಗಳೂರು ವಿಧಾನ ಸಭಾಕ್ಷೇತ್ರದ ಶಾಸಕ ಎಚ್.ಡಿತಮ್ಮಯ್ಯ ಹೇಳಿದರು.

ಜಿಲ್ಲಾಡಳಿತ ವತಿಯಿಂದಇಂದು ನಗರದ ಕುವೆಂಪು ಕಲಾ ಮಂದಿರದಲ್ಲಿ ಆಯೋಜಿಸಿದ್ದ ವೀರವನಿತೆ ಒನಕೆ ಓಬವ್ವ ಜಯಂತಿ ಆಚರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ಯುದ್ಧ ಕಲೆಗಳು, ಶಸ್ತ್ರಾಭ್ಯಾಸಗಳನ್ನು ತಿಳಿಯದ ಸಾಮಾನ್ಯ ಮಹಿಳೆ ತನ್ನ ನಾಡಿನ ರಕ್ಷಣೆಗಾಗಿ ಏಕಾಂಗಿಯಾಗಿ ಕೋಟೆಗೆ ಆಕ್ರಮಣ ಮಾಡಿದ ನೂರಾರು ಎದುರಾಳಿ ಸೈನಿಕರನ್ನು ಕೇವಲ ಒನಕೆಯನ್ನುಅಸ್ತ್ರವಾಗಿ ಮಾಡಿಕೊಂಡು ಅವರನ್ನು ಸೆದೆಬಡಿದು ದಾಳಿಯ ಗೆಲುವಿಗೆ ಕಾರಣಳಾದಳು. ದೇಶ ಪ್ರೇಮವಿರುವ ಪ್ರತಿಯೊಬ್ಬರಿಗೂ ದೇಶದ ರಕ್ಷಣೆ ವಿಚಾರ ಬಂದಾಗ ಧೈರ್ಯ ತಾನಾಗೆ ಚಿಮ್ಮುತ್ತದೆ ನಾಡು, ನುಡಿ, ದೇಶ ಪ್ರೇಮವನ್ನು ತಮ್ಮಲ್ಲಿ ಬೆಳಿಸಿಕೊಂಡು ಉತ್ತಮ ಪ್ರಜೆಗಳಾಗಿ ಎಂದು ತಿಳಿಸಿದರು.

ತರೀಕೆರೆ, ಉಡೇವ ಸರಕಾರಿ ಪ್ರೌಡ ಶಾಲೆ ಅಧ್ಯಾಪಕ ಎಂ. ಇರಮೇಶ್ ಮಾತನಾಡಿ, ಒನಕೆ ಓಬವ್ವಳ ಜೀವನಕಥೆ ಕೇಳುವ ಪ್ರತಿಯೊಬ್ಬರಲ್ಲು ದೇಶ ಪ್ರೇಮ ಮೂಡುತ್ತದೆ. ನಾಡಿನಲ್ಲಿ ಚಿತ್ರದುರ್ಗದ ಪಾಳೆಯಗಾರ ಮದಕರಿ ನಾಯಕನಿಗೂ ಹೈದರನಿಗೂ ನಡೆದ ಕಾಳಗ ಪ್ರಸಿದ್ದವಾಗಿದೆ ಎಂದು ಹೇಳಿದರು.

ನಗರ ಸಭೆ ಅಧ್ಯಕ್ಷೆ ಸುಜಾತ ಶಿವಕುಮಾರ್ ಮಾತನಾಡಿ, ನಮ್ಮ ನಾಡಿನಲ್ಲಿ ಕಿತ್ತೂರು ರಾಣಿ ಚನ್ನಮ್ಮ, ಕೆಳದಿ ಚೆನ್ನಮ್ಮ, ರಾಣಿ ಅಬ್ಬಕ್ಕ ಹಾಗೂ ಒನಕೆ ಒಬವ್ವರಂತಹ ವೀರ ಮಹಿಳೆಯರು ಜನಿಸಿರುವುದು ನಾಡಿನ ಹೆಮ್ಮೆ ಇವರ ಜೀವನ ಕತೆಗಳು ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕವಾದುದು ಎಂದರು.

ಕಾರ್ಯಕ್ರಮದಲ್ಲಿಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಮೇಶ್, ಚಿಕ್ಕಮಗಳೂರು ತಾಲೂಕು ಗ್ರೇಡ್2 ತಹಸೀಲ್ದಾರ್ ರಾಮ್‌ರಾವ್‌ದೇಸಾಯಿ, ಜಿಲ್ಲಾ ಛಲವಾದಿ ಮಹಾಸಭಾ ಸಂಘದ ಅಧ್ಯಕ್ಷ ರಘು, ಜಿಲ್ಲಾ ಛಲವಾದಿ ಮಹಾಸಭಾ ಸಂಘದ ಗೌರವಾಧ್ಯಕ್ಷ ಮಲ್ಲೇಶ್ ಸ್ವಾಮಿ, ಛಲವಾದಿ ಮಹಾಸಭಾ ಸಂಘದ ನಗರಾಧ್ಯಕ್ಷ ವೆಂಕಟೇಶ್ ಮೂರ್ತಿ, ದಲಿತ ಸಂಘದ ಮುಖಂಡರಾಧ ಕೃಷ್ಣ ಸೇರಿದಂತೆ ವಿವಿಧ ಸಂಘದ ಪದಾಧಿಕಾರಿಗಳು ಉಪಸ್ತಿತರಿದ್ದರು.

ವೀರವನಿತೆ ಒನಕೆ ಓಬವ್ವ ಜಯಂತಿ ಆಚರಣಾ ಕಾರ್ಯಕ್ರಮವನ್ನು ಶಾಸಕ ಎಚ್.ಡಿತಮ್ಮಯ್ಯಹಾಗೂ ಇತರರು ಉದ್ಘಾಟಿಸಿದರು.

> ಕನ್ನಡ ನಾಡು ಅನೇಕ ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟು ಹಲವಾರು ವೀರ ಸೈನಿಕರು, ವೀರ ವನಿತೆಯರನ್ನು ತನ್ನ ಮಡಿಲಿನಲ್ಲಿ ಇರಿಸಿಕೊಂಡಿದೆ. ಇವರ ಹೆಸರುಗಳು ಇಂದಿಗೂ ಇತಿಹಾಸದ ಪುಟಗಳಲ್ಲಿ ರಾರಾಜಿಸುತ್ತಿವೆ. ನಮ್ಮ ನಾಡಿನ ಐತಿಹಾಸಿಕ ಸ್ಥಳ ಚಿತ್ರದುರ್ಗ ಎಂದ ಕ್ಷಣ ನೆನಪಾಗುವುದೇ ಹೈದರಾಲಿಯ ಸೈನಿಕರೊಡನೆ ಏಕಾಂಗಿಯಾಗಿ ಹೋರಾಡಿದ ವೀರ ವನಿತೆ ಒನಕೆ ಒಬವ್ವನ ಹೆಸರು.
> -ಎಚ್.ಡಿತಮ್ಮಯ್ಯ, ಶಾಸಕ

ಸರಕಾರದ ಯೋಜನೆಗಳು ಫಲಾನುಭವಿಗಳಿಗೆ ತಲುಪಿಸಿ

ಚಿಕ್ಕಮಗಳೂರು: ಸರಕಾರದ ಯೋಜನೆಗಳಾದ ಸುಕನ್ಯಾ ಸಮೃದ್ಧಿ, ಮಾತೃ ವಂದನಾ ಯೋಜನೆಗಳ ಸೌಲಭ್ಯವನ್ನು ಅಲ್ಪ ಸಂಖ್ಯಾತರಿಗೆ ದೊರೆಯುವಂತೆ ಅಧಿಕಾರಿಗಳು ಕ್ರಮವಹಿಸಿ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಸಿ.ಎನ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಜುಲೈ ದಿಂದ ಸೆಪ್ಟೆಂಬರ್ ರವರೆಗಿನ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರಕಾರ ಹೆಣ್ಣು ಮಕ್ಕಳ ಯೋಗಕ್ಷೇಮವನ್ನು ಖಚಿತ ಪಡಿಸಲು ಅವರ ಮುಂದಿನ ವಿದ್ಯಾಭ್ಯಾಸಕ್ಕಾಗಿ ನೆರವಾಗಲು ಸುಕನ್ಯಾ ಸಮೃದ್ಧಿ ಯೋಜನೆ ಜಾರಿಗೆ ತಂದಿದೆ. ಈ ಯೋಜನೆಯ ಸೌಲಭ್ಯವನ್ನುಅಲ್ಪಸಂಖ್ಯಾತರ ಮಕ್ಕಳು ಸಹ ಪಡೆಯಬೇಕು. ಅವರ ಮುಂದಿನ ಉಜ್ವಲ ಭವಿಷ್ಯಕ್ಕಾಗಿ ಈ ಯೋಜನೆ ತುಂಬಾ ಉಪಯುಕ್ತವಾದದ್ದು, ಅಧಿಕಾರಿಗಳು ಈ ಯೋಜನೆಗಳಿಗೆ ಸಂಬಂಧಪಟ್ಟ ಫಲಾನುಭವಿ ಮಕ್ಕಳ ಪೋಷಕರಿಗೆ ಅರ್ಜಿ ಸಲ್ಲಿಸುವಂತೆ ಅರಿವು ಮೂಡಿಸಿ ಕ್ರಮವಹಿಸಬೇಕು ಎಂದರು.

ಅಲ್ಪಸಂಖ್ಯಾತರ ಇಲಾಖೆ ಉಪನಿರ್ದೇಶಕ ಬಲರಾಮ್ ಮಾತನಾಡಿ. ಜಿಲ್ಲೆಯಲ್ಲಿ ಇದುವರೆಗೆ 5725 ಅಲ್ಪಸಂಖ್ಯಾತರ ಮಕ್ಕಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಕೆಯಾಗಿದೆ. 1 ರಿಂದ 08 ನೇ ತರಗತಿಯವರೆಗೆ ಮೆಟ್ರಿಕ್ ಪೂರ್ವರಾಜ್ಯ ವಿದ್ಯಾರ್ಥಿವೇತನಕ್ಕೆ ನ.31 ರಂದುಅರ್ಜಿ ಸಲ್ಲಿಸಲು ಕೊನೆಯ ದಿನವನ್ನು ನಿಗದಿಪಡಿಸಲಾಗಿದೆ. ಈಗಾಗಲೇ ವಸತಿ ಶಾಲೆಗಳ ಕಾಮಗಾರಿಗಳು ಪ್ರಾರಂಭಗೊಂಡಿದ್ದು, ಮುಂದಿನ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಮಾಡಲಾಗುವುದು ಎಂದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕ ಮಹಾಂತೇಶ್ ಭಜಂತ್ರಿ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ ಪೂರ್ಣಿಮ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಸಿ.ಎನ್ ಮಾತನಾಡಿದರು.

> ಮಾತೃವಂದನಾ ಯೋಜನೆಯು ಅಲ್ಪ ಸಂಖ್ಯಾತರ ಮಹಿಳೆಯರಿಗೆ ಮತ್ತು ಮಕ್ಕಳ ಅಭಿವೃದ್ಧಿಗೆ ನೆರವಾಗುವುದೇ ಯೋಜನೆಯ ಉದ್ದೇಶವಾಗಿದೆ. ಪ್ರತಿಗರ್ಭಿಣಿ ಮಹಿಳೆಯರಿಗೆ ಈ ಯೋಜನೆಯಡಿಯಲ್ಲಿ ಸೌಲಭ್ಯದೊರೆಯುವಂತೆ ಜಾಗೃತೆವಹಿಸಬೇಕು. ಅಲ್ಪಸಂಖ್ಯಾತರ ಮಕ್ಕಳಿಗೆ ಕಡ್ಡಾಯವಾಗಿ ವಿದ್ಯಾರ್ಥಿವೇತನ ತಲುಪುವಂತೆ ಅಧಿಕಾರಿಗಳು ಕ್ರಮವಹಿಸಬೇಕು.
> -ಮೀನಾ ನಾಗರಾಜ್ ಸಿ.ಎನ್, ಜಿಲ್ಲಾಧಿಕಾರಿ

ಸೌರಶಕ್ತಿಯಿಂದ ಇಂಧನ ಉತ್ಪತ್ತಿ

ಚಿಕ್ಕಮಗಳೂರು: ಬರಡು ಅಥವಾ ನಿರುಪಯುಕ್ತ ಪ್ರದೇಶದಲ್ಲಿ ಸೋಲಾರ್ ಸಿಸ್ಟಂ ಅಳವಡಿಸಿ ಇಂಧನ ಶಕ್ತಿ ಉತ್ಪಾದಿಸಲು ರಾಜ್ಯಸರಕಾರ ಶೇ.80 ಸಬ್ಸಿಡಿ ಒದಗಿಸಿ ಸ್ವ ಉದ್ಯೋಗ ಕೈಗೊಳ್ಳಲು ಯುವಸಮೂಹಕ್ಕೆ ಸಹಾಯಧನ ಕಲ್ಪಿಸುತ್ತಿದೆ ಎಂದು ರಾಜ್ಯ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷ ಟಿ.ಡಿ.ರಾಜೇಗೌಡ ಹೇಳಿದರು.

ನಗರದ ಆದಿಚುಂಚನಗಿರಿ ತಾಂತ್ರಿಕ ವಿದ್ಯಾಲಯದಲ್ಲಿ ಏರ್ಪಡಿಸಿದ್ದ ಭವಿಷ್ಯದಲ್ಲಿ ನವೀಕರಿಸಬಹುದಾದ ಇಂಧನ ಸಂಪನ್ಮೂಲಗಳ ಕುರಿತ ಕಾರ್ಯಾಗಾರವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ಜನಸಾಮಾನ್ಯರಿಗೆ ಸಂಪೂರ್ಣ ವಿದ್ಯುತ್ ಪೂರೈಸುವ ಸಂಬಂಧ ಸೋಲಾರ್ ಪವಾರ್ ಅಳವಡಿಸಿಕೊಂಡು ಮುನ್ನೆಡೆದರೆ ಮುಂದಿನ ಹತ್ತು ವರ್ಷಗಳಲ್ಲಿ ದೇಶಕ್ಕೆ ಹಾಗೂ ರಾಜ್ಯಕ್ಕೆ ಹೆಚ್ಚಿನ ಮಟ್ಟದಲ್ಲಿ ಇಂಧನ ಉತ್ಪತ್ತಿಯಾಗಿ ಯಶಸ್ವಿಗೊಂಡರೆ ಪ್ರತಿ ಕುಟುಂಬಕ್ಕೂ 24 ಗಂಟೆಗಳ ಕಾಲ ನಿರಂತರ ವಿದ್ಯುತ್ ಪೂರೈ ಸಬಹುದು ಎಂದರು. ರಾಜ್ಯ ಪರಿಸರ ಮೌಲ್ಯಮಾಪನ ಪ್ರಾಧಿಕಾರದ ಅಧ್ಯಕ್ಷ ಎ.ಎನ್.ಮಹೇಶ್ ಮಾತನಾಡಿ, ರಾಜ್ಯದಲ್ಲಿನ ವಿವಿಧ ಅಸಾಂಪ್ರದಾಯಿಕ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಅನ್ವಯಗಳನ್ನು ಜನಪ್ರಿಯಗೊಳಿಸಲು ಅಗತ್ಯವಾದ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಜವಾಬ್ದಾರಿಯನ್ನು ನವೀಕರಿಸಬಹುದಾದ ಇಂಧನ ಇಲಾಖೆ ಹೊಂದಿದೆ ಎಂದರು.

ಐಟಿ ಕಾಲೇಜು ಆಡಳಿತ ಮಂಡಳಿ ನಿರ್ದೇಶಕ ಸಿ.ಕೆ. ಸುಬ್ಬರಾಯ, ಪ್ರಾಂಶುಪಾಲ ಡಾ. ಸಿ.ಟಿ.ಜಯದೇವ್, ಆಡಳಿತ ಮಂಡಳಿ ಸದಸ್ಯ ಕೆ.ಮೋಹನ್, ಮೆಕ್ಯಾನಿಕಲ್ ಎಂಜನಿಯರ್ ವಿಭಾಗದ ಮುಖ್ಯಸ್ಥ ಡಾ.ಜೆ. ಎಂ.ನಾರಾಯಣ್, ಎಚ್‌ಒಡಿ ಸತ್ಯನಾರಾಯಣ್, ಕಾರ್ಯದರ್ಶಿ ಮಾಡ್ಲಾ ಪ್ರಕಾಶ್ ಮತ್ತಿತರರಿದ್ದರು.

> ಗುಣಮಟ್ಟದ ಇಂಧನ ಉತ್ಪತ್ತಿ ಸಂಬಂಧ ವಿದೇಶಿ ಕಂಪನಿಯೊಂದಕ್ಕೆ ಸಂಸ್ಥೆ ಒಪ್ಪಂದ ಮಾಡಿಕೊಂಡು ಹೆಚ್ಚಿನ ಮಟ್ಟದಲ್ಲಿ ಶುದ್ಧ ಇಂಧನಕ್ಕೆ ಮುಂದಾಗಿದೆ ಎಂದ ಅವರು ಸೋಲಾರ್ ಗೆ ಹೆಚ್ಚು ಪ್ರಾಮುಖ್ಯತೆ ಯನ್ನು ಸರಕಾರ ನೀಡಿರುವ ಪರಿಣಾಮ ರಾಜ್ಯವು ಇಂಧನ ಉತ್ಪಾದನೆಯಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದೆ.
> -ಟಿ.ಡಿ.ರಾಜೇಗೌಡ, ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷ

ಮಾನ್ಯ 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್.ಸಿ ಇವರ ನ್ಯಾಯಾಲಯ, ಹರಿಹರ.
ಸಿ.ಆರ್.ಮಿಸ್.ನಂ: 671/2024
ಅರ್ಜಿದಾರರು : ಮಂಜಪ್ಪ ತಾಯಿ ಮಾತೇಂಗೆಮ್ಮ ವಯಸ್ಸು ಸುಮಾರು 43 ವರ್ಷ, ವಾಸ : ಹೊಸಪಾಳ್ಯ ಗ್ರಾಮ, ಹರಿಹರ ತಾಲ್ಲೂಕು ದಾವಣಗೆರೆ ಜಿಲ್ಲೆ.
-:ವಿರುದ್ಧ:
ಎದುರುದಾರರು : ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ತಹಶೀಲ್ದಾರ್ ರವರ ಕಛೇರಿ, ಹರಿಹರ ತಾಲ್ಲೂಕು.
ಸಾರ್ವಜನಿಕ ಪ್ರಕಟಣೆ
ಅರ್ಜಿದಾರರ ಅಜ್ಜನಾದ (ತಾಯಿಯ ತಂದೆ) "ನೀಲಪ್ಪ ತಂದೆ ದುರುಗಪ್ಪ" ಇವರು ದಿನಾಂಕ; 10-05-1994 ರಂದು ಹರಿಹರ ತಾಲ್ಲೂಕು ಹೊಸಪಾಳ್ಯ ಗ್ರಾಮದಲ್ಲಿ ಮನೆಯಲ್ಲಿ ಮರಣ ಹೊಂದಿದ್ದ ಅಂಶವನ್ನು ನೋಂದಾಯಿಸಿ ಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ ದಿನಾಂಕ; 19-12-2024 ರಂದು ಬೆಳಿಗ್ಗೆ 11-00 ಗಂಟೆಗೆ ತಾವಾಗಲಿ, ವಕೀಲರ ಮೂಲಕವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ಇಲ್ಲದಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ:-11-11-2024 ರಂದು ನೀಡಲಾಗಿದೆ.
ನ್ಯಾಯಾಲಯಾದ ಆದೇಶದ ಮೇರೆಗೆ
ಶಿರಸ್ತೇದಾರರು
ಪ್ರಧಾನ ಸಿವಿಲ್ & ಪ್ರ.ದ.ನ್ಯಾ.ದಂ.
ನ್ಯಾಯಾಲಯ, ಹರಿಹರ.
ಅರ್ಜಿದರಾರ ಪರ ವಕೀಲರು
ಮಲ್ಲಿಕಾರ್ಜುನ ಸಿ.ಎನ್
ಸ್ಥಳ : ಹರಿಹರ ದಿನಾಂಕ: 11-11-2024

ಮಾನ್ಯ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಹರಿಹರ.
ಸಿ.ಆರ್.ಮಿಸ್.ನಂ: 672/2024
ಅರ್ಜಿದಾರರು : ಮಲ್ಲಿಗೆಮ್ಮ ತಂದೆ ಕರಿಯಪ್ಪ, ವಯಸ್ಸು ಸುಮಾರು 44 ವರ್ಷ, ವಾಸ : ಹೊಸಪಾಳ್ಯ ಗ್ರಾಮ, ಹರಿಹರ ತಾಲ್ಲೂಕು ದಾವಣಗೆರೆ ಜಿಲ್ಲೆ.
-ವಿರುದ್ಧ:
ಎದುರುದಾರರು : ತಹಶೀಲ್ದರ್ ತಾಲ್ಲೂಕು ಕಛೇರಿ, ಹರಿಹರ ತಾಲ್ಲೂಕು.
ಸಾರ್ವಜನಿಕ ಪ್ರಕಟಣೆ
ಅರ್ಜಿದಾರರ ತಂದೆಯಾದ "ಕರಿಯಪ್ಪ ತಂದೆ ನೀಲಪ್ಪ " ಇವರು ದಿನಾಂಕ; 10-02- 2022 ರಂದು ಹರಿಹರ ತಾಲ್ಲೂಕು ಹೊಸಪಾಳ್ಯ ಗ್ರಾಮದ ತಮ್ಮ ಮನೆಯಲ್ಲಿ ಮರಣ ಹೊಂದಿದ್ದ ಅಂಶವನ್ನು ನೋಂದಾಯಿಸಿ ಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಅದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ ದಿನಾಂಕ; 19-12-2024 ರಂದು ಬೆಳಿಗ್ಗೆ 11-00 ಗಂಟೆಗೆ ತಾವಾಗಲಿ, ವಕೀಲರ ಮೂಲಕವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ಇಲ್ಲದಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ:-11-11-2024 ರಂದು ನೀಡಲಾಗಿದೆ.
ನ್ಯಾಯಾಲಯಾದ ಆದೇಶದ ಮೇರೆಗೆ
ಶಿರಸ್ತೇದಾರರು
ಪ್ರಧಾನ ಸಿವಿಲ್ & ಪ್ರದ.ನ್ಯಾ.ದಂ.
ನ್ಯಾಯಾಲಯ, ಹರಿಹರ.
ಅರ್ಜಿದರಾರ ಪರ ವಕೀಲರು
ಮಲ್ಲಿಕಾರ್ಜುನ ಸಿ.ಎನ್
ಸ್ಥಳ : ಹರಿಹರ ದಿನಾಂಕ:11-11-2024

ವ್ಯಾಪಾರ ವಲಯ ಕಾರ್ಯಾರಂಭ

ಮಂಗಳೂರು: ಸ್ಟೇಟ್ ಬ್ಯಾಂಕ್ ಬಳಿ ನಿರ್ಮಾಣವಾಗಿರುವ ಬೀದಿ ಬದಿ ವ್ಯಾಪಾರ ವಲಯವು ಬುಧವಾರದಿಂದ ಕಾರ್ಯಾರಂಭವಾ ಗಲಿದೆ ಎಂದು ಮಂಗಳೂರು ಮಹಾನಗರ ಪಾಲಿಕೆ ಮೇಯರ್ ಮನೋಜ್ ಕುಮಾರ್ ಕೋಡಿಕಲ್ ಹೇಳಿದರು. ಸ್ಟೇಟ್ ಬ್ಯಾಂಕ್ ನ ಬೀದಿ ಬದಿ ವ್ಯಾಪಾರಸ್ಥರಿಗಾಗಿ ನಿರ್ಮಿಸಲಾಗಿರುವ ವಲಯಕ್ಕೆ ಇಂದು ಭೇಟಿ ನೀಡಿ ಮಾತನಾಡಿದರು. ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಂಟೋನ್ಮೆಂಟ್ ವಾರ್ಡ್‌ನಲ್ಲಿ ಸುಸಜ್ಜಿತವಾಗಿ ಬೀದಿ ಬದಿ ವ್ಯಾಪಾರ ವಲಯವು ನಿರ್ಮಾಣಗೊಂಡಿದೆ. ಇದ್ರಲ್ಲಿ 130 ಮಂದಿ ಪೈಕಿಯಲ್ಲಿ ಈಗಾಗಲೇ 93 ಮಂದಿ ಜನರಿಗೆ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಬುಧವಾರದಿಂದ ಹಣ್ಣುಹಂಪಲು, ಫ್ಯಾನ್ಸಿ ಮಳಿಗೆಗಳು ಇಲ್ಲಿ ಕಾರ್ಯಾಚರಿಸಲಿದ್ದು, ಇವ್ರಿಗೆ ಸೂಕ್ತ ವ್ಯವಸ್ಥೆಯನ್ನ ಕಲ್ಪಿಸಲಾಗಿದೆ. ನೀರಿನ ವ್ಯವಸ್ಥೆ ಆದ ಬಳಿಕ ಆಹಾರ ಮಳಿಗೆಗಳನ್ನು ತೆರೆಯಲಾಗುತ್ತದೆ. ಜತೆಗೆ ಒಂದು ವಾರದ ಬಳಿಕ ಹೂ ಮಾರಾಟದ ಮಳಿಗೆಗಳು ಕಾರ್ಯಾರಂಭವಾಗಲಿದೆ ಎಂದು ಮಾಹಿತಿ ನೀಡಿದರು.

ರಾಜ್ಯಮಟ್ಟದ ಸಹಕಾರಿ ಸಪ್ತಾಹ: ಡಾ.ರಾಜೇಂದ್ರ

ಮಂಗಳೂರು: ನ. 16 ರಂದು 'ಉದ್ಯಮಶೀಲತೆ, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ' ಎಂಬ ವಿಷಯದೊಂದಿಗೆ ಕರಾವಳಿ ಉತ್ಸವ ಮೈದಾನದಲ್ಲಿ ರಾಜ್ಯಮಟ್ಟದ ಕಾರ್ಯಕ್ರಮ ನಡೆಯಲಿದೆ.

71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು 'ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎಂಬ ಧ್ಯೇಯ ವಾಕ್ಯದೊಂದಿಗೆ ನಡೆಯಲಿದ್ದು, ಮಂಗಳೂರಲ್ಲಿ ರಾಜ್ಯಮಟ್ಟದ ಸಹಕಾರಿ ಸಪ್ತಾಹ ಆಯೋಜಿಸಲಾಗಿದೆ ಎಂದು ಎಸ್ ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಎಲ್ಲಾ ಕೃಷಿ ಪತ್ತಿನ ಸಹಕಾರ ಸಂಘಗಳು, ಪಟ್ಟಣ ಇದರ ಉದ್ಘಾಟನೆಯನ್ನು ಕರ್ನಾಟಕ ವಿಧಾನಸಭೆಯ ಮಾನ್ಯ ಸಭಾಧ್ಯಕ್ಷ ಯು.ಟಿ.ಖಾದರ್ ಇವರು ನೆರವೇರಿಸಲಿದ್ದಾರೆ. ಸಹಕಾರ ಸಪ್ತಾಹದ ಉದ್ಘಾಟನೆ ಸಹಕಾರ ಸಚಿವ ಕೆ.ಎನ್. ರಾಜಣ್ಣರವರು ನೆರವೇರಿಸಲಿರುವರು. ಉತ್ತಮ ಸಹಕಾರ ಸಂಘಗಳಿಗೆ ಪ್ರಶಸ್ತಿ ಪ್ರದಾನ ವನ್ನು ಕರ್ನಾಟಕ ಸರಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ನೆರವೇರಿಸಲಿದ್ದಾರೆ. ಶತಮಾನೋತ್ಸವ ಪೂರೈಸಿದ ಸಹಕಾರ ಸಂಘಗಳಿಗೆ ಪುರಸ್ಕಾರವನ್ನು ಶಾಸಕರು ಹಾಗೂ ಕರ್ನಾಟಕ ಸರಕಾರದ ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರು ಮಾಡಲಿರುವರು ಎಂದರು.

ಮಂಗಳೂರಲ್ಲಿ ರಾಜ್ಯಮಟ್ಟದ ಸಹಕಾರಿ ಸಪ್ತಾಹವನ್ನು ಎಸ್ ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಸಹಕಾರ ಮಾಣಿಕ್ಯ ಪ್ರಶಸ್ತಿ

ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉತ್ತಮ ಸಹಕಾರಿ ಸಂಘಗಳನ್ನು ಗುರುತಿಸಿ 2024ನೇ ಸಾಲಿನಿಂದ 'ಸಹಕಾರ ಮಾಣಿಕ್ಯ' ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ. ಪ್ರಶಸ್ತಿ ಜತೆಗೆ 5 ಗ್ರಾಂ. ಚಿನ್ನದ ಪದಕ, 10000 ರು. ನಗದು ಹಾಗೂ ಪಾರಿತೋಷಕ ನೀಡಲಾಗುವುದು.

ಉತ್ತಮ ಸ್ವ-ಸಹಾಯ ಸಂಘಗಳಿಗೆ ಪುರಸ್ಕಾರವನ್ನು ಮಾನ್ಯ ಶಾಸಕರು ಹಾಗೂ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ಅಧ್ಯಕ್ಷ ಜಿ.ಟಿ. ದೇವೇಗೌಡ ಅವರು ಮಾಡಲಿರುವರು. ಸಹಕಾರ ಸಪ್ತಾಹದ ಧ್ವಜಾರೋಹಣವನ್ನು ಕ್ಷೇತ್ರದ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ನೆರವೇರಿಸಲಿರುವರು.

ಮಂಗಳೂರು: ರೋಟರಿ ಗವರ್ನರ್ ವಿಕ್ರಮ್ ದತ್ತ

ಮಂಗಳೂರು: ರೋಟರಿ ಕ್ಲಬ್ ಮಂಗಳೂರು ಪೂರ್ವ ಇದರ ಸಮುದಾಯ ಸೇವಾ ಯೋಜನೆಯ ಅಂಗವಾಗಿ ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ಸಹಯೋಗದಲ್ಲಿ ನಗರದ ರಾಮಕೃಷ್ಣ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳ ಅರ್ಹ ಪೋಷಕರಿಗೆ ಗಾಲಿಕುರ್ಚಿ ವಿತರಿಸಲಾಯಿತು. ರೋಟರಿ ಜಿಲ್ಲೆ 3181 ಇದರ ಗವರ್ನರ್ ವಿಕ್ರಮ್ ದತ್ತ ಅವರು ರೋಟರಿ ಕ್ಲಬ್ ಮಂಗಳೂರು ಪೂರ್ವಕ್ಕೆ ಅಧಿಕೃತ ಭೇಟಿ ನೀಡಿದ ಸಂದರ್ಭ ಏರ್ಪಡಿಸಲಾದ ಸಮಾರಂಭದಲ್ಲಿ 8 ಗಾಲಿ ಕುರ್ಚಿಗಳನ್ನು ಹಸ್ತಾಂತರಿಸಲಾಯಿತು. ನಿಸ್ವಾರ್ಥ ಸೇವೆಯಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಸಮಾಜ ಸೇವೆ ರೋಟರಿ ಸಂಸ್ಥೆಯ ಧ್ಯೇಯವಾಗಿದ್ದು, ಸಾಮಾಜಿಕ ಬದ್ಧತೆ ಮತ್ತು ಮಾನವೀಯ ಸೇವೆಯಲ್ಲಿ ರೋಟರಿ ಸಂಸ್ಥೆ ದೇಶಕ್ಕೆ ನೀಡಿದ ಕೊಡುಗೆ ಅನನ್ಯವಾಗಿದೆ ಎಂದು ವಿಕ್ರಮ್ ದತ್ತ ಹೇಳಿದರು. ರೋಟರಿ ಜಿಲ್ಲೆ 3181ಅಸಿಸ್ಟೆಂಟ್ ಗವರ್ನರ್ ವಿಶ್ವನಾಥ ಶೆಟ್ಟಿ, ರೆನಲ್ ಲೆಫ್ಟಿನೆಂಟ್ ಸಿಎ ಹರೀಶ್ ಶೆಟ್ಟಿ ರೋಟರಿ ಕ್ಲಬ್ ಮಂಗಳೂರು ಪೂರ್ವದ ಅಧ್ಯಕ್ಷ ಗೋಪಾಲ್ ಶೆಟ್ಟಿ, ಕಾರ್ಯದರ್ಶಿ ರಾಘವೇಂದ್ರ.ಎನ್, ನಿಕಟಪೂರ್ವ ಅಧ್ಯಕ್ಷ ಜಯರಾಮ ಶೆಟ್ಟಿ, ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ. ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ, ನಿರ್ದೇಶಕ ಪಿ.ಬಿ.ಹರೀಶ್ ರೈ, ರಾಮಕೃಷ್ಣ ಕಾಲೇಜಿನ ಯೂತ್ ರೆಡ್‌ಕ್ರಾಸ್ ಘಟಕದ ಸಂಯೋಜಕ ನಟೇಶ್ ಆಳ್ವ ಉಪಸ್ಥಿತರಿದ್ದರು. ಸಂತೋಷ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಸಮಾಚಾರ ಸಣ್ಣದಲ್ಲ

ವಿಶ್ವ ಆರೈಕೆದಾರರ ದಿನಾಚರಣೆ

ಚಿತ್ರದುರ್ಗ: ಚಿತ್ರದುರ್ಗ ನಗರದ ಬಿಆರ್‌ಸಿ ಸಭಾಂಗಣದಲ್ಲಿ ಈಚೆಗೆ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸಬಿಲಿಟಿ ಹಾಗೂ ತಾಲೂಕು ಪಂಚಾಯಿತಿ ಸಹಯೋದಲ್ಲಿ ಆರೈಕೆದಾರರು ಮತ್ತು ವಿಶೇಷ ಚೇತನ ಮಕ್ಕಳೊಂದಿಗೆ ''ವಿಶ್ವ ಆರೈಕೆದಾರ ದಿನ'' ಅಚರಿಸಲಾಯಿತು. ಚಿತ್ರದುರ್ಗ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ವೈ.ರವಿ ಕುಮಾರ್ ಅವರು ಸಸಿಗೆ ನೀರು ಎರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ, ಆರೈಕೆದಾರರು ಎಂದರೆ ಯಾರು, ಆರೈಕೆದಾರರ ಸಮಸ್ಯೆಗಳು ಮತ್ತು ಆರೈಕೆದಾರರ ದಿನಾಚರಣೆಯ ಉದ್ದೇಶ ತಿಳಿಸಿದ ಅವರು, ವಿಶೇಷ ಚೇತನ ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುತ್ತಾ, ಲಾಲನೆ ಪೊ?ಷಣೆ ಮಾಡುವ ಆರೈಕೆದಾರರ ಕೆಲಸ ಶ್ಲಾಘನೀಯ ಎಂದರು. ಇದೇ ಸಂದರ್ಭದಲ್ಲಿ 61 ವಿಶೇಷ ಚೇತನ ಮಕ್ಕಳಿಗೆ ಪೌಷ್ಠಿಕಾಂಶಯುಕ್ತ ಆಹಾರ ಕಿಟ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಎಪಿಡಿ ಸಂಸ್ಥೆಯ ನಂದಿನಿ, ಐಆರ್‌ಟಿ ಟೀಚರ್ ರಾಜಣ್ಣ ಹಾಗೂ ಎಂಆರ್ ಡಬ್ಲ್ಯೂ ಮೈಲಾರಪ್ಪ ಇದ್ದರು.

ತಾಪಂ ತ್ರೈಮಾಸಿಕ ಕೆಡಿಪಿ ಸಭೆ ನಾಳೆ

ಚಿತ್ರದುರ್ಗ: ಚಿತ್ರದುರ್ಗ ತಾಲ್ಲೂಕು ಪಂಚಾಯತ್ 2024-25ನೇ ಸಾಲಿನ ಅಕ್ಟೋಬರ್ ಅಂತ್ಯದವರೆಗಿನ ಎರಡನೇ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯನ್ನು ಇದೇ ನ.13ರಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಚಿತ್ರದುರ್ಗ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಸಭೆಯ ಅಧ್ಯಕ್ಷತೆ ವಹಿಸುವರು ಎಂದು ಚಿತ್ರದುರ್ಗ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

ಬಾಲ್ಯ ವಿವಾಹ ತಡೆದ ಅಧಿಕಾರಿಗಳು

ಚಿತ್ರದುರ್ಗ: ಖಚಿತ ಮಾಹಿತಿ ಆಧರಿಸಿ ಮಕ್ಕಳ ಸಹಾಯವಾಣಿ, ಶಿಶು ಅಭಿವೃದ್ಧಿ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿ ನಗರದ ತಿರುಮಲ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿದ್ದ ಬಾಲ್ಯ ವಿವಾಹವನ್ನು ತಡೆದಿದ್ದಾರೆ. ಹೊಳಲ್ಕೆರೆ ನಗರದ 17 ವರ್ಷ 3 ತಿಂಗಳಿನ ಬಾಲಕಿಯ ವಿವಾಹವನ್ನು ನಗರದ ಹುಡುಗನೊಂದಿಗೆ ನೆರವೇರಿಸಲು ಪೋಷಕರು ಹಾಗೂ ಕುಟುಂಬಸ್ಥರು, ಮಾಳಪ್ಪನಹಟ್ಟಿಯ ತಿರುಮಲ ಕಲ್ಯಾಣ ಮಂಟಪದಲ್ಲಿ ಮದುವೆ ಆಯೋಜಿಸಿದ್ದರು. ಈ ವೇಳೆ ಭೇಟಿ ನೀಡಿದ ಅಧಿಕಾರಿಗಳು ಜನ್ಮ ದಾಖಲೆ ಪರಿಶೀಲಿನೆ ನಡೆಸಿದಾಗ ಹುಡುಗಿ ಅಪ್ರಾಪ್ತ ಬಾಲಕಿ ಎಂದು ತಿಳಿದು ಬಂದಿದೆ. ಕಾನೂನಿನ ಪ್ರಕಾರ ಬಾಲ್ಯ ವಿವಾಹ ಜರುಗಿಸಿದರೆ ಕನಿಷ್ಠ ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ ಎರೆಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 1 ಲಕ್ಷ ದಂಡ ವಿಧಿಸಲಾಗುತ್ತದೆ ಎಂದು ಪೋಷಕರಿಗೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. 18 ವರ್ಷ ತುಂಬುವವರೆಗೂ ಮದುವೆ ಮಾಡದಂತೆ ಬಾಲಕಿ ಹಾಗೂ ಹುಡುಗನ ಪೋಷಕರಿಂದ ಮುಚ್ಚಳಿಕೆ ಬರಸಿಕೊಂಡಿದ್ದಾರೆ. ಬಾಲಕಿಯನ್ನು ಮಕ್ಕಳ ಕಲ್ಯಾಣ ಸಮಿತಿಗೆ ಹಾಜರು ಪಡಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸವಿತಾ.ಸಿ ತಿಳಿಸಿದ್ದಾರೆ.

ವ್ಯಕ್ತಿ ಕಾಣೆ : ಪತ್ತೆಗೆ ಮನವಿ

ಚಿತ್ರದುರ್ಗ: ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಉಪ್ಪರಿಗೇನಹಳ್ಳಿ ಗ್ರಾಮದ ಮಂಜುನಾಥ್ ತಂದೆ ತಮ್ಮಪ್ಪ (ಸು.48 ವರ್ಷ) ಕಾಣೆಯಾದ ಕುರಿತು ನವೆಂಬರ್ 6ರಂದು ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ಮಂಜುನಾಥ, 5.5 ಅಡಿ ಎತ್ತರ, ದೃಢವಾದ ಮೈಕಟ್ಟು, ಗೋಧಿ ಬಣ್ಣ ಹೊಂದಿದ್ದು, ಬಲಗಾಲಿನ ಮೊಣಕಾಲಿನ ಮೇಲೆ ಹಳೇ ಗಾಯದ ಗುರುತು ಇದ್ದು. ಕನ್ನಡ ಭಾಷೆ ಮಾತನಾಡುವರು. ಮನೆಯಿಂದ ಹೋಗುವಾಗ ಬಿಳಿ ಬಣ್ಣದ ನೀಲಿ ಗೆರೆ ಇರುವ ಶರ್ಟ್ ಮತ್ತು ಸಿಮೆಂಟ್ ಕಲರ್ ಪಂಜೆ ಧರಿಸಿರುತ್ತಾರೆ. ಈ ಮೇಲ್ಕಂಡ ವ್ಯಕ್ತಿಯ ಕುರಿತು ಮಾಹಿತಿ ಕಂಡುಬಂದಲ್ಲಿ ಚಿತ್ರಹಳ್ಳಿಗೇಟ್ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 9480803165, ಹೊಳಲ್ಕೆರೆ ವೃತ್ತ ನಿರೀಕ್ಷಕರ ಕಚೇರಿ ದೂರವಾಣಿ ಸಂಖ್ಯೆ 08191-275376, 9480803135 ಗೆ ಸಂಪರ್ಕಿಸಬಹುದು ಎಂದು ಠಾಣಾಧಿಕಾರಿ ತಿಳಿಸಿದ್ದಾರೆ.

ವಿ+ ಸೋಮವಾರ

{ ಬಸವರಾಜ ಬೊಮ್ಮಾಯಿ } ಸಂಸದ

ಈ ಸರಕಾರದಲ್ಲಿ ಸರಕಾರಿ ಅಧಿಕಾರಿಗಳು ಒತ್ತಡದಲ್ಲಿ ಬದುಕುತ್ತಿದ್ದಾರೆ. ವಾಲ್ಮೀಕಿ ನಿಗಮದ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡರು, ಯಾದಗಿರಿಯಲ್ಲಿ ಅಧಿಕಾರಿ ಆತ್ಮಹತ್ಯೆ ಬೆಳಗಾವಿಯಲ್ಲಿ ಎಸ್‌ಡಿಎ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಿಗ್ಗಾವಿಯಲ್ಲಿ ಅಧಿಕಾರಿಗಳು ಬೇಸತ್ತು ಹೋಗಿದ್ದಾರೆ. ಶಿಗ್ಗಾವಿಯಲ್ಲಿ ಸೋತ ಅಭ್ಯರ್ಥಿ ವಸೂಲಿಗೆ ನಿಂತಿದ್ದಾರೆ. ಟೀಚರ್ಸ್ ಗೆ ಮಂತ್ಲಿ ಫಿಕ್ಸ್ ಮಾಡುತ್ತಿದ್ದಾರೆ.



ಜಿಲ್ಲಾಡಳಿತದಿಂದ ವೀರ ವನಿತೆ ಒನಕೆ ಓಬವ್ವ ಜಯಂತಿಯಲ್ಲಿ ಸಚಿವ ಡಿ.ಸುಧಾಕರ್ ಭಾಗಿ

ಸ್ತ್ರೀಶಕ್ತಿಯ ಸಂಕೇತ ಒನಕೆ ಓಬವ್ವ ಜನರ ಮನದಲ್ಲಿ ಅಜರಾಮರ

ಚಿತ್ರದುರ್ಗ: ನಮ್ಮ ಚಿತ್ರದುರ್ಗದ ಒನಕೆ ಓಬವ್ವ ನಿಸ್ವಾರ್ಥದ ನಾಡಪ್ರೇಮ, ನಾಡಪ್ರಭುವಿಗಾಗಿ ಒನಕೆಯನ್ನೇ ಆಯುಧವನ್ನಾಗಿ ಹಿಡಿದು ಶತ್ರುಗಳ ನಿರ್ನಾಮ ಮಾಡಿದ್ದರಿಂದ ಚರಿತ್ರೆಯಲ್ಲಿ ಅಜರಾಮಗಳಾಗಿ, ಸ್ತ್ರೀಶಕ್ತಿಯ ಸಂಕೇತವಾಗಿ ಇಂದಿಗೂ ಜನಮಾನಸದಲ್ಲಿ ಉಳಿದಿದ್ದಾಳೆ ಎಂದು ಯೋಜನಾ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಹೇಳಿದರು.

ನಗರದ ತರಾಸು ರಂಗಮಂದಿರದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ವತಿಯಿಂದ ವೀರ ವನಿತೆ ಒನಕೆ ಓಬವ್ವ ಜಯಂತಿ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಈ ನಾಡಿಗೆ ಹಾಗೂ ಸಮಾಜಕ್ಕೆ ಮಹನೀಯರು, ಮಹಿಳೆಯರು ನೀಡಿದ ಕೊಡುಗೆ, ತ್ಯಾಗ, ಬಲಿದಾನ, ಸಾಧನೆಗಳ ಸಾರ್ಥಕ ಸೇವೆ ಗುರುತಿಸಿ ಸರ್ಕಾರದ ನಿಯಮಗಳ ಅಡಿಯಲ್ಲಿ ಈ ಜಯಂತಿ ಆಚರಿಸಲಾಗುತ್ತಿದೆ. ಅಂತಹ ತ್ಯಾಗ, ನಿಷ್ಠೆ, ಧೈರ್ಯದ ತ್ರಿವೇಣಿ ಸಂಗಮದಂತಿರುವ ಐತಿಹಾಸಿಕ ಕೋಟೆನಾಡು ರಕ್ಷಿಸಿದ ಛಲವಾದಿ ಸಮುದಾಯದ ಹೆಮ್ಮೆಯ ಕನ್ನಡತಿ ಒಬವ್ವ ಹಾಗೂ ದುರ್ಗದ ಶಕ್ತಿಯ ಸ್ವರೂಪ ಒನಕೆ ಒಬವ್ವ ಎಂದು ಬಣ್ಣಿಸಿದರು.

ರಾಜವೀರ ಮದಕರಿ ನಾಯಕರ ಆಳ್ವಿಕೆಯ ಕಾಲದಲ್ಲಿ ಚಿತ್ರದುರ್ಗದ ಕೋಟೆಗೆ ಒದಗಿ ಬಂದ ಆಪತ್ತನ್ನು ಓರ್ವ ಸಾಮಾನ್ಯ ಮಹಿಳೆಯಾದ ಓಬವ್ವ ತನ್ನ ಮನೆಯಲ್ಲಿದ್ದ ಒನಕೆಯಿಂದ ಶತ್ರು ಸೈನ್ಯ ಸದೆಬಡಿದು ನಾಡಿನ ಕೋಟೆ ರಕ್ಷಿಸಿ, ಸ್ವಾಮಿ ನಿಷ್ಟೆಗೆ ಹೆಸರುವಾಸಿಯಾದ ಓಬವ್ವ ಕರ್ನಾಟಕದ ಹೆಮ್ಮೆ. ನಮ್ಮ ಕೆಲಸ ನಾವು ಪ್ರಾಮಾಣಿಕವಾಗಿ ಮಾಡಬೇಕು ಎಂಬುದಕ್ಕೆ ಬಹುದೊಡ್ಡ ಸಾಕ್ಷಿ ಪ್ರಜ್ಞೆಯಧ್ಯೋತಕ ಒಬವ್ವ ಎಂದು ಹೇಳಿದರು.

ಯುದ್ಧದ ಬಗ್ಗೆ ಯಾವುದೇ ಪರಿವೇ ಇಲ್ಲದಿದ್ದರೂ ಸಮಯ ಪ್ರಜ್ಞೆ ಹಾಗೂ ಧೈರ್ಯದಿಂದ ಹೈದರಾಲಿಯ ಸೈನಿಕರ ವಿರುದ್ಧ ಹೋರಾಡಿದ ಓಬವ್ವರ ಆದರ್ಶಗಳು ನಮ್ಮೆಲ್ಲರಿಗೂ ಬೆಳಕಾಗಬೇಕು. ಕರ್ನಾಟಕ ಇತಿಹಾಸದ ಚರಿತ್ರೆಯಲ್ಲಿ ಕಿತ್ತೂರು ರಾಣಿ ಚನ್ನಮ್ಮ, ಝಾನ್ಸಿ ರಾಣಿ, ಅಬ್ಬಕ್ಕ, ದುರ್ಗದ ರಾಣಿ ಓಬವ್ವನಾಗತಿ ಇವರೆಲ್ಲರೂ ಶತ್ರುಗಳ ವಿರುದ್ಧ ಸೆಣಸಾಡಿದ ವೀರಾಗ್ರಣಿಗಳೇ, ಇಂಥ ವೀರ ವನಿತೆಯರ ಸಾಲಿಗೆ ಓಬವ್ವೆಯು ಸೇರುತ್ತಾಳೆಂಬುದು ಗರ್ವಾಭಿಮಾನದ ಸಂಗತಿ. ಓಬವ್ವೆ ಸಾಮಾನ್ಯ ಹೆಣ್ಣು ಮಗಳಾದರೂ, ತನ್ನ ರಾಜನಿಷ್ಠೆ, ನಾಡಪ್ರೇಮದಿಂದಾಗಿ ದುರ್ಗಕ್ಕಷ್ಟೆ ಅಲ್ಲ, ಕನ್ನಡ ನಾಡಿಗೆ ಹೆಮ್ಮೆಯ ಮನೆಮಗಳಾಗಿದ್ದಾಳೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ವತಿಯಿಂದ ವೀರ ವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ಸಚಿವ ಡಿ.ಸುಧಾಕರ್ ಉದ್ಘಾಟಿಸಿದರು.

ಓಬವ್ವ ಒಬ್ಬ ಸಾಮಾನ್ಯ ಮಹಿಳೆಯಾಗಿ, ಕಾವಲುಗಾರನ ಹೆಂಡತಿಯಾಗಿ ಸ್ವಾಮಿನಿಷ್ಠೆ ಹಾಗೂ ಸಮಯಪ್ರಜ್ಞೆಯಿಂದ ಕೋಟೆನಾಡು ದುರ್ಗವನ್ನು ರಕ್ಷಿಸಿ ಉಳಿಸಿಕೊಳ್ಳಲು ಹೋರಾಡಿದ ವೀರ ಮಹಿಳೆ ಒನಕೆ ಓಬವ್ವ. ಇಂತಹ ಅಸಾಮಾನ್ಯ ಮಹಿಳೆಯನ್ನು ಯಾವುದೇ ಒಂದು ಜಾತಿಗೆ ಸೀಮಿತಗೊಳಿಸದೇ ದುರ್ಗದ ಎಲ್ಲಾ ಸಮುದಾಯದವರು ಸ್ಮರಿಸಬೇಕು.

- ಕೆ.ಸಿ ವೀರೇಂದ್ರ ಪಪ್ಪಿ ಶಾಸಕರು

ಪ್ರಸ್ತುತ ದಿನಮಾನಗಳಲ್ಲಿ ತಾಂತ್ರಿಕ ವಿದ್ಯಮಾನಗಳಿಂದ ನಮ್ಮ ಸಂಸ್ಕೃತಿ, ಪರಂಪರೆಯನ್ನು ಇಂದಿನ ಯುವ ಜನತೆ ಮರೆಯುತ್ತಿದ್ದು, ಓದುವವರ ಸಂಖ್ಯೆಯೂ ಕ್ಷೀಣಿಸುತ್ತಿದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಶಿಕ್ಷಣ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಮಹಾಮಾತೆ ವೀರ ವನಿತೆ ಓಬವ್ವಳ ಆದರ್ಶ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು

- ಹೆಚ್. ಆಂಜನೇಯ ಮಾಜಿ ಸಚಿವ

ಮಾಜಿ ಸಚಿವ ಎಚ್.ಆಂಜನೇಯ ಮಾತನಾಡಿ

ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಡಾ.ತಿಪ್ಪೇಸ್ವಾಮಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜೆ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಎಂ.ಕಾರ್ತಿಕ್, ತಹಶೀಲ್ದಾರ್ ಡಾ.ನಾಗವೇಣಿ, ನಗರಸಭೆ ಪೌರಾಯುಕ್ತೆ ಎಂ.ರೇಣುಕಾ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಸಿ.ಎಸ್.ಗಾಯತ್ರಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ್, ಕೆಡಿಪಿ ಸದಸ್ಯ ನಾಗರಾಜ್, ನಗರಸಭೆ ಮಾಜಿ ಅಧ್ಯಕ್ಷ ನಿರಂಜನ್ ಮೂರ್ತಿ, ಛಲವಾದಿ ಸಮುದಾಯದ ಮುಖಂಡರಾದ ಭಾರ್ಗವಿ ದ್ರಾವಿಡ್, ಆರ್ ನಾಗರಾಜ್, ಶೇಷಪ್ಪ, ಎಸ್.ಎಲ್.ರವಿಕುಮಾರ್, ಸಿ.ಪಿ.ಕೃಷ್ಣಮೂರ್ತಿ ಸೇರಿದಂತೆ ನಗರಸಭೆ ಸದಸ್ಯರು, ಸಾರ್ವಜನಿಕರು ಉಪಸ್ಥಿತರಿದ್ದರು.

ಹರಿಹರ ನಗರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ: ಸಂಸದೆ

ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿದರು.

ಹರಿಹರ: ಹರಿಹರ ವಿಧಾನಸಭಾ ವ್ಯಾಪ್ತಿಗೆ 4.71 ಕೋಟಿ ರು. ಗಳ ಅನುದಾನ ಬಿಡುಗಡೆ ಯಾಗಿದೆ ಮುಂದೆ ಅನುದಾನ ತರುವ ಪ್ರಕ್ರಿಯೆ ಇದೆ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿದರು

ನಗರದ ನಗರಸಭೆ ಆವರಣದಲ್ಲಿ ಸೋಮವಾರ ದಾವಣಗೆರೆ- ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಉದ್ಘಾಟನೆ ಸಮಾರಂಭದಲ್ಲಿ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಗುತ್ತೂರು- ಅಮರಾವತಿ ಮಧ್ಯೆ ವರ್ತುಲ ರಸ್ತೆ (ರಿಂಗ್ ರಸ್ತೆ) ನಿರ್ಮಾಣಕ್ಕೆ 4 ಕೋಟಿ ರೂ,ಗಳ ಅನುದಾನ ಮತ್ತು ಡಿ.ಬಿ.ಕೆರೆ ಕಾಲುವೆ(ಚಾನೆಲ್) ಗೆ ತಡೆಗೋಡೆ ನಿರ್ಮಾಣಕ್ಕೆ 71 ಲಕ್ಷರು.ಗಳ ಅನುದಾನ ಬಿಡುಗಡೆ ಯಾಗಿದ್ದು ತಡೆಗೋಡೆ ಕಾಮಗಾರಿ ಪ್ರಗತಿಯಲ್ಲಿದೆ.

ಅಭಿವೃದ್ಧಿ ವಿಚಾರದಲ್ಲಿ ಹರಿಹರ ನಗರವು ದಾವಣಗೆರೆಗೆ ಹೋಲಿಕೆ ಮಾಡಿ ನೋಡಿದರೆ ಅಭಿವೃದ್ಧಿಯಲ್ಲಿ ಸ್ವಲ್ಪ ಹಿಂದಿದೆ ಎಂದು ನನಗೆ ಮೇಲ್ನೋಟಕ್ಕೆ ಅನ್ನಿಸುತ್ತಿದ್ದು ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ನನ್ನ ಅವಧಿಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ .ರಾಜ್ಯ ಸರ್ಕಾರ ದ ಅನುದಾನಗಳನ್ನು ಜಿಲ್ಲಾ ಉಸ್ತುವಾರಿ ಮಂತ್ರಿ ಮಲ್ಲಿಕಾರ್ಜುನ್ ಜೊತೆ ಮತ್ತು ಕೇಂದ್ರ ಸರ್ಕಾರದ ಯೋಜನೆ ಗಳನ್ನು ಸಂಬಂಧಪಟ್ಟ ಇಲಾಖೆಗಳಲ್ಲಿ ಚರ್ಚಿಸಿ ತರುವ ಪ್ರಯತ್ನ ಮಾಡುತ್ತೇನೆ ಎಂಬ ಭರವಸೆ ನೀಡಿದರು.

ನಗರಸಭೆ ಅಧ್ಯಕ್ಷ ಕವಿತಾ ಮಾರುತಿ ಬೇಡರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ದೂಢಾ ಆಯುಕ್ತ ತಿಮ್ಮಣ್ಣ ಹುಲ್ಲುಮನಿದರು.

ಇದೆ ವೇಳೆ ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಎಸ್. ರಾಮಪ್ಪ, ನಗರಸಭೆ ಸದಸ್ಯರುಗಳಾದ ಎ.ವಾಮನ ಮೂರ್ತಿ, ಶಂಕರ್ ಖಾಟಾವ್ಕರ್ ಮುಂತಾದವರು ನಗರದ ಸಮಸ್ಯೆ ಹಾಗೂ ದೂಡಾದ ಕರ್ತವ್ಯಗಳ ಬಗ್ಗೆ ಮಾತನಾಡಿದರು. ಈ ಸಮಯದಲ್ಲಿ ನಗರಸಭೆ ಉಪಾಧ್ಯಕ್ಷ ಎಂ.ಜಂಬಣ್ಣ, ,ಧೂಡಾ ಸದಸ್ಯರುಗಳಾದ ವಾಣಿ ಬಕ್ಕೇಶ್,ಜಬ್ಬಾರ್ ಹರಳಹಳ್ಳಿ,ನಗರಸಭೆ ಸದಸ್ಯರುಗಳಾದ ರತ್ನಮ್ಮ, ಆಟೋ ಹನುಮಂತಪ್ಪ, ಅಲೀಮ್, ಸುಮಿತ್ರಮ್ಮ ಮರಿದೇವ್, ಮುಜಾಮಿಲ್ ,ಆರ್.ಸಿ.ಜಾವಿದ್,ಕೆ.ಜಿ ಸಿದ್ದೇಶ್, ಫಕೀರಮ್ಮ,ಎನ್.ರಜನಿಕಾಂತ್ ಇದ್ದರು.

ಸಮಸ್ಯೆಗಳಿದ್ದರೆ ನನ್ನೆ ಭೇಟಿ ಮಾಡಿ

ಹರಿಹರದ ಸಮಸ್ಯೆಗಳಲ್ಲಿ ನಾನು ಗಮನಿಸಿದಂತೆ ಮುಖ್ಯವಾಗಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಗಮನಿಸಿದ್ದೇನೆ. ಆದ್ದರಿಂದ ನಗರಸಭೆಯ ಅಧಿಕಾರಿಗಳು, ಅಧ್ಯಕ್ಷ ಉಪಾಧ್ಯಕ್ಷ, ಸದಸ್ಯರುಗಳು ಗಮನಹರಿಸಿ ಕುಡಿಯುವ ನೀರಿನ ಸಮಸ್ಯೆ ಬರದಂತೆ ಎಚ್ಚರಿಕೆ ವಹಿಸುವ ಕೆಲಸವನ್ನು ಖಂಡಿತವಾಗಿ ಮಾಡಬೇಕಾಗುತ್ತದೆ ಎಂದು ತಿಳಿಸಿದರು. ಪ್ರತಿ ಮಂಗಳವಾರ ದಾವಣಗೆರೆಯ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ನಮ್ಮ ಸಂಪರ್ಕ ಕಚೇರಿಯಲ್ಲಿ ನಾನು ಲಭ್ಯ ಇರುತ್ತೇನೆ ನಿಮ್ಮ ಯಾವುದೇ ಸಮಸ್ಯೆಗಳಿದ್ದರೆ ನೇರವಾಗಿ ಬಂದು ನನ್ನನ್ನು ಭೇಟಿಯಾಗಿ ಸಮಸ್ಯೆಗಳನ್ನು ಹೇಳಿಕೊಂಡರೆ ಬಗೆಹರಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಕನ್ನಡ ಭಾಷೆ ಅಸ್ತಿತ್ವ, ಅಸ್ಮಿತೆ ಕಾಪಾಡಿಕೊಳ್ಳಬೇಕು

ಜಗಳೂರು: ಭಾರತ ಒಕ್ಕೂಟ ವ್ಯವಸ್ಥೆಗೆ ಸಂವಿಧಾನ ಭದ್ರಬುನಾದಿಯಾಗಿದ್ದು.ಕನ್ನಡ ಭಾಷೆಯ ಅಸ್ತಿತ್ವ ಅಸ್ಮಿತೆ ಕಾಪಾಡಲು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ' ಎಂದು ಯುವಕರ್ನಾಟಕ ವೇದಿಕೆಯ ರಾಜ್ಯಾಧ್ಯಕ್ಷ ಬಿಗ್ ಬಾಸ್ ಖ್ಯಾತಿಯ ರೂಪೇಶ್ ರಾಜಣ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಬಯಲುರಂಗಮಂದಿರ ಅವರ ಣದಲ್ಲಿ ಯುವಕರ್ನಾಟಕ ವೇದಿಕೆ ತಾಲೂಕು ಘಟಕದ ಪದಗ್ರಹಣ ಹಾಗೂ ಕನ್ನಡ ರಾಜ್ಯೋತ್ಸವ ಮತ್ತು ರಸಮಂಜರಿ ಕಾರ್ಯಕ್ರ ಮವನ್ನು ಉದ್ಘಾಟಿಸಿ ಅವರು ಮಾತನಾಡಿ ದರು. 'ಕರ್ನಾಟಕ ರಾಜ್ಯಕ್ಕೆ ಕನ್ನಡಭಾಷೆಯೇ ಸಾರ್ವಭೌಮವಾಗಿದ್ದು.ಯುವ ಕರ್ನಾಟಕ ವೇದಿಕೆ ಕುವೆಂಪು,ಬುದ್ಧ,ಬಸವ ಅಂಬೇಡ್ಕರ್ ಅವರ ಆಶಯಗಳ ಈಡೇರಿಕೆಗಾಗಿ ಜಾತ್ಯಾತೀತವಾದ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಕರ್ನಾಟಕದ ನಾಲ್ಕೂ ಗಡಿಅಂಚಿನಿಂದ ಮಧ್ಯ ಕರ್ನಾಟಕವನ್ನೊಳಗೊಂಡಂತೆ ಉದ್ದ ಅಗಲಕ್ಕೂ ವಿಸ್ತರಣೆಗೊಂಡು ಬಲಿಷ್ಠ ಸಂಘಟನೆಯಾಗಿ ಹೊರಹೊಮ್ಮುತ್ತಿದೆ. ದ್ವೇಷದಿಂದ ಸಾಧನೆ ಅಸಾಧ್ಯ ಸ್ನೇಹದಿಂದ ಕನ್ನಡಿಗರ ಮನಗೆದ್ದು ಕನ್ನಡ ನಾಡು ನುಡಿ ನೆಲಜಲ ಸಂರಕ್ಷಣೆಗೆ ದಕ್ಕೆ ಉಂಟಾದರೆ ಪ್ರಾಣತ್ಯಾಗಕ್ಕೂ ಸಿದ್ದರಾಗೋಣ. ರೈತ, ಮಹಿಳೆ, ಕಾರ್ಮಿಕರ ಧ್ವನಿಯಾಗಿ ಹೊರಾಟ ರೂಪಿಸಲು ಸರ್ವರೂ ಕೈಜೋಡಿಸಬೇಕು'. ಎಂದು ಕರೆನೀಡಿದರು.

'ವಿಶ್ವವಿಖ್ಯಾತ ಬಿಗ್ ಬಾಸ್ ರಿಯಾಲಿಟಿ ಶೋನಲ್ಲಿ ಭಾಗವಹಿಸಿದ ಏಕೈಕ ಕನ್ನಡಪರ ಸಂಘಟನೆ ಮುಖಂಡ ಎಂಬ ಹೆಗ್ಗಳಿಕೆ ನನಗಿದೆ. ಕನ್ನಡನಾಡಿನ ಸಮಸ್ತ ವೀಕ್ಷಕರು ಇನ್ ಸ್ಟಾಗ್ರಾಮ್ ಮೂಲಕ ವ್ಯಾಪಕ ಬೆಂಬಲ ಸೂಚಿಸಿದ್ದರು.ಅದರಲ್ಲಿ ಜಗಳೂರಿನವರೂ ಇರುವುದು ಹೆಮ್ಮೆಯ ಸಂಗತಿ ತಮ್ಮ ಅಭಿಮಾನಕ್ಕೆ ಸದಾ ಚಿರ ಋಣಿಯಾಗಿರುವೆ' ಎಂದು ತಿಳಿಸಿದರು.

ಅಂಬೇಡ್ಕರ್ ಸೇನೆ ರಾಜ್ಯಾಧ್ಯಕ್ಷ ನಟ, ನಿರ್ದೇಶಕ ಪಿ.ಮೂರ್ತಿ ಮಾತನಾಡಿ, ಕರ್ನಾಟಕ ರಾಜ್ಯ ವಲಸಿಗರಿಗೆ ಉದ್ಯೋಗದ ಆಶ್ರಯತಾಣವಾಗಿದೆ. ಉದ್ಯೋಗ ಹರಸಿ ಬಂದವರು ಕರ್ನಾಟಕದಲ್ಲಿ ತಮ್ಮ ಮಾತೃನಾಡಿನ ಭಾಷಾ ಪ್ರಭುತ್ವ ಹಿಡಿತ ಸಾಧಿಸಲು ಹೊರಟಿರುವುದು ಕನ್ನಡನಾಡಿನಲ್ಲಿ ಆತಂಕಕಾರಿ ಬೆಳವಣಿಗೆ.ಸಂವಿಧಾನಬದ್ಧ ಹಕ್ಕು,ಮೀಸಲಾತಿ ಅನುಭವಿಸುತ್ತಿರುವವರು ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರನ್ನು ವಿರೋಧಿಸುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದರು.

ಇದೇ ವೇಳೆ ಶೈನಿಂಗ್ ಸ್ಟಾರ್ ಕಲಾತಂಡದಿಂದ ರಸಮಂಜರಿ ಕಾರ್ಯಕ್ರಮ ಜರುಗಿತು.

ಸಂದರ್ಭದಲ್ಲಿ ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯ ಮುಖಂಡ ಕೆಪಿ ಪಾಲಯ್ಯ,ಚಲಚಿತ್ರನಟ ಸುನಾಮಿ ಕಿಟ್ಟಿ,ಯುವಕರ್ನಾಟಕ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಸಯ್ಯದ್ ಶಫಿ,ತಾಲೂಕು ಗೌರವ ಅಧ್ಯಕ್ಷ ಬರ್ಕತ್ ಅಲಿ,ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ್,ಉಪಾಧ್ಯಕ್ಷ ನಾಗರಾಜ್ ಮರೇನಹಳ್ಳಿ,ಸಂಚಾಲಕ ಚಿಕ್ಕಮ್ಮನಹಟ್ಟಿ ಶ್ರೀಕಾಂತ್,ನರಸಿಂಹಮೂರ್ತಿ,ಕಾನೂನು ಸಲಹೆಗಾರ ಟಿ.ಬಸವರಾಜ್,ವಕೀಲ ತಿಪ್ಪೇಸ್ವಾಮಿ,ಬಿ.ಮಹೇಶ್ವರಪ್ಪ,ಜೈಭಾರತ್ ಟ್ರಸ್ಟ್ ನ ನಬೀಉಲ್ಲಾ,ಜನಸ್ನೇಹಿ ಟ್ರಸ್ಟ್ ನ ಯೋಗೇಶ್,ಮಹೇಶ್,ಪ.ಪಂ ಅಧ್ಯಕ್ಷ ನವೀನ್ ಕುಮಾರ್,ಸೇರಿದಂತೆ ಪ.ಪಂ. ಸದಸ್ಯರುಗಳು ಮುಖಂಡರು ಇದ್ದರು.

ಯುವಕರ್ನಾಟಕ ವೇದಿಕೆ ತಾಲೂಕು ಘಟಕದ ಪದಗ್ರಹಣ ಹಾಗೂ ಕನ್ನಡ ರಾಜ್ಯೋತ್ಸವ ಮತ್ತು ರಸಮಂಜರಿ ಕಾರ್ಯಕ್ರ ಮವನ್ನು ರೂಪೇಶ್ ರಾಜಣ್ಣ ಉದ್ಘಾಟಿಸಿದರು.

ಮೌನವಾಗಿದ್ದು ಸಾಮಾಜಿಕ ಕಳಕಳಿ,ಸಂಘಟನೆ ಚತುರತೆ ಮೈಗೂಡಿಸಿಕೊಂಡಿರುವ ಜಗಳೂರಿನ ಬರ್ಕತ್ ಅಲಿ ಅವರ ವ್ಯಕ್ತಿತ್ವ ಯುವಸಮೂಹಕ್ಕೆ ಆದರ್ಶವಾಗಿದೆ.ನಿರಾಶ್ರಿತ ವಯೋವೃದ್ದರಿಗೆ ಲಾಲಾನೆ ಪಾಲನೆಮಾಡುತ್ತಿರುವ ಜನಸ್ನೇಹಿ ಚಾರಿಟಬಲ್ ಟ್ರಸ್ಟ್ ರಾಜ್ಯಕ್ಕೆ ಮಾದರಿಯಾಗಿದೆ.ನಾನು ಶಾಸಕನಾದ ನಂತರ ಅನಾಥ ಅಂಧರಿಗೆ ವೈಯಕ್ತಿಕವಾಗಿ 50000ರು. ಜೋಳಿಗೆಯಲ್ಲಿ ಧನಸಹಾಯ ಮಾಡಿರುವೆ.ನನ್ನ ಚಿಂತನೆಗೆ ಸಾಮ್ಯತೆಯಿರುವ ಜನಸ್ನೇಹಿ ನಿರಾತ ಕೇಂದ್ರಕ್ಕೆ ಯುವಕರ್ನಾಟಕ ವೇದಿಕೆಯೊಂದಿಗೆ ನಿಯೋಗ ತೆರಳಿ ಕುಶಲೋಪರಿ ವಿಚಾರಿಸಲಾಗುವುದು.

- ಬಿ.ದೇವೇಂದ್ರಪ್ಪ ಶಾಸಕ ಜಗಳೂರು

ದೇಹದ ಸದೃಢಕ್ಕೆ ಕ್ರೀಡೆ,ಯೋಗ ಸಹಕಾರಿ

ನಾಯಕನಹಟ್ಟಿ: ಮನುಷ್ಯನ ದೇಹದ ಸದೃಢಕ್ಕೆ ಕ್ರೀಡೆ ಮತ್ತು ಯೋಗದಿಂದ ಸಾಧ್ಯ ಎಂದು ನಿಕಟಪೂರ್ವ ತಹಸೀಲ್ದಾರ್ ಎನ್ ರಘುಮೂರ್ತಿ ಹೇಳಿದರು .

ಅವರು ನಾಯಕನಹಟ್ಟಿ ಹೋಬಳಿಯ ಎನ್ ಮಹದೇವಪುರ ಗ್ರಾ.ಪಂ. ವ್ಯಾಪ್ತಿಯ ಮನಮೈನಹಟ್ಟಿ ಗ್ರಾಮದ ಏಕಾಂತೇಶ್ವರ ಅಂಗಳದಲ್ಲಿ ನಾಯಕನಹಟ್ಟಿ ಪ್ರೀಮಿಯರ್ ಲೀಗ್ ಸೀಜನ್-2 ಕ್ರಿಕೆಟ್ ಕ್ರೀಡಾಂಗಣದಲ್ಲಿ ಕ್ರೀಡಾಕೂಟಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಜಗತ್ತಿನಲ್ಲಿ ಕ್ರಿಕೆಟ್ ಕ್ರೀಡೆ ಅತ್ಯಂತ ಶ್ರೀಮಂತರ ಪ್ರಯೋಜಕತ್ವ ಕ್ರೀಡೆಯಾಗಿದೆ ಆದರೂ ಇಲ್ಲಿನ ಪ್ರತಿಭೆಗಳು ಮತ್ತು ಕ್ರೀಡಾಪಟುಗಳು ಅತ್ಯಂತ ಬಡತನ ಮತ್ತು ಪ್ರತಿಭೆ ಹಾಗೂ ಪರಿಶ್ರಮದಿಂದ ಬಂದಂತ ಕ್ರೀಡೆಯಾಗಿದ್ದು ಯಾರು ಪರಿಶ್ರಮದಿಂದ ಕ್ರಿಕೆಟ್ ತನ್ಮಯತೆಯನ್ನು ಉಳಿಸಿಕೊಳ್ಳುತ್ತಾರೋ ಅವರಿಗೆ ಈ ಕ್ರೀಡಾಸಂಪತ್ತು ದೊರೆಯುತ್ತದೆ.

ಅಷ್ಟೇ ಮನಸ್ಸಿನ ಏಕಾಗ್ರತೆ ಮತ್ತು ಆರೋಗ್ಯ ವೃದ್ಧಿಯಾಗುತ್ತದೆ ಇಲ್ಲಿನ ಯುವಕನಾದಂತ ರವಿಕುಮಾರ್ ಅವರು ರಾಜ್ಯಕ್ಕೆ ಆಯ್ಕೆಯಾಗಿರುವುದು ತುಂಬಾ ಸಂತಸ ತಂದಿದೆ ತಿಪ್ಪೆ ರುದ್ರ ಸ್ವಾಮಿಯವರ ಈ ಮಣ್ಣಿನ ಸೊಗಡಿನ ಈ ನೆಲದ ಗುಣವೇ ಹಾಗೆ ಮುಂದಿನ ದಿನಗಳಲ್ಲಿ ಈ ಪ್ರೀಮಿಯರ್ ಲೀಗ್ ನಿಂದ ಹತ್ತು ಹಲವು ಕ್ರೀಡಾಪಟುಗಳು ರಾಜ್ಯ ಮತ್ತು ದೇಶ ಮಟ್ಟದಲ್ಲಿ ಪ್ರಶಸ್ತಿಯ ಗರಿಗಳನ್ನು ಹಾಕಿಕೊಳ್ಳಲಿ ಎಂದು ಹಾರೈಸಿದರು.

'ಕರ್ನಾಟಕ ರಾಜ್ಯ ದ್ರಾಕ್ಷಾರಸ ನಿಗಮ ಮಂಡಳಿಯ ಅಧ್ಯಕ್ಷ ಡಾ. ಬಿ. ಯೋಗೇಶ್ ಬಾಬು, ಸರ್ಕಲ್ ಇನ್ಸ್ಪೆಕ್ಟರ್ ಜಿ.ಬಿ. ಉಮೇಶ್, ಪ್ರಮುಖರಾದ ಸೈಯದ್ ಅನ್ವರ್, ನಾಗರಾಜ್, ನಿರಂಜನ್, ಅಬ್ಬೇನಹಳ್ಳಿ, ಎಸ್ ಶಿವತಿಪ್ಪೇಸ್ವಾಮಿ ಜಿ.ಕೆ.ಹಳ್ಳಿ, ತ್ರಿಶೂಲ್ ಕುಮಾರ್, ಗುಂತಕೋಲಮ್ಮನಹಳ್ಳಿ ವಿಷ್ಣು, ಚನ್ನಬಸಯ್ಯನಹಟ್ಟಿ ತಿಪ್ಪಯ್ಯ, ಮಲ್ಲೂರಹಳ್ಳಿ ಎಸ್.ಪಿ. ಸೋಮುಶೇಖರ್, ರೇಖಲಗೆರೆ ತಿಪ್ಪೇಸ್ವಾಮಿ, ಶಶಿಕುಮಾರ್, ಗಿರೀಶ್ ಕುಮಾರ್, ಕೊಂಡಯ್ಯನಕಪಿಲೆ ಬೋರಣ್ಣ, ಇದ್ದರು

ಆಂಗ್ಲಭಾಷಾ ಪ್ರಶ್ನೆಪತ್ರಿಕೆ ತಯಾರಿಕಾ ಕಾರ್ಯಾಗಾರ

ಪ್ರೌಢಶಾಲಾ ವಿಭಾಗದಲ್ಲಿ ಸೋಮವಾರ ಆಂಗ್ಲಭಾಷಾ ವಿಷಯದ 2024ರ ಪ್ರಶ್ನೆಪತ್ರಿಕೆ ತಯಾರಿಕಾ ಕಾರ್ಯಾಗಾರ ನಡೆಯಿತು.

ಹೊಸದುರ್ಗ: ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಸೋಮವಾರ ಆಂಗ್ಲಭಾಷಾ ವಿಷಯದ 2024ರ ಪ್ರಶ್ನೆಪತ್ರಿಕೆ ತಯಾರಿಕಾ ಕಾರ್ಯಗಾರ ನಡೆಯಿತು.

ಕಾರ್ಯಗಾರ ಉದ್ಘಾಟಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಸೈಯದ್ ಮೋಸಿನ್, ಎಲ್ಲಾ ಶಿಕ್ಷಕರು ಕಡ್ಡಾಯವಾಗಿ ಮಾದರಿ ಪ್ರಶ್ನೆಪತ್ರಿಕೆ ತಯಾರಿಸಿ ಅದರಂತೆ ತರಗತಿ ಕೋಣೆಗಳಲ್ಲಿ ಅನುಷ್ಠಾನಗೊಳಿಸಬೇಕು. ಶಿಕ್ಷಣ ಇಲಾಖೆಯಲ್ಲಿ ಕಾಲ ಕಾಲಕ್ಕೆ ಬದಲಾದ ನಿಯಮಗಳಿಗೆ ಹೊಂದಿಕೊಳ್ಳುವುದು ಕಡ್ಡಾಯ. ಶಿಕ್ಷಕರು ಇಲಾಖೆಯಿಂದ ಕಳಸುವ ಆದೇಶ, ಸೂಚನೆಯನ್ನು ಚಾಚೂ ತಪ್ಪದೇ ಪಾಲಿಸಬೇಕು. ಈಗಿನಿಂದಲೇ ತಮ್ಮ ತಮ್ಮ ಶಾಲಾ ಮಕ್ಕಳನ್ನು ಪರೀಕ್ಷೆಗೆ ಸಿದ್ಧರನ್ನಾಗಿ ಮಾಡಿ, ಪರೀಕ್ಷೆಯ ಭಯ ನಿವಾರಿಸುವ ಮೂಲಕ ಈ ಬಾರಿ ತಾಲೂಕಿನ ಎಸ್ಸೆಸ್ಸೆಲ್ಸಿ ಫಲಿತಾಂಶವನ್ನು ಹೆಚ್ಚಿಸಲು ಎಲ್ಲಾ ಶಿಕ್ಷಕರು ಪ್ರಾಮಾಣಿಕವಾಗಿ ಶ್ರಮಿಸಬೇಕು. ಯಾವುದೇ ಕಾರಣಕ್ಕೂ ಕುಂಟು ನೆಪ ಹೇಳಕೂಡದು ಎಂದು ಎಚ್ಚರಿಕೆ ನೀಡಿದರು.

ಉಪನಿರ್ದೇಶಕರ ಕಚೇರಿ ವಿಷಯ ಪರಿವೀಕ್ಷಕ ಹೆಚ್.ಟಿ.ಚಂದ್ರಣ್ಣ ಮಾತನಾಡಿ, ಬ್ಲೂಮ್ಸ್ ಟೆಕ್ಸೋನಮಿ ಪ್ರಕಾರ ಪ್ರಶ್ನೆಪತ್ರಿಕೆ ತಯಾರಿಸಬೇಕು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ತಾಲೂಕು ಆಂಗ್ಲಭಾಷಾ ಕ್ಲಬ್ ಅಧ್ಯಕ್ಷ ತಿಪ್ಪೇಸ್ವಾಮಿ, ಸಂಪನ್ಮೂಲ ಶಿಕ್ಷಕರಾದ ಆರ್.ಶಿವಶಂಕರ್, ಎಸ್. ಚಂದ್ರಶೇಖರ್, ಉಪ ಪ್ರಾಂಶುಪಾಲ ಹೆಚ್.ನಾಗೇಂದ್ರಪ್ಪ, ಎಲ್ಲಾ ಶಾಲೆಗಳ ಆಂಗ್ಲಭಾಷಾ ಶಿಕ್ಷಕರು ಹಾಜರಿದ್ದರು.

ಶಿಕ್ಷಕ ರುದ್ರೇಗೌಡ ನಿರೂಪಿಸಿದರು. ಶೋಭಾ ಸಹಶಿಕ್ಷಕಿ ಪ್ರಾರ್ಥಿಸಿದರು, ಶಿಕ್ಷಕಿ ತಿಪ್ಪೇಸ್ವಾಮಿ ವಂದಿಸಿದರು.

ವಾಯುಮಾಲಿನ್ಯ ನಿಯಂತ್ರಣ ಮಾಸಾಚರಣೆ

ಚಿತ್ರದುರ್ಗ: 2024-25ನೇ ಸಾಲಿನ ನವೆಂಬರ್ ಮಾಹೆಯಲ್ಲಿ ವಾಯುಮಾಲಿನ್ಯದ ದುಷ್ಪಾರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಬಿತ್ತಿಪತ್ರ ಹಾಗೂ ಕರಪತ್ರಗಳನ್ನು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಬಿಡುಗಡೆಗೊಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸೋಮವಾರ ಜರುಗಿದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಅವರು ವಾಯುಮಾಲಿನ್ಯ ನಿಯಂತ್ರಣಾ ಮಾಸಾಚರಣೆಗೆ ಚಾಲನೆ ನೀಡಿದರು.

ಸಾರಿಗೆ ಇಲಾಖೆ ವತಿಯಿಂದ ಪ್ರತಿ ವರ್ಷ ನವಂಬರ್ ಮಾಹೆಯಲ್ಲಿ ವಾಯು ಮಾಲಿನ್ಯ ನಿಯಂತ್ರಣಾ ಮಾಸಾಚರಣೆ ಆಚರಿಸುತ್ತಿದ್ದು, ವಾಹನಗಳ ಪ್ರದೋಷಣೆಯಿಂದ ಪರಿಸರದ ಮೇಲೆ ಆಗುವ ದುಷ್ಪಪರಿಣಾಮಗಳನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ವಾಯುಮಾಲಿನ್ಯ ನಿಯಂತ್ರಣ ಜಾಗೃತಿ ಮಾಸಾಚರಣೆಯನ್ನು ನವಂಬರ್-2024ರ ಮಾಸ ಪೂರ್ತಿಯಾಗಿ ಆಚರಿಸಲಾಗುತ್ತಿದ್ದು, ವಾಯುಮಾಲಿನ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ಮೋನಪ್ಪ, ಪ್ರಾದೇಶಿಕ ಸಾರಿಗೆ ಅಧಿಕಾರಿ ಭರತ್ ಎಂ ಕಾಳೇಸಿಂಘೆ ಸೇರಿದಂತೆ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸದಸ್ಯರು ಇದ್ದರು.

ಆರನೇಯ ಅನಂತಸ್ಮರಣೆ

ಉದಾತ್ತ ಸ್ವಭಾವ, ವೈವಿಧ್ಯ ಜಾಣ್ಮೆ, ಜನಮಾನಸದೊಂದಿಗೆ
ಸೌಹಾರ್ದ ಸಂಬಂಧ, ಸ್ಫುರದ್ರೂಪಿ ವ್ಯಕ್ತಿತ್ವದ
ದಿ. ಅನಂತಕುಮಾರ
ಭಾರತದ ಶುದ್ಧ ರಾಜಕಾರಣದಲ್ಲಿ ನಿಮ್ಮ ಹೆಸರು ಅಜರಾಮರ
ನಿಮಗೆ ಹೃದಯಾಂತರಾಳದ ನಮನಗಳು
ಶ್ರೀಮತಿ ತೇಜಸ್ವಿನಿ ಅನಂತಕುಮಾರ
ಅಧ್ಯಕ್ಷರು : ಅದಮ್ಯ ಚೇತನ ಫೌಂಡೇಶನ್
ಶ್ರೀಮತಿ ಐಶ್ವರ್ಯಾ ಅನಂತಕುಮಾರ
ಕುಮಾರಿ ವಿಜೇತಾ ಅನಂತಕುಮಾರ
ನಂದಕುಮಾರ
ವಿಭವ ಸಮೂಹ ಸಂಸ್ಥೆಗಳು
ಅನಂತಕುಮಾರ ಪ್ರತಿಷ್ಠಾನ ಬೆಂಗಳೂರು

ಸಮಾಚಾರ ಸಣ್ಣದಲ್ಲ

ಗುಂಡು ತಗುಲಿ ಯುವಕ ಸಾವು

ಬೆಳಗಾವಿ: ಖಾನಾಪುರ ಅರಣ್ಯ ಪ್ರದೇಶದಲ್ಲಿ ನವಿಲುಗಳನ್ನು ಬೇಟೆಯಾಡುವ ಸಂದರ್ಭದಲ್ಲಿ ಯುವಕನೋರ್ವನಿಗೆ ಗುಂಡು ತಗುಲಿ ಸಾವಣಪ್ಪಿರುವ ಘಟನೆ ಪೊಲೀಸ್ ಮೂಲಗಳಿಗೆ ಸ್ಪಷ್ಟಗೊಂಡಿದೆ. ಭಾನುವಾರ ತಡರಾತ್ರಿ ಖಾನಾಪುರ ತಾಲೂಕಿನ ಹಲಸಿ - ಬೇಕವಾಡ ರಸ್ತೆಯ ನರಸೇವಾಡಿ ಬ್ರಿಡ್ಜ್ ಬಳಿ ಅಲ್ತಾಫ ಗೌಸ್ ಮಕಾಂದರ್ (27) ಎಂಬಾತ ಗುಂಡು ತಗುಲಿ ಸಾವಣಪ್ಪಿದ್ದ. ಮೇಲ್ನೋಟಕ್ಕೆ ಇದು ಗುಂಡಿನ ಚಕಮಕಿ ಎಂದೇ ಭಾವಿಸಲಾಗಿತ್ತಾದರು ಪೊಲೀಸ್ ತನಿಖೆಯಿಂದ ಪ್ರಕರಣ ಇನ್ನೊಂದು ಆಯಾಮ ಬೆಳಕಿಗೆ ಬಂದಿದೆ. ನವಿಲು ಬೇಟೆಯಾಡುವ ಸಂದರ್ಭದಲ್ಲಿ ಗುಂಡು ತಗುಲಿ ಯುವಕ ಸಾವನಪ್ಪಿದ್ದು ಘಟನಾ ಸ್ಥಳದಲ್ಲಿ ನವಿಲಿನ ಮಾಂಸ ಪತ್ತೆಯಾಗಿದ್ದು ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಹಾಗೂ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಭೀಮಾಶಂಕರ ಗುಳೆದ್ ಮಾಹಿತಿ ನೀಡಿದ್ದಾರೆ.

ತನ್ನೆಲ್ಲ ಪ್ರವಾಸಗಳಿಗೆ 9% ರಿಯಾಯತಿ ಘೋಷಣೆ | ಈ ಕೊಡುಗೆ ಸೀಮಿತ ಅವಧಿಗೆ ಮೀಸಲು

ಅಡಿಗಾಸ್ ಸಂಸ್ಥೆಯ ಭರ್ಜರಿ ಕೊಡುಗೆ

ಬೆಂಗಳೂರು: ಪ್ರವಾಸೋದ್ಯಮ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುವ ಅಡಿಗಾಸ್ ಸಂಸ್ಥೆ 3 ದಶಕಗಳನ್ನು ಯಶಸ್ವಿಯಾಗಿ ಪೂರೈಸಿದೆ. ಇದರ ಪ್ರಯುಕ್ತ ಹಾಗೂ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ತನ್ನೆಲ್ಲ ಪ್ರವಾಸಗಳಿಗೆ 9% ರಿಯಾಯತಿಯನ್ನು ಘೋಷಿಸಿದೆ. ಸಂಸ್ಥೆಯ ಮಾಲೀಕರಾದ ಶ್ರೀ ಕೆ.ನಾಗರಾಜ ಅಡಿಗರು ಮಾತನಾಡಿ , ಈ ಕೊಡುಗೆ ಸೀಮಿತ ಅವಧಿಗೆ ಮೀಸಲಾಗಿದ್ದು ಸಂಸ್ಥೆಯ ಯಾವುದೇ ಪ್ರವಾಸಕ್ಕೆ ಮುಂಗಡ ಬುಕಿಂಗ್ ಮಾಡಿದವರಿಗೆ ಈ ಕೊಡುಗೆ ಅನ್ವಯಿಸಲಿದೆ.

ನಿಖರ ಮಾಹಿತಿ, ನಿಗದಿತ ಸೌಲಭ್ಯ: ನೂತನ ಪ್ರಯೋಗಗಳಿಗೆ ಸದಾ ಮುಕ್ತವಾಗಿರುವ ಅಡಿಗಾಸ್ ಹೊಸ ಹೊಸ ಪ್ರವಾಸಿ ಯೋಜನೆಗಳನ್ನು ಪ್ರವಾಸಿಗರಿಗೆ ಪರಿಚಯಿಸುತ್ತಲೇ ಬಂದಿದೆ. ಅಂತೆಯೇ ಈ ಬಾರಿ Domestic Fixed Departures ಎನ್ನುವ ಯೋಜನೆಯಡಿ ಭಾರತದಾದ್ಯಂತ ಪ್ರಸಿದ್ಧ ಪ್ರವಾಸಿ ತಾಣಗಳಿಗೆ ಪ್ರತಿಷ್ಠಿತ ಪಂಚತಾರ ಹೋಟೆಲ್ ಹಾಗೂ ರೆಸಾರ್ಟ್ ಗಳಲ್ಲಿ ವಸತಿ, ಐಷಾರಾಮಿ ವಾಹನಗಳಲ್ಲಿ ಪ್ರಯಾಣ, ನಿಖರ ಮಾಹಿತಿಯನ್ನೊಳಗೊಂಡ ಕಾರ್ಯಕ್ರಮ ಪಟ್ಟಿ, ಮುಂಚಿತವಾಗಿ ಕಾಯ್ದಿರಿಸಿದ ಸುಸಜ್ಜಿತ ಹೋಟೆಲ್ ಗಳಲ್ಲಿ ಉಟೋಪಹಾರ, ಸ್ಥಳೀಯ ಗೈಡ್ ಗಳ ಸೌಲಭ್ಯ ವಿದ್ದು, ನಿಮ್ಮ ಪ್ರವಾಸವು ಸುಖಕರವಾಗಿರುತ್ತದೆ.

ಮಿತವ್ಯಯದ ಸಮೂಹ ಪ್ರವಾಸ: ಇನ್ನುಳಿದಂತೆ ದೇಶಿಯ ಪ್ರವಾಸಗಳ ಬೇಡಿಕೆ ದುಪ್ಪಟ್ಟಾಗಿದೆ. ಭಾರತದಾದ್ಯಂತ ನಮ್ಮ ದಕ್ಷಿಣ ಭಾರತೀಯ ಉಟೋಪಹಾರ, ಹವಾ ನಿಯಂತ್ರಿತ ವಾಹನಗಳಲ್ಲಿ ಪ್ರಯಾಣ, ಅತ್ಯುತ್ತಮ ಹೋಟೆಲ್‌ಗಳ ವಾಸ್ತವ್ಯ, ಅನುಭವಿ ಟೂರ್ ಮ್ಯಾನೇಜರ್ ಗಳ ಸೇವೆ ಇವೆಲ್ಲ ಸೇರಿ ಪ್ರವಾಸವನ್ನು ಅವಿಸ್ಮರಣೀಯ ವನ್ನಾಗಿಸುತ್ತದೆ. ಇದಲ್ಲದೆ ಗ್ರಾಹಕರಿಗೆ ಅನುಕೂಲಿತ ಮತ್ತು ಮಧುಚಂದ್ರ ಪ್ರವಾಸಗಳು ಪ್ರವಾಸಿಗರ ಆಯ್ಕೆಯಾದ ದಿನಾಂಕಕ್ಕೆ ಅವರ ಆದಾಯಕ್ಕ ಅನುಗುಣವಾಗಿ ಪಂಚಾತಾರಾ ಸೌಲಭ್ಯಗಳೊಂದಿಗೆ, ವ್ಯವಸ್ಥೆ ಮಾಡುವ ಸಾಮರ್ಥ್ಯ ಅಡಿಗಾಸ್ ಸಂಸ್ಥೆ ಹೊಂದಿದೆ. ನಿಮ್ಮ ಆಯ್ಕೆಯ ದೇಶಿಯ ಅಥವಾ ವಿದೇಶಿ ಪ್ರವಾಸಿ ತಾಣಕ್ಕೆ, ನೀವು ಇಚ್ಚಿಸಿದ ದಿನಾಂಕದಲ್ಲಿ, ನಿಮ್ಮ ಆದಾಯಕ್ಕನು ಗುಣವಾಗಿ ಯೋಜಿಸುವ ಪ್ರವಾಸವೇ Customised ಟೂರ್ಸ್. 500ಕ್ಕೂ ಹೆಚ್ಚಿನ ಪ್ರವಾಸಗಳು ಈ ಪ್ರಕಾರ ದಲ್ಲಿ ಲಭ್ಯವಿದೆ.

ಅಂತಾರಾಷ್ಟ್ರೀಯ ಪ್ರವಾಸ

ಅಂತೆಯೇ ಅಂತಾರಾಷ್ಟ್ರೀಯ ಪ್ರವಾಸಗಳಾದ ಯುರೋಪ್, ಯುಕೆ, ಆಸ್ಟ್ರೇಲಿಯಾ, ದುಬೈ, ಸಿಂಗಾಪುರ, ಮಲೇಷಿಯಾ, ಥೈಲ್ಯಾಂಡ್, ಶ್ರೀಲಂಕಾ, ನೇಪಾಳ ಮತ್ತು ಭೂತನ್ ಪ್ರವಾಸಗಳಿಗೆ ಬೇಡಿಕೆ ಹೆಚ್ಚಾಗಿದೆ. ವಿದೇಶಿ ಪ್ರವಾಸಗಳಿಗೆ ಅಡಿಗಾಸ್ ಸಂಸ್ಥೆ ಪ್ರಥಮ ಆದ್ಯತೆ ಯಾಗಿದೆ. ಏಕೆಂದರೆ ಅಡಿಗಾಸ್ ನಲ್ಲಿ ಸಹ ಪ್ರಯಾಣಿಕರೆಲ್ಲ ಕರ್ನಾಟಕದ ವಿವಿಧ ಭಾಗಗಳಿಂದ ಬಂದವರಾಗಿದ್ದರಿಂದ ಭಾಷೆ, ಸಂಸ್ಕೃತಿ, ಆಚಾರ ವಿಚಾರ, ಉಟೋಪಹಾರ ಎಲ್ಲದರಲ್ಲೂ ಸಾಮ್ಯತೆಯಿದ್ದು ಹೊಂದಾಣಿಕೆ ಸುಲಭ. ಸಮಾನ ಮನಸ್ಸಿನ ಕನ್ನಡಿಗರಿಂದ,ಕನ್ನಡಿಗರಿಗಾಗಿ ಕನ್ನಡಿಗರೇ ಇರುವ ಪ್ರವಾಸ home Sickness ಗೆ ಅವಕಾಶವನ್ನೇ ಕೊಡುವುದಿಲ್ಲ. ಅಂತರ ರಾಷ್ಟ್ರೀಯ ಸ್ತರದ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ವಸತಿ, ಭಾರತೀಯ ಶೈಲಿಯ ಉಟೋಪಹಾರ, ಇಂಗ್ಲಿಷ್ ಮಾತನಾಡಬಲ್ಲ, ಪ್ರವಾಸಿ ತಾಣಗಳ ಕುರಿತು ಅಪರಿಮಿತ ಜ್ಞಾನವನ್ನು ಹೊಂದಿದ ಟೂರ್ ಮ್ಯಾನೇಜರ್, ಸುಸಜ್ಜಿತ, ಐಷಾರಾಮಿ ವಾಹನಗಳಲ್ಲಿ ಪ್ರಯಾಣ, ವಿಶ್ವ ವಿಖ್ಯಾತ ತಾಣಗಳ, ಜನಪ್ರಿಯ ಪ್ರವಾಸಿ ತಾಣಗಳ ಪ್ರವೇಶ ಶುಲ್ಕ, ಖಡ್ಡಾಯ ವಾಗಿ ಪಾವತಿಸಲೇ ಬೇಕಾದ ಡ್ರೈವರ್ ಟಿಪ್ಸ್, ಗೈಡ್ ಚಾರ್ಜಸ್, ವಿಮೆ ಇವುಗಳನ್ನೆಲ್ಲ ಒಳಗೊಂಡ ಒಂದು ಸಮಗ್ರ ಯೋಜಿತ ಪ್ರವಾಸ ನಿಮ್ಮ ಮನಸ್ಸಿಗೆ ಮೂಡ ನೀಡುತ್ತದೆ.

Adigas yatra®
Recognised by Ministry of Tourism, Govt. of India

ಸಂಪರ್ಕಿಸಬೇಕಾದ ವಿಳಾಸ

NO.144, 3 rd Floor, Durga Mansion, DVG Road, Basavanagudi, Bangalore-560004 Tel/Fax: 080- 26616678, 41205813, E-mail: adigasyatragmail.com

ಬಸವನಗುಡಿ	080-2661 6678 7022259008 ,
ವಿಜಯನಗರ	080-23356678 9845631379
ರಾಜರಾಜೇಶ್ವರಿ ನಗರ	080- 26696678 7483366378
ಮಲ್ಲೇಶ್ವರಂ	080-23346678 7022259003
ಹುಬ್ಬಳ್ಳಿ	0836-2256678 9448083008
ಹಾಸನ	08172-261888 8884679122

ಕಛೇರಿಯ ಸಮಯ
10.00 am to 7.00 pm.
ಹೆಚ್ಚಿನ ಮಾಹಿತಿಗಾಗಿ
Our website: www.adigasyatra.com
Email: careadigasyatra.com

ಪುರಸಭಾ ಕಾರ್ಯಾಲಯ, ಶ್ರೀರಂಗಪಟ್ಟಣ–571438
ಕಛೇರಿ ದೂರವಾಣಿ–08236–252229/253030
Website: www.srirangapatnatown.mrc.gov.in
Email: itstafff_ulb_srirangapatana.yahoo.co.in
ಸಂ: ಪುಕಾಶ್ರೀ/ತಾಂ.ಶಾ/ಟೆಂ:07/2024–25 ದಿನಾಂಕ: 08.11.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಶ್ರೀರಂಗಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿ 15ನೇ ಹಣಕಾಸು ಮತ್ತು ಎಸ್.ಎಫ್.ಸಿ, ಎಸ್.ಬಿ.ಎಂ–1.00 ಹೆಚ್ಚುವರಿ ಅನುದಾನ ಮತ್ತು ಎಸ್.ಬಿ.ಎಂ–(2) ಹಾಗೂ ಪುರಸಭಾ ಅನುದಾನಗಳಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999, ನಿಯಮಗಳು 2000ರಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ಗಳ ಸೂಚನೆಗಳು ಹಾಗೂ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರುಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ನಿರ್ವಹಣೆ ಅವಧಿ 120 ದಿನಗಳು. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ನ್ನು ಸಲ್ಲಿಸಲು ದಿನಾಂಕ: 26.11.2024ರ ಸಂಜೆ 5.30 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಹಾಗೂ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 28.11.2024ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು http://www.kppp.karnataka.gov.in ಹಾಗೂ ಪುರಸಭಾ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಕ್ರ ಸಂ	ಕಾಮಗಾರಿಗಳ ಇಂಡೆಂಟ್ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ಮೀಸಲಾತಿ
1	DMA/2024-25/OW/WORK_INDENT20572/CALL-2	46.91	46910.00	ಪರಿಶಿಷ್ಠ ಜಾತಿ
2	DMA/2024-25/RD/WORK_INDENT20564/CALL-2	39.94	79880.00	ಸಾಮಾನ್ಯ
3	DMA/2024-25/OW/WORK_INDENT 31789	12.81	16020.00	ಪರಿಶಿಷ್ಠ ಪಂಗಡ
4	DMA/2024-25/OW/WORK_INDENT31790	13.63	17040.00	ಪರಿಶಿಷ್ಠ ಜಾತಿ
5	DMA/2024-25/WS/WORK_INDENT31792	18.38	45950.00	ಸಾಮಾನ್ಯ
6	DMA/2024-25/RD/WORK_INDENT 31796	35.15	70300.00	ಸಾಮಾನ್ಯ
7	DMA/2024-25/RD/WORK_INDENT 31798	4.13	10330.00	ಸಾಮಾನ್ಯ
8	DMA/2024-25/RD/WORK_INDENT 31799	2.24	2800.00	ಪರಿಶಿಷ್ಠ ಜಾತಿ
9	DMA/2024-25/OW/WORK_INDENT 31981	0.87	2180.00	ಸಾಮಾನ್ಯ

ಸೂಚನೆ: ಕಾರಣಾಂತರಗಳಿಂದ ಟೆಂಡರ್ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು.
ಸಹಿ/–ಮುಖ್ಯಾಧಿಕಾರಿ, ಪುರಸಭೆ, ಶ್ರೀರಂಗಪಟ್ಟಣ ಸಹಿ/–ಆಡಳಿತಾಧಿಕಾರಿ, ಪುರಸಭೆ, ಶ್ರೀರಂಗಪಟ್ಟಣ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/430/2024–25

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು(ವಿದ್ಯುತ್)ರವರ ಕಛೇರಿ, ವಾಣಿವಿಲಾಸ ನೀರು ಸರಬರಾಜು ಕಾರ್ಯಾಲಯ, ಮೈಸೂರು–570020. ಇ–ಮೇಲ್ : eelectricalmcc@gmail.com
ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಅ(ವಿ)/ಟಿಎನ್–16/ /2024–25 ದಿನಾಂಕ: 30.10.2024

ಟೆಂಡರ್ ಪ್ರಕಟಣೆ–16
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಪಬ್ಲಿಕ್–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ಸಂಸ್ಥೆಯವರಿಂದ/ಬಿಡ್‌ದಾರರಿಂದ KW-1, KW-2 ಮತ್ತು KW-3 ನಿಯಮಗಳಿಗೆ ಒಳಪಟ್ಟಂತೆ ಟೆಂಡರನ್ನು ಕರ್ನಾಟಕ ಪಬ್ಲಿಕ್–ಪ್ರೊಕ್ಯೂರ್‌ಮೆಂಟ್–ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಇ.ಎಂ.ಡಿ ಯನ್ನು ಕೆ.ಪಿ.ಪಿ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1.	ಮೈಸೂರು ನಗರದ ರಾಯನಕೆರೆಯಲ್ಲ ಹೆಚ್ಚುವರಿಯಾಗಿ ನಿರ್ಮಾಣ ಮಾಡಲಿರುವ ಎಂಆರ್‌ಎಫ್ ಘಟಕಕ್ಕೆ ಅವಶ್ಯವಿರುವ ವಿದ್ಯುತ್ ಸಂಪರ್ಕ ಕಲ್ಪಿಸಿ ಬೆಳಕಿನ ವ್ಯವಸ್ಥೆ ಒದಗಿಸುವ ಕಾಮಗಾರಿ.	25.00	50,000
2.	ಮೈಸೂರು ಮಹಾನಗರ ಪಾಲಿಕೆಯ ಕಬಿನಿ ನೀರು ಸರಬರಾಜು ಯೋಜನೆಯಲ್ಲಿನ ಮೂಲ ಸ್ಥಾವರಗಳ Transformers, VCB Breakers, LT Distribution Panels, Battery Chargers and HT Yard ಕಾಮಗಾರಿ.	30.00	75,000
3.	ಮೈಸೂರು ಮಹಾನಗರ ಪಾಲಿಕೆಯ: ಕಬಿನಿ ನೀರು ಸರಬರಾಜು ಯೋಜನೆಯನ್ನು ಉನ್ನತ್ತೀಕರಿಸುವ ಸಲುವಾಗಿ ದೂರ ಗ್ರಾಮದ ಪರಿಮಿತಿಯಲ್ಲಿ ಹೆಚ್.ಡಿ.ಪಿ.ಇ ಪೈಪ್ ಮೂಲಕ ಹೆಚ್.ಟಿ ಭೂಗತ ಕೇಬಲ್ ಅಳವಡಿಸುವ ಕಾಮಗಾರಿ.	5.32	13,300
4.	ಮೈಸೂರು ನಗರದ ವಿದ್ಯಾರಣ್ಯಪುರಂನಲ್ಲಿ ಹೆಚ್ಚುವರಿಯಾಗಿ ನಿರ್ಮಾಣ ಮಾಡಲಿರುವ ಎಂಆರ್‌ಎಫ್ ಘಟಕಕ್ಕೆ ಅವಶ್ಯವಿರುವ 500 ಕೆವಿಎ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿ ಬೆಳಕಿನ ವ್ಯವಸ್ಥೆ ಒದಗಿಸುವ ಕಾಮಗಾರಿ.	52.00	1,04,000

ಕೆ.ಪಿ.ಪಿ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಕೆ.ಪಿ.ಪಿ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	30–10–2024	ಬೆಳಿಗ್ಗೆ 12.00 ಗಂಟೆಯ ನಂತರ
2.	ಟೆಂಡರ್ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೋರುವ ದಿನಾಂಕ	04–11–2024	11.34 ಗಂಟೆಯವರೆಗೆ
3.	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	14–11–2024	16:30 ಗಂಟೆಯವರೆಗೆ.
4.	ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಕಾಲ	15–11–2024	17:00 ಗಂಟೆಯ ನಂತರ
5.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಕಾಲ	18–11–2024	16.30 ಗಂಟೆಯ ನಂತರ

ಅಲ್ಪಾವಧಿ ಮರು–ಟೆಂಡರ್ ಕಾಮಗಾರಿಗಳ ವಿವರ

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1.	ಮೈಸೂರು ಮಹಾನಗರ ಪಾಲಿಕೆಯ ಕೆಸರೆ ತ್ಯಾಜ್ಯ ನೀರು ಶುದ್ದೀಕರಣ ಘಟಕದ ವೆಸ್ಟ್ ಲಗೂನ್‌ನಲ್ಲಿರುವ ಏರಿಯೇಟರ್ ಮೋಟಾರ್‌ಗಳನ್ನು ನವೀಕರಿಸುವ ಕಾಮಗಾರಿ.	48.00	96,000

ಕೆ.ಪಿ.ಪಿ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಕೆ.ಪಿ.ಪಿ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	30–10–2024	ಬೆಳಿಗ್ಗೆ 12.00 ಗಂಟೆಯ ನಂತರ
2.	ಟೆಂಡರ್ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೋರುವ ದಿನಾಂಕ	04–11–2024	16.30 ಗಂಟೆಯವರೆಗೆ
3.	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	07–11–2024	16:30 ಗಂಟೆಯವರೆಗೆ.
4.	ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಕಾಲ	08–11–2024	17:30 ಗಂಟೆಯ ನಂತರ

ಸಹಿ/– ಕಾರ್ಯಪಾಲಕ ಅಭಿಯಂತರರು (ವಿ), ಮೈಸೂರು ಮಹಾನಗರ ಪಾಲಿಕೆ, ಮೈಸೂರು.
DIPR/MYS/KAVITA/775/2024-25

ಶಿಲ್ಪಿ ಕೃಷ್ಣನಾಯ್ಕ 6 ದಿನ ಕಸ್ಟಡಿಗೆ

ಕಾರ್ಕಳ: ಬೈಲೂರಿನ ಪರಶುರಾಮ ಥೀಮ್ ಪಾರ್ಕ್‌ನಲ್ಲಿ ಪರಶುರಾಮನ ನಕಲಿ ಮೂರ್ತಿ ನಿರ್ಮಿಸಲಾಗಿದೆ ಎಂಬ ಆರೋಪದ ಪ್ರಕರಣಕ್ಕೆ ಸಂಬಂಧಿಸಿ ಶಿಲ್ಪಿ ಕೃಷ್ಣ ನಾಯ್ಕ ಅವರನ್ನು ಕೇರಳದಲ್ಲಿ ಬಂಧಿಸಿದ್ದ ಪೊಲೀಸರು ಸೋಮವಾರ ಕಾರ್ಕಳ ತಾಲೂಕು ನ್ಯಾಯಲಯಕ್ಕೆ ಹಾಜರುಪಡಿಸಿ ದ್ದರು. ನ್ಯಾಯಾಲಯವು ಆರೋಪಿ ಕೃಷ್ಣ ನಾಯ್ಕನಿಗೆ 6 ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೃಷ್ಣ ನಾಯ್ಕ್ ಕೋರ್ಟ್ ನಲ್ಲಿ ನಿರೀಕ್ಷಣ ಜಾಮೀನು ಅರ್ಜಿ ಸಲ್ಲಿಸಿದ್ದು, ಉಡುಪಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜಾಮೀನು ತಿರಸ್ಕರಿಸಿ ಆದೇಶ ನೀಡಿತ್ತು. ಅನಂತರ ಪೊಲೀಸರು ಪತ್ತೆ ಕಾರ್ಯ ತೀವ್ರಗೊಳಿಸಿ ಹುಡುಕಾಟ ನಡೆಸಿದ್ದರು. ಕೇರಳದ ಕ್ಯಾಲಿಕಟ್ ನಲ್ಲಿ ತಲೆಮರೆಸಿಕೊಂಡಿದ್ದ.

ನಕಲಿ ಮೂರ್ತಿ ನಿರ್ಮಿಸಿ ವಂಚನೆ

ಕೃಷ್ಣ ನಾಯ್ಕ ಕೃಷ್ ಆರ್ಟ್ ವರ್ಲ್ಡ್ ಎಂಬ ಸಂಸ್ಥೆಯ ಮೂಲಕ ಥೀಮ್ ಪಾರ್ಕ್‌ನಲ್ಲಿ ಕಂಚಿನ ಪರಶುರಾಮ ಮೂರ್ತಿಯನ್ನು ಸ್ಥಾಪಿಸಲು ಉಡುಪಿ ನಿರ್ಮಿತಿ ಕೇಂದ್ರದಿಂದ 1.25 ಕೋಟಿ ಹಣ ಪಡೆದುಕೊಂಡು ಕಾಮಗಾರಿ ನಡೆಸಿದ್ದು, ಅನಂತರ ಆರೋಪಿ ಕಂಚಿನ ಮೂರ್ತಿಯನ್ನು ಮಾಡದೆ ನಕಲಿ ಪರಶುರಾಮ ಮೂರ್ತಿಯನ್ನು ನಿರ್ಮಿಸಿ ಸರಕಾರಕ್ಕೆ ವಂಚನೆ ಮಾಡಿರುವುದಾಗಿ ಆರೋಪಿಸಿ ನಲ್ಲೂರಿನ ಕೃಷ್ಣ ಶೆಟ್ಟಿ ಅವರು ಜೂನ್ ತಿಂಗಳಲ್ಲಿ ನೀಡಿದ ದೂರಿನಂತೆ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಜಿಲ್ಲಾ ಪಂಚಾಯಿತಿ, ಹಾಸನ ಕರ್ನಾಟಕ ಸರ್ಕಾರ ತಾಲ್ಲೂಕು ಪಂಚಾಯಿತಿ, ಅರಕಲಗೂಡು
ಗ್ರಾಮ ಪಂಚಾಯಿತಿ ಕಾರ್ಯಾಲಯ : ಹನ್ಯಾಳು
Email: hanyalu.ark.hsn@gmail.com Phone: +91 99453 66038
ಸಂ : ಗ್ರಾ.ಪಂ/ಟೆಂಡರ್/2024–25 ದಿನಾಂಕ : 24–10–2024

ಟೆಂಡರ್ ಪ್ರಕಟಣೆ

2022–23ನೇ ಸಾಲಿನ ಅಮೃತ ಗ್ರಾಮ ಯೋಜನೆಯ ಅನುದಾನದಿಂದ ಹನ್ಯಾಳು ಗ್ರಾಮ ಪಂಚಾಯಿತಿಗೆ ಸೋಲಾರ್ ರೂಫ್ ಟಾಪ್ ಸರಕು ಖರೀದಿ (5.00 ಲಕ್ಷ ರೂ.) ಗಳಿಗೆ ಷರತ್ತಿನ ಟೆಂಡರ್ ಮೂಲಕ ಆಸಕ್ತರಿಂದ ದರ ಆಹ್ವಾನಿಸಲಾಗಿದೆ, ಶುಲ್ಕ 500/– ರೂಗಳನ್ನು ಪಾವತಿಸಿ ಟೆಂಡರ್ ಅರ್ಜಿ ಪಡೆಯಲು ಕೊನೆಯ ದಿನಾಂಕ 15/11/2024 ಹಾಗು ತುಂಬಿದ ಅರ್ಜಿ ಫಾರಂಗಳ ಟೆಂಡರನ್ನು ಹನ್ಯಾಳು ಗ್ರಾಮ ಪಂಚಾಯಿತಿ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ 18/11/2024 ಸಮಯ 13:00 ಗಂಟೆ ಆಗಿರುತ್ತದೆ, ಹಾಗು ಅದೇ ದಿನದ ಸಮಯ 15:00 ಗಂಟೆ ಅಥವಾ ಆ ದಿನವೇ ಪಿ.ಡಿ.ಓ ರವರು ತಿಳಿಸಲ್ಪಡುವ ದಿನಾಂಕ ಮತ್ತು ಸಮಯದಂದು ಟೆಂಡರ್ ತೆರೆಯಲಾಗುವುದು ಹಾಗು ಟೆಂಡರ್ ದಾರನು ಟೆಂಡರ್ ತೆರೆಯುವ ಸಂದಭರ್ದಲ್ಲಿ ಹಾಜರಿರಬಹುದಾಗಿದೆ ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಫಾರಂ ಪಡೆಯಲು ಹನ್ಯಾಳು ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸುವುದು
ಸಹಿ/–
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
ಹನ್ಯಾಳು ಗ್ರಾಮ ಪಂಚಾಯಿತಿ, ಅರಕಲಗೂಡು ತಾಲ್ಲೂಕು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ ಕನೀನಿನಿ,
ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ.ತಾ:: ಹುಬ್ಬಳ್ಳಿ, ಜಿ: ಧಾರವಾಡ 580023.
ಫೋನ್ : 0836–2315225 ಫ್ಯಾಕ್ಸ್ :2315226. e-mail :-eemrbcc3byt@gmail.com
ಸಂ.ಕನೀನಿನಿ/ಮಬದವಿ–3/ಎ.ಇ–2/ಇ–ಟೆಂಡರ/2024–25/1478 ದಿನಾಂಕ:06.11.2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್ ಕನೀನಿನಿ, ಮಬದಕಾನಿ ವಿಭಾಗ ಸಂ.3, ಬ್ಯಾಹಟ್ಟಿ ವ್ಯಾಪ್ತಿಯ 2701 ಲೆಕ್ಕಶೀರ್ಷಿಕೆ ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ ನಂಬರಿನ 10 ಕಾಮಗಾರಿಗಳಿಗೆ ಶೇಕಡಾವಾರು ಟೆಂಡರನ್ನು ಏಕಲಕೋಟೆ ಪದ್ದತಿಯಲ್ಲಿ ಇ–ಪ್ರೊಕ್ಯೂರಮೆಂಟ ಮೂಲಕ ಆಹ್ವಾನಿಸಲಾಗಿದೆ.

Indent No :– 1934, 1935, 1936, 1939, 1941, 1942, 1943, 1944, 1991, 1946
ಪರಿಶಿಷ್ಟ ಜಾತಿಗೆ ಸೇರಿದ ಕಾಮಗಾರಿಗಳ ಸಂಖ್ಯೆ: 2 ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾಮಗಾರಿಗಳ ಸಂಖ್ಯೆ: 2
ಅಜಿದಾಜು ಮೊತ್ತ: ರೂ. 2.00 ಲಕ್ಷ ರಿಂದ ರೂ. 25.00 ಲಕ್ಷಗಳು
ಇ.ಎಂ.ಡಿ ಮೊತ್ತ:– ರೂ. 2,200/– ರಿಂದ ರೂ. 42,400/–ವರೆಗೆ

ಇ–ಪೋರ್ಟಲ್ ಮೂಲಕ ಟೆಂಡರನ್ನು ದಿನಾಂಕ: **30/11/2024 ರ 4.00 pm** ತನಕ ಸಲ್ಲಿಸಬಹುದಾಗಿದೆ. ಬಿಡ್ ತೆರೆಯುವ ದಿನಾಂಕ: **03/12/2024 ರಂದು ಮುಂಜಾನೆ: 11.00 am** ರಿಂದ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬಸೈಟ್ ಮುಖೇನ **http://kppp.karnataka.gov.in** ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: **0836–2315225** ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ
ವಾ.ಸಾ.ಇ/ಧಾರವಾಡ/594/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ, ಗದಗ
ಇ–ಮೇಲ್ : ceozp.gdg@gmail.com Ph.No : 08372–234375
ಕ್ರ.ಸಂ/ಗಜಿಪಂ/ಯೋಜನೆ/ಅಅ/ಟೆ.ಪ್ರಕಟಣೆ/2024–25ದಿನಾಂಕ: 07–11–2024
ಇ–ಪ್ರೋಕ್ಯುರಮೆಂಟ್ ಮೂಲಕ ಜಿಲ್ಲಾ ಪಂಚಾಯತ ಅನಿಬರ್ಂಧಿತ ಅನುದಾನದ ಕ್ರಿಯಾ ಯೋಜನೆಯಲ್ಲಿ ಗ್ರಂಥಾಲಯಗಳಿಗೆ ಹಾಗೂ ವಸತಿ ಶಾಲೆಗಳ ಗ್ರಂಥಾಲಯಗಳಿಗೆ ಪೀಟೋಪಕರಣಗಳನ್ನು ಪೂರೈಸಲು.

ಅಲ್ಪಾವಧಿ ಟೆಂಡರ ಪ್ರಕಟಣೆ

ವಿಷಯ : ಜಿಲ್ಲಾ ಪಂಚಾಯತ ಅನಿಬರ್ಂಧಿತ ಅನುದಾನದ ಕ್ರಿಯಾ ಯೋಜನೆಯಲ್ಲಿ ಗ್ರಂಥಾಲಯಗಳಿಗೆ ಹಾಗೂ ವಸತಿ ಶಾಲೆಗಳ ಗ್ರಂಥಾಲಯಗಳಿಗೆ ಪೀಟೋಪಕರಣಗಳನ್ನು ಪೂರೈಸಲು ಇ–ಟೆಂಡರ ಮುಖೇನ ಆಹ್ವಾನಿಸುವ ಕುರಿತು.

ಜಿಲ್ಲಾ ಪಂಚಾಯತ ಅನಿಬರ್ಂಧಿತ ಅನುದಾನದ ಕ್ರಿಯಾ ಯೋಜನೆಯಲ್ಲಿ ಗ್ರಂಥಾಲಯಗಳಿಗೆ ಹಾಗೂ ವಸತಿ ಶಾಲೆಗಳ ಗ್ರಂಥಾಲಯಗಳಿಗೆ ಪೀಟೋಪಕರಣಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಟೆಂಡರ್ ಪುಸ್ತಕವನ್ನು ಇ–ಪ್ರೋಕ್ಯುರಮೆಂಟ್ ವೆಬ್‌ಸೈಟ್ www.kppp.karnataka.gov.in ದಲ್ಲಿ ಇ–ಪೋರ್ಟಲ್ ನಿಗದಿಪಡಿಸಿದ ಶುಲ್ಕದೊಂದಿಗೆ ಪಡೆಯಬಹುದು. ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ದಿನಾಂಕ : **25–11–2024** ರಂದು ಸಾಯಂಕಾಲ 05:00 ಗಂಟೆಯವರೆಗೆ ಇ–ಪೋರ್ಟಲ್‌ನಲ್ಲಿ ಆಪ್‌ಲೋಡ್ ಮಾಡಬಹುದು. ಸ್ವೀಕರಿಸಿದ ಟೆಂಡರಗಳನ್ನು ದಿನಾಂಕ : **27–11–2024** ರಂದು ಬೆಳಿಗ್ಗೆ 05:30 ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದಂತಹ ಟೆಂಡರದಾರರ ಆರ್ಥಿಕ ಬಿಡ್‌ನ್ನು ದಿನಾಂಕ : **30–11–2024** ರಂದು ಬೆಳಿಗ್ಗೆ 11:00 ಗಂಟೆಗೆ ತೆರೆಯಲಾಗುವದು. ಹೆಚ್ಚಿನ ವಿವರಗಳನ್ನು ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ ಗದಗ ಇಲ್ಲಿ ಕೆಲಸದ ದಿನಗಳಂದು ಪಡೆಯಬಹುದು.
ಟೆಂಡರ ಸಂಖ್ಯೆ : RDPR/2024-25/IND5667
ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ವಾಸಾಸಂಇ/ಗದಗ/ಕೆ.ಎಸ್.ಎಂ.ಸಿ.ಎ/365/24–25 ಜಿಲ್ಲಾ ಪಂಚಾಯತ, ಗದಗ

ಸಂಗೊಳ್ಳಿ ಗ್ರಾಮದ ಸ್ಮಶಾನ ಭೂಮಿ ನಮ್ಮದೆಂದ ವಕ್ಫ್

ರಾಯಣ್ಣನ ಹುಟ್ಟೂರಿಗೂ ವಕ್ಕರಿಸಿದ ವಕ್ಫ್ ವಿವಾದ

ಬೆಳಗಾವಿ: ಸದ್ಯ ಎಲ್ಲೆಡೆಯೂ ವಕ್ಫ್ ಬೋರ್ಡ್‌ನ ಅವಾಂತರ ಮಾತುಗಳೇ ಜೋರಾಗಿವೆ, ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಹುಟ್ಟೂರಿಗೂ ವಕ್ಫ್ ವಿವಾದ ಕಾಲಿಟ್ಟಿದೆ. ಬೈಲಹೊಂಗಲ ತಾಲೂಕಿನ ಸಂಗೊಳ್ಳಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಸ್ಮಶಾನ ಭೂಮಿ ಮೇಲೆ ವಕ್ಫ್ ವಕ್ರ ದೃಷ್ಟಿ ನೆಟ್ಟಿದೆ. ಹೌದು ಸಂಗೊಳ್ಳಿ ಗ್ರಾಮದ ಗ್ರಾಪಂ ಆಸ್ತಿಯನ್ನು ಸಾರ್ವಜನಿಕವಾಗಿ ಸ್ಮಶಾನಕ್ಕೆ ಹಸ್ತಾಂತರಿಸಿದ ಮಸಣಮಠ ಎಂಬ ಹೆಸರಿನ 128 ಸರ್ವೇ ನಂಬರ್ 8 ಏಕರೆ 27 ಗುಂಟೆ ಆಸ್ತಿಯ ಹೆಸರಿನಲ್ಲಿದ್ದ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ಹಕ್ಕು ದಾಖಲಾತಿಯ ಕಾಲಂನಲ್ಲಿ ಸೇರಿಸಲಾಗಿದೆ. ಎರಡು ದಿನಗಳ ಹಿಂದೆ ಗ್ರಾಮಸ್ಥರು ಪಹಣಿ ಪತ್ರ ತಗೆದ ಸಂದರ್ಭದಲ್ಲಿ ವಕ್ಫ್ ಅವಾಂತರ ಬೆಳಕಿಗೆ ಬಂದಿದೆ.

ಈ ಕುರಿತು ಬೈಲಹೊಂಗಲ ತಹಸೀಲ್ದಾರ್ ಹಣಮಂತ ಶಿರಹಟ್ಟಿ ಅವರನ್ನು ಸಂಪರ್ಕಿಸಲಾಗಿ ಗೆಜೆಟ್ ನಲ್ಲಿ ಈ ರೀತಿ ಆಗಿರಬಹುದು, ಇಲ್ಲಿಯವರೆಗೆ ನಮ್ಮ ಕಚೇರಿಯಿಂದ ಯಾವುದೇ ನೊಟೀಸ್ ನೀಡಿ ವಕ್ಫ್ ಆಸ್ತಿ ಎಂದು ದಾಖಲಾತಿ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅಷ್ಟೇ ಅಲ್ಲದೆ ಗ್ರಾಮಸ್ಥರು ಸ್ಮಶಾನ ಭೂಮಿ ಆಸ್ತಿಯಲ್ಲಿ ವಕ್ಫ್ ಹೆಸರು ಸೇರಿಸಿದ್ದನ್ನು ಕೂಡಲೇ ತಗೆದುಹಾಕುವಂತೆ ಆಗ್ರಹಿಸಿದ್ದಾರೆ

ಬೃಹತ್ ಪ್ರತಿಭಟನೆ

ಸಂಗೊಳ್ಳಿ ಗ್ರಾಮದ ಸರಕಾರಿ ಸ್ಮಶಾನ ಭೂಮಿಯ ಪಹಣಿಯಲ್ಲಿ ವಕ್ಫ್ ಹೆಸರು ಬಂದಿರುವುದನ್ನು ಖಂಡಿಸಿ ಬಿಜೆಪಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡು ವಕ್ಫ್ ವಿರುದ್ಧ ಆಕ್ರೋಶ ಹೊರಹಾಕಿದೆ. ಸೋಮವಾರ ನಗರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನರು ವಕ್ಫ್ ಬೋರ್ಡ್ ನಿಂದ ದೌರ್ಜನ್ಯ ನಡೆಯುತ್ತಿದ್ದು ಸರಕಾರ ಕೂಡಲೇ ಈ ಅವಾಂತರಕ್ಕೆ ಕಡಿವಾಣ ಹಾಕುವಂತೆ ಆಗ್ರಹಿಸಿದರು.

ವಕ್ಫ್ ಬೋರ್ಡ್ ವಿರುದ್ಧ ಮಠಾಧೀಶರ ಆಕ್ರೋಶ

← ಮೊದಲಪುಟದಿಂದ

ಪಾಳಾದ ಗುರುಮೂರ್ತಿ ಶಿವಾಚಾರ್ಯರು, ಸಹ ಸಂಚಾಲಕ ಲಕ್ಷ್ಮಿಕಾಂತ ಸ್ವಾದಿ, ಅತನೂರು ಹಿರೇಮಠದ ಶ್ರೀ ಗುರುಬಸವ ಶಿವಾಚಾರ್ಯರು, ತೋನಸಳ್ಳಿಯ ಶ್ರೀ ರೇವಣಸಿದ್ಧ ಚರಂತೇಶ್ವರ ಶಿವಾಚಾರ್ಯರು, ಚಂದನಕೇರದ ಶ್ರೀ ರನಚೆಟ್ಟಿ ಶಿವಾಚಾರ್ಯರು, ನಿಡಗುಂದದ ಶ್ರೀ ಕರುಣೇಶ್ವರ ಶಿವಾಚಾರ್ಯರು, ಸೂಗೂರು (ಕೆ) ಶ್ರೀ ಚನ್ನರುದ್ರ ಮುನಿಸ್ವಾಮೀಜಿ, ಶಹಾಬಾದಿನ ಬಾಲಬ್ರಹ್ಮಚಾರಿ ರಾಜ ಶಿವಯೋಗಿ ಮಹಾಸ್ವಾಮೀಜಿ ಹಾಗೂ ಶ್ರೀ ಕೇದಾರಲಿಂಗ ದೇವರು ಪ್ರತಿಭಟನೆಯಲ್ಲಿ ಭಾಗವಹಿಸಿ ಬೆಂಬಲ ಸೂಚಿಸಿದರು.

ಸಚಿವ ಜಮೀರ್ ಅಹ್ಮದ್ ಖಾನ್ ಆದೇಶದ ಮೇರೆಗೆ ವಕ್ಫ್ ಬೋರ್ಡ್ ರೈತರಿಗೆ, ಮಠ ಮಂದಿರಗಳಿಗೆ ನೋಟಿಸ್ ನೀಡಿ, ಪಹಣಿಯಲ್ಲಿ ತನ್ನ ಹೆಸರು ನಮೂದಿಸಿ ಬದಲಾವಣೆ ಮಾಡಿದೆ. ಇದು ಖಂಡನೀಯ. ರಾಜ್ಯದಲ್ಲಿ ಹಿಂದೂಗಳಿಗೆ ಒಂದು ನ್ಯಾಯ, ಮುಸ್ಲಿಂರಿಗೆ ಒಂದು ನ್ಯಾಯ ಆಗಿದೆ. ಅಂಬೇಡ್ಕರ್ ರಚಿಸಿದ ಸಂವಿಧಾನದಲ್ಲಿ ಎಲ್ಲ ಧರ್ಮಗಳಿಗೂ ಸಮಾನ ನ್ಯಾಯ ನೀಡಬೇಕು. ಇಲ್ಲದಿದ್ದರೆ, ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಲಾಗುತ್ತದೆ.
– ಗುರುಮೂರ್ತಿ ಶಿವಾಚಾರ್ಯರು ಪಾಳಾ ಶ್ರೀಗಳು

ಯತ್ನಾಳಗೆ ತರಾಟೆ

ಬಾಗಲಕೋಟೆ: ತೇರದಾಳದಲ್ಲಿ ಅಲ್ಲಮ್ಮಪ್ರಭು ದೇವಸ್ಥಾನದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಕ್ಫ್ ವಿವಾದದ ಕುರಿತು ಮಾತನಾಡಿದ ಶಾಸಕ ಯತ್ನಾಳಗೆ ಸಾರ್ವಜನಿಕರು ತರಾಟೆಗೆ ತೆಗೆದುಕೊಂಡಿದ್ದಾರೆ. ಈ ದೇವಸ್ಥಾನ ನಿರ್ಮಿಸಲು ಮುಸ್ಲಿಂರು 6 ಲಕ್ಷ ರು. ದೇಣಿಗೆ ನೀಡಿದ್ದಾರೆ. ಎಲ್ಲ ಧರ್ಮದವರು ದೇವಾಲಯ ನಿರ್ಮಿಸಲು ಅಳಿಲು ಸೇವೆ ಸಲ್ಲಿಸಿದ್ದಾರೆ. ಇಲ್ಲಿ ಬಂದು ನೀವು ರಾಜಕೀಯ ಮಾತನಾಡಬೇಡಿ ಎಂದರು. ಹೀಗಾಗಿ ಯತ್ನಾಳ ವೇದಿಕೆ ಬಿಟ್ಟು ಕೆಳ ನಡೆದರು.

ತಕ್ಷಣದಿಂದ ಜಾರಿಗೆ ಬರುವಂತೆ ವಕ್ಫ್ ಬೋರ್ಡ್ ರದ್ದು ಮಾಡಿ ಬೀಗ ಹಾಕಬೇಕು. ವಕ್ಫ್ ಆಸ್ತಿ ರಾಷ್ಟ್ರೀಕರಣ ಮಾಡಬೇಕು. ಇಲ್ಲದಿದ್ದರೆ, ಪೇಜಾವರ ಶ್ರೀಗಳು ಹಾಗೂ ಜಗದ್ಗುರು ಪಂಚಾಚಾರ್ಯರು ಸೇರಿ ಹಿರಿಯ ಶ್ರೀಗಳ ಮಾರ್ಗದರ್ಶನದಲ್ಲಿ ಸನಾತನ ಹಿಂದೂ ಬೋರ್ಡ್ ರಚಿಸಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ಹಿಂದೂಗಳಿಗೆ ನ್ಯಾಯ ಒದಗಿಸಬೇಕು.
– ಎಂ.ಎಸ್ ಪಾಟೀಲ್
ನರಿಬೋಳ ಹಿಂದೂ ನಾಗರಿಕ ಸಮಿತಿಯ ಸಂಚಾಲಕ

ಶೃಂಗೇರಿ ಬಳಿ ನಕ್ಸಲರ ಓಡಾಟ

ಚಿಕ್ಕಮಗಳೂರು: ಜಿಲ್ಲೆಯ ಮಲೆನಾಡು ಭಾಗದಲ್ಲಿ ನಕ್ಸಲರು ಕಾಣಿಸಿ ಕೊಂಡಿದ್ದಾರೆಂಬ ಸುದ್ದಿ ಹರಿದಾಡುತ್ತಿದೆ. ಕಳೆದ ಕೆಲವು ದಿನಗಳ ಹಿಂದೆ ಪಶ್ಚಿಮ ಘಟ್ಟ ಪ್ರದೇಶ ವ್ಯಾಪ್ತಿಯಲ್ಲಿನ ಕಾರ್ಕಳ ಭಾಗದಲ್ಲಿ ನಕ್ಸಲರು ಕಾಣಿಸಿಕೊಂಡಿದ್ದರು ಸುದ್ದಿ ಹರಿದಾಡಿದ್ದು, ಇದರ ಬೆನ್ನಲ್ಲೇ ಎಚ್ಚೆತ್ತು ಕೊಂಡಿರುವ ಪೊಲೀಸ್ ಇಲಾಖೆ ಇಬ್ಬರು ನಕ್ಸಲ್ ಸಿಂಪಥೈಸರನ್ನು (ನಕ್ಸಲ್ ಅನುಕಂಪಿತರು) ಪೊಲೀಸ್ ಠಾಣೆಗೆ ಕರೆತಂದು ವಿಚಾರಣೆಗೆ ಒಳಪಡಿಸಿದ್ದಾರೆ.

ಕಾರ್ಕಳ ತಾಲೂಕಿನಲ್ಲಿ ನಕ್ಸಲ್ ಕಾಣಿಸಿಕೊಂಡಿರುವ ಸುದ್ದಿ ಹಿನ್ನೆಲೆಯಲ್ಲಿ ಜಿಲ್ಲೆಯ ಮಲೆನಾಡು ಭಾಗದಲ್ಲಿ ಪೊಲೀಸ್ ಇಲಾಖೆ ಮತ್ತು ನಕ್ಸಲ್ ನಿಗ್ರಹ ಪಡೆಯ ಸಿಬ್ಬಂದಿಗಳು ಹದ್ದಿನ ಕಣ್ಣಿಟ್ಟಿದ್ದರು. ಸೋಮವಾರ ಶೃಂಗೇರಿ ತಾಲೂಕು ನೆಮ್ಮಾರ್ ಸಮೀಪದ ಬುಕಡಿಬೈಲಿನಲ್ಲಿ ಇಬ್ಬರು ನಕ್ಸಲ್ ಅನುಕಂಪಿತ ವ್ಯಕ್ತಿಗಳನ್ನು ಪೊಲೀಸ್ ಠಾಣೆಗೆ ಕರೆತಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ವಿಕ್ರಮ್ ಅಮಟೆ ನೇತೃತ್ವದಲ್ಲಿ ಕೆಲವು ಗಂಟೆಗಳ ಕಾಲ ವಿಚಾರಣೆ ನಡೆಸಿದ್ದಾರೆ ಎಂದು ಲಭ್ಯ ಮೂಲಗಳಿಂದ ತಿಳಿದು ಬಂದಿದೆ. ಹೆಚ್ಚಿನ ಮಾಹಿತಿ ತಿಳಿದು ಬರಬೇಕಿದೆ.

ಜಮೀರ್ ಅಹ್ಮದ್‌ಗೆ ಮತ್ತೊಂದು ಸಂಕಷ್ಟ

← ಮೊದಲಪುಟದಿಂದ

ರಾಜಕೀಯವಾಗಿ ಬೆಳೆಸಿದ್ದೇ ಎಚ್‌ಡಿ: ಈ ಬಗ್ಗೆ ಟ್ವೀಟ್ ಮಾಡಿರುವ ಜೆಡಿಎಸ್, ಮಿಸ್ಟರ್ ಜಮೀರ್, ನಿನ್ನನ್ನು ರಾಜಕೀಯವಾಗಿ ಬೆಳೆಸಿದ್ದ ದೇವೇಗೌಡರ ಕುಟುಂಬವನ್ನೇ ಖರೀದಿ ಮಾಡುತ್ತೇನೆ ಎನ್ನುವ ನಿನ್ನ ಅಧಿಕಾರ ಮತ್ತು ದುಡ್ಡಿನ ದರ್ಪ ಹೆಚ್ಚು ದಿನ ಉಳಿಯಲ್ಲ. ಸೊಕ್ಕಿನ ಮಾತಿಗೆ, ಕಪ್ಪು ವರ್ಣದ ಬಗ್ಗೆ ನಿನಗಿರುವ ಮನಸ್ಥಿತಿಗೆ ರಾಜ್ಯದ ಜನರು ತಕ್ಕ ಉತ್ತರ ನೀಡುತ್ತಾರೆ ಎಂದು ಟೀಕಿಸಿದ್ದಾರೆ. ಇದರೊಂದಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಚಿವ ಮಹದೇವಪ್ಪ, ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಕೆ.ಎಚ್. ಮುನಿಯಪ್ಪ, ಕೆ.ಜೆ.ಜಾರ್ಜ್ ಅವರ ಬಣ್ಣ ಯಾವುದು? ಎಂದು ಪ್ರಶ್ನಿಸಿದೆ.

ಕೇಂದ್ರ ಸಚಿವ ಮತ್ತು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರನ್ನು ಕಾಂಗ್ರೆಸ್‌ನ ಜಮೀರ್ 'ಕಾಲಾ ಕುಮಾರಸ್ವಾಮಿ' ಎಂದಿರುವುದನ್ನು ಖಂಡಿಸುತ್ತೇನೆ. ಇದೊಂದು ಜನಾಂಗೀಯ ನಿಂದನೆ. ಇದೇ ರೀತಿ ದಕ್ಷಿಣ ಭಾರತೀಯರು ಆಫ್ರಿಕಾದವರ ರೀತಿ ಕಾಣುತ್ತಾರೆ, ಈಶಾನ್ಯ ಭಾರತೀಯರು ಚೀನಾದವರಂತೆ ಮತ್ತು ಉತ್ತರ ಭಾರತೀಯರು ಅರಬ್ಬಿನವರಂತೆ ಕಾಣುತ್ತಾರೆ ಎಂದು ರಾಹುಲ್ ಗಾಂಧಿ ಸಲಹೆಗಾರರು ಹೇಳಿಕೆ ನೀಡಿದ್ದರು.
– ಕಿರಣ್ ರಿಜೂಜು, ಕೇಂದ್ರ ಸಚಿವ

ಪೌರಾಯುಕ್ತರ ಮೇಲೆ ಹರಿಹಾಯ್ದ ಶಾಸಕ

ದಾವಣಗೆರೆ: ಸರಕಾರಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಹೆಸರು ಹಾಕದೇ ಶಿಷ್ಟಾಚಾರ ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ಕುಪಿತಗೊಂಡ ಹರಿಹರದ ಬಿಜೆಪಿ ಶಾಸಕ ಬಿ.ಪಿ.ಹರೀಶ್, ನಗರಸಭೆಯ ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ವಿರುದ್ಧ ಹರಿಹಾಯುವ ಭರದಲ್ಲಿ ಹಲ್ಲೆಗೆ ಯತ್ನಿಸಿದ್ದಾರೆ. ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ (ಧೂಡಾ) ಹರಿಹರದ ಶಾಖಾ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಈ ಘಟನೆ ನಡೆದಿದೆ. ಮಧ್ಯಪ್ರವೇಶಿಸಿದ ಧೂಡಾ' ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಹಾಗೂ ಸ್ಥಳೀಯ ಮುಖಂಡರು ಶಾಸಕರನ್ನು ಸಮಾಧಾನ ಪಡಿಸಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಧೂಡಾ' ಶಾಖಾ ಕಚೇರಿ ಉದ್ಘಾಟನೆ ಸೋಮವಾರ ಬೆಳಗ್ಗೆ 11 ಕ್ಕೆ ನಿಗದಿಯಾಗಿತ್ತು. ಈ ಕಾರ್ಯಕ್ರಮಕ್ಕೆ ಧೂಡಾ' ಸದಸ್ಯರೂ ಆಗಿರುವ ಸ್ಥಳೀಯ ಶಾಸಕ ಬಿ.ಪಿ.ಹರೀಶ್ ಅವರನ್ನು ನಗರಸಭೆ ಪೌರಾಯುಕ್ತರು ಶಿಷ್ಟಾಚಾರದ ಪ್ರಕಾರ ಆಹ್ವಾನ ನೀಡಿರಲಿಲ್ಲ.

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

'BJP4Karnataka ಪಾಪದ ಕೊಡ ತುಂಬುತ್ತಿದೆ. ಕೋವಿಡ್ ಸಮಯದಲ್ಲಿ ನೂರಾರು ಜನರ ಜೀವ ತೆಗೆದ ಬಿಜೆಪಿ ಸರಕಾರದ ಹೆಣದ ಮೇಲೆ ಹಣ ಮಾಡಿದ ದಂಧೆಯ ಕರಾಳತೆ ಬಯಲಾಗಿದೆ. ಕೋವಿಡ್ ಸಂದರ್ಭದಲ್ಲಿ ಪಿಪಿಇ ಕಿಟ್ ಹಾಗೂ ಇತರೆ ಸಾಮಾಗ್ರಿ ಖರೀದಿಯಲ್ಲಿ ಅಕ್ರಮ ನಡೆದಿರುವುದನ್ನು ನ್ಯಾಯಮೂರ್ತಿ ಕುನ್ಹಾ ಆಯೋಗ ದೃಢಪಡಿಸಿದೆ. ಈ ಸಂಬಂಧ ಅಂದಿನ ಮುಖ್ಯಮಂತ್ರಿ BSYBJP ಮತ್ತು ಆರೋಗ್ಯ ಸಚಿವ sriramulubjp ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಶಿಫಾರಸು ಮಾಡಿದೆ. ಇದು ಆರಂಭ ಅಷ್ಟೇ, ಮುಂದಿನ ದಿನಗಳಲ್ಲಿ ರಾಜ್ಯದ ಜನರ ಜೀವ, ಜೀವನದ ಜೊತೆ ಚೆಲ್ಲಾಟವಾಡಿದ ಭ್ರಷ್ಟ ಬಿಜೆಪಿಯ ಎಲ್ಲಾ ಹೀನ ವೃತ್ತಾಂತಗಳು ಬಯಲಾಗಲಿವೆ.

ಸತ್ಯನಾರಾಯಣ

ಇರಬಹುದು ಅಲ್ವಾ, ಕೋವಿಡ್ ಸಂದರ್ಭದಲ್ಲಿ ಮೋದಿ ವ್ಯಾಕ್ಸಿನ್ ತೆಗೆದುಕೊಳ್ಳಬೇಡಿ ಎಂದು ಟಾಂ ಟಾಂ ಹೊಡೆದುಕೊಂಡು ಊರೂರು ತಿರುಗಿದವರ ಪ್ರಸ್ತಾವನೆ ಈ ವರದಿಯಲ್ಲಿ ಬಂದಿರಬಹುದಾ?. ಭಾರತಕ್ಕೆ ಕೋವಿಡ್ ಅನುಭವ ಈ ಮೊದಲೇ ಇತ್ತಾ? ಭಾರತದಲ್ಲಿ ಕೋವಿಡ್ ನಿಯಂತ್ರಣಕ್ಕೆ ಬೇಕಾದ ಪರಿಕರಗಳ ದಾಸ್ತಾನು ಮೊದಲೇ ಇತ್ತಾ?ತುರ್ತು ಅಗತ್ಯವೇಳೆ ಬೆಲೆ ಹೆಚ್ಚು.

ಚನ್ನಪಟ್ಟಣದಲ್ಲಿ ನಡೆದ ಕಾಂಗ್ರೆಸ್ ಸಮಾವೇಶ | ಮುಖ್ಯಮಂತ್ರಿ ಸಿದ್ದರಾಮಯ್ಯ ಜೆಡಿಎಸ್ ನಾಯಕರ ವಿರುದ್ಧ ವಾಗ್ದಾಳಿ

ಎಚ್‌ಡಿಡಿ ಒಕ್ಕಲಿಗರನ್ನು ಬೆಳೆಯಲು ಬಿಡಲ್ಲ

ರಾಮನಗರ: ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ಒಕ್ಕಲಿಗ ನಾಯಕರನ್ನು ಬೆಳೆಯಲು ಬಿಡುವುದಿಲ್ಲ, ಬುದ್ಧಿವಂತರು, ರಾಜಕೀಯ ಪ್ರಜ್ಞೆ ಇರುವ ಒಕ್ಕಲಿಗರನ್ನು ಬೆಳೆಸದೆ ಅವರನ್ನು ವ್ಯವಸ್ಥಿತವಾಗಿ ತುಳಿಯುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಚನ್ನಪಟ್ಟಣದಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಮಾತನಾಡಿದ ಅವರು, ನಾನು ಹಿಂದುಳಿದವನು ಎಂದು ನನ್ನನ್ನು ವಿರೋಧಿಸುತ್ತಾರೆ ಸರಿ, ಆದರೆ, ಒಕ್ಕಲಿಗ ನಾಯಕರಾದ ವೈ.ಕೆ.ರಾಮಯ್ಯ, ನಾಗೇಗೌಡ, ಬಚ್ಚೇಗೌಡ, ವರದೇಗೌಡ, ಪುಟ್ಟಣ್ಣ, ಚಲುವರಾಯಸ್ವಾಮಿ, ಬಾಲಕೃಷ್ಣ, ಬೈರೇಗೌಡ, ಕೆ.ಆರ್.ಪೇಟೆ ಚಂದ್ರಶೇಖರ್ ಸೇರಿ ಸಾಲು ಸಾಲು ಒಕ್ಕಲಿಗರನ್ನು ರಾಜ್ಯದಲ್ಲಿ ಮುಗಿಸಿದ್ದಾರೆ. ರಾಜ್ಯದಲ್ಲಿ ಒಕ್ಕಲಿಗ ನಾಯಕತ್ವವೇ ಬೆಳೆಯದಂತೆ ಮಾಡುತ್ತಿದ್ದಾರೆ ಎಂದರು.

ಡಿಕೆಶಿ, ಡಿಕೆಸು ಮುಗಿಸಲು ಯತ್ನ: ಈಗ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಡಿ.ಕೆ.ಸುರೇಶ್ ಅವರನ್ನೂ ಮುಗಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇದು ಆಗುವುದಿಲ್ಲ. ನಾನು ಜಿ.ಟಿ.ದೇವೇಗೌಡ ಅವರಿಗೂ ಎಚ್ಚರಿಸಿದ್ದೇನೆ. ಅಲ್ಲಿದ್ದರೆ ಮುಗಿಸುತ್ತಾರೆ, ಬೇಗ ಹೊರಗೆ ಬಂದರೆ ನಿಮಗೇ ಒಳ್ಳೆಯದು ಎಂದು ಎಚ್ಚರಿಸಿದ್ದೇನೆ. ಮನೆ ಮಗ ಎನ್ನುತ್ತಿದ್ದ ಬಿ.ಎಲ್.ಶಂಕರ್, ವೈ.ಕೆ.ರಾಮಯ್ಯ ಅವರನ್ನೇ ಮುಗಿಸಿದವರು ಯೋಗೇಶ್ವರ್ ಅವರ ಬೆಳವಣಿಗೆಯನ್ನು ಸಹಿಸುತ್ತಾರಾ ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಏನು ಸಾಧನೆ ಮಾಡಿದ್ದೀರಿ?

ಕುಮಾರಸ್ವಾಮಿ ಅವರೇ, ನೀವು ಏನು ಸಾಧನೆ ಮಾಡಿದ್ದೀರಿ? ಚನ್ನಪಟ್ಟಣ ಜನತೆಯ ಎದುರು ಯಾವ ಮುಖ ಇಟ್ಟುಕೊಂಡು ಮತ ಕೇಳುತ್ತಿದ್ದೀರಿ ಎಂದು ಪ್ರಶ್ನಿಸಿದರು. ಮೊಮ್ಮಗನಿಗಾಗಿ ಒಂದು ವಾರದಿಂದ ಚನ್ನಪಟ್ಟಣದಲ್ಲೇ ಇದ್ದಾರೆ. ಜೆಡಿಎಸ್ ಅಥವಾ ಬಿಜೆಪಿಯಿಂದ ಬೇರೆ ಯಾರಾದರೂ ನಿಂತಿದ್ದರೆ ದೇವೇಗೌಡರು ಹೀಗೆ ವಾರಗಟ್ಟಲೆ ಚನ್ನಪಟ್ಟಣದಲ್ಲಿ ನಿಂತು ಮತ ಕೇಳುತ್ತಿದ್ದೀರಾ ಎಂದರು.

ಮಂಡ್ಯ ಲೋಕಸಭೆಯಲ್ಲಿ, ರಾಮನಗರ ವಿಧಾನಸಭೆಯಲ್ಲಿ ನಿಖಿಲ್ ಸೋತಿದ್ದಾರೆ. ಈಗ ಚನ್ನಪಟ್ಟಣಕ್ಕೆ ಕರೆತಂದು ನಿಲ್ಲಿಸಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಡಾ.ಮಂಜುನಾಥ್ ಅವರ ಗೆಲುವಿಗೆ ಯೋಗೇಶ್ವರ ಶ್ರಮಿಸಿದರು. ಆಗಲೇ ಕುಮಾರಸ್ವಾಮಿ ವಿಧಾನಸಭಾ ಚುನಾವಣೆಯಲ್ಲಿ ಯೋಗೇಶ್ವರ ಅವರಿಗೆ ಬೆಂಬಲಿಸಿ ಗೆಲ್ಲಿಸುವ ಭರವಸೆ ನೀಡಿದ್ದರು. ಆದರೆ ಚುನಾವಣೆ ಬಂದಾಗ ಕೈ ಕೊಟ್ಟರು. ಯೋಗೇಶ್ವರ್ ಅವರು ಚನ್ನಪಟ್ಟಣ ಜನತೆಯ ಮೇಲೆ ಅಪಾರ ಪ್ರೀತಿ, ಗೌರವ ಕಾಳಜಿ ಇಟ್ಟುಕೊಂಡಿದ್ದಾರೆ ಹಾಗಾಗಿ ಯೋಗೇಶ್ವರ್ ಅವರಿಗೆ ನ್ಯಾಯ ಕೊಡಿಸುವ ಕೆಲಸವನ್ನು ಚನ್ನಪಟ್ಟಣದ ಜನ ಮಾಡಬೇಕು ಎಂದು ಮನವಿ ಮಾಡಿದರು.

ಸಂದರ್ಭದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ರಾಮಲಿಂಗಾರೆಡ್ಡಿ, ಕೆ.ವೆಂಕಟೇಶ್, ಚಲುವರಾಯಸ್ವಾಮಿ, ಜಮೀರ್ ಅಹಮ್ಮದ್, ಶಾಸಕರಾದ ಪ್ರದೀಪ್ ಈಶ್ವರ್, ಎಸ್.ರವಿ, ಪುಟ್ಟಣ್ಣ, ಬಾಲಕೃಷ್ಣ ಸೇರಿದಂತೆ ಹಲವರಿದ್ದರು.

ಚನ್ನಪಟ್ಟಣದಲ್ಲಿ ನಡೆದ ಕಾಂಗ್ರೆಸ್ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಈ ವೇಳೆ ಸಚಿವರಾದ ರಾಮಲಿಂಗಾರೆಡ್ಡಿ, ಚಲುವರಾಯಸ್ವಾಮಿ, ಜಮೀರ್ ಅಹಮ್ಮದ್ ಸೇರಿದಂತೆ ಕಾಂಗ್ರೆಸ್ ನಾಯಕರು ಇದ್ದರು.

ನಾನು ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದೇನೆ ಎಂದು ದೇವೇಗೌಡರಿಗೆ ಹೊಟ್ಟೆಯುರಿ. ಅದಕ್ಕೇ ನಮ್ಮ ಸರಕಾರ ಕಿತ್ತಾಕುತ್ತೇವೆ ಎನ್ನುತ್ತಿದ್ದಾರೆ. ರಾಜ್ಯದ ಜನತೆ ಆರಿಸಿರುವ ನಮ್ಮ ಸರಕಾರವನ್ನು ಕುಮಾರಸ್ವಾಮಿ, ದೇವೇಗೌಡರಿಂದ ಕೀಳಲು ಸಾಧ್ಯವಿಲ್ಲ. ನಿಮ್ಮ ಹೊಟ್ಟೆಯುರಿ ನಿಮ್ಮನ್ನೇ ಸುಡುತ್ತದೆಯೇ ಹೊರತು ನಮ್ಮನ್ನು ಏನೂ ಮಾಡಲು ಸಾಧ್ಯವಿಲ್ಲ, ಮೊದಲ ಬಾರಿ ಸಿಎಂ ಆಗಿ ಹತ್ತು ಹಲವು ಭಾಗ್ಯಗಳನ್ನು ನೀಡಿದೆ. ಎರಡನೇ ಬಾರಿ ಸಿಎಂ ಆಗಿ ಐದಕ್ಕೆ ಐದೂ ಗ್ಯಾರಂಟಿಗಳನ್ನು ಜಾರಿ ಮಾಡಿ ನಮ್ಮ ಸಾಧನೆಯ ಸಾಕ್ಷಿಗುಡ್ಡೆಯನ್ನು ರಾಜ್ಯದ ಜನತೆಯ ಎದುರಿಗೆ ಇಟ್ಟಿದ್ದೀವಿ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸರಕಾರ ಗ್ಯಾರಂಟಿಗಳು ನಿಲ್ಲಿಸುವುದಿಲ್ಲ

ಚುನಾವಣೆ ಮುಗಿದ ಮೇಲೆ ಗ್ಯಾರಂಟಿಗಳನ್ನು ಸರಕಾರ ಬಂದ್ ಮಾಡುತ್ತದೆ ಎಂದು ದೇವೇಗೌಡರು ದೊಡ್ಡ ಸುಳ್ಳು ಹೇಳಿದ್ದಾರೆ. ಸಿದ್ದರಾಮಯ್ಯ ಒಮ್ಮೆ ಮಾತು ಕೊಟ್ಟರೆ ಯಾವುದೇ ಕಾರಣಕ್ಕೂ ಮಾತು ತಪ್ಪುವುದಿಲ್ಲ. ನಮ್ಮ ಸರಕಾರ ಯಾವ ಗ್ಯಾರಂಟಿಗಳನ್ನೂ ನಿಲ್ಲಿಸುವುದಿಲ್ಲ. ಇದಕ್ಕೆ ನಾನೇ ಗ್ಯಾರಂಟಿ, ವಕ್ಫ್ ವಿಚಾರದಲ್ಲೂ ಬಿಜೆಪಿ ಜೊತೆ ಸೇರಿ ಸುಳ್ಳು ಹೇಳುತ್ತಿದ್ದಾರೆ. ಯಾವುದೇ ಕಾರಣಕ್ಕೂ ಒಬ್ಬೇ ಒಬ್ಬ ರೈತರನ್ನೂ ಒಕ್ಕಲೆಬ್ಬಿಸುವುದಿಲ್ಲ ಎಂದು ಅಧಿಕೃತ ಘೋಷಣೆ ಮಾಡಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ನಾವುಗಳು ಕಣ್ಣೀರಿಗೆ ಹೆದರುವ ಮಕ್ಕಳಲ್ಲ

ಎಚ್.ಡಿ. ಕುಮಾರಸ್ವಾಮಿ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದರು. ಅವರ ಅಧಿಕಾರ ಅವಧಿಯಲ್ಲಿ ಚನ್ನಪಟ್ಟಣ ತಾಲೂಕಿಗೆ ಏನು ಮಾಡಿದ್ದಾರೆ ಅವರ ಸಾಕ್ಷಿಗುಡ್ಡೆ ಏನು ಎಂಬುದನ್ನು ಬಹಿರಂಗಪಡಿಸಲಿ. ಅಧಿಕಾರವಿದ್ದಾಗ ಅಭಿವೃದ್ಧಿ ಮಾಡದೆ, ಕಣ್ಣೀರು ಹಾಕುತ್ತಾ ಬರಿ ಸುಳ್ಳನ್ನು ಹೇಳುತ್ತಿದ್ದಾರೆ. ನಾವುಗಳು ಕಣ್ಣೀರಿಗೆ ಹೆದರುವ ಮಕ್ಕಳಲ್ಲ, ಕುಮಾರಸ್ವಾಮಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಒಂದೇ ಒಂದು ಬಸ್ ನಿಲ್ದಾಣ ವನ್ನು ಮಾಡಲು ಅವರ ಕೈಯಲ್ಲಿ ಆಗಲಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟೀಕಿಸಿದರು.

ಮಾದರಿ ಜಿಲ್ಲೆಯಾಗಿ ಮಾಡಲು ಅವಕಾಶ ಕೊಡಿ

ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಮಾತನಾಡಿ, ಈ ಬಾರಿ ಚುನಾವಣೆಯಲ್ಲಿ ನನಗೆ ಮತ ನೀಡಿ ನಿಮ್ಮ ಸೇವೆ ಮಾಡಲು ಶಕ್ತಿ ನೀಡಿ. ನಾವೆಲ್ಲರೂ ಈ ತಾಲೂಕಿನ ಸಮಗ್ರ ಅಭಿವೃದ್ಧಿ ಮಾಡಿ ಈ ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿ ಮಾಡುತ್ತೇವೆ. ಡಿ.ಕೆ. ಶಿವಕುಮಾರ್ ಅವರು ಈಗಾಗಲೇ 500 ಕೋಟಿ ವಿಶೇಷ ಅನುದಾನ ತಂದು ಅಭಿವೃದ್ಧಿ ಕೆಲಸ ಆರಂಭಿಸಿದ್ದು, ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಕುಮಾರಸ್ವಾಮಿ ಅವರ ಕುಟುಂಬ ನನ್ನ ಮೇಲೆ ಮುಗಿಬಿದ್ದಿದೆ, ನಾನು ಅದೇನು ಅನ್ಯಾಯ ಮಾಡಿದ್ದೇನೆ ಗೊತ್ತಿಲ್ಲ, ಕುಮಾರಸ್ವಾಮಿ, ಅವರ ಪತ್ನಿ, ಈಗ ಮಗ ಬಂದಿದ್ದಾನೆ. ಅವರು ಈ ಕ್ಷೇತ್ರದ ಅಭಿವೃದ್ಧಿಗೆ ಯಾವ ಯೋಜನೆ ನೀಡಿದ್ದಾರೆ ಎಂದು ಹೇಳಲಿ ಎಂದರು.

ವಿಶ್ವವಾಣಿ ಕ್ಲಬ್ ಹೌಸ್ ಕಾರ್ನರ್

12.11.2024

ಸಂಜೆ: 06.55 ರಿಂದ 08.15 ರವರೆಗೆ

ಮಂಗಳವಾರದ ಅತಿಥಿ

ಶಾಲಿನಿ ಹೆಬ್ಬಾರ್

ವಿಷಯ:

ಹಾಡಿನ ಪುಸ್ತಕದ ಹಾಡುಗಳು

vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ



- **ಸ್ಥಳ :** ಕಲಬುರಗಿ

ಸಮಸ್ಯೆಯೇನು..?

- ಕಲಬುರಗಿ ಜಿಲ್ಲೆಯ ಸಂಗಮೇಶ್ವರ ಕಾಲೋನಿ ಸಾಯಿ ಮಂದಿರ ವಾರ್ಡ್ ನಂ.55ರಲ್ಲಿ ಯುಜಿಡಿ ಲೈನ್ ಹಾಳಾಗಿರುವ ಸಮಸ್ಯೆ.
- **ಇಲಾಖೆ:** ಮಹಾನಗರ ಪಾಲಿಕೆ
- **ಪರಿಹಾರ:** ಕಲಬುರಗಿ ಜಿಲ್ಲೆಯ ಸಂಗಮೇಶ್ವರ ಕಾಲೋನಿ ಸಾಯಿ ಮಂದಿರ ವಾರ್ಡ್ ನಂ.55ರಲ್ಲಿ ಯುಜಿಡಿ ಲೈನ್ ದುರಸ್ತಿಗೆ ಮಾಡಲು ಸ್ಥಳ ಪರಿಶೀಲಿಸಲಾಗಿದ್ದು, ಮುಂಬರುವ ಕ್ರಿಯಾ ಯೋಜನೆಯಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು.

ಸಚಿವ ಜಮೀರ್ ಅಹಮದ್ ಖಾನ್ ಸ್ಪಷ್ಟನೆ | ಸಚಿವರ ಹೇಳಿಕೆಗೆ ಬಿಜೆಪಿ ನಾಯಕರು ಕಿಡಿ

ಪ್ರೀತಿಯಿಂದ ಕರಿಯಣ್ಣ ಅಂತ ಕರೆದಿದ್ದೇನೆ

ರಾಮನಗರ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಕರಿಯಣ್ಣ ಎಂದು ಹಿಂದಿನಿಂದಲೂ ಅಭಿಮಾನದಿಂದ ಕರೆಯುತ್ತಿದ್ದೆ, ಅದನ್ನೇ ಉರ್ದುವಿನಲ್ಲಿ ಹೇಳಿದ್ದೇನೆ ಅಷ್ಟೇ, ಅದರಲ್ಲಿ ಯಾವುದೇ ಬೇರೆ ಉದ್ದೇಶವಿಲ್ಲ ಎಂದು ಸಚಿವ ಜಮೀರ್ ಅಹಮ್ಮದ್ ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅವರೊಂದಿಗೆ ಒಡನಾಟ ಇದ್ದ ಸಮಯ ದಿಂದಲೂ ಹಾಗೆಯೇ ಕರೆಯುತ್ತಿದ್ದೆ, ಇದಕ್ಕೆ ಹೊಸ ಅರ್ಥ ಕಲ್ಪಿಸಬೇಕಿಲ್ಲ, ಮೊದಲಿನಿಂದಲೂ ಕುಮಾರಸ್ವಾಮಿ ಅವರನ್ನು ಕರಿಯಣ್ಣ ಎಂತಲೇ ಕರೆಯುತ್ತಿದ್ದೇನೆ. ಅವರು ನನಗೆ ಕುಳ್ಳ ಎನ್ನುತ್ತಿದ್ದಾರೆ. ಇದು ರಾಜಕೀಯವಲ್ಲ ಬದಲಿಗೆ ಪ್ರೀತಿಯಿಂದ ಪದ ಬಳುತ್ತಿದ್ದೇವೆ. ನಾವು ಬೇರೆ ಪಕ್ಷದಲ್ಲಿರಬಹುದು ಆದರೆ, ಹಳೆಯದನ್ನು ಮರೆಯಲು ಸಾಧ್ಯವಿಲ್ಲ ಎಂದರು.

ಮತಕ್ಕಾಗಿ ಮುಸ್ಲಿಂ ಮತದಾರರಿಗೆ ಹಣ ಹಂಚುತ್ತಿರುವ ಬಗ್ಗೆ ವಿಚಾರ ತಿಳಿದಾಗ ನಮ್ಮ ಮುಸ್ಲಿಮರು ಅಂತಹ ಹೀನಾಯ ಸ್ಥಿತಿಗೆ ಬಂದಿಲ್ಲ, ನಿಮ್ಮಿಂದ ಹಣ ಪಡೆಯುವಷ್ಟು ಹೀನಸ್ಥಿತಿಗೆ ಬಂದಿಲ್ಲ, ಬೇಕಾದರೆ ನಿಮಗೇ ಕೊಡುತ್ತೇವೆ ಎಷ್ಟು ಬೇಕು ಕೇಳಿ ಎಂದಿದ್ದೇನೆ ವಿನಃ ಅವರ ಕುಟುಂಬವನ್ನೇ ಕೊಳ್ಳುತ್ತೇನೆ ಬೆಲೆ ಹೇಳಿ ಎಂದು ಹೇಳಿಲ್ಲ ಎಂದು ಜಮೀರ್ ಸ್ಪಷ್ಟನೆ ನೀಡಿದರು.

ಕುಟುಂಬ ಖರೀದಿಸಲು ಹಣ ಎಲ್ಲಿಂದ ಬಂದಿದೆ: ದೇವೇಗೌಡರ ಕುಟುಂಬವನ್ನು ಖರೀದಿಸುತ್ತೇವೆ ಎಂಬ ಜಮೀರ್ ಹೇಳಿಕೆಗೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಖಂಡಿಸಿದ್ದು, ಕಾವೇರಿ ನೀರು ಹಂಚಿಕೆಗಾಗಿ ಶ್ರಮಿಸಿದ ದೇವೆಗೌಡರು ಹಾಗೂ ರೈತರ ಸಾಲ ಮನ್ನಾ ಮಾಡಿದ ಕುಮಾರಸ್ವಾಮಿ ಅಂತಹವರನ್ನು ಖರೀದಿಸುತ್ತೇನೆ ಎಂದಾದರೆ ಒಕ್ಕಲಿಗರನ್ನು ಅಥವಾ ಹಿಂದೂಗಳನ್ನು ಖರೀದಿಸುತ್ತೇನೆ ಎಂದು ಹೇಳುತ್ತಿದ್ದಾರೆಯೇ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಚಾಮರಾಜಪೇಟೆಗೆ ಹೋಗಿ ರ‍್ಯಾಲಿ ಮಾಡಿ ಜಮೀರ್ ಗೆಲ್ಲಿಸಿ ಜೀವನ ನೀಡಿದರೇ, ಈಗ ದೇವೇಗೌಡರ ಕುಟುಂಬವನ್ನು ಖರೀದಿಸುತ್ತೇವೆ ಎಂದು ಹೇಳೋ ಮೂಲಕ ಒಕ್ಕಲಿಗರನ್ನು ಅರ್ಥವೇ ಅಥವಾ ಹಿಂದೂಗಳನ್ನು ಖರೀದಿಸುತ್ತೇವೆಂದು ಅರ್ಥವೇ ಎಂದು ಪ್ರಶ್ನಿಸಿದ್ದಾರೆ.

ಕುಮಾರಸ್ವಾಮಿ ಅವರು ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದರೆ ಈ ರೀತಿ ಬೀದಿ ಬೀದಿ ಅಲೆಯುವ ಸ್ಥಿತಿ ಎದುರಾಗುತ್ತಿರಲಿಲ್ಲ. ಮಗನ ಗೆಲುವಿಗಾಗಿ ತಮ್ಮ 93 ವರ್ಷದ ತಂದೆಯನ್ನು ಕರೆಸಿ, ಪ್ರಚಾರ ಮಾಡುತ್ತಿದ್ದಾರೆ. ಇದೇ ಜಾಗದಲ್ಲಿ ನಮ್ಮ ತಂದೆ ಇದ್ದರು ಈ ಕೆಲಸವನ್ನು ನಾನು ಮಾಡುತ್ತಿರಲಿಲ್ಲ. ದೇವೇಗೌಡರಿಂದ ಪ್ರಚಾರ ಮನಸ್ಸಿಗೆ ನೋವಾಗುತ್ತಿದೆ.

ಜಮೀರ್ ಅಹ್ಮದ್, ಸಚಿವ

ಸಚಿವ ಜಮೀರ್ ಅಹಮದ್ ಖಾನ್ ಅವರು ಎಚ್.ಡಿ.ಕುಮಾರಸ್ವಾಮಿ ಅವರನ್ನು ವ್ಯಕ್ತಿಗತವಾಗಿ ನಿಂದಿಸುವ ಭರದಲ್ಲಿ ಸಂಸ್ಕೃತಿ ಹೀನರಂತೆ ವರ್ತಿಸಿದ್ದಾರೆ. ನಾಗರಿಕ ಪರಿಭಾಷೆಯ ಪರಿಚಯವೇ ಇಲ್ಲದಂತೆ ಮಾತನಾಡುವ ಜಮೀರ್ ಅವರ ವರ್ತನೆ ಅತ್ಯಂತ ಖಂಡನೀಯ. ಚನ್ನಪಟ್ಟಣದಲ್ಲಿ ಭಾಷಣ ಮಾಡುವ ವೇಳೆ ಅವರು ಬಳಸಿರುವ ಪದಪುಂಜಗಳು ಫುಟ್ ಪಾತ್ ಪೋಕರಿಗಳೂ ನಾಚಿಸುವಂತಿದೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಹುಲಿಯಂತಿದ್ದ ಸಿಎಂ ಇಲಿಯಾಗಿದ್ದಾರೆ: ರಮೇಶ್ ಜಾರಕಿಹೊಳಿ

ವಿಜಯೇಂದ್ರ ಇದ್ದಲ್ಲಿ ನಾನು ಹೋಗುವುದಿಲ್ಲ

ರಾಯಚೂರು: ಹುಲಿಯಂತಿದ್ದ ಸಿಎಂ ಸಿದ್ದರಾಮಯ್ಯ ಈಗ ಕಾಂಗ್ರೆಸ್ ನಲ್ಲಿ ಇಲಿಯಂತಾಗಿದ್ದಾರೆ. ಅವರ ಸ್ಥಿತಿ ಕಂಡರೆ ಅಯ್ಯೊ ಎನಿಸುತ್ತಿದೆ ಎಂದು ಶಾಸಕ ಹಾಗೂ ಮಾಜಿ ಸಚಿವ ರಮೇಶ ಜಾರಕಿಹೊಳಿ ಲೇವಡಿ ಮಾಡಿದರು.



ನಗರದಲ್ಲಿ ಮಾಜಿ ಸಂಸದ ಬಿ.ವಿ.ನಾಯಕರ ಗೃಹಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಲ್ಲಾ ಸಮುದಾಯಗಳ ಪರ ಕಾಳಜಿ ಹೊಂದಿದ್ದ ಸಿದ್ದರಾಮಯ್ಯನವರು ಈಗ ಒಂದು ಸಮುದಾಯದ ಪರ ನಿಂತಿರುವುದು ವಿಪರ್ಯಾಸ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಾಯಕತ್ವ ನಾವು ಒಪ್ಪಿಲ್ಲ. ಬಿ.ಎಸ್.ಯಡಿಯೂರಪ್ಪನವರ ಬಗ್ಗೆ ಗೌರವವಿದೆ. ವಿಜಯೇಂದ್ರ ಜ್ಯೂನಿಯರ್. ಹೈಕಮಾಂಡ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿರಬಹುದು. ಅದು ನಮಗೆ ಸಂಬಂಧವಿಲ್ಲ. ನಮ್ಮ ಪಕ್ಷ ಬಹುಮತದಿಂದ ಅಧಿಕಾರಕ್ಕೆ ಬಂದಿಲ್ಲ. ಹೀಗಾಗಿ 8-10 ನಾಯಕರು ಪಕ್ಷ ಸಂಘಟನೆಗೆ ಮುಂದಾಗಿದ್ದು, ನಾನು ಆರು ಜಿಲ್ಲೆಗಳ ಉಸ್ತುವಾರಿ ತೆಗೆದುಕೊಂಡಿದ್ದೇನೆ. ಯತ್ನಾಳ ಸೇರಿದಂತೆ ಕೆಲ ನಾಯಕರು ಉಳಿದ ಜಿಲ್ಲೆಗಳ ಹೊಣೆ ತೆಗೆದುಕೊಂಡಿದ್ದಾರೆ. ವಿಜಯೇಂದ್ರ ಇದ್ದಲ್ಲಿ ನಾನು ಹೋಗುವುದಿಲ್ಲ ಎಂದು ತಿಳಿಸಿದರು.

ಜಾತಿ ಹೆಸರಿನಲ್ಲಿ ಮತ ಕೇಳುತ್ತಿರುವ ಕಾಂಗ್ರೆಸ್

ಹಾವೇರಿ: ಕಾಂಗ್ರೆಸ್ ನ ಶಾಸಕರು ಮತ್ತು ಸಚಿವರು ಶಿಗ್ಗಾವಿ ಸವಣೂರು ಕ್ಷೇತ್ರದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಾಳಿಗೆ ತೂರಿ ಜಾತಿ ಹೆಸರಿನಲ್ಲಿ ಮತ ಕೇಳಿ ಹಣ ಹಂಚಿಕೆ ಮಾಡುತ್ತಿದ್ದಾರೆ. ಇವರಿಗೆ ಕ್ಷೇತ್ರದ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಹತ್ತು ಹಲವಾರು ಉಪ ಚುನಾವಣೆ ನೋಡಿದ್ದೇನೆ. ಆದರೆ ಈ ರೀತಿ ಇಡಿ ಸರಕಾರ ಬರಲಿ. ಅದರೆ, ಅವರು ಮಾಡುತ್ತಿರುವ ರೀತಿ ನೋಡಿದರೆ, ಈ ಸರಕಾರಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆಯೊ ಇಲ್ಲವೋ ಗೊತ್ತಿಲ್ಲ. ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿ ಜಾತಿ ಆಧಾರದಲ್ಲಿ ಮತ ಕೇಳುವುದಲ್ಲದೇ ಹಣ ಹಂಚಿಕೆ ಮಾಡುತ್ತಿದ್ದಾರೆ. ಕೆಲವು ಕಡೆ ಜನರು ಅವರ ಹಣವನ್ನು ತಿರಸ್ಕರಿಸಿರಿದ್ದಾರೆ ಎಂದರು.

ಮುಖ್ಯಮಂತ್ರಿ ಆದಿಯಾಗಿ ಹಸಿ ಸುಳ್ಳು ಹೇಳುತ್ತಿದ್ದಾರೆ. ಸಿಎಂ ಒಂದಿನಾನೂ ಈ ಕ್ಷೇತ್ರಕ್ಕೆ ಏನು ಮಾಡಿದ್ದೇನೆ ಎಂದು ಹೇಳಲಿಲ್ಲ ಶಿಗ್ಗಾವಿ ಸವಣೂರು ಕ್ಷೇತ್ರಕ್ಕೆ ಕಾಂಗ್ರೆಸ್ ಕೊಡುಗೆ ಝೀರೊ, ವಸತಿ ಸಚಿವರು ಇಲ್ಲಿ ಬಂದು ಬಸವರಾಜ ಬೊಮ್ಮಾಯಿ ಒಂದೂ ಮನೆ ಕಟ್ಟಿಸಿಲ್ಲ ಅಂತ ಹೇಳುತ್ತಾರೆ. ಅವರ ಇಲಾಖೆಯಲ್ಲಿ ದಾಖಲೆ ಇದೆ. ಡಿಸಿ, ತಹಸೀಲ್ದಾರ್ ಕಚೇರಿಯಲ್ಲಿ ಅವರ ಇಲಾಖೆಯಲ್ಲಿ ದಾಖಲೆ ಇದೆ ಅದನ್ನು ತೆಗೆದು ನೋಡಲಿ ಎಂದರು.

ನಮ್ಮ ನಾಯಕರ ವಿರುದ್ಧ ಕೋವಿಡ್ ಹಗರಣದ ಹೆಸರಿನಲ್ಲಿ ಆರೋಪ ಮಾಡುತ್ತಿದ್ದಾರೆ. ನ್ಯಾ. ಮೈಕೆಲ್ ಡಿ ಕುನ್ಹಾ ಅವರ ವರದಿಯನ್ನು ಕ್ಯಾಬಿನೆಟ್ ಇನ್ನೂ ಒಪ್ಪಿಲ್ಲ, ಅದನ್ನು ಸೋರಿಕೆ ಮಾಡಿ ಅದರ ಮೇಲೆ ಮಂತ್ರಿಗಳು ಪ್ರತಿಕ್ರಿಯೆ ನೀಡುತ್ತಿದ್ದಾರೆ.

ಕಾಂಗ್ರೆಸ್ ಪಕ್ಷದ ಮುಖಂಡ ರಾಹುಲ್ ಗಾಂಧಿಯವರು ಸೋಮವಾರ ದೆಹಲಿಯಿಂದ ಮೈಸೂರಿಗೆ ಆಗಮಿಸಿ ವಯನಾಡ್‌ಗೆ ಪ್ರಯಾಣ ಬೆಳೆಸಿದರು. ಈ ವೇಳೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ ಸುಧೀಂದ್ರ ಅವರು ರಾಹುಲ್ ಗಾಂಧಿಯವರನ್ನು ಸ್ವಾಗತಿಸಿ ನಂತರ ವಯನಾಡ್‌ಗೆ ಬೀಳ್ಕೊಟ್ಟರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಯುವ ಮುಖಂಡರು ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಪ್ರಚೋದನಕಾರಿ ಭಾಷಣ: ಎಫ್‌ಐಆರ್ ದಾಖಲು

ಹಾವೇರಿ: ಎರಡು ಗುಂಪುಗಳ ನಡುವೆ ದ್ವೇಷ ಬಿತ್ತುವ ರೀತಿಯಲ್ಲಿ ಭಾಷಣ ಮಾಡಿದ್ದ ಆರೋಪದಡಿ ಸಂಸದ ಬಸವರಾಜ ಬೊಮ್ಮಾಯಿ ಸೇರಿದಂತೆ ಮೂವರ ವಿರುದ್ಧ ಶಿಗ್ಗಾವಿ ಠಾಣೆಯಲ್ಲಿ ಎರಡು ಎಫ್‌ಐಆರ್ ದಾಖಲಾಗಿವೆ. 'ರಾಜ್ಯ ಸರಕಾರ ವಕ್ಫ್ ಆಸ್ತಿ ಕಬಳಿಸುತ್ತಿದೆ' ಎಂದು ಆರೋಪಿಸಿ ನ. 4ರಂದು ಬಿಜೆಪಿ ವತಿಯಿಂದ ಶಿಗ್ಗಾವಿಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ಪ್ರಚೋದನಕಾರಿ ಭಾಷಣ ಮಾಡಿರುವ ಆರೋಪದಡಿ ಬಸವರಾಜ ಬೊಮ್ಮಾಯಿ, ಬಿಜೆಪಿ ಮುಖಂಡರಾದ ಪ್ರತಾಪ್ ಸಿಂಹ ಹಾಗೂ ಸಿ.ಟಿ. ರವಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ ನೀತಿ ಸಂಹಿತೆ ಜಾರಿಯಲ್ಲಿದೆ. ಇದೇ ಸಂದರ್ಭದಲ್ಲಿಯೇ, ಎರಡು ಗುಂಪುಗಳ ನಡುವೆ ದ್ವೇಷ ಉಂಟು ಮಾಡುವ ರೀತಿಯಲ್ಲಿ ಆರೋಪಿಗಳು ಭಾಷಣ ಮಾಡಿದ್ದರು. ಹೀಗಾಗಿ, ಎರಡು ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಎಸ್ಪಿ ಅಂಶುಕುಮಾರ್ ತಿಳಿಸಿದ್ದಾರೆ.



ನಿಖಿಲ್ ಕುಮಾರಸ್ವಾಮಿ ಪರ ಚನ್ನಪಟ್ಟಣದಲ್ಲಿ ಬೃಹತ್ ಪ್ರಚಾರ ಸಭೆ | ಕಾಂಗ್ರೆಸ್ ವಿರುದ್ಧ ಎಚ್.ಡಿ.ದೇವೇಗೌಡ

ಜನವರಿಯೊಳಗೆ ರಾಜ್ಯ ಸರಕಾರ ಉಳಿಯಲ್ಲ

ರಾಮನಗರ: ಜನವರಿಯೊಳಗೆ ರಾಜ್ಯ ಕಾಂಗ್ರೆಸ್ ಸರಕಾರ ಬೀಳಲಿದೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಹೇಳಿದ್ದಾರೆ, ಅವರು ಭವಿಷ್ಯ ಹೇಳಿಲ್ಲ, ವಾಸ್ತವ ನುಡಿದಿದ್ದಾರೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು.

ಚನ್ನಪಟ್ಟಣದಲ್ಲಿ ಎನ್ ಡಿಎ ಮೈತ್ರಿಕೂಟದ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರ ಪರ ನಡೆದ ಬೃಹತ್ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿ, ನನ್ನಂತೆಯೇ ಸೋಮಣ್ಣ ಅವರಿಗೂ ಜೋತಿಷ್ಯ ಕೇಳುವ ಅಭ್ಯಾಸ ಇರುವುದೇ ಸೋಜಿಗ, ಆದರೆ ಅವರು ಸತ್ಯವನ್ನೇ ಹೇಳಿದ್ದಾರೆ. ಈ ಸರಕಾರ ಬಹಳ ದಿನ ಇರುವುದಿಲ್ಲ ಎಂದು ಹೇಳಿದರು.

ಒಂದು ಕಾಲದಲ್ಲಿ ನಾನು ಮತ್ತು ಯಡಿಯೂರಪ್ಪ ಕಿತ್ತಾಡಿದ್ದೆವು. ಆದರೆ, ನಾವಿಬ್ಬರು ಈಗ ಒಂದಾಗಿರುವುದೇ ಈ ಭ್ರಷ್ಟ ಕಾಂಗ್ರೆಸ್ ಸರಕಾರವನ್ನು ಕಿತ್ತೆಸೆಯಲು ಎಂದು ಅವರು ಯಡಿಯೂರಪ್ಪ ಅವರ ಕೈ ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಹಾಗೂ ಕುಮಾರಸ್ವಾಮಿ ಅವರನ್ನು ಅರೆಸ್ಟ್ ಮಾಡಬೇಕು ಎಂದು ಡಿಸಿಎಂ ಡಿಕೆ ಶಿವಕುಮಾರ್ ನೀಡಿರುವ ಹೇಳಿಕೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಅವರು, ಡಿಕೆಶಿ ಅವರಿಗೆ ಅವರ ಮಾತುಗಳೇ ಮುಳುವಾಗಲಿದೆ ಎಂದು ವಾಗ್ದಾಳಿ ನಡೆಸಿದರು. ನಾನು ಮತ್ತೆ ಕ್ಷೇತ್ರಕ್ಕೆ ಬರುತ್ತೇನೆ. ಕ್ರಮ ಸಂಖ್ಯೆ 1ಕ್ಕೆ ಎಲ್ಲರೂ ತಪ್ಪದೇ ಮತದಾನ ಮಾಡಿ. ಇದೇ ತಿಂಗಳ 24ರ ಬೆಳಗ್ಗೆ ನಾನು ಹಾಗೂ ಯಡಿಯೂರಪ್ಪ ಅವರು ಒಟ್ಟಿಗೆ ಬಂದು ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತೇವೆ ಎಂದು ದೇವೇಗೌಡರು ಹೇಳಿದರು.

ಸಂದರ್ಭದಲ್ಲಿ ಬಿಜೆಪಿ, ಜೆಡಿಎಸ್ ನ ಹಲವು ಮುಖಂಡರು ಹಾಜರಿದ್ದರು.

ಡಿಕೆಶಿ ಸೊಕ್ಕು ಮುರಿಯಲು ನಿಖಿಲ್ ಗೆಲ್ಲಿಸಿ: ನಿಖಿಲ್ ಕುಮಾರಸ್ವಾಮಿ ಅವರ ನಮ್ಮ ಅಭ್ಯರ್ಥಿ ಎಂದು 11 ದಿನದ ಹಿಂದೆ ಯಾರು ಹೇಳಿರಲಿಲ್ಲ. ಆದರೆ, 6 ತಿಂಗಳಿನಿಂದ ನಾನೇ ಅಭ್ಯರ್ಥಿ ಎಂದು ಹೇಳಿಕೊಳ್ಳುತ್ತಿದ್ದ ಡಿ.ಕೆ.ಶಿವಕುಮಾರ್‌ಗೆ ಈಗ ಏನಾಗಿದೆ? ಅವರ ಬದಲು ಮತ್ತೊಬ್ಬರು ಅಖಾಡದಲ್ಲಿದ್ದಾರೆ ಎಂದು ಅವರು ತಿರುಗೇಟು ಕೊಟ್ಟರು. ಸಿದ್ದರಾಮಯ್ಯ ಅವರನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದೆ ಈ ದೇವೇಗೌಡ. ಮತ್ತೆ ಅವರೇನು ಎಂದು ಹೇಳಲು ನಾನು ಹೋಗಲ್ಲ. ನಿಖಿಲ್ ನನ್ನ ಮೊಮ್ಮಗ ಎನ್ನುವ ಮಾತು ಬೇಕಿಲ್ಲ. ನಾಮಪತ್ರ ಸಲ್ಲಿಸುವವರೆಗೂ ನಿಖಿಲ್ ಹೆಸರನ್ನು ನಾನು ಉಲ್ಲೇಖಿಸಲೇ ಇಲ್ಲ. ಮಹಾನುಭಾವ ಎನ್ನುವ ಡಿಕೆಶಿಯ ಸೊಕ್ಕು ಮುರಿಯಲು ನಿಖಿಲ್ ಗೆಲುವು ಅನಿವಾರ್ಯ ಪುಣ್ಯಾತ್ಮರಾದ ಮತದಾರರ ನಿರ್ಣಯವೇ ಎಲ್ಲದಕ್ಕೂ ಉತ್ತರ ನೀಡಲಿದೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು.



ಚನ್ನಪಟ್ಟಣದಲ್ಲಿ ಎನ್ ಡಿಎ ಮೈತ್ರಿಕೂಟದ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರ ಪರ ನಡೆದ ಬೃಹತ್ ಪ್ರಚಾರ ಸಭೆಯನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಪ್ರತಿಪಕ್ಷ ನಾಯಕ ಆರ್.ಅಶೋಕ, ಕೇಂದ್ರ ಸಚಿವ ವಿ.ಸೋಮಣ್ಣ ಉದ್ಘಾಟಿಸಿದರು.

ಕರ್ನಾಟಕದಲ್ಲಿ ಭ್ರಷ್ಟಾಚಾರ ತಂಡವಾಡುತ್ತಿದೆ. ಭಾಗ್ಯಲಕ್ಷ್ಮಿ ಯೋಜನೆ ನಿಲ್ಲಿಸಿದ್ದಾರೆ. ಅನೇಕ ಜನಪರ ಯೋಜನೆಯನ್ನು ನಿಲ್ಲಿಸಿದ್ದಾರೆ. ಅವರಿಗೆ ಹಣ ಕೊಡುವ ಯೋಗ್ಯತೆ ಇಲ್ಲ ಈ ಸರಕಾರ ದಿವಾಳಿ ಆಗಿದೆ. ಮುಂದಿನ ದಿನಗಳು ಒಳ್ಳೆಯದಿದೆ. ನಿಖಿಲ್ ಅವರ ಗೆಲುವಿಗೆ ಮನೆ ಮನೆಗೆ ಹೋಗಿ ಪ್ರಚಾರ ಮಾಡಿ. ಪ್ರಾಮಾಣಿಕ ಕೆಲಸ ಮಾಡಿದರೆ ನಿಖಿಲ್ ಅವರು 25 ಸಾವಿರ ಹೆಚ್ಚಿನ ಮತಗಳಿಂದ ನಿಖಿಲ್ ಗೆಲ್ಲುತ್ತಾರೆ.

ಬಿ.ಎಸ್.ಯಡಿಯೂರಪ್ಪ, ಮಾಜಿ ಸಿಎಂ

ಚನ್ನಪಟ್ಟಣ ಜನ ಯಾವ ಕಾರಣಕ್ಕೂ ಕೂಪನ್‌ಗೆ ಬೆಲೆ ನೀಡಲ್ಲ. ಆಮಿಷಗಳಿಗೆ ಬಲಿಯಾಗಲ್ಲ. ಕಾರ್ಯಕರ್ತರ ಬಯಕೆಯಂತೆ ಚನ್ನಪಟ್ಟಣದಲ್ಲಿ ಸ್ಪರ್ಧಿಸಿದ್ದು, ನಾಮಪತ್ರ ಸಲ್ಲಿಸಿ ಪ್ರಚಾರ ಆರಂಭ ಮಾಡಿದಾಗ ಭಾವನಾತ್ಮಕ ವಾಗಿ ಮಾತಾಡಿದೆ. ನಾನು ಭಾವನೆ ಇರುವ ವ್ಯಕ್ತಿ. ಕಳೆದ 16 ದಿನಗಳಲ್ಲಿ ಬಹಳ ಆಶೀರ್ವಾದ ಪಡೆದಿದ್ದೇನೆ. ನನಗೆ ಆಶೀರ್ವಾದ ಮಾಡಿ ಒಂದು ಪರೀಕ್ಷೆ ಮಾಡಿ ಈ ಪರೀಕ್ಷೆಯಲ್ಲಿ ನಾನು ಗೆದ್ದರೆ ನೀವೇ ಪರೀಕ್ಷಿಸಿ.

ನಿಖಿಲ್ ಕುಮಾರಸ್ವಾಮಿ, ಎನ್‌ಡಿಎ ಅಭ್ಯರ್ಥಿ

ಕಾಂಗ್ರೆಸ್ ನಾಶ ಆಗುತ್ತಿತ್ತು

ಅಂದು ಬಿಎಸ್‌ವೈಗೆ ಅಧಿಕಾರ ಹಸ್ತಾಂತರ ಮಾಡಲು ನಾನು ಪ್ರಾಮಾಣಿಕವಾಗಿ ತೀರ್ಮಾನ ಮಾಡಿದ್ದೆ. ಆದರೆ, ಅದನ್ನು ತಪ್ಪಿಸಲು ನಡೆದ ಘಟನೆ ಬಹಿರಂಗ ಪಡಿಸುವುದಿಲ್ಲ. ಅಂದು ಬಿಎಸ್‌ವೈಗೆ ಅಧಿಕಾರ ನೀಡಿದ್ದಿದ್ದರೆ ಅಂದೇ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ವನಾಶ ಆಗುತ್ತಿತು. ಆದರೆ, ವಿಧಿ ಆಟದ ಮುಂದೆ ನಮ್ಮದೇನು ನಡೆಯಲಿಲ್ಲ. ಮುಂದಿನ ದಿನಗಳಲ್ಲಿ ಬಿಜೆಪಿ-ಜೆಡಿಎಸ್ ಸರಕಾರ ಒಟ್ಟಾಗಿ ಮತ್ತೊಮ್ಮೆ ಸುವರ್ಣ ಕಾಲ ಸರಕಾರವನ್ನು ಸ್ಥಾಪಿಸುತ್ತೇವೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಪ್ರಜಾಪ್ರಭುತ್ವ ಗೆಲ್ಲಲಿ, ಬಾಳಲಿ

ಶಿಗ್ಗಾವಿ, ಸಂಡೂರು ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳಲ್ಲಿ ನಾಳೆ (ನ.13) ಉಪಚುನಾವಣೆ ನಡೆಯಲಿದೆ. ಈ ಕ್ಷೇತ್ರಗಳಲ್ಲಿ ತಂತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವ ವಿವಿಧ ಪಕ್ಷಗಳು ಗೆಲುವನ್ನು ತಮ್ಮದಾಗಿಸಿಕೊಳ್ಳಲು ಈಗಾಗಲೇ ಹಲವು ಕಾರ್ಯತಂತ್ರಗಳಿಗೆ ಮೊರೆಹೋಗಿವೆ, ತಮ್ಮದೇ ಆದ ಲೆಕ್ಕಾಚಾರವನ್ನು ಹಾಕಿಕೊಂಡಿವೆ. ಇದು ಆಯಾ ಪಕ್ಷಗಳ ಅಭ್ಯರ್ಥಿಗಳು ಮತ್ತು ಕಾರ್ಯಕರ್ತರಿಗೂ ಅನ್ವಯವಾಗುವ ಮಾತು. ಪೈಪೋಟಿಯೇ ಉಸಿರಾಗಿರುವ ಚುನಾವಣಾ ಕಣದಲ್ಲಿ ಇಂಥ ನಡೆಗಳು ಸಹಜವೇ. ಆದರೆ ಈ ಕ್ಷೇತ್ರಗಳಲ್ಲಿ ಯಾವುದೇ ಪಕ್ಷದ ಅಭ್ಯರ್ಥಿಗಳು ಗೆಲ್ಲಲಿ, ಅದು ಪ್ರಜಾಪ್ರಭುತ್ವದ ಗೆಲುವಾಗಬೇಕು. ನಮ್ಮ ಜನತಂತ್ರ ವ್ಯವಸ್ಥೆಯು ಮತ್ತಷ್ಟು ಗಟ್ಟಿಮುಟ್ಟಾಗಲು, ಅಸ್ತಿತ್ವವನ್ನು ಮುಂದುವರಿಸಿಕೊಂಡು ಹೋಗಲು ಈ ಉಪಚುನಾವಣೆ ಇಂಬುಕೊಡುವಂತಾಗಬೇಕು. ಹೀಗೆ ಹೇಳುತ್ತಿರುವುದಕ್ಕೊಂದು ಕಾರಣವಿದೆ. ಮತದಾರರು ಹಣ-ಹೆಂಡ, ಬಟ್ಟೆ-ಪಾತ್ರೆ, ಹೀಗೆ ಯಾವುದೇ ಪ್ರಲೋಭನೆಗಳಿಗೆ ಒಳಗಾಗದೆ, ತಮ್ಮ ನಿರೀಕ್ಷೆಗೆ ಅನುಸಾರವಾಗಿರುವ ಮತ್ತು ತಮ್ಮ ಆತ್ಮಸಾಕ್ಷಿಗೆ ಒಪ್ಪಿಗೆಯಾಗುವ ಸಮರ್ಥ ಅಭ್ಯರ್ಥಿಗೆ ಮತ ಚಲಾಯಿಸುವಂತಾಗಬೇಕು ಎಂಬುದು ನಮ್ಮ ವ್ಯವಸ್ಥೆಯ ಸಾರ್ವಕಾಲಿಕ ಆಶಯ. ಇಷ್ಟಾಗಿಯೂ ಕೆಲವರು ಈ ಆಶಯದ ಬೇಲಿಯನ್ನು ಹಾರುವುದಿದೆ, ನಿಯಮಗಳನ್ನು ಉಲ್ಲಂಘಿಸುವುದಿದೆ, ಸ್ವಹಿತಾಸಕ್ತಿಯ ನೆರವೇರಿಕೆಯ ಹುಕಿಗೆ ಬಿದ್ದು ಪ್ರಜಾಪ್ರಭುತ್ವದ ತಳಹದಿಗೆ ಧಕ್ಕೆಯುಂಟುಮಾಡುವುದಿದೆ. ಇದಕ್ಕೆ ಮತದಾರರು ಆಸ್ಪದ ನೀಡಬಾರದು. ಅವರು ಆ ದಿನದ, ಆ ಕ್ಷಣದ ಲಾಭಕ್ಕೆ ಆಸೆಪಟ್ಟು ಅದಕ್ಷರನ್ನು-ಅಸಮರ್ಥರನ್ನು ಜನಪ್ರತಿನಿಧಿಯ ಗದ್ದುಗೆಯಲ್ಲಿ ಕೂರಿಸುವಂತಾಗಬಾರದು. ಜತೆಗೆ, ಯಾವುದೇ ಗಾಳಿಸುದ್ದಿಗೆ ಪ್ರೋತ್ಸಾಹ ನೀಡದೆ, ಅತಿರೇಕವಾಗಿ ಪ್ರತಿಕ್ರಿಯಿಸದೆ, ಚಿತಾವಣೆಗೆ ಬಾಗದೆ, ಕಾನೂನು-ಸುವ್ಯವಸ್ಥೆಗೆ ಭಂಗ ತರದೆ, ಮತದಾನದ ಪ್ರಕ್ರಿಯೆಯು ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳಬೇಕಿದೆ. ತನ್ಮೂಲಕ ಸಮಾಜದಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಕಾಪಾಡಿಕೊಳ್ಳಬೇಕಿದೆ. 'ಕರ್ನಾಟಕವು ಸರ್ವಜನಾಂಗದ ಶಾಂತಿಯ ತೋಟ' ಎಂಬ ಕವಿವಾಣಿಯನ್ನು ಸಾರ್ಥಕಗೊಳಿಸಬೇಕಿದೆ. ಇದು ನಾಗರಿಕರನ್ನೊಳಗೊಂಡಂತೆ ವ್ಯವಸ್ಥೆಯ ಪ್ರತಿಯೊಂದು ಅಂಗವೂ ಗಮನದಲ್ಲಿ ಇಟ್ಟುಕೊಳ್ಳಬೇಕಾದ ಸಂಗತಿ. ಹೀಗಾದಲ್ಲಿ ಪ್ರಜಾಪ್ರಭುತ್ವದ ಬೇರುಗಳು ಮತ್ತಷ್ಟು ಗಟ್ಟಿಯಾಗುವುದರಲ್ಲಿ ಸಂದೇಹವಿಲ್ಲ.

ಸೊಂಪಾದಕೀಯ

ಹೆಣಗಾಡಿದ ಹೆಣ

ನಮ್ಮ ಸಮಾಜದಲ್ಲಿ ಜಾತಿ ಅನ್ನೋದು ಕೆಲವು ಜನರಿಗೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಆದರೆ, ಪ್ರಾಣ ಬಿಟ್ಟೇವು, ಜಾತಿ ಬಿಡೆವು ಅನ್ನೋ ಕೆಲ ವರು, ಸಾವಿನ ವಿಷಯದಲ್ಲೂ ಸಣ್ಣತನ ತೋರಿರುವ ಇತ್ತೀಚಿನ ಎರಡು ಉದಾಹರಣೆಗಳನ್ನು ನೋಡಿದಾಗ ಮತ್ತೆ ಮತ್ತೆ ಜಾತಿ ಭೂತ, ಮೂಢನಂಬಿಕೆಗಳ ಭೂತ ನೆನಪಾಗೋದು ಸಹಜ. ಊರೊಂದರಲ್ಲಿ ಹೆಂಗಸೊಬ್ಬರು ಸತ್ತಾಗ, ಆಕೆಯ ಹೆಣ್ಣುಮಕ್ಕಳು ಬೇರೆ ಜಾತಿಯವರನ್ನು ಮದುವೆ ಆಗಿದ್ದಾರೆ ಅನ್ನೋ ಕಾರಣಕ್ಕೆ ಸಂಬಂಧಿಕರು ಯಾರೂ ತಿರುಗಿ ನೋಡಲಿಲ್ಲವಂತೆ. ಕೊನೆಗೆ, ಗ್ರಾಮಸ್ಥರೇ ಮುಂದೆ ನಿಂತು ಅಂತಿಮ ಕಾರ್ಯ ಮಾಡಿದ್ದಾರೆ. ಹಾಗಾಗಿ ನಿಜವಾದ ಸಂಬಂಧಿಕರು ಯಾರು ಅನ್ನೋ ಪ್ರಶ್ನೆ ಇಂಥ ಸಂದರ್ಭದಲ್ಲಿ ಸಹಜ. ಅದಕ್ಕೆ ಉತ್ತರವೂ ಸುಲಭ. ಇನ್ನೊಂದು ಅಮಾನವೀಯ ಘಟನೆಯಲ್ಲಿ ಜನ ತಮ್ಮ ಮೂಢನಂಬಿಕೆಗಳನ್ನು ಯಾವ ಲೆವೆಲ್ಲಿಗೆ ಬೇಕಾದ್ರೂ ತಗೊಂಡ್ ಹೋಗ್ತಾರೆ ಅನ್ನೋದು ಪ್ರೂವ್ ಆಗಿದೆ. ತೊನ್ನು ಸಮಸ್ಯೆ ಇದ್ದ ಹೆಂಗಸೊಬ್ಬರು ಸತ್ತು, ಅವರನ್ನು ಊರಲ್ಲಿ ಹೂಳಲಾಗಿತ್ತು. ಆದರೆ ಆ ಊರಿನ ಸುತ್ತಮುತ್ತ ಮಳೆ ಬಂದರೂ, ಆ ಊರಲ್ಲಿ ಮಾತ್ರ ಮಳೆ ಬಾರದೇ ಇದ್ದಾಗ, ಸೋ-ಕಾಲ್ಡ್ ನಾಗರಿಕ ಸಮಾಜದ ಜನ, ತೊನ್ನು ಬಂದವರನ್ನು ಸುಟ್ಟು ಹಾಕಬೇಕು, ಅವರನ್ನು ಹೂತಿದ್ದಕ್ಕೇ ಊರಿಗೆ ಬರ ಬಂದಿದೆ ಎಂದು ಹೇಳಿ ಹೂತಿದ್ದ ಶವವನ್ನು ಹೊರತೆಗೆದು ಸುಟ್ಟು ಹಾಕಿದ್ದಾರೆ. ಇಂಥ ಮೂಢನಂಬಿಕೆಗಳನ್ನು ನೋಡಿಯೇ ದೊಡ್ಡವರು 'ಹುಟ್ಟುಗುಣ ಸುಟ್ಟರೂ ಹೋಗಲ್ಲ' ಅಂತ ಹೇಳಿದ್ದರೋ ಏನೋ. ಆದರೆ ಈ ಕೇಸಿನಲ್ಲಿ ಹುಟ್ಟುವ ಮಗುವಿನ ಕಾಲ್ಗುಣ ನೋಡುವವರು ಒಂದು ಕಡೆಯಾದರೆ ಸತ್ತವರ ಕಾಲ್ಗುಣವನ್ನೂ ಬಿಡದವರು ಇನ್ನೊಂದು ಕಡೆ. ಒಟ್ಟಿನಲ್ಲಿ, ಇವರ ಹುಟ್ಟುಗುಣ, ಸತ್ತರೂ ಹೋಗಲ್ಲ, ಹೂತಿದ್ದ ಹೆಣವನ್ನು ಹೊರತೆಗೆದು ಸುಟ್ಟರೂ ಹೋಗಲ್ಲ ಅಂತ ಜನ ಮಾತಾಡಿಕೊಳ್ಳುವ ಹಾಗಾಗಿರೋದಂತೂ ನಿಜ. ಈ ಮೂಲಕ ಮೂಢನಂಬಿಕೆಯ ಜನ, ಗಾದೆಮಾತನ್ನು ಅಕ್ಷರಶಃ ನಿಜ ಮಾಡಿದ್ದಾರೆ. ಬದುಕಿರುವವರನ್ನು ಬದುಕೋಕೆ ಬಿಡದ ಈ ಮೂಢನಂಬಿಕೆಗಳ ಸರದಾರರು, ಈಗ ಸತ್ತು ಹೆಣವಾದವರನ್ನೂ ಹೆಣಗಾಡಿಸುತ್ತಿರೋದು ಮಾತ್ರ ಸತ್ಯ.

ಸಂಪಾದಕರ ಸದ್ಯಶೋಧನೆ

ಏಕಾಂಗಿಗಳಿಗೂ ಒಂದು ದಿನ

ನಿನ್ನೆ ನವೆಂಬರ್ 11. ಅದರ ವೈಶಿಷ್ಟ್ಯವೇನು ಗೊತ್ತಾ? ಅದನ್ನು 'ಏಕಾಂಗಿ ದಿನ' (Singles' Day) ಎಂದು ಕರೆಯುತ್ತಾರೆ ಮತ್ತು ಆಚರಿಸುತ್ತಾರೆ. ಅದರಲ್ಲೂ ಚೀನಾದಲ್ಲಿ ಆ ದಿನಕ್ಕೆ ವಿಶೇಷ ಮಹತ್ವ. ಅಲ್ಲಿ ಆ ದಿನವನ್ನು 'ಬ್ಯಾಚಲರ್ಸ್ ದಿನ'ವಾಗಿ ಆಚರಿಸುತ್ತಾರೆ. ಈ ದಿನದ ತಾರೀಖು 11/11 ಎಂಬುದು ನಾಲ್ಕು '1' ಅಂಕಿಗಳನ್ನು ಹೊಂದಿರುವ ಕಾರಣ, ಈ ಅಂಕಿಗಳು ಒಬ್ಬೊಬ್ಬ ವ್ಯಕ್ತಿಯ ಏಕಾಂಗಿ ಬದುಕಿನ ಸಂಕೇತ ಎಂದು ಪರಿಗಣಿಸಲಾಗಿದೆ. 1990ರಲ್ಲಿ ಚೀನಾದ ನಂಜಿಂಗ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಈ ದಿನವನ್ನು ತಮ್ಮ ಏಕಾಂಗಿತನವನ್ನು ಆಚರಿಸಲು, ತಮ್ಮ ಅಪರಿಮಿತ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಯನ್ನು ಸಂಭ್ರಮಿಸಲು ಆರಿಸಿಕೊಂಡರು. ಅದಾಗಿ 2-3 ವರ್ಷಗಳಲ್ಲಿ ಈ ಸುದ್ದಿ ಇತರ ವಿ.ವಿ.ಗಳಿಗೆ ಮತ್ತು ನಗರಗಳಿಗೆ ಹಬ್ಬಿತು. ಆ ವಿಶ್ವವಿದ್ಯಾಲಯದಲ್ಲಿ ಕಲಿತ ವಿದ್ಯಾರ್ಥಿಗಳೆಲ್ಲ ಮದುವೆಯಾಗಿ ತಮ್ಮ ಜೀವನದಲ್ಲಿ ನೆಲೆ ಕಂಡುಕೊಂಡಿದ್ದರೂ, ನಾಲ್ವರು ವಿದ್ಯಾರ್ಥಿಗಳು ಮಾತ್ರ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿರಲಿಲ್ಲ. ಎಲ್ಲರಿಗೂ ಅವರದ್ದೇ ಆದ ದಿನವಿದೆ, ನಾವು ಬ್ಯಾಚಲರುಗಳು ಯಾವ ಪಾಪ ಮಾಡಿದ್ದೇವೆ, ನಾವೂ ಒಂದು ದಿನವನ್ನು ನಮ್ಮ ದಿನವಾಗಿ ಆಚರಿಸೋಣ ಎಂದು ತೀರ್ಮಾನಿಸಿ, ಅದಕ್ಕೆ ನವೆಂಬರ್ 11 ಸೂಕ್ತ ಎಂದು ನಿರ್ಧರಿಸಿದರು. ನವೆಂಬರ್ ಕೂಡ 11ನೇ ತಿಂಗಳಾಗಿದ್ದು ಹೆಚ್ಚು ಸಮರ್ಪಕವಾಗಿ ಅವರ ಲೆಕ್ಕಾಚಾರಕ್ಕೆ ಕೂಡಿಬಂದಿತು. ಮುಂದಿನ ವರ್ಷಗಳಲ್ಲಿ ಈ ಸಂಗತಿ ಟಿವಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಪ್ರಚಾರ ಪಡೆದು ಜನಪ್ರಿಯವಾಯಿತು. ಅಂದು ಹೆಚ್ಚಾಗಿ ವಿದ್ಯಾರ್ಥಿಗಳು ತಮ್ಮ ಅವಿವಾಹಿತ ಸ್ನೇಹಿತರನ್ನು ಭೇಟಿಯಾಗಿ ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಚೀನಾದ ಬಹುತೇಕ ನಗರಗಳಲ್ಲಿ ನವೆಂಬರ್ 11ರಂದು ಅನಧಿಕೃತ ರಜಾದಿನವಾಗಿ ಘೋಷಿಸಲಾಗುತ್ತದೆ. ಈ ದಿನವು ಚೀನಾದಲ್ಲಿ ಅತ್ಯಂತ ದೊಡ್ಡ ಶಾಪಿಂಗ್ ಉತ್ಸವವಾಗಿದ್ದು, ವಿವಿಧ ಇ-ಕಾಮರ್ಸ್ ಕಂಪನಿಗಳು ಭಾರಿ ರಿಯಾಯಿತಿಗಳನ್ನು ಘೋಷಿಸುತ್ತವೆ. ಅಂದು ದಿನವಿಡೀ ಬಹುತೇಕ ಎಲ್ಲ ಅಂಗಡಿ, ಮಾಲ್‌ಗಳು ಶಾಪಿಂಗ್‌ಗಾಗಿ ತೆರೆದಿರುತ್ತವೆ. ಅಷ್ಟೇ ಅಲ್ಲ, ನವೆಂಬರ್ 11 ವಾಣಿಜ್ಯ ಉತ್ಸವದ ರೂಪಕವಾಗಿ ಈ ದಿನಗಳಲ್ಲಿ ಪ್ರಚಲಿತವಾಗಿದೆ. 2019ರಲ್ಲಿ ಒಂದೇ ದಿನ ಚೀನಾದಲ್ಲಿ 38 ಶತಕೋಟಿ ಡಾಲರ್ ವ್ಯಾಪಾರ-ವಹಿವಾಟು ಆಗಿತ್ತು ಎಂದು ಆನ್‌ಲೈನ್ ವ್ಯವಹಾರ ಸಂಸ್ಥೆ 'ಅಲಿಬಾಬಾ' ಪ್ರಕಟಿಸಿತ್ತು. ಅಮೆರಿಕದಲ್ಲಿ 'ಬ್ಲ್ಯಾಕ್ ಫ್ರೈಡೆ' ಮತ್ತು 'ಸೈಬರ್ ಮಂಡೇ' ದಿನ ಆಗುವ ಮಾರಾಟ ಮತ್ತು ವ್ಯಾಪಾರ-ವಹಿವಾಟಿಗಿಂತ 4 ಪಟ್ಟು ಹೆಚ್ಚು ವ್ಯವಹಾರ ಚೀನಾದಲ್ಲಿ 'ಸಿಂಗಲ್ಸ್ ಡೇ' ದಿನ ಆಗುತ್ತದೆ ಅಂದರೆ ಅದರ ವ್ಯಾಪ್ತಿ ಮತ್ತು ಗಾತ್ರವನ್ನು ಊಹಿಸಬಹುದು. ಈ ದಿನದಂದೇ ಅನೇಕರು ತಮ್ಮ ಮದುವೆಯನ್ನು, ಸಂಗಾತಿಯನ್ನು ಘೋಷಿಸುವುದುಂಟು. ಇದೇ ದಿನ ತಮ್ಮ ಬ್ಯಾಚಲರ್ಸ್ ದಿನ ಮುಗಿಯಿತು ಎಂಬುದನ್ನು ಹಲವರು ಪ್ರಕಟಿಸುವುದುಂಟು. 2011ರಲ್ಲಿ ಇದೇ ದಿನ ಸುಮಾರು 4,000ಕ್ಕೂ ಹೆಚ್ಚು ಮಂದಿ ಮದುವೆಯಾಗಿ ತಮ್ಮ ಏಕಾಂಗಿ ಜೀವನಕ್ಕೆ ಕೊನೆ ಹಾಡಿದ್ದರು. ನವೆಂಬರ್ 11ರ ದಿನದ ಆಚರಣೆಗಾಗಿ ಜಗತ್ತಿನ ಖ್ಯಾತನಾಮ ಸಂಗೀತಗಾರರು, ಗಾಯಕರು ಚೀನಾಕ್ಕೆ ಲಗ್ಗೆಯಿಡುವುದು ಸಾಮಾನ್ಯವಾಗಿದೆ. ದೊಡ್ಡ ದೊಡ್ಡ ಬ್ರ್ಯಾಂಡ್‌ಗಳು ಬೃಹತ್ ಪ್ರದರ್ಶನವನ್ನು ಏರ್ಪಡಿಸಿ, ಗಾಯಕರು, ನಟ-ನಟಿಯರನ್ನು ಆಹ್ವಾನಿಸುತ್ತವೆ. ಸಿಂಗಲ್ಸ್ ಡೇ ನೆಪದಲ್ಲಿ ಶಾಪಿಂಗ್ ಅನ್ನು ಪ್ರೇರೇಪಿಸುವ ಬಹುದೊಡ್ಡ ಅವಕಾಶವಾಗಿ ಈ ದಿನ ಮಾರ್ಪಾಟಾಗಿದೆ. 2011ರಲ್ಲಿ (11.11.2011) 6 ಒಂದಂಕಿ ಬಂದಿದ್ದರಿಂದ (6 ಸಲ ಒಂದಂಕಿ ಬರುವುದು 100 ವರ್ಷದಲ್ಲಿ ಒಂದು ಸಲ ಮಾತ್ರ) ಈ ದಿನವನ್ನು ವಿಶೇಷವಾಗಿ, ಅದ್ದೂರಿಯಾಗಿ ಆಚರಿಸಲಾಗಿತ್ತು. ಚೀನಾದಲ್ಲಿ 'ಏಕಾಂಗಿ ದಿನ'ದ ಯಶಸ್ಸಿನಿಂದ ಪ್ರೇರಣೆ ಪಡೆದ ಆನ್‌ಲೈನ್ ಶಾಪಿಂಗ್ ಪೋರ್ಟಲ್‌ಗಳು ಫೆಬ್ರುವರಿ 15ರಂದು 'ಏಕಾಂಗಿಗಳ ಜಾಗೃತಿ ದಿನ'ವಾಗಿಯೂ ಆಚರಿಸಿ, ಆ ದಿನದಂದು ಶಾಪಿಂಗ್ ಅನ್ನು ಉತ್ತೇಜಿಸುವ ಅವಕಾಶವಾಗಿ ಪರಿವರ್ತಿಸುವುದುಂಟು. ಬ್ರಿಟನ್‌ನಲ್ಲಿ ಮಾರ್ಚ್ 11ರಂದು 'ರಾಷ್ಟ್ರೀಯ ಏಕಾಂಗಿಗಳ ದಿನ' ಎಂದು ಆಚರಿಸುತ್ತಾರೆ.

ಪ್ರತಿಷ್ಠೆಯೇ ಈ ಉಪಸಮರದ ಮೂಲ

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com

ಕಳೆದ ಎರಡು ದಶಕದ ರಾಜ್ಯ ರಾಜಕೀಯದಲ್ಲಿ ಹತ್ತು ಹಲವು ಉಪಚುನಾವಣೆಗಳನ್ನು ರಾಜ್ಯದ ಜನ ನೋಡಿದ್ದಾರೆ. ಇವುಗಳಲ್ಲಿ ಕೆಲವು ಹಾಲಿ ಶಾಸಕ, ಸಂಸದರು ಕೊನೆಯುಸಿರು ಎಳೆದ ಕಾರಣಕ್ಕೆ ನಡೆದಿದ್ದರೆ, ಹೆಚ್ಚಿನವು ಪುಢಾರಿಗಳು ಪಕ್ಷದಿಂದ ಪಕ್ಷಕ್ಕೆ ಜಿಗಿದ ಕಾರಣಕ್ಕಾಗಿಯೇ ನಡೆದಿರುವುದು. ಆದರೆ ಈಗ ಎದುರಾಗಿರುವ ಉಪಚುನಾವಣೆ ಈ ಎರಡನ್ನೂ ಮೀರಿ, ಶಾಸಕರಾಗಿ ವರ್ಷ ಕಳೆಯುವ ಮೊದಲೇ ಸಂಸದರಾಗಿ ಆಯ್ಕೆಯಾದವರು ತಮ್ಮ ಸ್ಥಾನವನ್ನು ತೆರವು ಮಾಡಿದ ಕಾರಣಕ್ಕೆ ನಡೆಯುತ್ತಿರುವಂಥದ್ದು. ಈ ಉಪಚುನಾವಣೆಯಿಂದ ರಾಜ್ಯ ರಾಜಕೀಯದಲ್ಲಿ ಯಾವುದೇ ಬಿರುಗಾಳಿ ಬೀಸದಿದ್ದರೂ, 'ಪ್ರತಿಷ್ಠೆ'ಯ ಕಾರಣಕ್ಕೆ ಮೂರೂ ಕ್ಷೇತ್ರಗಳಲ್ಲಿ ಅದು ಮಹತ್ವವನ್ನು ಪಡೆದುಕೊಂಡಿದೆ ಎನ್ನಲಡ್ಡಿಯಿಲ್ಲ.

ಹೌದು, ಕ್ರಮವಾಗಿ ಶಿಗ್ಗಾವಿ, ಚನ್ನಪಟ್ಟಣ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳ ಶಾಸಕರಾಗಿ ಆಯ್ಕೆಯಾಗಿದ್ದ ಬಸವರಾಜ ಬೊಮ್ಮಾಯಿ, ಎಚ್.ಡಿ.ಕುಮಾರಸ್ವಾಮಿ ಹಾಗೂ ಇ.ತುಕಾರಾಂ ಅವರುಗಳು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರಿಂದ, ಈ ಕ್ಷೇತ್ರಗಳಲ್ಲಿನ ತಂತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಅದೇನೇ ಇರಲಿ, ಈ ಉಪಚುನಾವಣೆಯ ಬಹಿರಂಗ ಪ್ರಚಾರವು ಸೋಮವಾರಕ್ಕೆ ಅಂತ್ಯವಾಗಿದ್ದು, ಬುಧವಾರ ಬೆಳಗ್ಗೆ ಮತದಾನವು ಆರಂಭವಾಗಲಿದೆ. ಸಾಮಾನ್ಯವಾಗಿ ನಡೆಯುವ ಉಪಚುನಾವಣೆಗೆ ಹೋಲಿಸಿ ನೋಡಿದಾಗ, ಈ ಬಾರಿಯದನ್ನು ಪಕ್ಷಗಳು 'ಗಂಭೀರ'ವಾಗಿ ಪರಿಗಣಿಸಿಲ್ಲ. ಆದರೆ ಅಭ್ಯರ್ಥಿಗಳು ಮತ್ತು ಅವರ ಹಿಂದಿರುವ 'ಶಕ್ತಿ'ಗಳಿಗೆ ಈ ಉಪಸಮರ ನಿರ್ಣಾಯಕವೆನಿಸಿದೆ, ಪ್ರತಿಷ್ಠೆಯ ಪ್ರದರ್ಶನದ ಸಂದರ್ಭವಾಗಿದೆ ಎನ್ನಲಡ್ಡಿಯಿಲ್ಲ.

2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ 135 ಕ್ಷೇತ್ರಗಳಲ್ಲಿ ಭರ್ಜರಿ ವಿಜಯ ಸಾಧಿಸುವ ಮೂಲಕ ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಗದ್ದುಗೆಯೇರಿರುವುದು ಈಗಾಗಲೇ ಜಗಜ್ಜಾಹೀರು. ಪಕ್ಷೇತರರ ಬೆಂಬಲವೂ ಸಿಕ್ಕಿರುವುದರಿಂದ ಶಾಸಕರ ಸಂಖ್ಯಾಬಲ 136ಕ್ಕೇರಿದೆ. ಈಗ ಉಪಚುನಾವಣೆ ನಡೆಯುತ್ತಿರುವ ಮೂರು ಕ್ಷೇತ್ರಗಳ ಪೈಕಿ ಎರಡರಲ್ಲಿ ಹಿಂದೆ ಬಿಜೆಪಿ-ಜೆಡಿಎಸ್ ಅಭ್ಯರ್ಥಿಗಳೇ ವಿಜೇತರಾಗಿದ್ದವರು. ಆದ್ದರಿಂದ, ಈ ಉಪಚುನಾವಣೆಯಲ್ಲಿ ಮೂರರ ಪೈಕಿ ಒಂದರಲ್ಲಿ ಗೆಲುವು ಸಾಧಿಸಿದರೆ, ಕಾಂಗ್ರೆಸ್‌ಗೆ ಈ ಹಿಂದಿನ ಸಂಖ್ಯಾಬಲವೇ ಸಿಗುತ್ತದೆ. ಒಂದು ವೇಳೆ ಮೂರಕ್ಕೆ ಮೂರನ್ನೂ ಗೆದ್ದರೆ, 'ಬೋನಸ್' ರೀತಿಯಲ್ಲಿ ಹೆಚ್ಚುವರಿ ಶಾಸಕರ ಸಂಖ್ಯಾಬಲ ಕಾಂಗ್ರೆಸ್‌ಗೆ ಲಭಿಸಲಿದೆ. ಇನ್ನೊಂದೆಡೆ, ಬಿಜೆಪಿ-ಜೆಡಿಎಸ್ ಮೈತ್ರಿಬಣ ಎರಡನ್ನೂ ಸೇರಿಸಿದರೂ ನೂರರ ಗಡಿ ದಾಟುವುದಿಲ್ಲ. ಹೀಗಿರುವಾಗ ಮೂರಕ್ಕೆ ಮೂರು ಕ್ಷೇತ್ರವನ್ನು ಗೆದ್ದರೂ ಸರಕಾರದ ಹಂತದಲ್ಲಿ ಯಾವುದೇ ಬದಲಾವಣೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ, ಈ ಉಪಚುನಾವಣೆಯ ಫಲಿತಾಂಶದಿಂದ ಸರಕಾರ ಬೀಳುತ್ತದೆ ಅಥವಾ ಫಲಿತಾಂಶ ನೋಡಿಕೊಂಡು ಅದನ್ನು ಅಸ್ಥಿರಗೊಳಿಸಬಹುದು ಎನ್ನುವ ಯಾವುದೇ ಲೆಕ್ಕಾಚಾರಗಳು ಪ್ರತಿಪಕ್ಷಗಳ ತೆಕ್ಕೆಯಲ್ಲಿಲ್ಲ. ಒಂದು ವೇಳೆ ಸೋಲನುಭವಿಸಿದರೂ ಪಕ್ಷವಾಗಿ ಕಾಂಗ್ರೆಸ್, ಬಿಜೆಪಿ ಅಥವಾ ಜೆಡಿಎಸ್‌ಗೆ ಯಾವುದೇ ಸಮಸ್ಯೆಯಿಲ್ಲ.

ಇಷ್ಟಾಗಿಯೂ ಈ ಉಪಚುನಾವಣೆ ಭಾರಿ ರಂಗು ಪಡೆದಿದೆ. ಇದು ರಾಜ್ಯಮಟ್ಟದಲ್ಲಿ ಹೆಚ್ಚಾಗಿ ಕಾಣದಿದ್ದರೂ, ಸ್ಥಳೀಯವಾಗಿ ಆಯಾ ಕ್ಷೇತ್ರಕ್ಕೆ ಸೀಮಿತವಾಗಿ ಇತರೆ ಚುನಾವಣೆಗಳಿಗಿಂತ ಹೆಚ್ಚಾಗಿ, ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ. ಇದಕ್ಕೆ ಕಾರಣ ಸರಕಾರ ಅಥವಾ ಪಕ್ಷಕ್ಕಾಗುವ ಲಾಭ-ನಷ್ಟ ಎನ್ನುವುದಕ್ಕಿಂತ 'ವೈಯಕ್ತಿಕ' ವರ್ಚಸ್ಸಿನ ಮೇಲಾಗುವ ಪರಿಣಾಮ ಎನ್ನುವುದನ್ನು ಮೂರೂ ಪಕ್ಷದ ನಾಯಕರು ಒಪ್ಪಿಕೊಳ್ಳಬೇಕಾಗಿದೆ.

ಹಾಗೆ ನೋಡಿದರೆ, ಕರ್ನಾಟಕದಲ್ಲಿ ನಡೆದಿರುವ ಬಹುತೇಕ ಉಪಚುನಾವಣೆಗಳು 'ನೆಕ್-ಟು-ನೆಕ್' ಫೈಟ್‌ಗೆ ಸಾಕ್ಷಿಯಾಗಿರುವ ಇತಿಹಾಸವಿದೆ. 'ಆಪರೇಷನ್ ಕಮಲ'ದ ಮೂಲಕ ಸರಕಾರ ರಚಿಸಿ, ಬಹುಮತಕ್ಕೆ ಬೇಕಿರುವ ಸಂಖ್ಯಾಬಲವನ್ನು ಪಡೆಯಲು ಇವು ನಡೆದಿರುವುದೇ ಹೆಚ್ಚು. ಉದಾಹರಣೆಗೆ 2013ರಲ್ಲಿ ಯಡಿಯೂರಪ್ಪ ಅವರು 7 ಶಾಸಕರಿಂದ ರಾಜೀನಾಮೆ ಕೊಡಿಸಿ ಸರಕಾರವನ್ನು ರಚಿಸಿದ್ದರು. ಬಳಿಕ ನಡೆದ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿ, ಬಿಜೆಪಿಗೆ ಬೇಕಿದ್ದ 'ಅಗತ್ಯ' ಸಂಖ್ಯಾಬಲವನ್ನು ಪಡೆಯಲಾಯಿತು. ಇದಾದ ಬಳಿಕ ನಡೆದ ಬಹುಚರ್ಚಿತ ಉಪಸಮರವೆಂದರೆ 2014ರಲ್ಲಿ ನಡೆದ ಹಣಾಹಣಿ. ಆಗಲೂ ಕಾಂಗ್ರೆಸ್-ಜೆಡಿಎಸ್‌ಗೆ ಸೇರಿದ 17 ಶಾಸಕರ ರಾಜೀನಾಮೆ ಕೊಡಿಸಿ, ಬಳಿಕ ಉಪಚುನಾವಣೆಯಲ್ಲಿ ಅವರು ಸ್ಪರ್ಧಿಸುವಂತೆ ಬಿಜೆಪಿ ನಾಯಕರು ನೋಡಿಕೊಂಡಿದ್ದರು. ಆ ಎರಡು ಉಪಚುನಾವಣೆಯಲ್ಲಿ, ಚುನಾವಣೆ ನಡೆದ ಶೇ.75ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಸಾಧಿಸದಿದ್ದರೆ ಸರಕಾರವೇ ಬೀಳುವ ಸಾಧ್ಯತೆಯಿತ್ತು. ಈ ಒತ್ತಡದಲ್ಲಿಯೇ ಅಂದಿನ ಆಡಳಿತ ಪಕ್ಷ ಬಿಜೆಪಿ ಚುನಾವಣೆಯನ್ನು ನಡೆಸಿ, ಇಡೀ ಸಂಪುಟವನ್ನೇ ಚುನಾವಣಾ ಕ್ಷೇತ್ರಗಳಿಗೆ ಉಸ್ತುವಾರಿಯನ್ನಾಗಿ ನೇಮಿಸಿತ್ತು. ಆದರೆ ಈ ಬಾರಿಯ ಉಪಚುನಾವಣೆಯಲ್ಲಿ ಆಡಳಿತಾರೂಢ ಪಕ್ಷಕ್ಕೆ ಈ ರೀತಿಯ ಒತ್ತಡವೇನೂ ಇಲ್ಲ ಎಂಬುದು ಸ್ಪಷ್ಟ.

ಇಂಥ ಒತ್ತಡವಿಲ್ಲದಿದ್ದರೂ, ಈ ಮೊದಲೇ ಹೇಳಿದಂತೆ, ಮೂರೂ ಕ್ಷೇತ್ರಗಳು ಒಂದೊಂದು ಕಾರಣಕ್ಕೆ ಪ್ರತಿಷ್ಠೆಯ ಅಖಾಡಗಳಾಗಿ ಪರಿಣಮಿಸಿಬಿಟ್ಟಿವೆ. ಈ ಕಾರಣಕ್ಕಾಗಿಯೇ ಸಿದ್ದರಾಮಯ್ಯರ ಒಂದಿಡೀ ಸಚಿವ ಸಂಪುಟವನ್ನು ಈ ಮೂರೂ ಕ್ಷೇತ್ರಗಳಿಗೆ ಹಂಚಿಕೆ ಮಾಡಿ ಉಸ್ತುವಾರಿಗಳನ್ನಾಗಿ ನೇಮಿಸಲಾಗಿದೆ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ನಿತ್ಯ ಒಂದೊಂದು ಕ್ಷೇತ್ರಕ್ಕೆ ಭೇಟಿ ನೀಡಿ, ತಮ್ಮ ಅಭ್ಯರ್ಥಿಗಳ ಪರವಾಗಿ ಭರ್ಜರಿ ಪ್ರಚಾರವನ್ನು ನಡೆಸುತ್ತಿದ್ದಾರೆ. ಬಿಜೆಪಿಯ ವಿಷಯದಲ್ಲೂ ಈ ಪರಿಸ್ಥಿತಿ ಭಿನ್ನವಾಗಿಲ್ಲ. ಲೋಕಸಭಾ ಚುನಾವಣೆಗಿಂತ ಹೆಚ್ಚಿನ ಪ್ರಮಾಣದ ಪ್ರಚಾರಕಾರ್ಯದಲ್ಲಿ ಬಿಜೆಪಿ ವತಿಯಿಂದ ಬಿ.ಎಸ್.ಯಡಿಯೂರಪ್ಪ ಭಾಗವಹಿಸಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಇನ್ನು ದಶಕದ ಬಳಿಕ ಒಂದೇ ಕ್ಷೇತ್ರದಲ್ಲಿ ಒಂದು ವಾರದವರೆಗೆ ಕೂತು ದೇವೇಗೌಡರು ತಮ್ಮ ಮೊಮ್ಮಗನ ಗೆಲುವಿಗೆ ರಣತಂತ್ರ ರೂಪಿಸಿದ್ದರೆ, ನಾಮಪತ್ರ ಸಲ್ಲಿಕೆಯಾದ ದಿನದಿಂದಲೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಚನ್ನಪಟ್ಟಣವನ್ನು ಬಿಟ್ಟು ಹೊರಬಂದಿಲ್ಲ. ಅದೇ ರೀತಿಯಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಿಗ್ಗಾವಿಯನ್ನು ಬಿಟ್ಟು ಹೊರಬಂದಿಲ್ಲ.

ಸರಕಾರದ ಮೇಲೆ ಅಥವಾ ರಾಜ್ಯ ರಾಜಕೀಯದ ಮೇಲೆ ಯಾವುದೇ ಗಂಭೀರ ಪರಿಣಾಮ ಬೀರದಿದ್ದರೂ, ನಾಯಕರು ಈ ಉಪಚುನಾವಣೆಯನ್ನು ಈ ಮಟ್ಟಿಗೆ ಗಂಭೀರವಾಗಿ ಪರಿಗಣಿಸಿರುವುದು ಏಕೆ ಎಂಬ ಪ್ರಶ್ನೆ ಅಥವಾ ಸಹಜ ಕುತೂಹಲ ಬಹುತೇಕರಲ್ಲಿ ಮನೆಮಾಡಿದೆ. ಅದಕ್ಕೆ ಉತ್ತರ ಸರಳ- ಈ ಮೂರೂ ಕ್ಷೇತ್ರಗಳಲ್ಲಿ ಒಂದೊಂದು ಪಕ್ಷದಿಂದ 'ಕುಟುಂಬ' ಸದಸ್ಯರೇ ನಿಂತಿದ್ದಾರೆ. ಅಂದರೆ, ಸಂಡೂರಿನಿಂದ ತುಕಾರಾಂ ಪತ್ನಿ ಅನ್ನಪೂರ್ಣ, ಶಿಗ್ಗಾವಿಯಿಂದ ಬಸವರಾಜ ಬೊಮ್ಮಾಯಿ ಪುತ್ರ ಭರತ್ ಬೊಮ್ಮಾಯಿ ಹಾಗೂ ಚನ್ನಪಟ್ಟಣದಿಂದ ದೇವೇಗೌಡರ ಮೊಮ್ಮಗ, ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಿದ್ದಾರೆ. ನಿಖಿಲ್‌ರನ್ನು ಹೊರತುಪಡಿಸಿದ ಇನ್ನಿಬ್ಬರೂ ಚುನಾವಣಾ ರಾಜಕೀಯಕ್ಕೆ ಹೊಸಬರು. ಆದ್ದರಿಂದ ಅವರ ಪರವಾಗಿ ಕ್ರಮವಾಗಿ ಅವರ ಪತಿ ಮತ್ತು ತಂದೆ ಈ ಉಪಚುನಾವಣೆಯಲ್ಲಿ ಕಸರತ್ತು ಮಾಡಬೇಕಾಗಿ ಬಂದಿದೆ. ಕಳೆದ ಎರಡು ಚುನಾವಣೆಗಳಲ್ಲಿ ಭಾರಿ ಮುಖಭಂಗ ಅನುಭವಿಸಿ ಈಗ ಮೂರನೇ ಪ್ರಯತ್ನಕ್ಕೆ ಇಳಿದಿದ್ದಾರೆ ನಿಖಿಲ್, ಹೀಗಾಗಿ ಈ ಉಪಸಮರ ಅವರ ಪಾಲಿಗೆ 'ಮಾಡು ಇಲ್ಲವೇ ಮಡಿ' ಎನ್ನುವ ಪರಿಸ್ಥಿತಿಯನ್ನು ನಿರ್ಮಿಸಿದೆ.

ಈ ಮೂರು ಕ್ಷೇತ್ರಗಳ ಪೈಕಿ ಶಿಗ್ಗಾವಿಯಲ್ಲಿ ಈಗಾಗಲೇ 'ಹೊಂದಾಣಿಕೆ'ಯ ವಾಸನೆ ಶುರುವಾಗಿದೆ. ಮಿಕ್ಕಂತೆ, ಸಂಡೂರಿನಲ್ಲಿ ಜನಾರ್ದನ ರೆಡ್ಡಿ ಕಾರಣಕ್ಕೆ ಬಿಜೆಪಿ ಕಾರ್ಯಕರ್ತರು ಮತ್ತು ತುಕಾರಾಂ ಕಾರಣಕ್ಕೆ ಕಾಂಗ್ರೆಸ್‌ನ ಸ್ಥಳೀಯ ನಾಯಕರು ತಟಸ್ಥರಾಗಿದ್ದಾರೆ. ಆದರೆ ತೀವ್ರ ಪೈಪೋಟಿ ಹುಟ್ಟುಹಾಕಿ ಕುತೂಹಲ ಕೆರಳಿಸಿರುವ ಕ್ಷೇತ್ರವೆಂದರೆ ಅದು ಚನ್ನಪಟ್ಟಣ. ಈ ಕ್ಷೇತ್ರದಲ್ಲಿ ಒಂದೆಡೆ ದೇವೇಗೌಡರ ಕುಟುಂಬದ ಮೂರನೇ ಪೀಳಿಗೆಯಾತ ಚುನಾವಣಾ ರಾಜಕೀಯದ ಚಕ್ರವ್ಯೂಹವನ್ನು ಭೇದಿಸಲು ಹೋರಾಡುತ್ತಿದ್ದರೆ, ಇನ್ನೊಂದೆಡೆ ಮೂರು ದಶಕಗಳ ಕಾಲ ದೇವೇಗೌಡರ ವಿರುದ್ಧ ಹೋರಾಡಿಕೊಂಡು ಬಂದಿರುವ ಸಿ.ಪಿ.ಯೋಗೇಶ್ವರ್ ಅವರು ಟಿಕೆಟ್ ಸಿಗಲಿಲ್ಲವೆಂಬ ಕಾರಣಕ್ಕೆ ಬಿಜೆಪಿಯನ್ನು ತೊರೆದು ಕಾಂಗ್ರೆಸ್‌ನ ಮಡಿಲು ಸೇರಿ ಅಲ್ಲಿಂದಲೇ ಸ್ಪರ್ಧಿಸಿದ್ದಾರೆ. ಈ ಇಬ್ಬರಲ್ಲಿ ಯಾರೇ ಸೋತರೂ, ಅವರ ರಾಜಕೀಯ ಅಸ್ತಿತ್ವ ಬಹುತೇಕ ಅಂತ್ಯವಾಗಲಿದೆ ಎಂಬುದೇ ಸದ್ಯಕ್ಕೆ ರಾಜಕೀಯದ ಪಡಸಾಲೆಯಲ್ಲಿ ಹರಿದಾಡುತ್ತಿರುವ ಮಾತಾಗಿದೆ. ಈ ಕಾರಣಕ್ಕಾಗಿಯೇ ಈ ಕ್ಷೇತ್ರದಲ್ಲಿ ಜೆಡಿಎಸ್ ನಾಯಕರು ಠಿಕಾಣಿ ಹೂಡಿದ್ದರೆ, ಮತ್ತೊಂದೆಡೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕುಮಾರಸ್ವಾಮಿಯವರ ಭದ್ರಕೋಟೆಯನ್ನು ಭೇದಿಸಬೇಕೆಂಬ ರಣಹುಮ್ಮಸ್ಸಿನಲ್ಲಿ ಕಳೆದ ಮೂರು ತಿಂಗಳಿಂದ ಚನ್ನಪಟ್ಟಣದಲ್ಲಿಯೇ ಓಡಾಡಿಕೊಂಡಿದ್ದಾರೆ!

ಮತ್ತೊಂದು ವಿಶೇಷವೆಂದರೆ, ಸಾಮಾನ್ಯ ಉಪಚುನಾವಣೆಗಳ ರೀತಿಯಲ್ಲಿಯೇ ಈ ಬಾರಿಯೂ ಎರಡೂ ಕಡೆಯಿಂದ ಸ್ಥಳೀಯ ನಾಯಕರೇ ಪ್ರಚಾರಕಾರ್ಯವನ್ನು 'ನಿಭಾಯಿಸಿದ್ದಾರೆ'. ಈ ಹಿಂದೆಲ್ಲಾ ಕನಿಷ್ಠಪಕ್ಷ ಆಯಾ ಪಕ್ಷದ ರಾಜ್ಯ ಉಸ್ತುವಾರಿಗಳಾದರೂ ರಾಜ್ಯಕ್ಕೆ ಬಂದು ಹೋಗುತ್ತಿದ್ದರು; ಆದರೆ ಈ ಬಾರಿ ಅವರೂ ರಾಜ್ಯದತ್ತ ತಲೆಹಾಕಲಿಲ್ಲ. ಈ ರೀತಿಯ ನಡೆಗೆ ಕಾರಣ, ಮೊದಲೇ ಹೇಳಿದಂತೆ, ಉಪಚುನಾವಣೆಯಲ್ಲಿ ಸಾಮಾನ್ಯವಾಗಿ ಕಂಡುಬರುವ, ಸರಕಾರವನ್ನು ಉಳಿಸುವ ಅಥವಾ ಉರುಳಿಸುವ 'ರಾಜಕೀಯ ಗಣಿತ' ಈ ಬಾರಿ ಕಾಣಬರುತ್ತಿಲ್ಲ. ಆದ್ದರಿಂದ ಇಲ್ಲಿಗೆ ಕಳಿಸುವ ಬದಲು ಇತರೆ ರಾಜ್ಯಗಳಲ್ಲಿ ರಾಷ್ಟ್ರೀಯ ನಾಯಕರ ಶ್ರಮದಾನವನ್ನು ಬಳಸಿಕೊಳ್ಳುವ ಲೆಕ್ಕಾಚಾರದಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳಿವೆ.

ಹಾಗೆ ನೋಡಿದರೆ, ಉಪಸಮರದ ಕಾವಿಗಿಂತ ಈ ಬಾರಿ ಕರ್ನಾಟಕದಲ್ಲಿ ಸದ್ದು ಮಾಡಿದ್ದು ವಕ್ಫ್ ಆಸ್ತಿ ವಿವಾದ. ಈ ವಿವಾದದಿಂದ ಪ್ರತಿಪಕ್ಷ ಬಿಜೆಪಿ-ಜೆಡಿಎಸ್‌ಗೆ ಲಾಭವಾಗುವುದೋ ಅಥವಾ ಮುಸ್ಲಿಂ ಮತಗಳು ಕ್ರೋಡೀಕರಣಗೊಳ್ಳುವ ಮೂಲಕ ಕಾಂಗ್ರೆಸ್‌ಗೆ ಲಾಭವಾಗುವುದೋ ಎಂಬುದು ಬೇರೆ ಮಾತು. ಇದಾದ ಬಳಿಕ ಬಹುದೊಡ್ಡ ಮಟ್ಟದಲ್ಲಿ ಸುದ್ದಿಮಾಡಿದ್ದು ಪ್ರಧಾನಿ ನರೇಂದ್ರ ಮೋದಿ ಅವರು ಮಹಾರಾಷ್ಟ್ರದಲ್ಲಿ ಪ್ರಸ್ತಾಪಿಸಿದ '700 ಕೋಟಿ ರು.ಮದ್ಯದ ಹಣ'. ಈ ಎರಡು ವಿಷಯಗಳೇ ಇಡೀ ಚುನಾವಣಾ ಪ್ರಚಾರದ ಪರ-ವಿರೋಧ ಚರ್ಚೆಗೆ ನಾಂದಿ ಹಾಡಿದ್ದವು. ಇದೀಗ ಬಹಿರಂಗ ಪ್ರಚಾರಕ್ಕೆ ತೆರೆಬಿದ್ದಿದೆ. ಅಭ್ಯರ್ಥಿಗಳು ಅಥವಾ ಕುಟುಂಬದ ಪ್ರತಿಷ್ಠೆಯಲ್ಲಿ ನಾಳೆ ಮತದಾನ ನಡೆಯಲಿದೆ. ಈ ಫಲಿತಾಂಶದಿಂದ ಸರಕಾರದಲ್ಲಿ ಏರುಪೇರಾಗುವುದಿಲ್ಲ ಎನ್ನುವುದು ಸತ್ಯವಾದರೂ, ಕೆಲ ಅಭ್ಯರ್ಥಿಗಳ ಸುದೀರ್ಘ ರಾಜಕೀಯ 'ಭವಿಷ್ಯ'ದ ಸ್ಪಷ್ಟದರ್ಶನ ಅನಾವರಣಗೊಳ್ಳಲಿದೆ ಎಂದರೆ ತಪ್ಪಾಗುವುದಿಲ್ಲ.

ಸಂಶೋಧಕನ ಅಹಂನಿಂದ ಸಂಶೋಧನೆಗೆ ಪೆಟ್ಟು

ಕಲಬುರ್ಗಿಯವರ ಸಂಶೋಧನೆಯು ದ್ವಂದ್ವ, ಗೊಂದಲಗಳ ಕಲಸುಮೇಲೋಗರ! ತಟಸ್ಥ ನಿಲುವಿರದ ಸಂಶೋಧಕನಲ್ಲಿ ಅಹಂ ತುಂಬಿಕೊಂಡಾಗ ಸಂಶೋಧನೆಗಳು ಹೇಗೆ ತಾಳ ತಪ್ಪಿ ಅವರ ಹಿಂದಿನ ಪುಟವು ಮುಂದಿನ ಪುಟದಲ್ಲೇ ತಪ್ಪೆಂದು ರದ್ದಾಗುತ್ತದೆ ಎನ್ನುವುದಕ್ಕೆ ಇವರ ಕೃತಿಗಳು ಸಾಕ್ಷಿ.

ಬಸವ ಮಂಟಪ
ರವಿ ಹಂಜ್
vveditoped@gmail.com

ಭಾಗ 2

ಪ್ರೊ.ಕಲಬುರ್ಗಿಯವರ ಇನ್ನೊಂದು ಅಧ್ಯಾಯ, 'ಜಗದಾಚಾರ್ಯರದು ಜಾತಿಭೇದ ಸಿದ್ಧಾಂತ ಪಂಚಾಚಾರ್ಯರ ನಿಜಸ್ವರೂಪ'ದಲ್ಲಿ ''ಕುಲವನರಸುವರೆ ಶರಣರಲ್ಲಿ, ಜಾತಿ ಸಂಕರವಾದ ಬಳಿಕ?' ಎಂಬ ಶರಣ ಸಿದ್ಧಾಂತಕ್ಕೆ ವಿರುದ್ಧವಾದುದಾಗಿದೆ, ಜಗದಾಚಾರ್ಯ ಸಿದ್ಧಾಂತ. ಇವರು ಆಗಮಿಕ ಪರಂಪರೆಯವರಾಗಿದ್ದರೂ ಬ್ರಾಹ್ಮಣರೇ ಆಗಿರುವುದರಿಂದ ಇವರಲ್ಲಿ ವರ್ಣಭೇದ ವ್ಯವಸ್ಥೆ ಸಹಜವಾಗಿದೆ. ಈ ಬ್ರಾಹ್ಮಣರ ಜಾತಿಭೇದ ಆಚರಣೆಗೆ ಲಿಂಗಸೂಗೂರು ತಾಲೂಕಿನ ಕರಡಿಕಲ್ಲು ಗ್ರಾಮದ 2 ಶಾಸನಗಳು (ರಾಯಚೂರು ಜಿಲ್ಲೆ ಶಾಸನಗಳು- ಲಿಂಗಸೂಗೂರು 4 ಮತ್ತು 6) ಸಾಕ್ಷಿಯಾಗಿವೆ. ಇವು 11ನೇ ಶತಮಾನದ ಉತ್ತರಾರ್ಧದ ಅಂದರೆ ಬಸವಣ್ಣನಿಗೆ ಕೆಲವೇ ವರ್ಷ ಪೂರ್ವದ ಶಾಸನಗಳಾಗಿವೆ. ಇಲ್ಲಿಯ ತತ್ಪುರುಷಶಿವ, ಸೂಕ್ಷ್ಮಶಿವ, ಮೈಮಶಿವ ಹೆಸರುಗಳ ಮುಂದೆ 'ಶಿವ ಅಂದರೆ ಶಿವಾಚಾರ್ಯ ಪ್ರತ್ಯಯವಿರುವುದರಿಂದ ಇವರು ಇಂದಿನ ಪಂಚಾಚಾರ್ಯ ಪರಂಪರೆಯ ಪೂರ್ವಜರೆಂದು ಸ್ಪಷ್ಟವಾಗುತ್ತದೆ. ಈ ಶಾಸನದಲ್ಲಿ ಸೂಕ್ಷ್ಮಶಿವ (ಸೂಕ್ಷ್ಮಶಿವಾಚಾರ್ಯ)ನು 'ಅಂತ್ಯಜಾತಿ ಯಾರಾದೊಡವಂಗಡಿ ಬೀದಿಯೊಳಗೆ ಮದುವೆಯಲು ಬಂಡಿಯನೇರಿ ಬರಸಲ್ಲದು. ಬಂದನಪ್ಪಡೆ ಪನ್ನೆರಡು ಗದ್ಯಾಣ ಪೊನ್ನಂ ದಂಡವಂ ತಿ(ತೆ)ರುವರಂತಪ್ಪುದಕೆ ಶ್ರೀ ಬಲ್ಲವರಸರಾಣೆ, ಶ್ರೀ ಮದ್ರಾಜಗುರುದೇವರಾಣೆ' ಎಂದು ಆಜ್ಞೆ ಹೊರಡಿಸಿರುವನು. ಅಸ್ಪೃಶ್ಯರು ಮದುವೆ ಮೆರವಣಿಗೆ ಬಂಡಿಯನ್ನು ಗ್ರಾಮದ ಅಂಗಡಿ ಬೀದಿಯಲ್ಲಿ ತರಕೂಡದು. ತಂದರೆ 12 ಗದ್ಯಾಣ ದಂಡ ನೀಡಬೇಕೆಂಬುದು ಇಲ್ಲಿಯ ಅಭಿಪ್ರಾಯ. ಇದನ್ನು ನೋಡಿದರೆ ಈ ಶಿವಾಚಾರ್ಯರದು (ಇದರ ಮುಂದುವರಿದ ರೂಪವಾಗಿರುವ ಇಂದಿನ ಪಂಚಾಚಾರ್ಯರದು) ಅಂದರೆ ಇಂದಿನ ವೀರಶೈವ ಜಂಗಮರದು ಮೂಲತಃ ಜಾತಿಭೇದ ಪಾಲಿಸುವ ಬ್ರಾಹ್ಮಣಧರ್ಮವೆಂದು ಸ್ಪಷ್ಟವಾಗುತ್ತದೆ'' ಎನ್ನುತ್ತಾರೆ. ಇಲ್ಲಿ ಪಂಚಾಚಾರ್ಯರನ್ನು ವರ್ಣಭೇದಿಗರು ಎಂದು ಆರೋಪಿಸುವ ಭರದಲ್ಲಿ ಬಸವಪೂರ್ವದಲ್ಲಿ ಇವರಿರಲೇ ಇಲ್ಲ ಎಂಬ ತಮ್ಮ ವಾದವನ್ನು ತಾವೇ ''ಬಸವಪೂರ್ವದ ಲಿಂಗಸೂಗೂರು ತಾಲೂಕಿನ ಕರಡಿಕಲ್ಲು ಗ್ರಾಮದ ಎರಡು ಶಾಸನ''ಗಳು ಪಂಚಾಚಾರ್ಯರು ಬಸವಪೂರ್ವದಲ್ಲಿ ಇದ್ದರೆಂದು ಆಧಾರ ಕೊಟ್ಟು ಸುಳ್ಳು ಮಾಡಿಬಿಟ್ಟಿದ್ದಾರೆ.

ಅಂದ ಹಾಗೆ ಇವರು ಉಲ್ಲೇಖಿಸಿದ ''ಕುಲನರಸುವರೆ ಶರಣರಲ್ಲಿ ಜಾತಿಸಂಕರವಾದ ಬಳಿಕ'' ವಚನದ ಸಿದ್ಧಾಂತ ಶಿಖಾಮಣಿಯ ಮೂಲಶ್ಲೋಕ ಹೀಗಿದೆ, ''ಬ್ರಾಹ್ಮಣಃ ಕ್ಷತ್ರಿಯೋ ವಾಪಿ ವೈಶ್ಯೋ ವಾ ಶೂದ್ರ ಏವ ವಾ ಅಂತ್ಯಜೋ ವಾ ಶಿವಭಕ್ತಃ ಶಿವವನ್ಮಾನ್ಯ ಏವ ಸಃ। ಶಿವಭಕ್ತಿ ಸಮಾವೇಶೇ ಕ್ವಜಾತಿ ಪರಿಕಲ್ಪನಾ ಇಂಧನೇಷ್ವಗ್ನಿ ದಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ।।''

ವಚನದ ಪೂರ್ಣಪಾಠ: ''ಆವ ಕುಲದವನಾದರೇನು? ಶಿವಲಿಂಗವಿದ್ದವನೆ ಕುಲಜನು; ಕುಲನರಸುವರೆ ಶರಣರಲ್ಲಿ ಜಾತಿಸಂಕರವಾದ ಬಳಿಕ? ಶಿವಜಾತ ಕುಲೇ ಧರ್ಮಃ ಪೂರ್ವಜನ್ಮ ವಿವರ್ಜಿತಃ ಉಮಾ ಮಾತಾ ಪಿತಾ ರುದ್ರೋ ಈಶ್ವರಃ ಕುಲಮೇವಚ ಎಂದುದಾಗಿ ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ ಕೂಡಲಸಂಗಮದೇವಾ, ನಂಬುವೆ ನಿಮ್ಮ ಶರಣರನ್ನು''. ಚಿದಾನಂದಮೂರ್ತಿ ಅಯ್ಯ, ಆರ್.ಸಿ. ಹಿರೇಮಠ ಜಂಗಮ, ಶಂಬಾ ಜೋಶಿ ಬ್ರಾಹ್ಮಣ ಹಾಗಾಗಿ ಅವರ ಸಂಶೋಧನೆ ಹೀಗೆ ಎಂದು 'ಕುಲವನರಸುವ' ಇವರ ಪರಿಯಂತೂ ಇವರ ಶಿಷ್ಯಗಣದ ಮೇಲ್ಪಂಕ್ತಿಯಾಗಿದೆ ಎಂಬುದು ಮತ್ತೊಂದು ತೌಲನಿಕ ಅಧ್ಯಯನದ ವಿಷಯ ಎಂಬಲ್ಲಿಗೆ ಲಿಂಗಿಜಂಗಮ ಲಿಂಗಾಯತದಿಂದ ಹೊರಗು ಎನ್ನುವ ವಾದ ರದ್ದಾಗುತ್ತದೆ.

• • •

ಅಧ್ಯಾಯ 'ಜಗದ್ಗುರು-ಜಗದಾಚಾರ್ಯ'ದಲ್ಲಿ ''ನಮ್ಮಲ್ಲಿ 'ಗುರು' ಮತ್ತು 'ಆಚಾರ್ಯ'ವೆಂಬ ಎರಡು ವಿಭಿನ್ನ ತಾತ್ವಿಕ ಪರಂಪರೆಗಳು ಬೆಳೆದುಬಂದಿವೆ. ಇವುಗಳಲ್ಲಿ ಒಂದು 'ಅನುಭಾವ'ದ ನಿರ್ದೇಶನದಲ್ಲಿ, ಇನ್ನೊಂದು 'ಶಾಸ್ತ್ರ'ದ ನಿಯಂತ್ರಣದಲ್ಲಿ ಮುನ್ನಡೆಯುತ್ತವೆ. ಹೀಗಿದ್ದೂ ಇಂದು ಈ ಎರಡೂ ಪರಂಪರೆಗಳಿಗೆ 'ಜಗದ್ಗುರು' ಎಂಬ ಒಂದೇ ಪದವನ್ನು ಬಳಸುತ್ತಲಿರುವುದು ಎಷ್ಟರ ಮಟ್ಟಿಗೆ ಸರಿ? ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಗುರು ಪರಂಪರೆಯವರ 'ಗುರು' ಶಬ್ದವನ್ನು ಆಚಾರ್ಯ ಪರಂಪರೆಯವರು ಸೆಳೆದುಕೊಂಡು, ಅವರಿಗೆ 'ವಿರಕ್ತ'ವೆಂಬ ಹೊಸ ಶಬ್ದವನ್ನು ಪ್ರಚುರಗೊಳಿಸಿದ್ದಾರೆ. ಇದರಿಂದಾಗಿ, ಆಚಾರ್ಯ ಪರಂಪರೆಯವರಿಗೆ ಇಂದು ಬಳಸಲಾಗುತ್ತಿರುವ 'ಜಗದ್ಗುರು ಪಂಚಾಚಾರ್ಯ' ಎಂಬ ಪ್ರಯೋಗದಲ್ಲಿ ಭಕ್ತಿಮಾರ್ಗ ಸೂಚಿಸುವ ಗುರು ಮತ್ತು ಕರ್ಮಮಾರ್ಗ ಸೂಚಿಸುವ ಆಚಾರ್ಯವೆಂಬ ಎರಡು ಭಿನ್ನತತ್ವಗಳು ಸೇರಿಕೊಂಡ ವೈರುಧ್ಯದೋಷ ಘಟಿಸಿದೆ. ಹುಬ್ಬಳ್ಳಿಯಲ್ಲಿ ಜರುಗಿದ ಕೋರ್ಟ್ ವ್ಯಾಜ್ಯವೊಂದರಲ್ಲಿ ಸುಪ್ರಸಿದ್ಧ ವಕೀಲರಾಗಿದ್ದ ಶ್ರೀ ಸಿದ್ಧರಾಮಪ್ಪ ಪಾವಟೆಯವರು ಪಂಚಾಚಾರ್ಯರಿಗೆ ಜಗದ್ಗುರು ವಿಶೇಷಣ ಬಳಸಬಾರದೆಂದು ವಾದಿಸಿದುದನ್ನು ಇಲ್ಲಿ ಸ್ಮರಿಸಬಹುದು'' ಎನ್ನುತ್ತಾರೆ.

ಮೊದಲನೆಯದಾಗಿ ಗುರು ಮತ್ತು ಆಚಾರ್ಯ ಎರಡೂ ಸಂಸ್ಕೃತ ಮೂಲದ ಪದಗಳು. ಒಂದು ಗ್ರಾಂಥಿಕ ಎನಿಸಿದರೆ ಇನ್ನೊಂದು ಮೌಖಿಕ ಪದ. ವೀರಶೈವರು ಜ್ಞಾನಯಜ್ಞ ಮತ್ತು ಕರ್ಮಯಜ್ಞನಿರತರು. ಇಲ್ಲಿ ಕರ್ಮ ಎಂದರೆ ಕಾಯಕ, ಕರ್ಮಸಿದ್ಧಾಂತವಲ್ಲ. ಕನ್ನಡ ಸ್ನಾತಕೋತ್ತರ ಪದವಿಯಲ್ಲಿ ಬಂಗಾರದ ಪದಕ ಪಡೆದ ಪಂಡಿತರು ಭಾಷಾವಿಕಾಸವನ್ನು ಏಕೆ ಮರೆತರು? ಕರ್ಮ ಎಂಬುದನ್ನು ಕಾಯಕ ಎಂದು ಪರಿಗಣಿಸದೆ ಕರ್ಮಸಿದ್ಧಾಂತ ಎಂದು ಎಲ್ಲೆಲ್ಲಿಗೋ ತಮ್ಮ 'ನಾಥ ಸಿದ್ಧಾಂತ' ಸಂಶೋಧನೆಯನ್ನು ಏಕೆ ಕೊಂಡೊಯ್ದರು? ಒಂದೊಮ್ಮೆ ಬೆಂಗಳೂರಿನಲ್ಲಿ 'ಏನಲೋ ಬಾರಲೋ' ಎನ್ನುತ್ತಿದ್ದ ಜನರು ನಂತರ ಫ್ಯಾಷನ್ನಿಗೆ ತಕ್ಕಂತೆ 'ಏನಮ್ಮಾ ಬಾರಮ್ಮಾ' ಎನ್ನುವುದನ್ನು 'ಬೆಂಗಳೂರಿಗರು ಸಾಮೂಹಿಕ ಲಿಂಗಪರಿವರ್ತನೆಗೆ ಒಳಗಾಗಿದ್ದರು' ಎನ್ನುವ ಸಂಶೋಧನೆ ಮಂಡಿಸುವುದು ಮೂರ್ಖತನವಲ್ಲವೇ! ಇನ್ನು ಹುಬ್ಬಳ್ಳಿ ಕೋರ್ಟ್ ವ್ಯಾಜ್ಯದಲ್ಲಿ ಏನೇ ವಾದಿಸಿದ್ದರೂ ಅದು ಸೋತುಹೋದ ಕಾರಣ ಜಗದ್ಗುರು ವಿಶೇಷಣ ಇಂದಿನ ವರ್ತಮಾನದಲ್ಲಿ ಜಾರಿ ಇದೆ ಎನ್ನುವುದಷ್ಟೇ ಸತ್ಯ.

ತಮ್ಮ ವಾದವನ್ನು ಮುಂದುವರಿಸುತ್ತಾ ಕಲಬುರ್ಗಿಯವರು, ''ಪ್ರಾಚೀನ ಕಾಲದಲ್ಲಿ ಪಂಚಾಚಾರ್ಯರಿಗೆ ಮೊದಮೊದಲು 'ಜಗದಾರಾಧ್ಯ' 'ಜಗದಾಚಾರ್ಯ' ಪದಗಳನ್ನು ಬಳಸುತ್ತಲಿದ್ದ ಉದಾಹರಣೆಗಳು ಪಂ. ಕಾಶೀನಾಥಶಾಸ್ತ್ರಿಗಳ 'ಪಂಚಾಚಾರ್ಯಪ್ರಭಾ' ಪತ್ರಿಕೆ ಮತ್ತು ಅವರ ಪುಸ್ತಕಗಳಲ್ಲಿ ಸಿಗುತ್ತವೆ, ಆದರೆ ಯಾವುದೋ ಕಾಲಘಟ್ಟದಲ್ಲಿ ಇವರಿಗೆ 'ಜಗದ್ಗುರು' ವಿಶೇಷಣವನ್ನು ಬಳಸತೊಡಗಿದರು. ಆದುದರಿಂದ, ಇನ್ನು ಮೇಲೆ ತಾತ್ವಿಕ ದೃಷ್ಟಿಯಿಂದ ವಿರಕ್ತರಿಗೆ 'ಜಗದ್ಗುರು'ಗಳೆಂದೂ ಆಚಾರ್ಯರಿಗೆ 'ಜಗದಾಚಾರ್ಯ'ರೆಂದೂ ಕಟ್ಟುನಿಟ್ಟಾಗಿ ಬಳಸುವುದು ಅವಶ್ಯವಿದೆ'' ಎಂದು ಆಜ್ಞೆ ಮಾಡಿದ್ದಾರೆ.

ಇವರ ಈ ಆಜ್ಞೆಯನ್ನು ಯಾರು ಪಾಲಿಸಬೇಕು? ಅಂದ ಹಾಗೆ, ಅಲ್ಲಮ ತನ್ನ ಒಂದೆರಡು ವಚನಗಳಲ್ಲಿ ಜಗದಾರಾಧ್ಯ ಎಂದು ಬಳಸಿದ್ದಾನೆ. ಅವು ಹೀಗಿವೆ: ''ಹಸಿವಿಲ್ಲದೆ ಉಣಬಲ್ಲಡೆ, ಉಪಾಧಿಯಿಲ್ಲದೆ ಬೇಡಬಲ್ಲಡೆ, ಅದು ವರ್ಮ, ಅದು ಸಂಬಂಧ. ಗಮನವಿಲ್ಲದೆ ಸುಳಿಯಬಲ್ಲಡೆ, ನಿರ್ಗಮನಿಯಾಗಿ ನಿಲಬಲ್ಲಡೆ ಅದು ವರ್ಮ, ಅದು ಸಂಬಂಧ. ಅವರ ನಡೆ ಪಾವನ, ಅವರ ನುಡಿ ತತ್ವ, ಅವರು(ರ?) 'ಜಗದಾರಾಧ್ಯ'ರೆಂಬೆ ಗುಹೇಶ್ವರಾ. ಸುಳಿಯ ಬಲ್ಲಡೆ ಸುಳುಹೆ ಲೇಸಯ್ಯಾ. ಗಮನವಿಲ್ಲದೆ ಸುಳಿಯ ಬಲ್ಲಡೆ, ನಿರ್ಗಮನಿಯಾಗಿ ನಿಲ್ಲಬಲ್ಲಡೆ, ಅದಕ್ಕದೆ ಪರಿಣಾಮ ಅದಕ್ಕದೆ ಸಂತೋಷ. ಗುಹೇಶ್ವರಲಿಂಗದಲ್ಲಿ ಅವರ 'ಜಗದಾರಾಧ್ಯ'ರೆಂಬೆ''.

ಪ್ರೊ.ಕಲಬುರ್ಗಿಯವರು ಜಗದಾರಾಧ್ಯ ಎಂಬುದು ಪಂಚಾಚಾರ್ಯರ ಕುರಿತು ಎಂದು ಆಜ್ಞೆ ಹೊರಡಿಸಿದ ಕಾರಣ ಪಂಚಾಚಾರ್ಯರು ಅಲ್ಲಮನ ಕಾಲದಲ್ಲಿಯೂ ಇದ್ದರು ಎಂದಾಯಿತಲ್ಲವೇ?! ಇದು ಪ್ರೊಫೆಸರರ ದ್ವಂದ್ವ, ಗೊಂದಲ, ಕಲಸುಮೇಲೋಗರ, ಜನಾಂಗೀಯ ದ್ವೇಷ! ತಟಸ್ಥ ನಿಲುವಿರದ ಸಂಶೋಧಕನಲ್ಲಿ ದ್ವೇಷ, ಅಹಂ ತುಂಬಿಕೊಂಡಾಗ ಸಂಶೋಧನೆಗಳು ಹೇಗೆ ತಾಳ ತಪ್ಪಿ ಅವರ ಹಿಂದಿನ ಪುಟವು ಮುಂದಿನ ಪುಟದಲ್ಲೇ ತಪ್ಪೆಂದು ರದ್ದಾಗುತ್ತದೆ ಎನ್ನುವುದಕ್ಕೆ ಇವರ ಕೃತಿಗಳು ಸಾಕ್ಷಿಭೂತವಾಗಿವೆ ಎಂಬಲ್ಲಿಗೆ ಪಂಚಾಚಾರ್ಯ ಬೇರೆ ಎಂಬ ವಾದ ರದ್ದಾಗುತ್ತದೆ.

(ಮುಂದುವರಿಯುವುದು)

(ಲೇಖಕರು ಶಿಕಾಗೊ ವಾಸಿ ಮತ್ತು ಸಾಹಿತಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕಣ್ಣು ಒದ್ದೆಯಾಯಿತು

ತಮ್ಮೊಳಗೆ ಅಷ್ಟೊಂದು ನೋವು-ಕಷ್ಟಗಳನ್ನಿಟ್ಟುಕೊಂಡು ಅದನ್ನು ಹೊರಜಗತ್ತಿಗೆ ತೋರಿಸದೇ, ಸಾಹಿತ್ಯ ಕ್ಷೇತ್ರದಲ್ಲಿ ಅಗಾಧ ಸಾಧನೆ ಮಾಡಿದ ಕೆ.ಎಸ್.ನರಸಿಂಹಸ್ವಾಮಿ, ಡಿ.ವಿ.ಗುಂಡಪ್ಪ ಮತ್ತು ದ.ರಾ.ಬೇಂದ್ರೆಯವರ ಕುರಿತಾದ 'ರಸದೌತಣ' ಅಂಕಣ (ವಿಶ್ವವಾಣಿ ನ.10) ಕಣ್ಣಂಚಿನಲ್ಲಿ ನೀರು ತರಿಸಿತು. ಈ ಸಾಧಕರೆಲ್ಲಾ ನಿಜಕ್ಕೂ 'ಬೆಂಕಿಯಲ್ಲಿ ಅರಳಿದ ಹೂವುಗಳು'. ಲೇಖನಕ್ಕೆ 'ಹೂವೊಗವಾಡದ ಇರಿಯುವ ಮುಳ್ಳೆ....' ತುಂಬಾ ಸಮಂಜಸವಾದ ಶೀರ್ಷಿಕೆ. ಸಾಹಿತ್ಯ ಕೃಷಿಯಲ್ಲಿ ನಿಜವಾದ ಸಾಧನೆ ಮಾಡಿದ ಈ ಮಹನೀಯರಿಗೆ ಪ್ರಶಸ್ತಿ-ಪುರಸ್ಕಾರಗಳೆಂದರೆ ಅದೇನೋ ಸಂಕೋಚ. ಅದರಿಂದ ಸಾಧ್ಯವಾದಷ್ಟು ದೂರವಿರುತ್ತಿದ್ದರು. ಇಂದು ಲಾಬಿ ಮಾಡಿ ಪ್ರಶಸ್ತಿ ತೆಗೆದುಕೊಳ್ಳುವವರೇ ಜಾಸ್ತಿ ಆಗಿದ್ದಾರೆ.

- ರಾಘವೇಂದ್ರ ಜೋಯಿಸ್, ಮೈಸೂರು

ಇದು ಖಡಕ್ ಸಂದೇಶ

ಕಿರಣ್ ಉಪಾಧ್ಯಾಯ ಅವರ 'ವಿದೇಶವಾಸಿ' ಅಂಕಣ ಬರಹವು (ವಿಶ್ವವಾಣಿ ನ.11) ಭಾಷೆಯ ಬಗ್ಗೆಯೇ ಕಿತ್ತಾಡುತ್ತಿರುವವರಿಗೆ ಒಂದು ಖಡಕ್ ಸಂದೇಶದಂತಿತ್ತು. ಹೌದು, ನಾವು ಭಾಷೆಯ ಕುರಿತಾಗಿ ಸದಾ ಚಿಂತನೆ ನಡೆಸುತ್ತಲೇ ಇರಬೇಕು. ಒಂದು ಪ್ರದೇಶದ ಭಾಷೆ, ಅಲ್ಲಿಯ ಸಂಸ್ಕೃತಿಯ ಪ್ರತಿಬಿಂಬವೂ ಹೌದು. ಪರಸ್ಪರರಲ್ಲಿ ಒಗ್ಗಟ್ಟು ಮೂಡಿಸುವ ಮಾಧ್ಯಮವೂ ಹೌದು. ನಮ್ಮ ಭಾಷೆಯನ್ನು ಉಳಿಸಿ ಬೆಳೆಸುವಲ್ಲಿ ನಾವು ಸದಾ ಜಾಗೃತರಾಗಿರಲೇಬೇಕು. ಆದರೆ, ಕರ್ನಾಟಕದಲ್ಲೇ ಇದ್ದು, ಇಲ್ಲೇ ಕೆಲಸ ಮಾಡುತ್ತ, ಇಲ್ಲಿಯ ಗಾಳಿ-ನೀರು-ಆಹಾರ ಪಡೆದವರು ಕನ್ನಡವನ್ನೇ ತುಚ್ಛವಾಗಿ ಕಂಡರೆ ಅಂಥವರನ್ನು ಸಹಿಸಲಾಗದು.

ಹಾಗೆಂದ ಮಾತ್ರಕ್ಕೆ ಪರಭಾಷೆ-ಭಾಷಿಕರನ್ನು ದ್ವೇಷಿಸಬೇಕು ಎಂದರ್ಥವಲ್ಲ. ನಾವು ಕನ್ನಡಿಗರು ಸದಾ ವಿಶಾಲ ಮನಸ್ಥಿತಿಯನ್ನು ಹೊಂದಿದ್ದು, ಅನ್ಯಭಾಷೆಯ ಪರಿಚಯ ಮಾಡಿಕೊಳ್ಳುವ ಅವಕಾಶ ಲಭಿಸಿದರೆ ಅದನ್ನು ತಪ್ಪಿಸಿಕೊಳ್ಳಬಾರದು. ಅನ್ಯಭಾಷೆಯನ್ನು ಒಪ್ಪಿಕೊಳ್ಳಲಾಗದ ಮಡಿವಂತಿಕೆ ಸಲ್ಲ. ಹೆಚ್ಚೆಚ್ಚು ಭಾಷೆ ತಿಳಿದರೆ, ಹೆಚ್ಚೆಚ್ಚು ಅವಕಾಶಗಳಿಗೆ ನಮ್ಮನ್ನು ನಾವು ತೆರೆದುಕೊಂಡಂತೆ. ಇತರರ ಸಂಸ್ಕೃತಿಯನ್ನು ಅರಿಯಲು ಅದು ಪೂರಕ. ಹೀಗಾಗಿ, 'ಭಾಷೆಗಾಗಿ ಮಡಿ, ಆದರೆ ಭಾಷೆಗೆ ಬೇಡ ಮಡಿ' ಎಂಬ ಅಂಕಣಕಾರರ ಆಶಯ ಅರ್ಥವತ್ತಾಗಿದೆ.

- ಶಂಕರನಾರಾಯಣ ಭಟ್, ಮಾಡಗೇರಿ

ಅದು ತವರಿನ ಹಾಡು

ನ.10ರ 'ರಸದೌತಣ' ಅಂಕಣ ಬರಹದ ಕುರಿತು ಈ ಪ್ರತಿಕ್ರಿಯೆ. ಕವಿತೆ ಎಂಬುದು ಒಂದು ತಪಸ್ಸು. ಕವಿತೆಗಳು ಬರೆಯಲ್ಪಟ್ಟಿದ್ದಲ್ಲ, 'ಸೃಜಿಸಲ್ಪಟ್ಟಂಥವು'. ಕವಿತೆ ಎಷ್ಟು ಆಪ್ಯಾಯಮಾನವೋ, ಅದರ ಹಿಂದು-ಮುಂದಿನ ಕಥೆಗಳು ಕೂಡ ಅಷ್ಟೇ ಪ್ರಮೋದಕಾರಿ. ಬದುಕು ಮತ್ತು ಬರಹವನ್ನು ಒಂದೇ ಆಗಿಸಿಕೊಂಡಿದ್ದ ಕೆ.ಎಸ್.ನರಸಿಂಹಸ್ವಾಮಿ, ಡಿವಿಜಿ ಮತ್ತು ಬೇಂದ್ರೆ, ಎಂಬ ಮೂರು ಮೇರುಗಳ ರಸಪ್ರಸಂಗಗಳು ಚೆನ್ನಾಗಿ ಮೂಡಿಬಂದಿವೆ ಈ ಬರಹದಲ್ಲಿ. ''ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹೆನು'' ಗೀತೆಯು ಪ್ರತಿ ಹೆಣ್ಣುಮಗಳ ತವರುಮನೆಯ ಹಾಡು. ಅದನ್ನು ಕೇಳಿದ ಪ್ರತಿ ಹೆಣ್ಣಿನ ಹೃದಯ ತುಂಬಿ ಬರುತ್ತದೆ, ತವರು ನೆನಪಾಗುತ್ತದೆ. ಹೀಗಾಗಿ ಅದನ್ನು ಹಾಡಿದ ಹಾಡುಗನ ಉಡಿ ತನ್ನಿಂತಾನೇ ತುಂಬಿಕೊಳ್ಳುತ್ತದೆ, ಈ ಹಾಡು ಅವನದೇ ಆಗಿಬಿಡುತ್ತದೆ. ಹಾಡುಗನಿಗೂ, ಕೇಳುಗನಿಗೂ ಸಂತೋಷ ಹಂಚಿ, ಹಣ-ಹೆಸರಿಗಾಗಿ ಹಾತೊರೆಯದ ಇಂಥ ತಪಸ್ವಿಗಳ ಕುರಿತು 'ವಿಶ್ವವಾಣಿ'ಯು ಹೀಗೆ ತಿಳಿಸಿಕೊಟ್ಟಿದ್ದು ''ಪರೋಪಕಾರಾಯ ಸತಾಂ ವಿಭೂತಯಃ । ಸ್ವಯಂ ನ ಖಾದಂತಿ ಫಲಾನಿ ವೃಕ್ಷಃ ॥'' (ನದಿಗಳು ತಮ್ಮ ನೀರನ್ನು ಕುಡಿಯುವುದಿಲ್ಲ, ಮರಗಳು ತಮ್ಮ ಹಣ್ಣುಗಳನ್ನು ತಿನ್ನುವುದಿಲ್ಲ) ಎಂಬ ಸುಭಾಷಿತವನ್ನು ಮತ್ತೊಮ್ಮೆ ನೆನಪಿಸಿತು.

- ಜನಮೇಜಯ ಉಮರ್ಜಿ, ಬೆಂಗಳೂರು

ಇದು ಹರ್ಷದ ಸಂಗತಿ

ಪತ್ತೇದಾರಿ ಕಾದಂಬರಿಗಳ ಪಿತಾಮಹ ಎನ್.ನರಸಿಂಹಯ್ಯನವರ ಕುರಿತಾದ ಕಗ್ಗೆರೆ ಪ್ರಕಾಶ್ ಅವರ ಹಿಂದಿನ ಸಂದರ್ಶನವೊಂದನ್ನು ನ.10ರ 'ವಿಶ್ವವಾಣಿ'ಯ ವಿರಾಮ ಪುರವಣಿಯಲ್ಲಿ ಪ್ರಕಟಿಸಿದ್ದು ಅವರ ಅಭಿಮಾನಿಗಳಿಗೆ ಹರ್ಷ ತಂದಿದೆ. ಎನ್.ನರಸಿಂಹಯ್ಯ ಎಂದರೆ ಯಾರು ಎಂಬುದು ಅನೇಕರಿಗೆ ತಕ್ಷಣ ತಿಳಿಯದು. ನಾನು ಸಾಗರದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ತಮ್ಮ ಕಾದಂಬರಿಗಳ ಮೂಲಕ ಪರಿಚಯವಾದವರು ನರಸಿಂಹಯ್ಯನವರು. ಈ ಓದುವ ಹವ್ಯಾಸ ನನಗೆ ಅಜ್ಜ-ಅಜ್ಜಿ, ತಂದೆ-ತಾಯಿಯಿಂದ ಬಂದ ಬಳುವಳಿ. ಈ ಹವ್ಯಾಸವನ್ನು ಹುಚ್ಚಾಗಿ ಪರಿವರ್ತಿಸಿದ್ದು ನರಸಿಂಹಯ್ಯನವರ ಪತ್ತೇದಾರಿ ಪಾತ್ರ 'ಪುರುಷೋತ್ತಮ'.

ನರಸಿಂಹಯ್ಯನವರು ಹೆಚ್ಚು ಶಿಕ್ಷಣವನ್ನು ಪಡೆದಿರಲಿಲ್ಲ, ಆದರೆ ಅವರ ಭಾಷಾಜ್ಞಾನ ವಿಸ್ಮಯಕಾರಿಯಾಗಿತ್ತು. ಶಬ್ದಗಳ ಮೇಲೆ ಅವರಿಗಿದ್ದ ಹಿಡಿತ, ಕಥಾವಸ್ತುವನ್ನು ಸುಂದರವಾಗಿ ಹೆಣೆದು, ಓದುಗರನ್ನು ಪುಸ್ತಕ ಬಿಟ್ಟು ಕದಲದಂತೆ ಮಾಡುವಲ್ಲಿ ಅವರಿಗಿದ್ದ ಅಯಸ್ಕಾಂತೀಯ ಶಕ್ತಿಯನ್ನು ಮರೆಯುವಂತೆಯೇ ಇಲ್ಲ. ಅವರು ಹುಟ್ಟುಹಾಕಿದ 'ಕಥಾನಾಯಕ' ಪುರುಷೋತ್ತಮ ನಮಗೊಂಥರಾ ಅತಿಮಾನವನಂತೆ; ಈತ ತನ್ನ ಧೈರ್ಯ, ಬುದ್ಧಿಮತ್ತೆ ಮತ್ತು ಚಾತುರ್ಯದಿಂದ ಏನನ್ನಾದರೂ ಮಾಡಿ ಗೆದ್ದು, ಕೇಡಿಗಳನ್ನು ನಾಮಾವಶೇಷ ಮಾಡುವ ಮಾದರಿ ನಾಯಕ. ಅಶ್ಲೀಲ ಅಥವಾ ಅಸಂಬದ್ಧ ಭಾಷೆಯನ್ನು ಬಳಸದೆ ಓದುಗರನ್ನು ಹಿಡಿದಿಟ್ಟುಕೊಳ್ಳಬಲ್ಲ ನಿರೂಪಣಾ ಶೈಲಿಯನ್ನು ಬಳಸುತ್ತಿದ್ದ ಹಾಗೂ ಕೊನೆಯ ಪುಟದವರೆಗೆ ರಹಸ್ಯವನ್ನು ಬಿಟ್ಟುಕೊಡದ ಅವರ ನೈಪುಣ್ಯವನ್ನು ಮರೆಯಲು ಸಾಧ್ಯವೇ ಇಲ್ಲ. ಇಷ್ಟಾಗಿಯೂ ಲೇಖಕ ನರಸಿಂಹಯ್ಯನವರಿಗೆ 'ಲಕ್ಷ್ಮೀಕಟಾಕ್ಷ'ವಾಗಿರಲಿಲ್ಲ. ಒಂದಷ್ಟು ಕಾಲ ಸರಕಾರ ಕೊಡುತ್ತಿದ್ದ 500 ರುಪಾಯಿ ಮತ್ತು ತದನಂತರದ 1000 ರುಪಾಯಿಗಳ ಮಾಸಾಶನದಲ್ಲಿ ಬದುಕಬೇಕಾಗಿದ್ದುದು ಅವರ ದುರದೃಷ್ಟ. ಕನ್ನಡ ಸಾರಸ್ವತ ಲೋಕಕ್ಕೆ ಅವರು ನೀಡಿದ ಕೊಡುಗೆಯನ್ನು ಗುರುತಿಸಿ ಸರಕಾರಗಳು ಇನ್ನೂ ಹೆಚ್ಚು ಬೆಂಬಲ ಒದಗಿಸಿದ್ದಿದ್ದರೆ ಆಳುಗರ ಘನತೆಯೂ ಹೆಚ್ಚುತ್ತಿತ್ತು!

- ಎಚ್.ಆರ್.ಶ್ರೀಪಾದ ಭಾಗಿ, ಬೆಂಗಳೂರು

ಕಣ್ತೆರೆಸಿದ ಲೇಖನ

ಡಾ.ಸಾಧನಶ್ರೀ ಅವರ 'ಕಾಳುಗಳ ಮೊಳಕೆ, ನಿಷೇಧ ಇದರ ಬಳಕೆ' ಅಂಕಣಬರಹ ಕಣ್ತೆರೆಸುವಂತಿತ್ತು. ಅನೇಕ ಗೆಳೆಯರು ಮೊಳಕೆಕಾಳುಗಳನ್ನು ನಿತ್ಯವೂ ಸೇವಿಸುವಂತೆ ನನಗೆ ಸಲಹೆ ನೀಡುತ್ತಿದ್ದರೂ, ನನ್ನ ಸೋಮಾರಿತನದ ಕಾರಣದಿಂದಾಗಿ ನಿರ್ಲಕ್ಷಿಸುತ್ತಿದ್ದೆ. ಅವರ ಮತ್ತು ಸಾಮಾಜಿಕ ಮಾಧ್ಯಮಗಳ ಮಾತುಗಳನ್ನು ಕೇಳಿ ಮೊಳಕೆಕಾಳಿನ ಸೇವನೆಯಲ್ಲಿ ಹೀಗೆ ತೊಡಗಿಸಿಕೊಂಡಿದ್ದರೆ ಎಂಥ ಅನಾಹುತವಾಗುತ್ತಿತ್ತು ಎಂಬುದು ಈಗ ಅರಿವಾದಂತಾಯಿತು. ಸಕಾಲಿಕ ಮಾಹಿತಿಯನ್ನು ನೀಡಿ ಅರಿವು ಮೂಡಿಸಿದ ಡಾ.ಸಾಧನಶ್ರೀ ಅವರಿಗೆ ಧನ್ಯವಾದಗಳು.

- ಕೆ.ಜನಾರ್ದನ ತುಂಗ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ರಾಜು ಕೆಂಭಾವಿ, ಮುಂಡರಗಿ**
ಭಟ್ರೇ, ಆರೋಪ ಸಾಬೀತಾದರೆ ರಾಜೀನಾಮೆ ಅಂತಾರಲ್ಲ, ಯಾರಾದರೂ ರಾಜೀನಾಮೆ ಕೊಟ್ಟಿದ್ದಾರಾ?
– **ಯಾರಾದರೂ ಆರೋಪ ಸಾಬೀತು ಮಾಡಿದ್ದಾರಾ?!**

- **ಗಣೇಶ ಡಂಬಳ, ಹರಪನಹಳ್ಳಿ**
ಭಟ್ರೇ, ಮೋದಿ, ಶಾ, ನಡ್ಡಾ ಸೇರಿ ನಿಖಿಲ್‌ನನ್ನು ನಿಲ್ಲಿಸಿದ್ದಾರೆ ಎಂದು ಗೌಡರು ಹೇಳಿದ್ದಾರಲ್ಲ?
– **ಸೋತರೆ ಆ ಮೂವರೇ ನನ್ನ ಮೊಮ್ಮಗನನ್ನು ಸೋಲಿಸಿದರು ಎನ್ನಲಿಕ್ಕಿಲ್ಲ!**

- **ರಮೇಶಗೌಡ, ಮಳವಳ್ಳಿ**
ಭಟ್ರೇ, ಆತ ನನ್ನ ಮೊಮ್ಮಗ ಮಾತ್ರ ಅಲ್ಲ, ನಿಮ್ಮ ಮೊಮ್ಮಗ ಕೂಡ ಎಂದು ದೊಡ್ಡ ಗೌಡ್ರು ಹೇಳುತ್ತಿದ್ದಾರಲ್ಲ?
– **ಚುನಾವಣೆ ಮುಗಿಯುವ ತನಕ ತಾನೇ, ಏನಾದರೂ ಹೇಳಿಕೊಳ್ಳಲಿ ಅಂತ ಚನ್ನಪಟ್ಟಣದ ಜನ ಅಂದುಕೊಂಡಿರಬಹುದು!**

- **ಶ್ರೇಯಾ ಪಾಟೀಲ, ಶಿರಹಟ್ಟಿ**
ಭಟ್ರೇ, ಕಂಡ ಕಂಡ ಭೂಮಿಯನ್ನೆಲ್ಲ ವಕ್ಫ್ ಆಸ್ತಿ ಎನ್ನುತ್ತಿದ್ದಾರಲ್ಲ?
– **ದೇವಾಲಯದ ಜಾಗವೂ ತಮ್ಮದು ಎಂದು ಹೇಳದಿದ್ದರೆ ಸಾಕು!**

- **ವಿನಾಯಕ ಬನ್ನಿಕೊಪ್ಪ, ಹತ್ತಿಮತ್ತೂರು**
ಭಟ್ರೇ, ಸಮಾಜ ಯಾವತ್ತೂ ಸೊಸೆ ಪರ ಅಂತಾರಲ್ಲ?
– **'ಸೊಸೆ ಮನೆಗೆ ಬಂದ ಮಹಾಲಕ್ಷ್ಮಿ, ಅಳಿಯ ಮನೆ ತೊಳೆಯ' ಎಂದು ಹೇಳುವುದನ್ನು ಕೇಳಿಯೂ ಈ ಮಾತಾ?!**

- **ಹೇಮಂತ ಲೋಖಂಡೆ, ಬೆಳಗಾವಿ**
ಭಟ್ರೇ, ಪ್ರಜ್ವಲ್ ರೇವಣ್ಣನಿಗೆ ಯಾವ ಕೋರ್ಟೂ ಜಾಮೀನು ಕೊಡ್ತಾ ಇಲ್ಲವಲ್ಲ?
– **ನ್ಯಾಯಾಧೀಶರಿಗೇ ತಲೆ ಕೆಟ್ಟು ಹೋಗಿರಬೇಕು!**

- **ರತ್ನಾಕರ ಹೂವಪ್ಪ, ಹುಲಿಯೂರುದುರ್ಗ**
ಭಟ್ರೇ, ದೇವೇಗೌಡರ ಕುಟುಂಬವನ್ನು ನಾನು ಖರೀದಿ ಮಾಡ್ತೀನಿ ಅಂತ ಜಮೀರ್ ಹೇಳಿದ್ದಾರಲ್ಲ?
– **ಆದರೆ ಅವರು ಮಾರಾಟಕ್ಕೆ ಇಡಬೇಕಲ್ಲ?!**

- **ಉಜ್ಜಿನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಅಲೋ ಗಂಡಸರನ್ನು ನಂಬಬೇಡಿ ಅಂತ ಸಿದ್ದರಾಮಯ್ಯ ಹೇಳಿದ್ದಾರಲ್ಲ?
– **ಮಾತು ಮಾತಿಗೂ ದೇವೇಗೌಡ ಅಂತ ಹೇಳಲು ಆಗುವುದಿಲ್ಲವಲ್ಲ?!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಮೊಯಿಲಿಯವರು ಮಹಾಕಾವ್ಯ ಬರೆಯುವುದನ್ನು ನಿಲ್ಲಿಸಿದರೆ?
– **ಇದು ಓದುಗರ ಭಾವನೆಗಳಿಗೆ ಸ್ಪಂದಿಸುವ ಮಹಾಕವಿಯ ದೊಡ್ಡಗುಣ!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಅವಳು ಕಣ್ಣೋಟದಿಂದಲೇ ಪ್ರೀತಿಗೆ ರುಜು ಹಾಕಿದ್ದಾಳಲ್ಲ?
– **ಹಾಗಾದರೆ ಅದನ್ನು ಫೋರ್ಜರಿ ಮಾಡುವ ಸಾಧ್ಯತೆ ಕಮ್ಮಿ!**

ನಮಗೆ ಬೇಕಾದ್ದನ್ನು ಪಡೆವ ದಾರಿಯಿದು!

ಜಗತ್ತಿನ ಮುಕ್ಕಾಲುಪಾಲು ಜನ ಮಾತಾಡಲು ಶುರುಮಾಡಿದರೆ ಹೇಳುವುದು, ''ನನಗೆ ಹಣದ ಕೊರತೆಯಿದೆ'' ಎಂಬ ಮಾತನ್ನು. ''ನನ್ನ ಬಳಿ ಸಮಯವಿಲ್ಲ'' ಎನ್ನುವುದು ಇಂಥ ಎರಡನೆಯ ದೊಡ್ಡಮಾತು. ಹಣವಿಲ್ಲ, ಸಮಯವಿಲ್ಲ ಎನ್ನುವುದು ಶುದ್ಧಸುಳ್ಳು. ಆದ್ಯತೆಯ ಕೊರತೆಯಿಂದ ಉಂಟಾದ ಸ್ಥಿತಿಯಿದು!

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಕನ್ನಡದಲ್ಲಿ ಒಂದು ಆಡುಮಾತಿದೆ- 'ಬಾಯಲ್ಲಿ ಆಡಿದ್ದು ಬೆನ್ನಿಗೆ ಮೂಲ' ಎನ್ನುತ್ತದೆ ಆ ಮಾತು. ನಾವು ಗೊತ್ತಿದ್ದೋ ಗೊತ್ತಿಲ್ಲದೆಯೋ ಆಡುವ ಮಾತುಗಳು ನಮ್ಮ ಸುಪ್ತಮನಸ್ಸಿನಲ್ಲಿ ಬೇರೂರಿಬಿಡುತ್ತವೆ. ಸುಪ್ತಮನಸ್ಸು ಎನ್ನುವುದು ಒಂದು ಮಹಾಸಾಗರ. ಪ್ರಜ್ಞಾವಸ್ಥೆಯಲ್ಲಿರುವ ಮನಸ್ಸು 5 ಪ್ರತಿಶತವಾದರೆ, ಸುಪ್ತಾವಸ್ಥೆಯಲ್ಲಿನ ಮನಸ್ಸು 95 ಪ್ರತಿಶತ ಎನ್ನುತ್ತಾರೆ ಮನೋವಿಜ್ಞಾನಿಗಳು. ಹೀಗಾಗಿ, ನಾವಾಡುವ ಮಾತುಗಳು ನಮ್ಮ ಭವಿಷ್ಯವನ್ನು, ನಾವ್ಯಾರು ಎನ್ನುವುದನ್ನು ನಿರ್ಧರಿಸುತ್ತವೆ. ಒಟ್ಟಾರೆ ನಮ್ಮ ಬದುಕು ನಾವಾಡುವ ಮಾತುಗಳ ಮೇಲೆ ನಿಂತಿದೆ. ಮಾತಿನಲ್ಲಿರುವ ಶಕ್ತಿಯನ್ನು ನಾವು ಅರಿಯಬೇಕಿದೆ.

ನಮ್ಮಲ್ಲಿ ಬಹಳಷ್ಟು ಜನರು ಸ್ವತಃ ಇತರರ ಮುಂದೆ, ''ನಾನು ಕೋಪಿಷ್ಠ, ನಾನು ಸೋಂಬೇರಿ, ನನಗೆ ಗಣಿತವೆಂದರೆ ಇಷ್ಟವಿಲ್ಲ, ನನಗೆ ಹಣದ ಮೇಲೆ ಮೋಹವಿಲ್ಲ'' ಇತ್ಯಾದಿಯಾಗಿ ಹೇಳುವುದನ್ನು ಕೇಳಿರುತ್ತೇವೆ. ಈ ಪದಗಳನ್ನು ಪದೇಪದೆ ಆಡುತ್ತ ಸುಪ್ತಮನಸ್ಸು ಅದನ್ನು ನಂಬುತ್ತಾ ಹೋಗುತ್ತದೆ. ಆಗ ಆ ಮಾತುಗಳನ್ನು ಹೇಳಿದ್ದ ವ್ಯಕ್ತಿ ನಿಜವಾಗಿಯೂ ಕೋಪಿಷ್ಠನೋ, ಸೋಂಬೇರಿಯೋ ಆಗಿಬಿಡುತ್ತಾನೆ. ವಿಜ್ಞಾನ ಇದನ್ನು ಪುಷ್ಟೀಕರಿಸಿದೆ. ಆದ್ದರಿಂದ ಆಡುವ ಮಾತುಗಳ ಮೇಲೆ ನಿಗ್ರಹ, ನಿಯಂತ್ರಣ ಹೊಂದುವುದು ಬಹಳ ಅವಶ್ಯಕ.

ಇನ್ನು ಧರ್ಮಶಾಸ್ತ್ರಗಳ ಪ್ರಕಾರ ಕೂಡ, ನಾವು ಕೆಟ್ಟ ಮಾತುಗಳನ್ನು ಋಣಾತ್ಮಕ ಮಾತುಗಳನ್ನು ಆಡಬಾರದು ಎನ್ನುತ್ತಾರೆ. ಇಲ್ಲಿ ಅವರು ಸುಪ್ತಮನಸ್ಸಿನ ಬದಲು 'ಅಸ್ತು ದೇವತೆಗಳನ್ನು' ಹೆಸರಿಸುತ್ತಾರೆ; ನಾವು ಏನು ಹೇಳುತ್ತೇವೆಯೋ ಅದಕ್ಕೆ ಅಸ್ತು ದೇವತೆಗಳು 'ತಥಾಸ್ತು' ಅನ್ನುತ್ತಾರೆ, ಹೀಗಾಗಿ ಅದು ನಿಜವಾಗುತ್ತದೆ ಎಂದು ಹೇಳುತ್ತಾರೆ.

''The only thing that's keeping you from getting what you want is the story you keep telling yourself '', ಅಂದರೆ, ''ನಿಮಗೇನು ಬೇಕೋ ಅದನ್ನು ಪಡೆಯಲು ಇರುವ ಏಕೈಕ ಮಾಧ್ಯಮವೆಂದರೆ, ನಿಮಗೆ ನೀವು ಹೇಳಿಕೊಳ್ಳುವ ಮಾತು/ಕಥೆ'' ಎನ್ನುವ ಮಾತನ್ನು ಅಮೆರಿಕದ ಹೆಸರಾಂತ ಲೈಫ್ ಕೋಚ್ ಮತ್ತು ಬಿಸಿನೆಸ್ ಸ್ಟ್ರಾಟಜಿಸ್ಟ್ ಟೋನಿ ರಾಬಿನ್ ಹೇಳುತ್ತಾರೆ.

ಗಮನಿಸಿ ನೋಡಿ, ಮೇಲೆ ಹೇಳಿದ ಎಲ್ಲಾ ಮಾತುಗಳ ಸಾರಾಂಶ ಮಾತ್ರ ಒಂದೇ- ಮಾತಿನ ಮೇಲೆ ನಿಗಾ ಇರಲಿ. ಇದನ್ನೇ ನಮ್ಮಲ್ಲಿ, 'ಮಾತು ಒಡೆದರೆ ಹೋಯಿತು, ಮುತ್ತು ಒಡೆದರೆ ಹೋಯಿತು' ಎಂಬ ಜಾಣನುಡಿಯಾಗಿ ಹೇಳಿದ್ದಾರೆ. ಆಡಿದ ಮಾತನ್ನು ನಾವು ಮರಳಿ ಪಡೆಯಲಾರೆವು. ಆದ್ದರಿಂದ, ಆಡುವುದಕ್ಕೆ ಮುನ್ನ ಹತ್ತು ಬಾರಿ ಯೋಚಿಸಬೇಕಾಗುತ್ತದೆ. 'ಮಾತು ಬೆಳ್ಳಿ, ಮೌನ ಬಂಗಾರ' ಎಂಬ ಇನ್ನೊಂದು ಪ್ರಸಿದ್ಧ ನಾಣ್ಣುಡಿಯು, ನಮ್ಮ ಪೂರ್ವಜರು ಅದೆಷ್ಟು ಜ್ಞಾನಿಗಳಾಗಿದ್ದರು ಎಂಬುದಕ್ಕೆ ಒಂದು ಉದಾಹರಣೆ. ಇಲ್ಲಿ ಕೂಡ, 'ತಪ್ಪು ಮಾತುಗಳನ್ನು ಆಡುವುದಕ್ಕಿಂತ ಸುಮ್ಮನಿರುವುದು ಮೇಲು' ಎನ್ನುವ ಧ್ವನಿಯಿದೆ. ಹೀಗಾಗಿ ಇಲ್ಲಿಯೂ ವಿವೇಚನಾಯುತ ಮಾತಿಗೆ ಪ್ರಥಮ ಸ್ಥಾನ. ಇದರ ಜತೆಗೆ, 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ' ಎನ್ನುವ ಇನ್ನೊಂದು ಆಡುಮಾತು ಕೂಡ ಮಾತಿಗೆ ನಮ್ಮ ಸಮಾಜದಲ್ಲಿರುವ ಸ್ಥಾನವನ್ನು ಎತ್ತಿ ತೋರಿಸುತ್ತದೆ. ಸರಿಯಾಗಿ ಮಾತನಾಡಲು ಬಂದವನಿಗೆ ಶತ್ರುಗಳು ಇರುವುದಿಲ್ಲ, ಹೀಗಾಗಿ ಜಗಳವಾಡುವ ಪ್ರಮೇಯ ಉದ್ಭವಿಸುವುದಿಲ್ಲ ಎನ್ನುವುದನ್ನು ಈ ಆಡುಮಾತು ಹೇಳುತ್ತದೆ. ಒಟ್ಟಿನಲ್ಲಿ, ನಾವಾಡುವ ಮಾತುಗಳು Make or Break ಪರಿಸ್ಥಿತಿಯನ್ನು ತಂದಿಡುತ್ತವೆ ಎನ್ನುವುದು ವೇದ್ಯ.

ಬಾಯಲ್ಲಿ ಜೋರಾಗಿ ಆಡಬೇಕೆಂದೇನೂ ಇಲ್ಲ, ಮನಸ್ಸಿನಲ್ಲಿ ನಾವು ನಮ್ಮ ಬಗ್ಗೆ ಯಾವ ಕಲ್ಪನೆ ಕಟ್ಟಿಕೊಳ್ಳುತ್ತೇವೆ? ಯಾವ ಕಥೆಯನ್ನು ಉಣಬಡಿಸುತ್ತಿದ್ದೇವೆ? ಎಂಬುದನ್ನೂ ಮನಸ್ಸು ನಂಬುತ್ತಾ ಹೋಗುತ್ತದೆ. ನನ್ನ ಮಗಳು ಅನನ್ಯ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಅವಳ ತರಗತಿಯಲ್ಲಿ 27 ಮಕ್ಕಳಿದ್ದಾರೆ. ನೀವು ನಂಬುವುದಿಲ್ಲ, ಮೈಸೂರಿನಂಥ ನಗರದಲ್ಲಿ ಹತ್ತರಿಂದ ಹದಿನೈದು

ಮಕ್ಕಳಿಗೆ ಪೋಷಕರಲ್ಲಿ ಒಬ್ಬರಿದ್ದರೆ, ಇನ್ನೊಬ್ಬರಿಲ್ಲ! ಕೆಲವರದು ವಿಚ್ಛೇದನ, ಕೆಲವರದು ಸಪರೇಷನ್. ಮತ್ತೆ ಕೆಲವರನ್ನು ಕೋವಿಡ್ ಮಹಾಮಾರಿ ನುಂಗಿದೆ. ಹೆಸರು ಬೇಡ, ಅನನ್ಯಳ ಸ್ನೇಹಿತೆಯೊಬ್ಬಳು ನಿತ್ಯವೂ ತಾನು 'SHIT' ಎನ್ನುತ್ತಿದ್ದಳಂತೆ. ಇದನ್ನು ಅನನ್ಯಳ ಮೂಲಕ ತಿಳಿದುಕೊಂಡ ನಾನು, ''ಅವಳೇಕೆ ಶಿಟ್ ಎನ್ನುತ್ತಾಳೆ?'' ಎಂದು ಕೇಳಿದೆ. ಅನನ್ಯ ಹೇಳಿದ ಉತ್ತರ ನನಗೆ ಆಶ್ಚರ್ಯ ತರಿಸಿತ್ತು. ಆ ಮಗುವಿನ ಪೂರ್ಣ ಹೆಸರಿನಲ್ಲಿ 'SHIT' ಎಂಬ ಅಕ್ಷರಗಳು ಬರುತ್ತವೆ. ಅಪ್ಪನಿಲ್ಲದ ಬೇಸರ, ತಾನು ಪ್ರಯೋಜನವಿಲ್ಲದವಳು ಎಂಬ ಮನೋಭಾವ ಆಕೆಯಿಂದ ಆ ಮಾತುಗಳನ್ನು ಆಡಿಸಿದೆ. ತಕ್ಷಣ ನಾನು ಅನನ್ಯಳಿಗೆ, ''ಅವಳು ಹೇಳಿದ್ದು ತಪ್ಪಿದೆ. ಅದರಲ್ಲಿ 'ಖ' ಎನ್ನುವ ಅಕ್ಷರ ಸೈಲೆಂಟ್. ಹೀಗಾಗಿ ನಿನ್ನ ಸ್ನೇಹಿತೆಗೆ ಹೇಳು- ಅವಳು 'SHIT' ಅಲ್ಲ, 'HIT' ಅಂತ'' ಎಂಬ ಮಾತನ್ನು ಹೇಳಿದೆ. ಅವಳ ಸ್ನೇಹಿತೆ ಇಂದಿಗೆ ನನ್ನ ಸ್ನೇಹಿತೆಯೂ ಹೌದು. ಆ ಪುಟಾಣಿ ಹೃದಯದಲ್ಲಿ ಬೇಕಾಗಿರುವ ಒಳ್ಳೆಯ ಮಾತು, ಚಿಂತನೆ ಕಳೆದುಹೋಗಿತ್ತು, ಅಷ್ಟೇ.

ಎಳವೆಯಲ್ಲಿ ನಮ್ಮ ಬಗ್ಗೆ ನಾವು ಆಡಿಕೊಳ್ಳುವ ಮಾತುಗಳು ಇನ್ನಷ್ಟು ಹೆಚ್ಚು ಪರಿಣಾಮಕಾರಿ. ಹೀಗಾಗಿ ನಾವು ನಮ್ಮ ಜತೆಜತೆಗೆ, ನಮ್ಮ ಮಕ್ಕಳ ಮೇಲೂ ಕಣ್ಣಿಟ್ಟಿರಬೇಕು. ನಮಗೇನು ಬೇಕೋ ಅದನ್ನು ನಿತ್ಯವೂ ಮನಸ್ಸಿಗೆ ಹೇಳುತ್ತಿರೋಣ- ನಾನು ಇನ್ನಷ್ಟು ಆರೋಗ್ಯವಂತನಾಗಬೇಕು, ಹಣವಂತನಾಗಬೇಕು, ವಿದ್ಯಾವಂತನಾಗಬೇಕು, ಪ್ರಸಿದ್ಧನಾಗಬೇಕು, ಲೋಕಕಲ್ಯಾಣ ಮಾಡಬೇಕು, ಮುಂದಿನ ವರ್ಷದಲ್ಲಿ ಎಂಬಿಎ ಮಾಡಬೇಕು, ವಿದೇಶ ಪ್ರವಾಸ ಹೋಗಬೇಕು- ಹೀಗೆ ಏನಾದರೂ ಸರಿಯೇ ಧನಾತ್ಮಕ ಮಾತುಗಳು ನಮ್ಮವಾಗಿರಲಿ. ಇದನ್ನು 3 ತಿಂಗಳ ಕಾಲ ಪಟ್ಟುಹಿಡಿದು ಪ್ರಯತ್ನಿಸಿ ನೋಡಿ, ಅಚ್ಚರಿಯ ಫಲಿತಾಂಶ ನಿಮ್ಮದಾಗುತ್ತದೆ.

ನಾವಾಡುವ ಮಾತುಗಳು ನಮ್ಮನ್ನು 'ಡಿಫೈನ್' ಮಾಡುತ್ತವೆ. ಮಾತುಗಳಿಂದ ರಾಜ್ಯವನ್ನು ಕಟ್ಟಬಹುದು, ಒಡೆಯಲೂಬಹುದು. ನೆನಪಿರಲಿ- ಅಸ್ತು ದೇವತೆಗಳು 'ಅಸ್ತು' ಎನ್ನುತ್ತಿರುತ್ತಾರೆ. ನಾವು ಬಾಯಲ್ಲಿ ಆಡಿದ್ದು ನಮ್ಮ ಬುಡಕ್ಕೆ ಬರುತ್ತದೆ. ಒಳಿತಾಡಿದರೆ ಒಳಿತು, ಕೆಡುಕಾಡಿದರೆ ಕೆಡುಕು.

ಇಷ್ಟೆಲ್ಲಾ ಮಾತು ಏಕೆ ಹೇಳಬೇಕಾಯ್ತು ಗೊತ್ತಾ? ಎರಡು ದಿನಗಳ ಹಿಂದೆ ನಾನೊಬ್ಬರನ್ನು ಭೇಟಿಮಾಡಿದೆ. ಅವರು ತಮ್ಮ ಮಗನನ್ನು ಏಳನೆಯ ತರಗತಿಯಿಂದಲೇ ಷೇರು ಮಾರುಕಟ್ಟೆ, ಕರೆನ್ಸಿ ಮಾರುಕಟ್ಟೆಗಳಿಗೆ ತಯಾರುಮಾಡಲು ಹೆಮ್ಮೆಯಿಂದ ಶುರುಮಾಡಿದ್ದರಂತೆ! ಆ ಹುಡುಗನಿಗೆ ಈಗ 21ರ ಹರೆಯ, ಪದವಿ ಮುಗಿಸುವ ಹಂತದಲ್ಲಿದ್ದಾನೆ. ತನ್ನ ಖರ್ಚುಗಳಿಗೆ, ಕಾಲೇಜಿನ ಫೀಸ್‌ಗೆ ಆತ ಪೋಷಕರನ್ನು ಅವಲಂಬಿಸಿಲ್ಲ. ಈಗಾಗಲೇ ಆತ ತನ್ನ ಹಣವನ್ನು ತಾನು ಗಳಿಸಿಕೊಳ್ಳಲು ಶುರುಮಾಡಿದ್ದಾನೆ. ಪದವಿ ಮುಗಿಸಿ, 'ಕೆಲಸವಿಲ್ಲ, ಕೆಲಸ ಸಿಕ್ಕಿಲ್ಲ' ಎಂದು ಕುಳಿತಿರುವ ಸಾವಿರಾರು ಹುಡುಗರ ಮಧ್ಯೆ ಈ ಹುಡುಗ ತನ್ನ ಬದುಕನ್ನು ಆಗಲೇ ಕಂಡುಕೊಂಡಿದ್ದಾನೆ. ಇದು ಹೇಗೆ ಸಾಧ್ಯವಾಯ್ತು? ಆ ಹುಡುಗನ ಪೋಷಕರು ಹೇಳಿದ ಮಾತುಗಳು ಮೇಲಿನ ಎಲ್ಲಾ ಸಾಲುಗಳನ್ನು ಬರೆಯಲು ಪ್ರೇರಣೆ. ಆ ಹುಡುಗನ ಪೋಷಕರಿಬ್ಬರಿಗೂ ಸಂಖ್ಯೆ ಅಂದರೆ ಅಷ್ಟಕ್ಕಷ್ಟೇ, ಹೀಗಾಗಿ ತಮ್ಮ ಮಗನಿಗೆ ಎರಡು ವರ್ಷದ ಮಗುವಿನಿಂದಲೇ, ''ನಿನಗೆ ಸಂಖ್ಯೆಗಳು ಎಂದರೆ ಬಹಳ ಇಷ್ಟ, ನೀನು ಗಣಿತ ಮತ್ತು ಲೆಕ್ಕಾಚಾರಗಳಲ್ಲಿ ಬುದ್ಧಿವಂತ'' ಎನ್ನುವ ಮಾತುಗಳನ್ನು ಆಡುತ್ತಿದ್ದರಂತೆ! ಸಹಜವಾಗಿಯೇ ಆ ಮಗು ತನ್ನ ಅಪ್ಪ-ಅಮ್ಮ ಹೇಳಿದ್ದನ್ನೆಲ್ಲಾ ನಂಬುತ್ತಾ ಹೋಗಿದೆ. ಏಳನೆಯ ತರಗತಿಯ ವೇಳೆಗೆ ಮಗುವಿಗೆ ಸಂಖ್ಯೆಗಳ ಸೆಳೆತ ಶುರುವಾಗಿದೆ. ಹೆತ್ತವರು ಮಾಡಿದ ಪ್ರಯೋಗ ಫಲ ಕೊಟ್ಟಿದೆ. ಒಂದು 'ಸುಳ್ಳನ್ನು' ಹತ್ತು ಬಾರಿ ಹೇಳುತ್ತಾ ಹೋದರೆ ಅದನ್ನು 'ಸತ್ಯ' ಎಂದು ಸಮಾಜ ನಂಬುತ್ತದೆ. ಪದೇಪದೆ ಅವವೇ ವಿಷಯಗಳನ್ನು ಪುನರಾವರ್ತನೆ ಮಾಡುವುದರ ಶಕ್ತಿ ಬಹುದೊಡ್ಡದು.

ಜಗತ್ತಿನ ಮುಕ್ಕಾಲುಪಾಲು ಜನ ಮಾತಾಡಲು ಶುರುಮಾಡಿದರೆ ಹೇಳುವುದು, ''ನನಗೆ ಹಣದ ಕೊರತೆಯಿದೆ'' ಎಂಬ ಮಾತನ್ನು. ''ನನ್ನ ಬಳಿ ಸಮಯವಿಲ್ಲ'' ಎನ್ನುವುದು ಇಂಥ ಎರಡನೆಯ ದೊಡ್ಡಮಾತು. ಹಣವಿಲ್ಲ, ಸಮಯವಿಲ್ಲ ಎನ್ನುವುದು ಶುದ್ಧಸುಳ್ಳು. ಆದ್ಯತೆಯ ಕೊರತೆಯಿಂದ ಉಂಟಾದ ಸ್ಥಿತಿಯಿದು! ಮನಸ್ಸಿಗೆ ಸರಿಯಾದ ಸೂಚನೆ ನೀಡದೆ ಇರುವುದರ ಫಲಿತಾಂಶವಿದು. ಆಟೋ ಹತ್ತಿ, ಎಲ್ಲಿಗೆ ಹೋಗಬೇಕು ಎಂಬುದನ್ನು ಹೇಳದಿದ್ದರೆ ಆಟೋ ಡ್ರೈವರ್ ಎಲ್ಲಿಗೆ ಕರೆದುಕೊಂಡುಹೋಗಲು ಸಾಧ್ಯ? ನಮ್ಮ ಮನಸ್ಸಿಗೆ ಸರಿಯಾದ ಸೂಚನೆ ನೀಡದೆ ಇದ್ದರೆ, ಹಣ ಮತ್ತು ಸಮಯ ಎರಡೂ ಇಲ್ಲ ಎನ್ನಿಸುವುದು ಸಾಮಾನ್ಯ.

ಎಲ್ಲರಿಗೂ ಇರುವುದು ದಿನದಲ್ಲಿ 24 ಗಂಟೆಗಳು ಮಾತ್ರ, ಅದನ್ನು ಸರಿಯಾಗಿ ಪ್ಲಾನ್ ಮಾಡಬೇಕು. ಸೋಷಿಯಲ್ ಮೀಡಿಯಾದಲ್ಲಿ, ಅಕ್ಕಪಕ್ಕದವರ ಜತೆಯಲ್ಲಿ ನಿಂತು ಕೆಲಸಕ್ಕೆ ಬಾರದ ಹರಟೆಯಲ್ಲಿ ಸಮಯ ಹಾಳುಮಾಡಿಕೊಂಡು, ಮಾಡಬೇಕಾದ ಕೆಲಸಕ್ಕೆ ವೇಳೆಯಿಲ್ಲ ಎನ್ನುವ ನೆಪವನ್ನು ನೀಡಿದರೆ, ಸಮಯದ ಸದುಪಯೋಗ ಮಾಡಿಕೊಂಡಿಲ್ಲ ಎಂದರ್ಥವೇ ಹೊರತು 'ಸಮಯವಿಲ್ಲ' ಎಂದಲ್ಲ. ನಾವು ಆದ್ಯತೆಯನ್ನು ಸರಿಯಾಗಿ ನಿಗದಿಪಡಿಸಿಕೊಂಡಿಲ್ಲ ಎಂಬುದು ಇದರರ್ಥ. ಬೆಳಗಿನ ನಡಿಗೆಗೆ, ಊಟ-ತಿಂಡಿಗೆ, ಸಿದ್ಧತೆಗೆ, ಓದಿಗೆ, ಓಡಾಟಕ್ಕೆ, ಕೆಲಸಕ್ಕೆ ಹೀಗೆ ವೇಳೆಯನ್ನು ನಮ್ಮ ಬದುಕಿನ ಓಘಕ್ಕೆ ತಕ್ಕಂತೆ ಸಿದ್ಧಪಡಿಸಿಕೊಳ್ಳಬೇಕು. ವೇಳೆಯನ್ನು ಮತ್ತು ಹಣವನ್ನು ಬೇಕಾಬಿಟ್ಟಿ ವ್ಯಯಿಸಿ ನಂತರ 'ಸಮಯವಿಲ್ಲ', 'ಹಣವಿಲ್ಲ' ಎನ್ನುವ ರಾಗ ಹಾಡಿದರೆ ಅದರಿಂದ ಪ್ರಯೋಜನವಿಲ್ಲ.

ಬದುಕಿಗೆ ಆದ್ಯತೆಗಳು ಅತ್ಯಂತ ಮುಖ್ಯವಾಗಿ ಬೇಕು. ಇನ್ನೊಂದು ಪ್ರಮುಖ ಅಂಶವೆಂದರೆ, ಒಬ್ಬೊಬ್ಬರ ಆದ್ಯತೆಗಳ ಪಟ್ಟಿ ಬೇರೆ ಬೇರೆ ಇರುತ್ತದೆ. ಹೀಗಾಗಿ ಪ್ರತಿಯೊಬ್ಬರೂ ತಮ್ಮ ಬದುಕಿಗೆ ಅನುಗುಣವಾಗಿ ಆದ್ಯತೆಯ ಪಟ್ಟಿಯನ್ನು ತಯಾರಿಸಿಕೊಳ್ಳಬೇಕು. ಆದ್ಯತೆಯ ಪಟ್ಟಿಯಿಲ್ಲದೆ ಮಾಡುವ ಯಾವ ಕೆಲಸವೂ ಪರಿಪೂರ್ಣವಲ್ಲ. ನಾಳೆಗೆ ಬೇಕಿರುವುದು ಮಕ್ಕಳ ಶಾಲೆಗೆ ಪಾವತಿಸಬೇಕಿರುವ ಫೀಸು; ಅದನ್ನು ಮರೆತು ಅಥವಾ ಆದ್ಯತೆಯ ಪಟ್ಟಿಯಲ್ಲಿ ಅದಕ್ಕೆ ಕೊನೆಯ ಸ್ಥಾನ ಕೊಟ್ಟು, ಪ್ರವಾಸಕ್ಕೆ ಹೊರಟರೆ ಏನಾಗುತ್ತದೆ ಹೇಳಿ? ಆದ್ಯತೆಯಲ್ಲಿ ತಪ್ಪಾಗಿರುವುದರಿಂದ ಬದುಕು ಪಲ್ಲಟವಾಗುತ್ತದೆ. ಹೀಗಾದಾಗ 'ಹಣವಿಲ್ಲ' ಎನ್ನುವ ಗೋಣಗಾಟ ಶುರುವಾಗುತ್ತದೆ.

ನನಗೇನು ಬೇಕು? ಈ ಬದುಕಿನಿಂದ ನಾನು ಏನನ್ನು ಬಯಸುತ್ತಿದ್ದೇನೆ? ಬಯಸಿದ ಬದುಕನ್ನು ಪಡೆಯಲು ದಾರಿ ಯಾವುದು? ಆ ದಾರಿಯಲ್ಲಿ ನಡೆಯುವಾಗ ಪ್ರಥಮವಾಗಿ ಮಾಡಬೇಕಾದ ಕೆಲಸಗಳಾವುವು? ಹೀಗೆ ಪಟ್ಟಿಯನ್ನು ತಯಾರಿಸಿಕೊಳ್ಳಬೇಕು. ನೆನಪಿರಲಿ- ನಾವೆಲ್ಲರೂ ನಮ್ಮನ್ನು ನಾವು ಬುದ್ಧಿವಂತರು ಎಂದುಕೊಳ್ಳುತ್ತೇವೆ, ಎಲ್ಲವೂ ನೆನಪಿನಲ್ಲಿರುತ್ತದೆ ಎಂದುಕೊಳ್ಳುತ್ತೇವೆ. ಆದರೆ ಇದು ತಪ್ಪು. ಸರಿಯಾದ ಪಟ್ಟಿ ಸಿದ್ಧವಿದ್ದರೆ, ಅದರಂತೆ ನಾವು ಕ್ರಮವಾಗಿ ಸಾಗುತ್ತಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಬಹುದು. ಹಾಗೊಮ್ಮೆ ತಪ್ಪಿದ್ದರೆ ಅದನ್ನು ಸರಿಪಡಿಸಿಕೊಂಡು ಸಾಗಲು ಕೂಡ ಅದು ಸಹಕಾರಿಯಾಗುತ್ತದೆ.

ನಾರದ ಸಂಚಾರ

ಕಲಹಪ್ರಿಯ
naadigru@gmail.com

ವಿವಿಧ ವಿನೋದಾವಳಿ...!!

ರಾಜಕೀಯ ಚಟುವಟಿಕೆಗಳು ಅದ್ಯಾಕೋ ಏನೋ ನೀರಸವಾಗಿಬಿಟ್ಟಿವೆಯಲ್ಲಾ?'' ಎಂದು ಮರಿಪುಢಾರಿಗಳು ಕೈ ಕೈ ಹಿಸುಕಿಕೊಳ್ಳುವಾಗ ಅಥವಾ ''ಏನೂ ಸೆನ್ಸೇಷನಲ್ ನ್ಯೂಸ್ ಸಿಗ್ತಾನೇ ಇಲ್ಲವಲ್ರೀ...'' ಎಂದು ಮಾಧ್ಯಮಗಳ ಮುಖ್ಯಸ್ಥರು ತಮ್ಮ ಸಂಪಾದಕೀಯ ಸಭೆಗಳಲ್ಲಿ ಸುದ್ದಿ ಸಂಪಾದಕರೊಂದಿಗೆ ಅಲವತ್ತುಕೊಳ್ಳುವಾಗ ಅಕ್ಷರಶಃ 'ಆಪದ್ಬಾಂಧವ'ನಂತೆ ಒದಗುತ್ತಾರೆ ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಯವರು ಎಂದು ರಾಜಕೀಯ ಪಂಡಿತರು ಆಗೀಗ ಆಡಿಕೊಳ್ಳುವುದಿದೆ. ಈ ಅಭಿಪ್ರಾಯವನ್ನು ಹುಸಿಗೊಳಿಸಬಾರದು ಎಂಬ ಛಲಕ್ಕೆ ಬಿದ್ದವರಂತೆ ರಾಹುಲರೂ ಏನಾದರೊಂದು ವಿಲಕ್ಷಣ ಹೇಳಿಕೆ ನೀಡುವುದಿದೆ.

ಇತ್ತೀಚೆಗೆ ಜಾರ್ಖಂಡ್‌ನ ಧನಬಾದ್‌ನಲ್ಲಿ ಚುನಾವಣಾ ಪ್ರಚಾರಕಾರ್ಯದಲ್ಲಿ ತೊಡಗಿದ್ದ ಅವರು ಆ ವೇಳೆ ಉದುರಿಸಿದ ಆಣಿಮುತ್ತು ಇದಕ್ಕೆ ಜ್ವಲಂತ ಸಾಕ್ಷಿ. ''ಪ್ರಧಾನಿ ಮೋದಿಯವರು ವಿಮಾನದಲ್ಲಿ ಪ್ರಯಾಣಿಸುತ್ತಾರೆ, ಸಮುದ್ರದೊಳಗೂ ಹೋಗುತ್ತಾರೆ. ಕೈಗಾರಿಕೋದ್ಯಮಿಗಳ ಕುಟುಂಬಿಕರ ಮದುವೆಗಳಲ್ಲೂ ಪಾಲ್ಗೊಳ್ಳುತ್ತಾರೆ. ಆದರೆ ಬಡವರ ಬಳಿಗೆ ಮಾತ್ರ ಹೋಗುವುದಿಲ್ಲ'' ಎಂಬ ರಾಹುಲ್ ಮಹಾಶಯರ ಮಾತುಗಳನ್ನು ಕೇಳಿ ರಾಜಕೀಯ ಪಂಡಿತರು ನಗಬಾರದ ಕಡೆಯಿಂದ ನಗುತ್ತಿದ್ದಾರಂತೆ! ಇನ್ನು, ಸಿಕ್ಕಿದ್ದೇ ಚಾನ್ಸು ಎನ್ನುವ ಸಂಭ್ರಮದಲ್ಲಿ 'ಕೇಶವಕೃಪಾ'ಪೋಷಿತರು, ''ಹಾಗಾದ್ರೆ, ಒಬ್ಬೊಬ್ಬ ಶ್ರೀಸಾಮಾನ್ಯರ ಮನೆಯ ಮದುವೆಯಲ್ಲೂ ಮೋದಿಯವರು ಪಾಲ್ಗೊಂಡು ಪಾಯಸದೂಟ ಮಾಡಿಕೊಂಡು ಹೋಗಬೇಕೆಂಬುದು ನಿಮ್ಮ ಅಭಿಪ್ರಾಯವೇ?'' ಎಂದು ರಾಹುಲರನ್ನು ಪ್ರಶ್ನಿಸುತ್ತಿದ್ದಾರಂತೆ.

'ಆ ಪಕ್ಷ, ಈ ಪಕ್ಷ' ಎನ್ನದೆ, ಚುನಾವಣೆಗಳು ಬಂದಾಗಷ್ಟೇ ಜನರ ಬಳಿಗೆ ತೆರಳುವ, ಮನೆಮನೆಯ ಪ್ರಚಾರ ಕಾರ್ಯದ ವೇಳೆ ಕಂಡ ಕಂಡ ಎಳೆಮಕ್ಕಳ ಕೆನ್ನೆಹಿಂಡಿ ಮುದ್ದಿಸುವ, ಹಾದಿಬದಿಯ ಹೋಟೆಲ್‌ಗಳಿಗೆ ನುಗ್ಗಿ ಮೆಣಸಿನಕಾಯಿ ಬಜ್ಜಿ ಮತ್ತು ಚಹಾವನ್ನು ಚಪ್ಪರಿಸುವ ಸಾಕಷ್ಟು ರಾಜಕಾರಣಿಗಳನ್ನೂ, ಅವರ ಗೋಸುಂಬೆ ಬಣ್ಣವನ್ನೂ ನಮ್ಮ ಜನರು ಸಾಕಷ್ಟು ಕಂಡಾಗಿದೆ. ಇಂಥ ಯಾವ ನವರಂಗಿ ಆಟವೂ ಅವರಿಗೆ ಬೇಕಾಗಿಲ್ಲ, ಜನಪ್ರತಿನಿಧಿಗಳೆನಿಸಿ ಕೊಂಡವರು ಕೈ-ಬಾಯಿ ಶುದ್ಧವಾಗಿಟ್ಟುಕೊಂಡು ಜನಕಲ್ಯಾಣದ ಕಾರ್ಯಗಳನ್ನು ನಿಯತ್ತಿನಿಂದ ನಿರ್ವಹಿಸಿದರೆ ಸಾಕು ಎಂಬುದು ತ್ರಿಲೋಕ ಸಂಚಾರಿ ನಾರದರ ಅಭಿಮತ. ನೀವೇನಂತೀರಿ?

ನಾರಾಯಣ ನಾರಾಯಣ!

ಕೆಲ ದಿನಗಳ ಹಿಂದೆ ಒಂದು ಕೆ.ಜಿ.ಗೆ 50 ರುಪಾಯಿಯಷ್ಟಿದ್ದ ಈರುಳ್ಳಿ ಈಗ 60ರಿಂದ 80 ರು.ವರೆಗೂ ತನ್ನ ಬೆಲೆಯನ್ನು ಹೆಚ್ಚಿಸಿಕೊಂಡಿದ್ದು, ಕೆಲವೇ ದಿನಗಳಲ್ಲಿ ಅದು 100 ರುಪಾಯಿಯನ್ನು ಮುಟ್ಟಲಿದೆ ಎನ್ನುತ್ತಿದ್ದಾರೆ ಮಾರುಕಟ್ಟೆ ಪಂಡಿತರು. ಹೆಚ್ಚುವಾಗ ಹೆಂಗಸರ ಕಣ್ಣಲ್ಲೂ, ದುಡ್ಡು ಬಿಚ್ಚುವಾಗ ಗಂಡಸರ ಕಣ್ಣಲ್ಲೂ 'ಕಣ್ಣೀರು' ಹಾಕಿಸುವ ಈ ಈರುಳ್ಳಿಗೆ ಇನ್ನಾದರೂ 'ಕಣ್ಣೀರುಳ್ಳಿ' ಎಂದು ಮರುನಾಮಕರಣ ಮಾಡಬಾರದೇಕೆ? ಎಂದು ಉದಯೋನ್ಮುಖ ನಿಘಂಟು ತಜ್ಞರೊಬ್ಬರು ಸ್ವಗತದಲ್ಲಿ ಅಲವತ್ತುಕೊಂಡರಂತೆ!!

ಹಿಂದೆಂದಿಗಿಂತಲೂ ಸುರಕ್ಷಿತ ಭಾರತೀಯ ರೈಲ್ವೆ

ಭಾರತೀಯ ರೈಲ್ವೆಗೆ ಪ್ರಯಾಣಿಕರ ಸುರಕ್ಷತೆಯು ಮೊದಲ ಆದ್ಯತೆಯಾಗಿದೆ. 2023-24ರಲ್ಲಿ, ಸುರಕ್ಷತೆಗೆ ಸಂಬಂಧಿಸಿದ ಯೋಜನೆಗಳಲ್ಲಿ 1 ಲಕ್ಷ ಕೋಟಿ ರು.ಗಳಿಗಿಂತ ಹೆಚ್ಚಿನ ಹೂಡಿಕೆಯಾಗಿರುವುದು ಇದನ್ನು ಒತ್ತಿಹೇಳುತ್ತದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಇದಕ್ಕಾಗಿ ಇನ್ನೂ ಹೆಚ್ಚು ಮೊತ್ತವನ್ನು ವಿನಿಯೋಗಿಸುವ ಯೋಜನೆಗಳಿವೆ.

ಸಾಧನಾಪಥ

ಎ.ಕೆ.ಖಂಡೇಲ್ವಾಲ್
vveditoped@gmail.com

ಭಾರತೀಯ ರೈಲುಗಳಲ್ಲಿ ಪ್ರಯಾಣಿಕರು ಹಿಂದೆಂದಿಗಿಂತಲೂ ಹೆಚ್ಚು ಸುರಕ್ಷಿತರಾಗಿದ್ದಾರೆ. ಕಳೆದ ದಶಕದಲ್ಲಿ ಉತ್ತಮವಾಗಿ ಯೋಜಿಸಿ ಜಾರಿಗೆ ತಂದ ಉಪಕ್ರಮಗಳೇ ಇದಕ್ಕೆ ಕಾರಣವೆನ್ನಬೇಕು. ಏಕೆಂದರೆ ಅವು ಗಮನಾರ್ಹ ಫಲಿತಾಂಶಗಳನ್ನು ನೀಡಿವೆ. ವಾರ್ಷಿಕವಾಗಿ 1 ಲಕ್ಷ ಕೋಟಿ ಪ್ಯಾಸೆಂಜರ್ ಕಿಲೋಮೀಟರ್ (ಪಿಕೆಎಂ) ಮತ್ತು ಸುಮಾರು 685 ಕೋಟಿ ಪ್ರಯಾಣಿಕರನ್ನು ದಾಖಲಿಸುವ ಭಾರತಕ್ಕಿಂತ ಬೇರಾವುದೇ ದೇಶವೂ ಹೆಚ್ಚಿನ ಸಂಖ್ಯೆಯ ಜನರನ್ನು ತನ್ನ ರೈಲುಗಳ ಮೂಲಕ ಸಾಗಿಸುವುದಿಲ್ಲ. ಹೆಚ್ಚು ವ್ಯಾಪಕವಾದ ರೈಲುಜಾಲ ಮತ್ತು ಹೋಲಿಸಬಹುದಾದ ಜನಸಂಖ್ಯೆಯ ಗಾತ್ರದ ಹೊರತಾಗಿಯೂ, ಸರಿಸುಮಾರು ಇದರ ಅರ್ಧದಷ್ಟು ಪ್ರಯಾಣಿಕರನ್ನು (ವಾರ್ಷಿಕವಾಗಿ ಸುಮಾರು 300 ಕೋಟಿ) ಸಾಗಿಸುವ ನೆರೆಯ ಚೀನಾ ಕೂಡ ನಮ್ಮ ಈ ಸಾಧನೆಗೆ ಸಾಟಿಯಿಲ್ಲ.

2000-01ರ ವರ್ಷದಲ್ಲಿ 473ರಷ್ಟಿದ್ದ ರೈಲು ಅಪಘಾತಗಳ ಸಂಖ್ಯೆ 2023-24ರಲ್ಲಿ ಕೇವಲ 40ಕ್ಕೆ ಇಳಿದಿದೆ. ಇದು ಸುರಕ್ಷತೆಯಲ್ಲಾದ ಗಮನಾರ್ಹ ಬದಲಾವಣೆಗೆ ಸಾಕ್ಷಿ. ಹಳಿಗಳನ್ನು ಸುಧಾರಿಸಲು, ಮಾನವರಹಿತ ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದು ಹಾಕಲು, ಸೇತುವೆಗಳ ಆರೋಗ್ಯವನ್ನು ನಿಯತವಾಗಿ ಮೇಲ್ವಿಚಾರಣೆ ಮಾಡಲು ಕೈಗೊಂಡ ಕ್ರಮಗಳಿಂದಾಗಿ ಮತ್ತು ನಿಲ್ದಾಣಗಳನ್ನು ಡಿಜಿಟಲೀಕರಣಗೊಳಿಸುವ ಕೇಂದ್ರೀಕೃತ ಪ್ರಯತ್ನಗಳ ಮೂಲಕ ಈ ಪ್ರಗತಿ ಸಾಧಿಸಲಾಗಿದೆ.

ಪ್ರಯಾಣಿಕರ ಸಂಖ್ಯೆ ಮತ್ತು ಒಳಗೊಂಡಿರುವ ಟ್ರ್ಯಾಕ್‌ನ (ರೈಲುಮಾರ್ಗದ) ಉದ್ದವನ್ನು ಪರಿಗಣಿಸಿದಾಗ ಈ ಸಾಧನೆಗಳು ಇನ್ನಷ್ಟು ಉಜ್ವಲವಾಗಿ ಕಾಣುತ್ತವೆ. 70,000 ರೂಟ್ ಕಿಲೋಮೀಟರ್ (ಆರ್‌ಕೆಎಂ) ಉದ್ದದ ಜಾಲದಲ್ಲಿ ದಿನಕ್ಕೆ ಸರಾಸರಿ 2 ಕೋಟಿಗೂ ಹೆಚ್ಚು ಜನರು ಪ್ರಯಾಣಿಸುತ್ತಾರೆ. ಪೀಕ್ ಸೀಸನ್‌ನಲ್ಲಿ ಈ ಸಂಖ್ಯೆ ದಿನಕ್ಕೆ 3 ಕೋಟಿಯನ್ನು ತಲುಪುತ್ತದೆ. ಇದು ಮತ್ತೊಂದು ವಿಶ್ವದಾಖಲೆಯನ್ನು ಸೃಷ್ಟಿಸುತ್ತದೆ! ಇದರರ್ಥ, ಭಾರತವು ಪ್ರತಿದಿನ ತನ್ನ ಜನಸಂಖ್ಯೆಯ ಸುಮಾರು ಶೇ.2ರಷ್ಟು ಜನರನ್ನು ರೈಲುಮಾರ್ಗದಲ್ಲಿ ಸುರಕ್ಷಿತವಾಗಿ ಸಾಗಿಸುತ್ತದೆ. ಭಾರತಕ್ಕೆ ಹೋಲಿಸಿದಾಗ ಇದು ಚೀನಾದಲ್ಲಿ ಕೇವಲ ಶೇ.0.58ರಷ್ಟು ಮತ್ತು ಅಮೆರಿಕದಲ್ಲಿ ಶೇ.0.09ರಷ್ಟು ಇದೆ ಎಂಬುದು ಗಮನಾರ್ಹ.

ಭಾರತೀಯ ರೈಲ್ವೆಗೆ ಪ್ರಯಾಣಿಕರ ಸುರಕ್ಷತೆಯು ಮೊದಲ ಆದ್ಯತೆಯಾಗಿದೆ. 2023-24ರಲ್ಲಿ, ಸುರಕ್ಷತೆಗೆ ಸಂಬಂಧಿಸಿದ ಯೋಜನೆಗಳಲ್ಲಿ 1 ಲಕ್ಷ ಕೋಟಿ ರು.ಗಳಿಗಿಂತ ಹೆಚ್ಚಿನ ಹೂಡಿಕೆಯಾಗಿರುವುದು ಇದನ್ನು ಒತ್ತಿಹೇಳುತ್ತದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಇದಕ್ಕಾಗಿ ಇನ್ನೂ ಹೆಚ್ಚು ಮೊತ್ತವನ್ನು ವಿನಿಯೋಗಿಸುವ ಯೋಜನೆಗಳಿವೆ. ಇದರರ್ಥ, ರೈಲುಗಳು, ಸೇತುವೆಗಳು, ಹಳಿಗಳು ಮತ್ತು ಸಿಗ್ನಲಿಂಗ್ ವ್ಯವಸ್ಥೆಗಳ ಸುಧಾರಿತ ನಿರ್ವಹಣೆ, ಜತೆಗೆ ಮೇಲ್ಸೇತುವೆ ಮತ್ತು ಕೆಳಸೇತುವೆಗಳ ನಿರ್ಮಾಣದ ಮೂಲಕ ಹಳಿಗಳ ಬಳಿ ಸುಧಾರಿತ ರಸ್ತೆ ಸುರಕ್ಷತೆಯನ್ನು ಒದಗಿಸಲಾಗುತ್ತದೆ.

ರೈಲ್ವೆ ಸುರಕ್ಷತಾ ಕಾರ್ಯಕ್ಷಮತೆಯ ಸೂಚ್ಯಂಕ ವಾದ ಪ್ರತಿ ಮಿಲಿಯನ್ ರೈಲು ಕಿಲೋಮೀಟರ್‌ಗೆ (ಎಂಪಿಎಂಟಿಕೆ) ಅಪಘಾತದ ಸಂಖ್ಯೆ 2000-01ರಲ್ಲಿ 0.65ರಿಂದ 2023-24ರಲ್ಲಿ 0.03ಕ್ಕೆ ಇಳಿದಿದೆ. ಆಧುನಿಕ, ಅತ್ಯಾಧುನಿಕ ಟ್ರ್ಯಾಕ್ ನಿರ್ವಹಣೆ ಮತ್ತು ನವೀಕೃತ ಯಂತ್ರಗಳನ್ನು ಬಳಸಿಕೊಂಡು ವರ್ಧಿತ ಟ್ರ್ಯಾಕ್ ನಿರ್ವಹಣೆ, ಸುಧಾರಿತ ಟ್ರ್ಯಾಕ್ ದೋಷಪತ್ತೆ ಮತ್ತು ಮಾನವ ದೋಷಗಳನ್ನು ಕಡಿಮೆ ಮಾಡಲು ಸುಧಾರಿತ ತಂತ್ರಜ್ಞಾನ ಸೇರಿದಂತೆ ಹಲವಾರು ಹೆಚ್ಚುವರಿ ಕ್ರಮಗಳು ಇದಕ್ಕೆ ಕಾರಣವಾಗಿವೆ. ಹಳಿಗಳ ನಿರ್ವಹಣೆಯನ್ನು ಸುಧಾರಿಸಲು ಭಾರತೀಯ ರೈಲ್ವೆ ಆಧುನಿಕ ಟ್ರ್ಯಾಕ್ ನಿರ್ವಹಣಾ ಯಂತ್ರಗಳ ನಿಯೋಜನೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ. 2013-14ರವರೆಗೆ ಬಳಕೆಯಲ್ಲಿದ್ದ ಇಂಥ ಕೇವಲ 700ರಷ್ಟು ಯಂತ್ರಗಳಿಗೆ ಹೋಲಿಸಿದರೆ ಈಗ ಆ ಸಂಖ್ಯೆ 1667ಕ್ಕೆ ಹೆಚ್ಚಳಗೊಂಡಿದೆ. ಹೆಚ್ಚುವರಿ ಉಪಕರಣಗಳ ಸಂಖ್ಯೆಯನ್ನು ಹೆಚ್ಚಿಸುವುದು ಈ ಉಪಕ್ರಮದ ಒಂದು ಮೂಲಾಧಾರವಾಗಿದೆ; 2014-15ರಲ್ಲಿ ಕೇವಲ 90ರಷ್ಟು ಇದ್ದ ಇವುಗಳ ಸಂಖ್ಯೆ ಈಗ 21,742ಕ್ಕೆ ಏರಿದೆ. ಪೈಲಟ್ ಜಾಗರೂಕತೆಯನ್ನು ಹೆಚ್ಚಿಸಲು ಎಲ್ಲಾ ಲೋಕೊಮೋಟಿವ್‌ಗಳಲ್ಲಿ ವಿಚಕ್ಷಣಾ ನಿಯಂತ್ರಣ ಸಾಧನಗಳನ್ನು (ವಿಸಿಡಿ) ಸ್ಥಾಪಿಸಲಾಗಿದೆ. ಇವುಗಳ ಸಂಖ್ಯೆ 2013-14ರಲ್ಲಿ 10,000ಕ್ಕಿಂತ ಕಡಿಮೆ ಇದ್ದುದು ಪ್ರಸ್ತುತ 16,021ಕ್ಕೆ ಏರಿದೆ. ಬ್ರಾಡ್‌ಗೇಜ್ ಮಾರ್ಗಗಳಲ್ಲಿನ 6637 ನಿಲ್ದಾಣಗಳ ಪೈಕಿ 6575ರಲ್ಲಿ ಪ್ಯಾನಲ್ ಇಂಟರ್‌ಲಾಕಿಂಗ್, ರೂಟ್ ರಿಲೇ ಇಂಟರ್‌ಲಾಕಿಂಗ್ ಮತ್ತು ಇಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್‌ನಂಥ ಸುಧಾರಿತ ಸಿಗ್ನಲಿಂಗ್ ಯಾಗಿ, ಆಸ್ತಿ ವಿಶ್ವಾಸಾರ್ಹತೆಯನ್ನು ಮತ್ತಷ್ಟು ಹೆಚ್ಚಿಸಲು ಇಡೀ ರೈಲ್ವೆ ಜಾಲದಾದ್ಯಂತ 'ರೈಲ್ ಗ್ರೈಂಡಿಂಗ್' ಅನ್ನು ಜಾರಿಗೆ ತರಲಾಗಿದೆ.

ಇದಲ್ಲದೆ, ದುಷ್ಕರ್ಮಿಗಳ ಚಟುವಟಿಕೆಯನ್ನು ತಡೆಯಲು, ಅಂದರೆ, ರೈಲು ಕಾರ್ಯಾಚರಣೆಗಳಿಗೆ ಗಂಭೀರ ಸುರಕ್ಷತಾ ಅಪಾಯಗಳನ್ನು ಉಂಟುಮಾಡುವ ವಿಧ್ವಂಸಕತೆ, ಹಳಿಗಳ ತಿರುಚುವಿಕೆ ಮತ್ತು ಹಳಿಗಳ ಮೇಲೆ ಅಪಾಯಕಾರಿ ವಸ್ತುಗಳನ್ನು ಇರಿಸುವಿಕೆ ಮುಂತಾದ ಸಮಸ್ಯೆಗಳನ್ನು ಪರಿಹರಿಸಲು ಟ್ರ್ಯಾಕ್ ಗಸ್ತನ್ನು ನಿರಂತರವಾಗಿ ಕೈಗೊಳ್ಳಲಾಗುತ್ತದೆ. ಈ ಫಲಿತಾಂಶಗಳನ್ನು ಕಾಪಾಡಿಕೊಂಡು ಬರಲು ಮತ್ತು ಸುಧಾರಿಸಲು ತಾಂತ್ರಿಕ ಮಧ್ಯಸ್ಥಿಕೆಗಳು ಹಾಗೂ ಉದ್ದೇಶಿತ ತರಬೇತಿಯ ಮಿಶ್ರ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

ಮಂಜುಪೀಡಿತ ಪ್ರದೇಶಗಳಲ್ಲಿ ಚಾಲನೆ ಮಾಡುವುದಕ್ಕೆ ನೆರವಾಗಲೆಂದು ಲೋಕೋ ಪೈಲಟ್‌ಗಳಿಗೆ ಜಿಪಿಎಸ್ ಆಧಾರಿತ 'ಫಾಗ್ ಫಾಸ್' ವ್ಯವಸ್ಥೆಗಳನ್ನು ಒದಗಿಸಲಾಗಿದೆ.

ಇದಲ್ಲದೆ, ಲೋಕೋಪೈಲಟ್‌ಗಳ ಚಾಲನಾ ಕೌಶಲ ಮತ್ತು ಪ್ರತಿಕ್ರಿಯೆಯ ಸಮಯವನ್ನು ಸುಧಾರಿಸಲು ಸಿಮ್ಯುಲೇಟರ್ ಆಧಾರಿತ ತರಬೇತಿಗೆ (ಕ್ಷೇತ್ರ ಅನುಭವವನ್ನು ಅನುಕರಿಸುವಿಕೆ) ಅವರನ್ನು ತೊಡಗಿಸಲಾಗಿದೆ. ಮುಂಚೂಣಿ ಸಿಬ್ಬಂದಿ, ಅಗ್ನಿಶಾಮಕ ಸಾಧನಗಳ ಬಳಕೆಯಲ್ಲಿ ತರಬೇತಿ ಪಡೆದಿದ್ದಾರೆ. ಒಟ್ಟಾರೆಯಗಿ, 2023-24ರ ಅವಧಿಯಲ್ಲಿ 6 ಲಕ್ಷಕ್ಕೂ ಹೆಚ್ಚು ರೈಲ್ವೆ ನೌಕರರು ವಿವಿಧ ರೀತಿಯ ತರಬೇತಿಗೆ, ಅಂದರೆ ಆರಂಭಿಕ, ಭಡ್ತಿ ಸಂಬಂಧಿತ, ಪುನರ್‌ಮನನ (ರಿಫ್ರೆಷರ್) ಹಾಗೂ ವಿಶೇಷ ತರಬೇತಿಗೆ ಒಳಗಾಗಿದ್ದಾರೆ.

ಮಾನವ ಸುರಕ್ಷತೆಯ ಹೊರತಾಗಿ, ಭಾರತೀಯ ರೈಲ್ವೆಯು 2024-25ರಲ್ಲಿ ಹಳಿಗಳ ಉದ್ದಕ್ಕೂ 6433 ಕಿ.ಮೀ.ನಷ್ಟು ಬೇಲಿಯನ್ನು ನಿರ್ಮಿಸುವ ಮೂಲಕ ವನ್ಯಜೀವಿ ಮತ್ತು ಜಾನುವಾರು ರಕ್ಷಣೆಯ ಸಮಸ್ಯೆಯನ್ನು ಪರಿಹರಿಸುತ್ತಿದೆ. 2024ರ ಆಗಸ್ಟ್ ವೇಳೆಗೆ 1396 ಕಿ.ಮೀ. ಬೇಲಿ ಪೂರ್ಣಗೊಂಡಿದ್ದು, ಇದು ಈ ಮಾರ್ಗಗಳಲ್ಲಿನ ಜಾನುವಾರು ಡಿಕ್ಕಿ ಪ್ರಕರಣಗಳನ್ನು ಗಮನಾರ್ಹವಾಗಿ ಕಡಿಮೆ ಮಾಡಿದೆ. ಈ ಕ್ರಮಗಳಿಗೆ ಪೂರಕವಾಗಿ, ಎಲ್‌ಎಚ್‌ಬಿ ಬೋಗಿಗಳತ್ತ ಗಮನವನ್ನು ಕೇಂದ್ರೀಕರಿಸಲಾಗಿದ್ದು, ಅವು ಅಪಘಾತ-ನಿರೋಧಕ ವೈಶಿಷ್ಟ್ಯಗಳನ್ನು ಹೊಂದಿವೆ. ರೈಲುಗಳು ಹಳಿತಪ್ಪುವ ಮತ್ತು ಪ್ರಯಾಣಿಕರು ಗಾಯಗೊಳ್ಳುವ ಸಾಧ್ಯತೆಗಳನ್ನು ಇವು ಕಡಿಮೆ ಮಾಡುತ್ತವೆ. ಅಪಘಾತ ಸಂದರ್ಭಗಳಲ್ಲಿ ಒಂದರ ಮೇಲೊಂದು ಏರುವುದನ್ನು ತಪ್ಪಿಸುವಂತೆ ಬೋಗಿಗಳನ್ನು ವಿನ್ಯಾಸಗೊಳಿಸಲಾಗಿದ್ದು, ಗಂಟೆಗೆ 160 ಕಿ.ಮೀ. ವೇಗದಲ್ಲಿ ಚಲಿಸುವಾಗಲೂ ಸುರಕ್ಷಿತವಾಗಿರುವಂತೆ ಇವನ್ನು ನಿರ್ಮಿಸಲಾಗಿದೆ. 2023-24ರಲ್ಲಿ 4977 ಎಲ್‌ಎಚ್‌ಬಿ ಕೋಚ್‌ಗಳನ್ನು ತಯಾರಿಸಲಾಗಿದ್ದು, ಇದು 2013-14ರಲ್ಲಿ ಉತ್ಪಾದಿಸಲಾದ ಕೋಚ್‌ಗಳಿಗಿಂತ (2467) ಎರಡು ಪಟ್ಟು ಹೆಚ್ಚಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಭಾರತೀಯ ರೈಲುಗಳು ಪ್ರಯಾಣಕ್ಕೆ ಹಿಂದೆಂದಿಗಿಂತಲೂ ಹೆಚ್ಚು ಸುರಕ್ಷಿತವಾಗಿವೆ.

(ಲೇಖಕರು ಇನ್‌ಫ್ರಾ, ರೈಲ್ವೆ ಮಂಡಳಿಯ ನಿವೃತ್ತ ಸದಸ್ಯರು, ಪದನಿಮಿತ್ತ ಕಾರ್ಯದರ್ಶಿ, ಭಾರತ ಸರಕಾರ)

ಅನಂತಕುಮಾರ್ ಅವರ ನೆನಪಿನಲ್ಲಿ...

ಅನಂತ ಸ್ಮರಣೆ

ಜಿ.ಎಂ.ಇನಾಂದಾರ್

2018ರ ನವೆಂಬರ್ 12, ಅನಂತಕುಮಾರ್ ಅವರು ಅನಂತದಲ್ಲಿ ಲೀನವಾದ ದಿನ. ಕರ್ನಾಟಕಕ್ಕೆ ಹಾಗೂ ದೇಶಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ ಅನಂತಕುಮಾರ್ ತುಂಬಾ ಕ್ರಿಯಾಶೀಲ ರಾಜಕಾರಣಿ. ಅವರನ್ನು ರಾಜಕಾರಣಿ ಎನ್ನುವುದಕ್ಕಿಂತ 'ಮುತ್ಸದ್ದಿ' ಎನ್ನುವುದು ಸೂಕ್ತ.

ಕರ್ನಾಟಕದ ಅವಶ್ಯಕತೆಗಳನ್ನು ದೂರದೃಷ್ಟಿಯಿಂದ ಗಮನಿಸಿ ಅದರ ನೆರವೇರಿಕೆಗಾಗಿ ಶ್ರಮಿಸುವುದು ಅವರಿಗೆ ರಕ್ತಗತವಾಗಿತ್ತು. ಅಂತೆಯೇ, ಬೆಂಗಳೂರು ಮೆಟ್ರೋ ಹಾಗೂ ಬೆಂಗ ಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹೀಗೆ ಹಲವಾರು ಯೋಜನೆಗಳು ಅವರಿಂದಾಗಿ ಸಾಕಾರಗೊಂಡು ಜನಸೇವೆಗೆ ಅರ್ಪಿತವಾಗಿವೆ. ಕರ್ನಾಟಕದ ನೆಲ, ಜಲ ಹಾಗೂ ಭಾಷೆಯ ಬಗ್ಗೆ ಸದಾ ಅಭಿಮಾನ ಪಡುತ್ತಿದ್ದ ಅನಂತಕುಮಾರ್, ಅವುಗಳ ರಕ್ಷಣೆಗೆ ಸದಾ ಮುಂದಾಗುತ್ತಿದ್ದರು.

ಅನಂತಸ್ಮೃತಿ ನಡಿಗೆ

ಅನಂತಕುಮಾರ್ ಅವರ ಪುಣ್ಯತಿಥಿಯ ಸ್ಮರಣಾರ್ಥ, ಅದಮ್ಯ ಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನದ ಸಹಯೋಗದಲ್ಲಿ ಇಂದು (ನವೆಂಬರ್ 12) 'ಅನಂತಸ್ಮೃತಿ ನಡಿಗೆ' ಪಂಜಿನ ಮೆರವಣಿಗೆಯನ್ನು ಆಯೋಜಿಸಲಾಗಿದೆ. ಬೆಂಗಳೂರಿನ ಸೌತ್ ಎಂಡ್ ವೃತ್ತದಲ್ಲಿರುವ 'ಅನಂತ ಪ್ರೇರಣಾ ಕೇಂದ್ರ'ದಿಂದ ಸಂಜೆ 5 ಗಂಟೆಗೆ ನಡೆಯಲಿರುವ ಈ ಪಂಜಿನ ಮೆರವಣಿಗೆಯಲ್ಲಿ ಬಿಜೆಪಿಯ ಹಿರಿಯ ನಾಯಕರು, ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

- **ಘಟನೆ 1:** ಆಲಮಟ್ಟಿ ಜಲಾಶಯದ ಎತ್ತರ ಹೆಚ್ಚಿಸುವುದಕ್ಕೆ ಆಂಧ್ರಪ್ರದೇಶ ಕ್ಯಾತೆ ತೆಗೆಯುತ್ತಿತ್ತು. ಈ ವಿವಾದ ನ್ಯಾಯಾಲಯದಲ್ಲಿತ್ತು. ಆಗ ಅಧಿಕಾರದಲ್ಲಿದ್ದ ವಾಜಪೇಯಿಯವರ ಸರಕಾರಕ್ಕೆ ತೆಲುಗುದೇಶಂ ಪಕ್ಷ ಬೆಂಬಲ ನೀಡಿತ್ತು. ಅಣೆಕಟ್ಟಿನ ಎತ್ತರ ಹೆಚ್ಚಿಸುವ ಬಗ್ಗೆ ಸುಪ್ರೀಂಕೋರ್ಟ್ ಕೇಂದ್ರದ ಅಭಿಪ್ರಾಯ ಕೇಳಿತ್ತು. ಅನಂತಕುಮಾರ್‌ರನ್ನು ಭೇಟಿಮಾಡಿದ ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಹಾಗೂ ನೀರಾವರಿ ಸಚಿವ ಎಚ್.ಕೆ.ಪಾಟೀಲ್ ಅವರು ಈ ವಿಷಯದ ಬಗ್ಗೆ ಚರ್ಚಿಸಿದರು. ನಂತರ ಅವರೊಂದಿಗೆ ಪ್ರಧಾನ ಮಂತ್ರಿಗಳನ್ನು ಭೇಟಿಮಾಡಿದ ಈ ನಿಯೋಗ, ವಸ್ತುಸ್ಥಿತಿಯನ್ನು ಪ್ರಧಾನಿಯವರಿಗೆ ವಿವರಿಸಿ ಅವರ ಅನುಮತಿ ಪಡೆಯಿತು.

ಸುಪ್ರೀಂಕೋರ್ಟ್ ಕಲಾಪಕ್ಕೆ ಮೊದಲು ಸಾಲಿಸಿಟರ್ ಜನರಲ್ ಹರೀಶ್ ಸಾಳ್ವೆಯವರನ್ನು ಅನಂತಕುಮಾರ್ ತಮ್ಮ ನಿವಾಸಕ್ಕೆ ಕರೆಸಿಕೊಂಡು, ಅಣೆಕಟ್ಟೆಯ ಎತ್ತರವನ್ನು ಹೆಚ್ಚಿಸಲು ಕೇಂದ್ರದ ಆಕ್ಷೇಪಣೆ ಇಲ್ಲ ಎಂಬುದನ್ನು ಸುಪ್ರೀಂಕೋರ್ಟ್‌ಗೆ ತಿಳಿಸುವಂತೆ ಕೋರಿದರು. ಅದರಂತೆ ಸಾಳ್ವೆಯವರು ಕೇಂದ್ರದ ನಿಲುವು ಪ್ರಕಟಿಸಿದಾಗ ಸ್ವತಃ ಚಂದ್ರಬಾಬು ನಾಯ್ಡು ಅವರಿಗೆ ಅಚ್ಚರಿಯಾಯಿತು. ಈ ವಿಷಯವು ಚಂದ್ರಬಾಬು ನಾಯ್ಡು ಅವರಿಗೆ ಮೊದಲೇ ಗೊತ್ತಾಗಿದ್ದರೆ ಕಥೆ ಏನಾಗುತ್ತಿತ್ತು ಎನ್ನುವುದನ್ನು ತಿಳಿದುಕೊಳ್ಳುವುದು ಕಷ್ಟವಲ್ಲ. ಅನಂತಕುಮಾರ್ ಅತ್ಯಂತ ಚಾಣಾಕ್ಷತೆಯಿಂದ ಈ ವಿಷಯವನ್ನು ನಿಭಾಯಿಸಿದರು. ಆಲಮಟ್ಟಿ ಅಣೆಕಟ್ಟೆಯ ಎತ್ತರ ಹೆಚ್ಚಿಸಿದ್ದರಿಂದ ಬಾಗಲಕೋಟೆ, ವಿಜಯಪುರದ ರೈತರ ನೀರಾವರಿ ಪ್ರದೇಶ 6 ಲಕ್ಷ ಎಕರೆಯಿಂದ 17 ಲಕ್ಷ ಎಕರೆಗೆ ಏರಿತು.

- **ಘಟನೆ 2:** ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿ ಅನಂತಕುಮಾರ್ ಅವರ ಕನಸಾಗಿತ್ತು. ಅಂತೆಯೇ ಹುಬ್ಬಳ್ಳಿಯಲ್ಲಿ ನೈಋತ್ಯ ರೈಲ್ವೆ ವಲಯ ಸ್ಥಾಪಿಸುವುದರಿಂದ ಆ ಭಾಗದ ಅಭಿವೃದ್ಧಿಗೆ ಅನುಕೂಲ ಎಂಬುದು ಅವರ ಭಾವನೆಯಾಗಿತ್ತು. ಬೆಂಗಳೂರಿನ ಸಂಸದರಾಗಿದ್ದರು ಕೂಡ ಅವರು ಈ ವಿಷಯದಲ್ಲಿ ಮುತುವರ್ಜಿ ವಹಿಸಿದರು. ಸಂಪುಟ ಸಭೆಯಲ್ಲಿ ಈ ವಿಷಯ ಬಂದಾಗ ಆಡ್ವಾಣಿಯವರು ಸಂಬಂಧಪಟ್ಟ ಕಡತವನ್ನು ಕೈಗೆತ್ತಿಕೊಂಡು, ''ಯೆ ಅನಂತ್‌ಕುಮಾರ್ ಕಾ ಸಪ್ನಾ ಹೈ, ಸಬ್ ಲೋಗ್ ಹಾಂ ಬತಾಯಿಯೆ'' ಎಂದು ಅನುಮೋದನೆ ಕೊಡಿಸಿದರು. ಬೆಂಗಳೂರಿನ ಸಂಸದರಾಗಿದ್ದರೂ ಅನಂತಕುಮಾರ್ ಅವರ ದೃಷ್ಟಿ ಇಡೀ ಕರ್ನಾಟಕದ ಅಭಿವೃದ್ಧಿಯತ್ತಲೇ ಇರುತ್ತಿತ್ತು.

- **ಘಟನೆ 3:** ಕನ್ನಡ ಭಾಷೆಯ ಬಗ್ಗೆ ಅಪಾರ ಪ್ರೀತಿ ಮತ್ತು ಅಭಿಮಾನ ಹೊಂದಿದ್ದ ಅನಂತಕುಮಾರ್ ಅವರು ಪ್ರತಿಬಾರಿ ಕನ್ನಡದಲ್ಲೇ ಪ್ರಮಾಣವಚನ ಸ್ವೀಕರಿಸುತ್ತಿದ್ದರು. ಎಲ್ಲ ಕಡತಗಳ ಮೇಲೆ ಕನ್ನಡದಲ್ಲಿಯೇ ಸಹಿ ಮಾಡುತ್ತಿದ್ದರು. 2012ರಲ್ಲಿ ನಡೆದ ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ, ಅನಂತಕುಮಾರ್ ಅವರು ಭಾರತದ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದರು. ಅಲ್ಲಿಯ ಅಧ್ಯಕ್ಷರು ಹಾಗೂ ಪ್ರತಿನಿಧಿಗಳಿಗೆ ಕನ್ನಡದಲ್ಲೇ ಶುಭಾಶಯ ತಿಳಿಸಿ ಕನ್ನಡದ ಕಂಪನ್ನು ಬೀರಿದ್ದರು. ಕನ್ನಡ ಸಾಹಿತ್ಯದ ಬಗ್ಗೆ ಪ್ರೀತಿ ಹೊಂದಿದ್ದ ಅನಂತಕುಮಾರ್ ಪುಸ್ತಕಗಳನ್ನು ಓದುವ ಬಗ್ಗೆ ವಿಶೇಷ ಒಲವು ಹೊಂದಿದ್ದರು. ಆಗಾಗ ಚುಟುಕುಗಳನ್ನು ಬರೆಯುವುದು, ನಗೆಚಟಾಕಿಗಳನ್ನು ಹಾರಿಸುವುದು ಅವರಿಗೆ ತುಂಬಾ ಪ್ರಿಯವಾದ ಅಭ್ಯಾಸ. ಜೀವನದ ಬಗೆಗಿನ ಅವರ ನಿಲುವನ್ನು ತೋರ್ಪಡಿಸುವ ಚುಟುಕವೊಂದು ಅವರದೇ ಕೈಬರಹದಲ್ಲಿ ಇಲ್ಲಿದೆ:



(ಲೇಖಕರು ಅನಂತಕುಮಾರ್ ಪ್ರತಿಷ್ಠಾನದ ಕಾರ್ಯಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:323

ಸಮಾಚಾರ ಸಣ್ಣದಲ್ಲ

ಹಿಂದೂ, ಸಿಖ್ ಹಲಾಲ್ ಊಟವಿಲ್ಲ; ಏರಿಂಡಿಯ

ದೆಹಲಿ: ಏರ್ ಇಂಡಿಯ ವಿಮಾನಗಳಲ್ಲಿ ಹಿಂದೂ ಮತ್ತು ಸಿಖ್ ಪ್ರಯಾಣಿಕರಿಗೆ ಹಲಾಲ್ ಪ್ರಮಾಣೀಕೃತ ಮಾಂಸಾಹಾರಿ ಊಟ ನೀಡುವುದಿಲ್ಲ ಎಂದು

ಏರ್ ಇಂಡಿಯ ವಿಮಾನಯಾನ ಸಂಸ್ಥೆ ಅಧಿಕೃತ ವಾಗಿ ಪ್ರಕಟಿಸಿದೆ. ಮುಸ್ಲಿಂ ಪ್ರಯಾಣಿಕರು ಬಯಸಿ ದರೆ ಹಲಾಲ್ ಪ್ರಮಾಣೀಕೃತ ಊಟ ಪೂರೈಸ ಲಾಗುವುದು. ಅದಕ್ಕೆ ಮುಂಚಿತವಾಗಿಯೇ ತಿಳಿಸಿರ ಬೇಕು ಎಂದು ಏರ್ ಇಂಡಿಯ ವಿಮಾನಯಾನ ಸಂಸ್ಥೆ ತಿಳಿಸಿದೆ. ಹಿಂದೂ ಮತ್ತು ಸಿಖ್ ಪ್ರಯಾಣಿಕರು ಹಲಾಲ್ ಪ್ರಮಾಣೀಕೃತ ಊಟ ನೀಡದಂತೆ ದಶಕಗಳ ಸುದೀರ್ಘ ಅಭಿಯಾನ ನಡೆಸಿದ್ದಕ್ಕೆ ಈ ಪ್ರತಿಫಲ ಸಿಕ್ಕಿದೆ. ಇದಕ್ಕೆ ಹಿಂದೂ, ಸಿಖ್ ಪ್ರಯಾಣಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

2.94 ಲಕ್ಷ ಕೋಟಿ ರು. ಆಂಧ್ರಪ್ರದೇಶ ಬಜೆಟ್

ಅಮರಾವತಿ: ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ನೇತೃತ್ವದ ಆಂಧ್ರಪ್ರದೇಶದ ಎನ್‌ಡಿಎ ಸರಕಾರ 2.94 ಲಕ್ಷ ಕೋಟಿ ರು.ಗಳಷ್ಟು ಬೃಹತ್ ಗಾತ್ರದ ಬಜೆಟ್ ಮಂಡಿಸಿದೆ. ಆಂಧ್ರಪ್ರದೇಶದ ಹಣಕಾಸು ಸಚಿವ ಪಯ್ಯಾವುಲ ಕೇಶವ್ ಸೋಮವಾರ 2024-25ನೇ ಹಣಕಾಸು ವರ್ಷದ ಉಳಿದ ಅವಧಿಗೆ ಒಟ್ಟು 2,94,427 ಕೋಟಿ ರು. ಬಜೆಟ್ ಮಂಡಿಸಿದರು. ರಾಜ್ಯದ ಹಣಕಾಸು ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಗುರಿಯನ್ನು ಬಜೆಟ್ ಹೊಂದಿದೆ. ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಕ್ಷೇತ್ರಗಳಿಗೆ ಆದ್ಯತೆ ನೀಡುತ್ತದೆ ಎಂದರು.

'ಎಂಎಸ್‌ಎಂಇ'ಗಳಿಗೆ 100 ಕೋಟಿ ರು. ಸಾಲ

ದೆಹಲಿ: ಕೇಂದ್ರ ಸರಕಾರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮ(ಎಂಎಸ್‌ಎಂಇ) ಗಳಿಗೆ ಉತ್ತೇಜನ ನೀಡಲು ಕ್ರೆಡಿಟ್ ಗ್ಯಾರಂಟಿ

ಸ್ಕೀಮ್ ಮಾಡಿದೆ. ಯಾವುದೇ ಅಡಮಾನ ಇಲ್ಲದೇ ಎಂಎಸ್‌ಎಂಇಗಳಿಗೆ ಸಾಲ ನೀಡುವ ಕ್ರೆಡಿಟ್ ಗ್ಯಾರಂಟಿ ಸ್ಕೀಂ ಅನ್ನು 2024-25ರ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಅದು ಶೀಘ್ರದಲ್ಲೇ ಜಾರಿಗೆ ಬರಲಿದೆ. ಈ ಯೋಜನೆಯಡಿ ಸರಕಾರವೇ 100 ಕೋಟಿ ರು.ವರೆಗಿನ ಸಾಲಕ್ಕೆ ಗ್ಯಾರಂಟಿ ಒದಗಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ದೆಹಲಿ, ಮುಂಬೈ ಈರುಳ್ಳಿ ಕೆ.ಜಿ. 80 ರು

ದೆಹಲಿ: ದೆಹಲಿ, ಮುಂಬೈ ಸೇರಿ ದೇಶದ ಪ್ರಮುಖ ನಗರಗಳಲ್ಲಿ ಈರುಳ್ಳಿ ಬೆಲೆ ಕೆಲ ದಿನಗಳಿಂದ ತೀವ್ರ

ಏರಿಕೆ ಆಗುತ್ತಿದೆ. 40ರಿಂದ 50 ರು.ಗೆ ಮಾರಾಟವಾಗುತ್ತಿದ್ದ ಕೆಜಿ ಈರುಳ್ಳಿ ಈಗ ಸಗಟು ಮಾರುಕಟ್ಟೆಯಲ್ಲಿಯೇ 70 ರಿಂದ 80 ರು. ವರೆಗೂ ಏರಿಕೆಯಾಗಿದೆ. ಇದು ಕಳೆದ 5 ವರ್ಷಗಳಲ್ಲೇ ಗರಿಷ್ಠ ಮಟ್ಟದ ಧಾರಣೆಯಾಗಿದೆ ಎಂದು ಗ್ರಾಹಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಭದ್ರತಾ ಪಡೆ ಗುಂಡಿಗೆ 11 ಕುಕಿ ಉಗ್ರರು ಹತ

ಇಂಫಾಲ: ಮಣಿಪುರದ ಜಿರಿಬಾಮ್ ಜಿಲ್ಲೆಯಲ್ಲಿ ಸೋಮವಾರ ಭದ್ರತಾ ಪಡೆಗಳು ನಡೆಸಿದ ತೀವ್ರ ಸ್ವರೂಪದ ಕಾರ್ಯಾಚರಣೆಯಲ್ಲಿ 11 ಕುಕಿ

ಉಗ್ರರನ್ನು ಹೊಡೆದು ರುಳಿಸಲಾಗಿದೆ ಎಂದು ವರದಿಗಳು ತಿಳಿಸಿವೆ. ಅಸ್ಸಾಂ ಗಡಿ ಜಿಲ್ಲೆ ಜಿರಿಬಾಮ್‌ನಲ್ಲಿ ಸೋಮವಾರ ಮಧ್ಯಾಹ್ನ 3.30ರ ವೇಳೆ ಸಿಆರ್‌ಪಿಎಫ್ ಸೇನಾ ಶಿಬಿರದ ಮೇಲೆ ಕುಕಿ ಬಂಡುಕೋರರು ದಾಳಿ ನಡೆಸಿದರು. ಈ ವೇಳೆ ಸಿಆರ್‌ಪಿಎಫ್‌ನ ಕೆಲ ಯೋಧರು ಗಾಯಗೊಂಡರು. ಒಬ್ಬ ಯೋಧ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಯಿತು. ಈ ದಾಳಿಗೆ ಪ್ರತೀಕಾರವಾಗಿ ತೀವ್ರ ಸ್ವರೂಪದ ಕಾರ್ಯಾಚರಣೆ ನಡೆಸಿದ ಭದ್ರತಾ ಪಡೆ ಯೋಧರು, 11 ಕುಕಿ ಉಗ್ರರನ್ನು ಹೊಡೆದುರುಳಿಸಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ಇದಕ್ಕೂ ಮುನ್ನ ಕುಕಿ ಉಗ್ರರು ಜಿರಿಬಾಮ್‌ನಲ್ಲಿರುವ ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಿದ್ದರು.

{ **ಅಮಿತ್ ಶಾ** } ಗೃಹ ಸಚಿವ

ಬಾಂಗ್ಲಾದೇಶದಿಂದ ರಾಜ್ಯಕ್ಕೆ ನುಸುಳಿ ನೆಲೆ ಕಂಡುಕೊಂಡವರನ್ನು ಜಾರ್ಖಂಡ್‌ನಲ್ಲಿ ಬಿಜೆಪಿ ಸರಕಾರ ರಚನೆ ಬಳಿಕ ಗುರುತಿಸಿ ಹೊರಹಾಕಲಾಗುವುದು. ಅದಕ್ಕಾಗಿ ಸಮರ್ಥ ಸಮಿತಿ ರಚಿಸಲಾಗುವುದು. ನುಸುಳುಕೋರರ ವಶದಲ್ಲಿರುವ ಭೂಮಿಯನ್ನು ಮರಳಿ ವಶಪಡಿಸಿಕೊಳ್ಳಲಾಗುವುದು. ಬುಡ ಕಟ್ಟು ಮಹಿಳೆಯರ ವಂಚಿಸಿರುವ ನುಸುಳು ಕೋರರಿಗೆ ಭೂಮಿ ಸಿಗದಂತೆ ಕಾನೂನು ತರಲಾಗುವುದು.



ಬಹಿರಂಗ ಪ್ರಚಾರ ಅಂತ್ಯ | ಮಹಾರಾಷ್ಟ್ರ 288 ಕ್ಷೇತ್ರಕ್ಕೂ ಏಕಹಂತ ಮತದಾನ | ಜಾರ್ಖಂಡ್ 43 ಕ್ಷೇತ್ರಗಳಲ್ಲಿ ಮೊದಲ ಹಂತ

ಮಹಾರಾಷ್ಟ್ರ, ಜಾರ್ಖಂಡ್ ಪ್ರಚಾರ ಅಂತ್ಯ ನಾಳೆ ಮತ

ಮಹಾರಾಷ್ಟ್ರದಲ್ಲಿ ಬುಧವಾರ ನಡೆಯಲಿರುವ ವಿಧಾನಸಭೆ ಚುನಾವಣೆಗಾಗಿ ವಾರಗಳ ಕಾಲ ಪ್ರಚಾರ ನಡೆಸಿ ದಣಿದ 'ಮಹಾಯುತಿ' ಮೈತ್ರಿಕೂಟದ 3 ಪಕ್ಷಗಳ ನಾಯಕರಾದ ಡಿಸಿಎಂ ದೇವೇಂದ್ರ ಫಡ್ನವಿಸ್, ಸಿಎಂ ಏಕನಾಥ ಶಿಂದೆ ಮತ್ತು ಡಿಸಿಎಂ ಅಜಿತ್ ಪವಾರ್ ಒಂದೆಡೆಯಾದರೆ, ಇನ್ನೊಂದೆಡೆ 'ಮಹಾ ವಿಕಾಸ್ ಅಘಾಡಿ' ಒಕ್ಕೂಟದ 3 ಪ್ರಮುಖ ಪಕ್ಷಗಳ ನಾಯಕರಾದ ನಾನಾ ಪಟೋಲೆ, ಉದ್ಧವ್ ಠಾಕ್ರೆ ಮತ್ತು ಶರದ್ ಪವಾರ್.

ಮುಂಬೈ/ರಾಂಚಿ: ಮಹಾರಾಷ್ಟ್ರ ವಿಧಾನಸಭೆಯ 288 ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಹಾಗೂ ಜಾರ್ಖಂಡ್ ವಿಧಾನಸಭೆಯ 43 ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಬುಧವಾರ ಚುನಾವಣೆ ನಡೆಯಲಿದ್ದು, ಬಹಿರಂಗ ಪ್ರಚಾರ ಸೋಮವಾರ ಸಂಜೆ ಕೊನೆಗೊಂಡಿದೆ. ಜಾರ್ಖಂಡ್‌ನಲ್ಲಿ ಉಳಿದ 38 ವಿಧಾನಸಭಾ ಕ್ಷೇತ್ರಗಳಿಗೆ ನ.20ರಂದು ಮತದಾನಕ್ಕೆ ದಿನ ನಿಗದಿಯಾಗಿದೆ.

ಅಲ್ಲದೇ, ದೇಶದ 15 ರಾಜ್ಯಗಳಲ್ಲಿ 23 ವಿಧಾನಸಭಾ ಕ್ಷೇತ್ರಗಳಲ್ಲಿ ಹಾಗೂ ಕೇರಳದ ವಯನಾಡು ಸೇರಿದಂತೆ ಎರಡು ಲೋಕಸಭಾ ಕ್ಷೇತ್ರಗಳಲ್ಲಿಯೂ ಇದೇ ವೇಳೆ ಉಪ ಚುನಾವಣೆ ನಡೆಯಲಿದ್ದು, ನ.23ರಂದೇ ಈ ಕ್ಷೇತ್ರಗಳ ಮತ ಎಣಿಕೆಯೂ ನಡೆದು ಫಲಿತಾಂಶವೂ ಪ್ರಕಟವಾಗಲಿದೆ.

ಮಹಾರಾಷ್ಟ್ರದಲ್ಲಿ ಆಡಳಿತಾರೂಢ ಪಕ್ಷಗಳಾದ ಶಿವಸೇನೆ (ಶಿಂದೆ ಬಣ), ಬಿಜೆಪಿ ಮತ್ತು ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ(ಎನ್‌ಸಿಪಿ) ಅಜಿತ್ ಪವಾರ್ ಬಣದ ಒಕ್ಕೂಟವಾದ 'ಮಹಾಯುತಿ' ಹಾಗೂ ಕಾಂಗ್ರೆಸ್, ಶಿವಸೇನೆ(ಉದ್ಧವ್ ಬಣ) ಮತ್ತು ಎನ್‌ಸಿಪಿ(ಶರದ್ ಬಣ) ಒಕ್ಕೂಟವಾದ 'ಮಹಾ ವಿಕಾಸ್ ಅಘಾಡಿ' ನಡುವೆ ನೇರ ಹಣಾಹಣಿ ನಡೆದಿದೆ. ಉಳಿದಂತೆ ಸಮಾಜವಾದಿ ಪಕ್ಷ, ಎಐಎಂಐಎಂ, ಎಂಎನ್‌ಎಸ್, ಬಿಎಸ್‌ಪಿ ಮೊದಲಾದ ಪಕ್ಷಗಳ ಸ್ಪರ್ಧೆ ನೆಪಮಾತ್ರಕ್ಕೆ ಎನ್ನುವಂತಿದೆ. ಎರಡೂ ಮೈತ್ರಿಕೂಟಗಳೂ ಮಹಿಳೆಯರು, ಯುವಜನರನ್ನೇ ಗುರಿ ಮಾಡಿಕೊಂಡಿರುವುದು ಚುನಾವಣಾ ಪ್ರಣಾಳಿಕೆಯಲ್ಲಿ ಅರಿವಾಗುತ್ತದೆ. ಮಹಿಳೆಯರಿಗೆ ಮಾಸಿಕ ಆರ್ಥಿಕ ನೆರವು, ಯುವಜನರಿಗೆ ಉದ್ಯೋಗ ಸೃಷ್ಟಿಯ ಭರವಸೆ ನೀಡಲಾಗಿದೆ.

ಶತಾಯುಷಿ 'ಮಹಾ' ವಿಶೇಷ

ಮಹಾರಾಷ್ಟ್ರದಲ್ಲಿ ಶತಾಯುಷಿ ಮತದಾರರ ಸಂಖ್ಯೆ ಅಚ್ಚರಿ ಪಡುವಷ್ಟಿದೆ. 47,392 ಮತದಾರರ ವಯಸ್ಸು 100 ವರ್ಷಗಳನ್ನು ದಾಟಿದೆ. ಅವರಲ್ಲಿ 110 ಹಿರಿಯ ಜೀವಿಗಳಂತೂ 120 ವರ್ಷ ಮೀರಿದವರಾಗಿದ್ದಾರೆ ಎಂಬ ಅಂಕಿ ಅಂಶ ಲಭ್ಯವಾಗಿದೆ.

ಯುವಶಕ್ತಿ: ಒಟ್ಟು 9.70 ಕೋಟಿ ಮತದಾರರಲ್ಲಿ 1.88 ಕೋಟಿ (ಶೇ.19.42)ಯಷ್ಟು ಮತದಾರರು ಯುವ ಜನರೇ ಆಗಿದ್ದಾರೆ ಎಂಬುದೂ ಗಮನಾರ್ಹ ಅಂಶವಾಗಿದೆ.

ಬುಡಕಟ್ಟು ಜನರ ನಾಡು ಜಾರ್ಖಂಡ್

ರಾಂಚಿ: ಗಿರಿ-ಪರ್ವತಗಳ ನಾಡು, ಖನಿಜ ಸಂಪತ್ತಿನ ನೆಲೆವೀಡು ಜಾರ್ಖಂಡ್ ರಾಜ್ಯ ಬುಡಕಟ್ಟು ಜನರ ನಾಡು. 24 ಜಿಲ್ಲೆಗಳ ಪುಟ್ಟ ರಾಜ್ಯದಲ್ಲಿ 81 ವಿಧಾನಸಭಾ ಕ್ಷೇತ್ರಗಳಿದ್ದು, 2.60 ಕೋಟಿ ಮತದಾರ ರಿದ್ದಾರೆ. ಅವರಲ್ಲಿ ಶೇ.26 ರಷ್ಟು ಮತದಾರರು ಬುಡ ಕಟ್ಟು ಜನರೇ ಆಗಿದ್ದಾರೆ ಎಂಬುದು ಉಲ್ಲೇಖಾರ್ಹ. ಮೊದಲ ಹಂತದ ಮತದಾನಕ್ಕೆ ಸಜ್ಜಾಗಿ ರುವ 43 ಕ್ಷೇತ್ರಗಳಲ್ಲಿ ಬಹಿ ರಂಗ ಪ್ರಚಾರಕ್ಕೆ ಕೊನೆಯ ದಿನವಾದ ಸೋಮವಾರ ಬಿಜೆಪಿಯ ಚುನಾವಣಾ ಚಾಣಾಕ್ಷ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಒಂದೇ ದಿನ 3 ಕಡೆ ಬೃಹತ್ ರ‍್ಯಾಲಿಗಳನ್ನು ನಡೆಸಿದ್ದಾರೆ. ಬಿಜೆಪಿ ಮತ್ತು ಮಾಜಿ ಸಿಎಂ ಚಂಪೈ ಸೊರೇನ್, ಜಾರ್ಖಂಡ್ ವಿಕಾಸ್ ಮೋರ್ಚಾ(ಜೆವಿಎಂ) ಆಲ್ ಜಾರ್ಖಂಡ್ ಸ್ಟುಡೆಂ ಟ್ಸ್ ಯುನಿಯನ್(ಎಜೆಎಸ್‌ಯು) ಒಗ್ಗೂಡಿ ಜಾರ್ಖಂಡ್ ಚುನಾವಣೆ ಎದುರಿಸುತ್ತಿವೆ. ಇನ್ನೊಂದೆಡೆ, ಆಡಳಿತಾರೂಢ ಪಕ್ಷ, ಮುಖ್ಯಮಂತ್ರಿ ಹೇಮಂತ್ ಸೊರೇನ್ ನೇತೃತ್ವದ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ), ಕಾಂಗ್ರೆಸ್, ಆರ್‌ಜೆಡಿ ಜತೆಗೂಡಿ 'ಇಂಡಿಯ' ಒಕ್ಕೂಟದ ಭಾಗವಾಗಿ ಸ್ಪರ್ಧೆ ಮಾಡುತ್ತಿವೆ. ಇಂಡಿಯ ಒಕ್ಕೂಟದಿಂದ ಜೆಎಂಎಂ 43 ಕ್ಷೇತ್ರ, ಕಾಂಗ್ರೆಸ್ 30, ಆರ್‌ಜೆಡಿ 6, ಎಡಪಕ್ಷಗಳು 2 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿವೆ.

2019 ಫಲಿತಾಂಶ

ಜೆಎಂಎಂ	30
ಕಾಂಗ್ರೆಸ್	16
ಆರ್‌ಜೆಡಿ	1
ಬಿಜೆಪಿ	25
ಜೆವಿಎಂ(ಪಿ)	3
ಎಜೆಎಸ್‌ಯು	2
ಸಿಪಿಐ-ಎಂಎಲ್	1
ಎನ್‌ಸಿಪಿ	1
ಪಕ್ಷೇತರ	2
ಒಟ್ಟು ಕ್ಷೇತ್ರ	81

ಮತದಾರರು

ಪುರುಷರು	1.31 ಕೋಟಿ
ಮಹಿಳೆಯರು	1.29 ಕೋಟಿ
ಒಟ್ಟು ಮತದಾರರು	2.60 ಕೋಟಿ
ಮೊದಲ ಬಾರಿ ಮತದಾನ	11.84 ಲಕ್ಷ
ಯುವ ಮತದಾರರು	66.84 ಲಕ್ಷ

ಮಹಾರಾಷ್ಟ್ರ ವಿಧಾನಸಭೆ ಚುನಾವಣೆ

ಪಕ್ಷಗಳು	ರಾಜ್ಯ ಮುಖಂಡರು	ಹುದ್ದೆ	ಕ್ಷೇತ್ರ
ಬಿಜೆಪಿ	ದೇವೇಂದ್ರ ಫಡ್ನವೀಸ್	ಡಿಸಿಎಂ	ನಾಗಪುರ-ನೈರುತ್ಯ
ಶಿವಸೇನೆ(ಶಿಂದೆ ಬಣ)	ಏಕನಾಥ ಶಿಂದೆ	ಸಿಎಂ	ಕೊಪ್ರಿ ಪಚ್‌ಕಪಡಿ
ಎನ್‌ಸಿಪಿ (ಅಜಿತ್ ಬಣ)	ಅಜಿತ್ ಪವಾರ್	ಡಿಸಿಎಂ	ಬಾರಾಮತಿ
ಕಾಂಗ್ರೆಸ್	ನಾನಾ ಪಟೋಲೆ	ಎಂಪಿಸಿಸಿ ಅಧ್ಯಕ್ಷ	ಸಕೋಲಿ
ಶಿವಸೇನೆ(ಉದ್ಧವ್ ಬಣ)	ಉದ್ಧವ್ ಠಾಕ್ರೆ	ಮಾಜಿ ಸಿಎಂ	ಎಂಎಲ್‌ಸಿ
ಎನ್‌ಸಿಪಿ(ಶರದ್ ಬಣ)	ಜಯಂತ್ ಪಾಟೀಲ್		ಇಸ್ಲಾಂಪುರ

ಶೇಕಡಾ ಮತ ಗಳಿಕೆ	2019	2014
ಒಟ್ಟು ಮತದಾನ	61.44	63.38
ಬಿಜೆಪಿ	25.75	27.81
ಶಿವಸೇನೆ	16.41	19.45
ಕಾಂಗ್ರೆಸ್	15.87	17.94
ಎನ್‌ಸಿಪಿ	16.71	17.24
ಎಐಎಂಐಎಂ	1.34	0.93
ಎಂಎನ್‌ಎಸ್	2.25	3.17

ರಾಜ್ಯಾದ್ಯಂತ ಮತಗಟ್ಟೆಗಳು

ನಗರ ಪ್ರದೇಶ	ಗ್ರಾಮೀಣ ಭಾಗ	ಒಟ್ಟು ಮತಗಟ್ಟೆ
42,604	57,582	1,00,186

ಮತದಾರರು

ಯುವಜನರು 1,88,45,005

ಹಿರಿಯರು (60-70) 1,52,71,352

ವೃದ್ಧರು (60-70) 24,81,996

ಶತಾಯುಷಿ (100-119) 47,282

120 ವರ್ಷದವರು 110

ವಿಶೇಷ ಚೇತನರು 6,41,425

ಮಹಾರಾಷ್ಟ್ರ ವಿಧಾನಸಭೆ ಚುನಾವಣೆ 2019ರ ಫಲಿತಾಂಶದ ನಕ್ಷೆ



ವಿಧಾನಸಭಾ ಕ್ಷೇತ್ರ 288

ಒಟ್ಟು ಮತದಾರರು 9,70,25,119

ಮಹಿಳೆಯರು 4,69,96,279

ಪುರುಷರು 5,00,22,739

ತೃತೀಯ ಲಿಂಗಿ 6,101

ಮಹಾಯುತಿ ಮೈತ್ರಿಕೂಟ

ಪಕ್ಷ	ಸ್ಪರ್ಧೆ ಕ್ಷೇತ್ರ
ಬಿಜೆಪಿ	148(4)
ಶಿವಸೇನೆ(ಶಿಂದೆ ಬಣ)	85(6)
ಎನ್‌ಸಿಪಿ(ಅಜಿತ್ ಬಣ)	55(9)
ಜನ ಸುರಾಜ್ಯ ಶಕ್ತಿ	2(1)
ಆರ್‌ವೈಎಸ್‌ಪಿ	1(1)
ಆರ್‌ಎಸ್‌ವಿಎ	1

(ಮಹಾಯುತಿ ಮೈತ್ರಿಕೂಟದಲ್ಲಿ ಬಿಜೆಪಿ ಹಂಚಿಕೆ ಆಗಿರುವುದು 148 ಕ್ಷೇತ್ರ ಮಾತ್ರ. ಆದರೆ, ಹೆಚ್ಚುವರಿಯಾಗಿ ಒಬ್ಬ ಅಭ್ಯರ್ಥಿ ಯನ್ನು ಕಮಲ ಚಿಹ್ನೆ ಮೇಲೆ ಕಣಕ್ಕಿಳಿಸ ಲಾಗಿದೆ. ಮತ್ತೆ 3 ಕ್ಷೇತ್ರಗಳಲ್ಲಿ ಎನ್‌ಸಿಪಿ(ಅಜಿತ್ ಬಣ) ಜತೆ ಫ್ರೆಂಡ್ಲಿ ಫೈಟ್ ನಡೆದಿದೆ. ಶಿವಸೇನೆ(ಶಿಂದೆ ಬಣ)ಗೆ ಹಂಚಿಕೆ ಆಗಿರುವುದು 85 ಕ್ಷೇತ್ರ ಮಾತ್ರ. ಆದರೆ, ಹೆಚ್ಚುವರಿಯಾಗಿ 6 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಒಬ್ಬರು ಆರ್‌ವೈಎಸ್‌ಪಿ, ಐವರು ಎನ್‌ಸಿಪಿ(ಅಜಿತ್ ಬಣ) ವಿರುದ್ಧವೇ ಸ್ಪರ್ಧೆ ಮಾಡಿದ್ದಾರೆ. ಎನ್‌ಸಿಪಿ(ಅಜಿತ್ ಬಣ) ಕೂಡಾ 9 ಕ್ಷೇತ್ರಗಳಲ್ಲಿ, ಆರ್‌ವೈಎಸ್‌ಪಿ 1 ಕ್ಷೇತ್ರದಲ್ಲಿ ಮಿತ್ರಪಕ್ಷಗಳ ವಿರುದ್ಧವೇ ಸ್ಪರ್ಧೆ ಮಾಡಿವೆ.)

ಮಹಾ ವಿಕಾಸ್ ಅಘಾಡಿ ಒಕ್ಕೂಟ

ಪಕ್ಷ	ಸ್ಪರ್ಧೆ ಕ್ಷೇತ್ರ
ಕಾಂಗ್ರೆಸ್	100(2)
ಶಿವಸೇನೆ(ಉದ್ಧವ್ ಬಣ)	90(2)
ಎನ್‌ಸಿಪಿ(ಶರದ್ ಬಣ)	85(1)
ಸಮಾಜವಾದಿ ಪಕ್ಷ	2(7)
ಪಿಡಬ್ಲ್ಯುಪಿಐ	4
ಸಿಪಿಐ	2(1)
ಸಿಪಿಐ-ಎಂ	1

(ಎಂವಿಎ ಒಕ್ಕೂಟದಲ್ಲಿ ಕಾಂಗ್ರೆಸ್‌ಗೆ 100 ಕ್ಷೇತ್ರಗಳ ಹಂಚಿಕೆ ಆಗಿದ್ದು, 2 ಕ್ಷೇತ್ರಗಳಲ್ಲಿ ಎನ್‌ಸಿಪಿ (ಶರದ್ ಬಣ), ಸಿಪಿಐ-ಎಂ ವಿರುದ್ಧವೇ ಸ್ಪರ್ಧೆ ಮಾಡಿದೆ. ಶಿವಸೇನೆ(ಉದ್ಧವ್ ಬಣ)ಕ್ಕೆ 90 ಕ್ಷೇತ್ರ ಸಿಕ್ಕಿವೆ. 2 ಕ್ಷೇತ್ರಗಳಲ್ಲಿ ಮಿತ್ರಪಕ್ಷಗಳ ವಿರುದ್ಧವೇ ಸ್ಪರ್ಧಿಸಿದೆ. ಎನ್‌ಸಿಪಿ 85 ಕ್ಷೇತ್ರ ನಿಗದಿಯಾಗಿದ್ದರೂ 1 ಕ್ಷೇತ್ರದಲ್ಲಿ ಫ್ರೆಂಡ್ಲಿ ಫೈಟ್ ನಡೆಸಿದೆ. ಅಖಿಲೇಶ್ ಯಾದವ್ ನೇತೃತ್ವದ ಎಸ್‌ಪಿಗೆ ಎಂವಿಎಯಿಂದ 2 ಕ್ಷೇತ್ರಗಳನ್ನಷ್ಟೇ ನೀಡಲಾಗಿದೆ. ಹಾಗಿದ್ದೂ ಹೆಚ್ಚುವರಿ 7 ಕ್ಷೇತ್ರಗಳಲ್ಲಿ ಇಂಡಿ ಒಕ್ಕೂಟದ ಪಕ್ಷಗಳ ವಿರುದ್ಧವೇ ಸೆಣಸುತ್ತಿದೆ.)

ಫಲಿತಾಂಶ

	2019	2014
ಬಿಜೆಪಿ	105	122
ಶಿವಸೇನೆ	56	63
ಕಾಂಗ್ರೆಸ್	44	42
ಎನ್‌ಸಿಪಿ	54	41
ಎಐಎಂಐಎಂ	2	2
ಎಂಎನ್‌ಎಸ್	1	1

ಇತರೆ ಪಕ್ಷಗಳ ಸ್ಪರ್ಧೆ ಕ್ಷೇತ್ರ

ಎಂಎನ್‌ಎಸ್	135
ಬಿಎಸ್‌ಪಿ	288
ಆರ್‌ಎಸ್‌ಪಿ	151
ವಿಬಿಎ	110
ಎಎಸ್‌ಪಿ	40
ಎಐಎಂಐಎಂ	16

ಉಕ್ರೇನ್ ಯುದ್ಧ ನಿಲುಗಡೆ; ಪುಟಿನ್ ಜತೆ ಟ್ರಂಪ್ ಚರ್ಚೆ

ವಾಷಿಂಗ್ಟನ್: ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್‌ಗೆ ಕರೆ ಮಾಡಿ ಸುದೀರ್ಘ ಮಾತುಕತೆ ನಡೆಸಿದ್ದಾರೆ. ಉಕ್ರೇನ್-ರಷ್ಯಾ ಯುದ್ಧಕ್ಕೆ ಕೊನೆ ಹಾಡುವ ಕುರಿತೂ ಇಬ್ಬರೂ ನಾಯಕರ ನಡುವೆ ಮಾತುಕತೆ ನಡೆದಿದೆ ಎಂದು ಮಾಧ್ಯಮ ವರದಿ ಮಾಡಿದೆ. ಪ್ರಮುಖ ರಾಷ್ಟ್ರಗಳ ಇಬ್ಬರೂ ನಾಯ ಕರು ಯೂ



ರೋಪ್ ಖಂಡದಲ್ಲಿ ಶಾಂತಿ ಸ್ಥಾಪನೆ ಬಗ್ಗೆ ಚರ್ಚಿಸಿದರು. ಟ್ರಂಪ್ ಉಕ್ರೇನ್ ಯುದ್ಧದ ಪರಿಹಾರದ ಬಗ್ಗೆ ಹೆಚ್ಚಿನ ಆಸಕ್ತಿ ವ್ಯಕ್ತಪಡಿಸಿದರು ಎಂದು ವಾಷಿಂಗ್ಟನ್ ಪೋಸ್ಟ್ ವಿಶೇಷ ವರದಿಯಲ್ಲಿ ತಿಳಿಸಿದೆ. ನ.6ರಂದು ಅಮೆರಿಕ ಅಧ್ಯಕ್ಷೀಯ ಚುನಾವಣೆ ಗೆದ್ದ ನಂತರ ಟ್ರಂಪ್ ಭಾರತ, ರಷ್ಯಾ ಸೇರಿದಂತೆ 70ಕ್ಕೂ ಹೆಚ್ಚು ವಿಶ್ವ ನಾಯಕರ ಜತೆ ಮಾತುಕತೆ ನಡೆಸಿದ್ದಾರೆ. ಟ್ರಂಪ್ ಜತೆ ಮಾತನಾಡಿದವರಲ್ಲಿ ಭಾರತ ಪ್ರಧಾನಿ ನರೇಂದ್ರ ಮೋದಿ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮೊದಲಿಗರಾಗಿದ್ದಾರೆ ಎಂಬುದು ಉಲ್ಲೇಖಾರ್ಹ. ಟ್ರಂಪ್ ಫ್ಲೋರಿಡಾದಲ್ಲಿನ ತಮ್ಮ ರೆಸಾರ್ಟ್ ನಿಂದಲೇ ಪುಟಿನ್‌ಗೆ ಕರೆ ಮಾಡಿ ಮಾತನಾಡಿದರು. ರಷ್ಯಾ- ಉಕ್ರೇನ್ ಬಿಕ್ಕಟ್ಟನ್ನು ಬಗೆಹರಿಸಿಯೇ ಜ.20ರಂದು ಟ್ರಂಪ್ ಅಧಿಕಾರ ವಹಿಸಿ ಕೊಳ್ಳಲು ಬಯಸಿದ್ದಾರೆ ಎಂದು ಪುಟಿನ್-ಟ್ರಂಪ್ ಕರೆ ವಿಚಾರ ಹೆಚ್ಚು ತಿಳಿದಿರುವ ಅಮೆರಿಕದ ಮಾಜಿ ಅಧಿಕಾರಿಯೊಬ್ಬರು ಹೇಳಿದ್ದಾರೆ, ಟ್ರಂಪ್ ಮತ್ತು ಇತರೆ ವಿಶ್ವನಾಯಕರ ನಡುವಿನ ಖಾಸಗಿ ಕರೆಗಳ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ ಎಂದು ಟ್ರಂಪ್ ಸಂವಹನ ನಿರ್ದೇಶಕ ಸ್ಟೀವನ್ ಚೆಯುಂಗ್ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪಟಾಕಿ ನಿಷೇಧ ಸರಿಯಾಗಿ ಜಾರಿಗೊಳಿಸಿ | ದೆಹಲಿ ಪೊಲೀಸರಿಗೆ ಸುಪ್ರೀಂ ಕೋರ್ಟ್ ತರಾಟೆ

ವಾಯುಮಾಲಿನ್ಯ: ಯಾವುದೇ ಧರ್ಮವೂ ಉತ್ತೇಜಿಸುವುದಿಲ್ಲ

ದೆಹಲಿ: ಯಾವುದೇ ಧರ್ಮವೂ ಮಾಲಿನ್ಯವನ್ನು, ಮುಖ್ಯವಾಗಿ ವಾಯು ಮಾಲಿನ್ಯವನ್ನು ಪ್ರೋತ್ಸಾಹಿಸುವುದಿಲ್ಲ. ಹಾಗಾಗಿ, ದೆಹಲಿಯಲ್ಲಿ ವಾಯು ಮಾಲಿನ್ಯವಾಗದಂತೆ ತಡೆಯಲು ಪಟಾಕಿ ಸಿಡಿಸುವುದನ್ನು ನಿಷೇಧಿಸುವ ಸಂಬಂಧ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳುವಂತೆ ಸುಪ್ರೀಂ ಕೋರ್ಟ್ ದೆಹಲಿ ಸರಕಾರಕ್ಕೆ ಸೋಮವಾರ ಸೂಚನೆ ನೀಡಿದೆ.

ರಾಷ್ಟ್ರ ರಾಜಧಾನಿ ದೆಹಲಿಯ ಹವಾಮಾನ ವೈಪರೀತ್ಯದ ಕುರಿತ ಅರ್ಜಿಯ ವಿಚಾರಣೆ ವೇಳೆ ನ್ಯಾಯಾಲಯ, ಪಟಾಕಿ ಸಿಡಿಸಿದರೆ ಜನರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಅದು ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂದು ಹೇಳಿದೆ. ದೆಹಲಿ ಪೊಲೀಸರಿಗೆ ಮತ್ತೊಮ್ಮೆ ಛೀಮಾರಿ ಹಾಕಿದೆ.

ಪಟಾಕಿ ನಿಷೇಧ ಪ್ರದರ್ಶನಕ್ಕಷ್ಟೇ ಸೀಮಿತವಾದಂತಿದೆ. ನಿಷೇಧ ಆದೇಶವನ್ನು ಗಂಭೀರವಾಗಿ ಪರಿಗಣಿಸಿ ದೆಹಲಿ ನಗರದಲ್ಲಿ ಜಾರಿಗೊಳಿಸಿಯೇ ಇಲ್ಲ. ಪಟಾಕಿ ನಿಷೇಧಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ವಿವರಿಸಿ ನ.25ರೊಳಗೆ ಪ್ರಮಾಣಪತ್ರ ಸಲ್ಲಿಸಿ ಎಂದು ನ್ಯಾ.ಅಭಯ್ ಎಸ್.ಓಕಾ ಮತ್ತು

ನ್ಯಾ.ಅಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠ, ದೆಹಲಿ ನಗರ ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಿದೆ.

ಪಟಾಕಿ ತಯಾರಿಕೆ, ಮಾರಾಟ, ಬಳಕೆಯ ಮೇಲಿನ ನಿಷೇಧ ಅಕ್ಟೋಬರ್‌ನಿಂದ ಮುಂದಿನ ಜನವರಿವರೆಗೆ ಮಾತ್ರ ಅನ್ವಯಿಸುತ್ತದೆಯೇ. ಇಡೀ ವರ್ಷಕ್ಕೆ ಏಕೆ ಅನ್ವಯಿಸುವುದಿಲ್ಲವೇ? ಎಂದು ಅಧಿಕಾರಿಗಳನ್ನು ಪೀಠ ಪ್ರಶ್ನಿಸಿದೆ. ಪಟಾಕಿ ನಿಷೇಧಿಸಲು ವಿಶೇಷ ಸೆಲ್ ರಚಿಸುವಂತೆಯೂ ದೆಹಲಿ ಪೊಲೀಸ್ ಆಯುಕ್ತರಿಗೆ ಪೀಠ ಸೂಚನೆ ನೀಡಿದೆ.

2025ರ ಮೇ 13ರವರೆಗಷ್ಟೇ ಅಧಿಕಾರವಧಿ

51ನೇ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಪ್ರತಿಜ್ಞಾವಿಧಿ

ದೆಹಲಿ: ಸ್ವತಂತ್ರ ಭಾರತದ 51ನೇ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ನ್ಯಾ. ಸಂಜೀವ್ ಖನ್ನಾ(64) ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಮಾಣ ವಚನ ಬೋಧಿಸಿದರು. 50ನೇ ಸಿಜೆಐ ಆಗಿದ್ದ ನ್ಯಾ.ಡಿ.ವೈ.ಚಂದ್ರಚೂಡ್ ಅವರು ಅಧಿಕಾರ ದಂಡವನ್ನು ಹಸ್ತಾಂತರಿಸಿದರು.

ಹಿಂದಿನ ಸಿಜೆಐ ನ್ಯಾ.ಡಿ.ವೈ.ಚಂದ್ರಚೂಡ್ ಅವರೇ ನ್ಯಾ.ಖನ್ನಾ ಅವರ ಹೆಸರನ್ನು ಉತ್ತರಾಧಿಕಾರಿಯಾಗಿ ಶಿಫಾರಸು ಮಾಡಿದ್ದರು.ನ್ಯಾ.ಖನ್ನಾ ಅವರ ಸಿಜೆಐ ಅಧಿಕಾರವಧಿ 6 ತಿಂಗಳಷ್ಟೇ ಇರಲಿದೆ. ಆವರೆಗೆ ಅವರು ಅಲಿಘಡ ಮುಸ್ಲಿಮ ವಿಶ್ವವಿದ್ಯಾಲಯದ(ಎಎಂಯು) ಅಲ್ಪಸಂಖ್ಯಾತ ಸ್ಥಾನಮಾನದ ಪ್ರಶ್ನೆಯ ಅರ್ಜಿಯ ಮರು ಪರಿಶೀಲನೆ, ವೈವಾಹಿಕ ಜೀವನದಲ್ಲಿನ ಅತ್ಯಾಚಾರ ವಿಚಾರ ನಿರ್ಧಾರ ಮೊದಲಾದ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ನಡೆಸಬೇಕಿದೆ. 1960ರ ಮೇ ತಿಂಗಳಲ್ಲಿ ಜನಿಸಿದ ನ್ಯಾ.ಖನ್ನಾ ದೆಹಲಿ ವಿವಿ ಕ್ಯಾಂಪಸ್

ಕಾನೂನು ಕೇಂದ್ರದಿಂದ ಕಾನೂನು ಪದವಿ ಪಡೆದು, 1983ರಲ್ಲಿ ದೆಹಲಿ ಬಾರ್‌ಕೌನ್ಸಿಲ್‌ನಲ್ಲಿ ವಕೀಲರಾಗಿ ನೋಂದಣಿ ಮಾಡಿಸಿ ಮೊದಲಿಗೆ ದೆಹಲಿ ಹೈಕೋರ್ಟ್‌ನಲ್ಲಿ ವಕೀಲರಾಗಿದ್ದರು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಯಾಗಿದ್ದ ಖನ್ನಾ ಅವರು, ವಿಧಿ 370 ರದ್ದು ಪ್ರಶ್ನಿಸಿದ ಅರ್ಜಿ, ವ್ಯಭಿಚಾರ ಅಪರಾಧೀಕರಣ ವಿಚಾರ, ಚುನಾವಣಾ ಬಾಂಡ್‌ಗಳ ಪ್ರಶ್ನೆ, ಇವಿಎಂ-ವಿವಿಪ್ಯಾಟ್ ದೃಢೀಕರಣ ಪ್ರಶ್ನೆ ಮೊದಲಾದ ಅರ್ಜಿಗಳ ವಿಚಾರಣೆ ನಡೆಸಿದ ವಿವಿಧ ಪೀಠಗಳ ಭಾಗವಾಗಿದ್ದರು.

ಶ್ರೀರಾಮ ಮಂದಿರದ ಅಡಿಪಾಯ ಸ್ಫೋಟಿಸುವೆ

ದೆಹಲಿ: ಅಮೆರಿಕ ವಾಸಿ ಖಲಿಸ್ತಾನಿ ಉಗ್ರ ಗುರು ಪತ್ವಂತ್ ಸಿಂಗ್ ಪನ್ನೂನ್‌ನಿಂದ ಮತ್ತೊಂದು ಬೆದರಿಕೆಯ ವಿಡಿಯೋ ಬಿಡುಗಡೆಯಾಗಿದೆ. ಈ ಬಾರಿ, 'ಅಯೋಧ್ಯೆಯ ಶ್ರೀರಾಮ ಮಂದಿರದ



ತಳಪಾಯವನ್ನೇ ಸ್ಫೋಟಿ ಸುವೆ' ಎಂದು ಬೆದರಿಕೆ ಹಾಕಿದ್ದಾನೆ. ಅಲ್ಲದೇ ಕೆನಡಾದಲ್ಲಿನ ಕನ್ನಡಿಗ ಸಂಸದ ಚಂದ್ರ ಆರ್ಯ ಅವರಿಗೂ ಜೀವ ಬೆದರಿಕೆ ಹಾಕಿದ್ದಾನೆ.

'ಸಿಖ್ ಫಾರ್ ಜಸ್ಟಿಸ್' ನಿಷೇಧಿತ ಉಗ್ರ ಸಂಘಟನೆಯ ಮುಖ್ಯಸ್ಥನೂ ಆಗಿರುವ ಪನ್ನೂನ್, 'ಹಿಂದುತ್ವ ಸಿದ್ಧಾಂತದ ಮೂಲಕೇಂದ್ರವಾದ ಅಯೋಧ್ಯೆಯ ಅಡಿಪಾಯವನ್ನು ನಾವು ಅಲ್ಲಾಡಿಸುತ್ತೇವೆ. ನ.16 ಮತ್ತು 17ರಂದು ಅಯೋಧ್ಯೆಯ ರಾಮಮಂದಿರದಲ್ಲಿ ಹಿಂಸಾಚಾರ ನಡೆಯಲಿದೆ' ಎಂದು ವಿಡಿಯೊದಲ್ಲಿ ಹೇಳಿದ್ದಾನೆ. ಇನ್ನೂ ಹಲವು ಹಿಂದೂ ಧಾರ್ಮಿಕ ಸ್ಥಳಗಳಲ್ಲಿ ಹಿಂಸಾಚಾರ ಪ್ರಚೋದಿಸುವ ಬೆದರಿಕೆಯನ್ನೂ ವಿಡಿಯೊ ಒಳಗೊಂಡಿದೆ. ಪ್ರಧಾನಿ ಮೋದಿ ಅವರು ಅಯೋಧ್ಯೆಯ ರಾಮಮಂದಿರದಲ್ಲಿ ಪ್ರಾರ್ಥನೆ ಮಾಡುತ್ತಿರುವ ಚಿತ್ರಗಳನ್ನೂ ಹಂಚಿಕೊಂಡಿದ್ದಾನೆ. ಈ ವಿಡಿಯೊವನ್ನು ಕೆನಡಾದ ಬ್ರಾಂಪ್ಟನ್ ನಗರದಲ್ಲಿ ರೆಕಾರ್ಡ್ ಮಾಡಲಾಗಿದೆ ಎನ್ನಲಾಗಿದೆ.

ಭಾರತದಿಂದ ಪರಾರಿಯಾಗಿ ಅಮೆರಿಕದಲ್ಲಿ ನೆಲೆ ಕಂಡುಕೊಂಡಿರುವ ಪನ್ನೂನ್ ಭಾರತದ ವಿರುದ್ಧ ವಿಷಕಾರುತ್ತಲೇ ಇದ್ದಾನೆ.

ಪೇಜರ್ ಸ್ಫೋಟ ದಾಳಿಗೆ ಒಪ್ಪಿಗೆ ನೀಡಿದ್ದೆ: ನೆತನ್ಯಾಹು

ಟೆಲ್‌ಅವಿವ್: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ನಿನ್ನೆ ಭಾನುವಾರ ಮಹತ್ವದ ವಿಚಾರವನ್ನು ಬಹಿರಂಗಪಡಿಸಿದ್ದು, ಲೆಬನಾನ್‌ನಲ್ಲಿ 2 ತಿಂಗಳ ಹಿಂದೆ ಹೆಜ್ಬೊಲ್ಲಾ ಉಗ್ರರು ಬಳಸುತ್ತಿದ್ದ



2 ಸಾವಿರಕ್ಕೂ ಅಧಿಕ ಪೇಜರ್‌ಗಳ ಸ್ಫೋಟ ಕೃತ್ಯಕ್ಕೆ ಇಸ್ರೇಲ್ ಸೇನೆಗೆ ನಾನೇ ಆದೇಶ ನೀಡಿದ್ದ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸೋಮವಾರ ಬಹಿರಂಗಪಡಿಸಿದ್ದಾರೆ.

ಸೆಪ್ಟೆಂಬರ್ ತಿಂಗಳಲ್ಲಿ ಪೇಜರ್‌ಗಳ ಸ್ಫೋಟಿಸಿ ದಾಳಿ ನಡೆಸುವ ಸೇನಾ ಕಾರ್ಯಾಚರಣೆಗೆ ಗೆ ನಾನೇ ಒಪ್ಪಿಗೆ ನೀಡಿದ್ದೆ ಎಂದಿದ್ದಾರೆ. ಈ ವಿಷಯವನ್ನು ನೆತನ್ಯಾಹು ಅವರ ವಕ್ತಾರ ಒಮರ್ ದೋಸ್ತ್ರಿ ಅವರೇ ಪತ್ರಕರ್ತರಿಗೆ ತಿಳಿಸಿದ್ದಾರೆ. ಪೇಜರ್‌ಗಳ ಸರಣಿ ಸ್ಫೋಟ ಘಟನೆಯಲ್ಲಿ ಹೆಜ್ಬೊಲ್ಲಾದ 40 ಉಗ್ರರು ಮೃತಪಟ್ಟಿದ್ದರು, 3,000 ಜನರನ್ನು ಗಾಯಗೊಂಡಿದ್ದರು.

2023ರ ಅಕ್ಟೋಬರ್‌ನಲ್ಲಿ ಗಾಜಾದ ಹಮಾಸ್, ನಂತರ ಲೆಬನಾನ್ ಮೂಲದ ಹೆಜ್ಬೊಲ್ಲಾ ಉಗ್ರ ಸಂಘಟನೆಗಳ ವಿರುದ್ಧ ಇಸ್ರೇಲ್ ಸೇನೆ ಸಮರ ಸಾಗಿದೆ. ಆಗಿನಿಂದ ಈವರೆಗೆ ಲೆಬನಾನ್‌ನಲ್ಲಿಯೇ 3 ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಸೆ.23ರಿಂದ ಈಚೆಗೆ 1,964 ಜನರು ಸಾವಿಗೀಡಾಗಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಅಂಕಿ ಅಂಶ ನೀಡಿದೆ.

ಕೆಲವರಿಂದ ಸಮಾಜ ವಿಭಜನೆ ಸಂಚು: ಮೋದಿ

ಅಹಮದಾಬಾದ್: ಸ್ವಹಿತಾಸಕ್ತಿಗಾಗಿ ಕೆಲವರಿಂದ ಸಮಾಜ ವಿಭಜನೆ ಸಂಚು ನಡೆಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಕಿಡಿಕಾರಿದ್ದಾರೆ. ಗುಜರಾತ್ ರಾಜ್ಯದ ಖೇಡಾ ಜಿಲ್ಲೆಯ



ವಡ್ತಾಲ್‌ನಲ್ಲಿ ಶ್ರೀ ಸ್ವಾಮಿನಾರಾಯಣ ದೇವಸ್ಥಾನದ 200ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ನೆರೆದಿದ್ದ ಭಕ್ತ ಸಮೂಹವನ್ನು ಉದ್ದೇಶಿಸಿ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಪ್ರಧಾನಿ, 2047ರ ವೇಳೆಗೆ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಏಕತೆ-ಸಮಗ್ರತೆ ಬಹಳ ಮುಖ್ಯವಾಗಿದೆ. ಆ ಪ್ರಯತ್ನವನ್ನು ಹಾಳುಗೆಡವಲು ಯತ್ನಿಸುವ, ಸಮಾಜವನ್ನು ಒಡೆಯುವ ಹುನ್ನಾರವನ್ನು ಸೋಲಿಸಬೇಕಿದೆ ಎಂದರು. ಭಾರತವನ್ನು ಅಭಿವೃದ್ಧಿ ಯುತ ರಾಷ್ಟ್ರವನ್ನಾಗಿಸಲು ನಾಗರಿಕರ ನಡುವೆ ಏಕತೆ-ರಾಷ್ಟ್ರ ಸಮಗ್ರತೆ ಅತ್ಯಗತ್ಯ. ದುರದೃಷ್ಟವಶಾತ್ ಕೆಲವರು ಸ್ವಹಿತಕ್ಕಾಗಿ ಸಂಕುಚಿತ ಮನೋಭಾವದಿಂದ ಜಾತಿ, ಧರ್ಮ, ಭಾಷೆ, ಪುರುಷ-ಮಹಿಳೆ, ಗ್ರಾಮ-ನಗರ ಎಂದು ಸಮಾಜವನ್ನು ವಿಭಜನೆಗೆ ಯತ್ನಿಸುತ್ತಿದ್ದಾರೆ ಎಂದು ವಿಷಾದಿಸಿದರು. ಸ್ವಾಮಿನಾರಾಯಣ ಪಂಥದ ಎಲ್ಲಾ ಸಂತರು ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವ ಪ್ರತಿಜ್ಞೆ ಮಾಡಿದ್ದಾರೆ. ದೇಶದ ಎಲ್ಲಾ ನಾಗರಿಕರೂ ಆ ಸಂತರೊಂದಿಗೆ ಸೇರಬೇಕು ಎಂದು ಮೋದಿ ಮನವಿ ಮಾಡಿದರು.

ವಧು ಹಣೆಗೇ ಹೊಕ್ಕ ಸಂಭ್ರಮಾಚರಣೆ ಗುಂಡು

ಅಮೃತಸರ: ಪಂಜಾಬ್‌ನಲ್ಲಿ ಮದುವೆ ಸಂಭ್ರಮ ವೇಳೆ ಸಂಬಂಧಿಕರೊಬ್ಬರು ಬಂದೂಕಿನಿಂದ ಸಿಡಿಸಿದ ಗುಂಡು ನೇರವಾಗಿ ವಧುವಿನ ಹಣೆಗೆ ಹೊಕ್ಕಿದೆ. ಸಂತಸದಲ್ಲಿ ತೇಲುತ್ತಿದ್ದ ವಧು ಕ್ಷಣ ಮಾತ್ರದಲ್ಲೇ ಪ್ರಜ್ಞಾಹೀನಳಾಗಿ ಬಿದ್ದಿದ್ದು, ಮದುವೆ ಸಮಾರಂಭ ಅರ್ಧದಲ್ಲೇ ನಿಂತು ಹೋಗಿದೆ. ಫಿರೋಜ್‌ಪುರದ ಖೈಫೆಮೆ ಕಿ ಗ್ರಾಮದಲ್ಲಿ ಭಾನುವಾರ ಘಟನೆ ನಡೆದಿದೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ವಧುವನ್ನು ಆಸ್ಪತ್ರೆಗೆ ದಾಖಲಿಸಿ, ಬಳಿಕ ಲೂಧಿಯಾನ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.
ಸದ್ಯ ಆಕೆಯ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದುಬಂದಿದೆ.

ಹಶಂಟೂಟ್ ಗ್ರಾಮದ ಬಾಜ್ ಸಿಂಗ್ ಅವರ ಪುತ್ರಿ ಬಲ್ಜಿಂದರ್ ಕೌರ್(23) ಮತ್ತು ತರಣ್ ತರಣ್ ಜಿಲ್ಲೆಯ ಸರ್‌ಹಾಲಿಕಲ್‌ನ ವರ ಗುರುಪ್ರೀತ್ ಸಿಂಗ್ ಮದುವೆ ಖೈಫೆಮೆ ಕಿ ಗ್ರಾಮದ ಬಳಿಯ ಅರಮನೆಯಲ್ಲಿ ನೆರವೇರುತ್ತಿತ್ತು. ಈ ಸಂದರ್ಭ ಸಂಬಂಧಿಕರು ಹರ್ಷಾಚರಣೆ ಭಾಗವಾಗಿ ಗಾಳಿಯಲ್ಲಿ ಗುಂಡು ಹಾರಿಸುತ್ತಿದ್ದಾಗ ಗುರಿ ತಪ್ಪಿದ ಗುಂಡು ವಧುವಿನ ಹಣೆಗೆ ಹೊಕ್ಕಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿರುವ ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿ ತನಿಖೆ ನಡೆಸಿದ್ದಾರೆ ಎಂದು ಡಿಸಿಪಿ ಸುಖ್ವಿಂದರ್ ಸಿಂಗ್ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಪ್ರಬಂಧ ಸ್ಪರ್ಧೆ: ಸಂಜನಾ ರಾಜ್ಯ ಮಟ್ಟಕ್ಕೆ

ಹೊಸನಗರ: ಹೊಸನಗರ ತಾಲೂಕು ಮಸಗಲ್ಲಿ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ ಸಂಜನಾ ಅವರು ಪ್ರೌಢ ಶಾಲಾ ವಿಭಾಗ ಮಟ್ಟದಲ್ಲಿ

ವಿದ್ಯಾರ್ಥಿಗಳಿಗಾಗಿ ನಡೆಸಿದ ಬಾಪೂಜಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಎಂಬ ವಿಷಯದ ಕುರಿತಾದ ಪ್ರಬಂದ ಸ್ಪರ್ಧೆಯಲ್ಲಿ ಶಿವ ಮೊಗ್ಗ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಅವರು ಕೃಷ್ಣಮೂರ್ತಿ ಹಾಗೂ ಪೂರ್ಣಿಮ ಅವರ ದಂಪತಿಯ ಮಗಳಾಗಿದ್ದು, ಅವರಿಗೆ ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ಹಾಗೂ ನಗದು 3000 ರು.ಗಳನ್ನು ನೀಡಿ ಗೌರವಿಸಲಾಗಿದ್ದು, ಇವರು ರಾಜ್ಯ ಮಟ್ಟದಲ್ಲಿಯು ಪ್ರಥಮ ಸ್ಥಾನ ಪಡೆದು ಹೊಸನಗರ ತಾಲ್ಲೂಕಿಗೆ ಕೀರ್ತಿತರಲೆಂದು ಹೊಸನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಆರ್. ಕೃಷ್ಣಮೂರ್ತಿ ಸಮನ್ವಯಾಧಿಕಾರಿ ಎಂ. ರಂಗನಾಥ್, ಶಾಲೆಯ ಮುಖ್ಯ ಶಿಕ್ಷಕ ಪರಶುರಾಮಪ್ಪ, ಈ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಸದಸ್ಯರುಗಳು ಹಾರೈಸಿದ್ದಾರೆ.

ನ್ಯಾಯ ಬೆಲೆ ಅಂಗಡಿ ತೆರೆಯಲು ಆದೇಶ

ಭದ್ರಾವತಿ: ತಾಲೂಕಿನ ಗ್ರಾಮಾಂತರ ಭಾಗದಲ್ಲಿರುವ ನ್ಯಾಯಬೆಲೆ ಅಂಗಡಿಗಳು ನಿಗದಿತ ಸಮಯಕ್ಕೆ ಬಾಗಿಲು ತೆಗೆಯದೆ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದ್ದು, ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿ ಕರುನಾಡ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು. ಸಾಮಾಜಿಕ ಹೋರಾಟಗಾರ ಶಶಿಕುಮಾರ್ .ಎಸ್.ಗೌಡ ಮಾತನಾಡಿ, ತಾಲೂಕಿನ ಗ್ರಾಮಾಂತರ ಭಾಗದಲ್ಲಿರುವ ನ್ಯಾಯಬೆಲೆ ಅಂಗಡಿಗಳು ಸರಕಾರದ ಆದೇಶ ಪಾಲಿಸದೆ ಧಿಕ್ಕರಿಸುತ್ತಿದ್ದಾರೆ. ಅಂಗಡಿಗಳು ತಿಂಗಳು ಪೂರ್ತಿ ಬಾಗಿಲು ತೆರೆಯಬೇಕೆಂಬ ಆದೇಶವಿದ್ದರೂ ತಿಂಗಳಲ್ಲಿ ಎರಡು- ಮೂರು ದಿನ ಬಾಗಿಲು ತೆಗೆಯುತ್ತಿದ್ದು ಪಡಿತರದಾರರಿಗೆ ತೊಂದರೆ ನೀಡುತ್ತಿದ್ದಾರೆಂದು ಆರೋಪಿಸಿದರು. ಕರುನಾಡ ಹಿತರಕ್ಷಣಾ ಸಮಿತಿಯ ರಾಜ್ಯಾಧ್ಯಕ್ಷ ವೈ.ಶಶಿಕುಮಾರ್ ಮಾತನಾಡಿ, ಕೂಡಲೇ ವ್ಯವಸ್ಥೆ ಸರಿಪಡಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಗ್ರಾಮಾಂತರ ಪಡಿತರ ಇಲಾಖೆ ಕಚೇರಿ ಮುಂಭಾಗ ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಊಟ ಬಡಿಸಲು ಒಪ್ಪದ ಪತ್ನಿ ಕೊಲೆ

ಶಿಕಾರಿಪುರ: ಊಟ ಬಡಿಸಲು ನಿರಾಕರಿಸಿ ಮೊಬೈಲ್ ನಲ್ಲಿ ಮಾತನಾಡುತ್ತಿದ್ದ ಪತ್ನಿಯ ಬಗ್ಗೆ ಆಕ್ರೋಶಗೊಂಡ ಪತಿ ಟವಲ್ ನಿಂದ ಕುತ್ತಿಗೆಯನ್ನು ಬಿಗಿದು ಕೊಲೆ

ಮಾಡಿದ ಘಟನೆ ತಾಲೂಕಿನ ಅಂಬ್ಲಿಗೊಳ್ಳ ಗ್ರಾಮದಲ್ಲಿ ಶನಿವಾರ ಸಂಜೆ ನಡೆದಿದ್ದು,ಪೊಲೀಸರು ಆರೋಪಿ ಪತಿಯನ್ನು ವಶಕ್ಕೆ ಪಡೆದಿದ್ದಾರೆ. ಗ್ರಾಮದ ಮನು (32) ಎಂಬಾತ ತನ್ನ ಹೆಂಡತಿ ಗೌರಮ್ಮಳನ್ನು(28) ಕೊಲೆ ಮಾಡಿದ ಆರೋಪಿಯಾಗಿದ್ದಾನೆ. ಈತ ಪತ್ನಿಗೆ ಊಟ ನೀಡುವಂತೆ ಕೇಳಿದ್ದಕ್ಕೆ ಪತ್ನಿ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದಳು. ಇದರಿಂದಾಗಿ ಊಟ ನೀಡಲು ನಿರಾಕರಿಸಿ ಪತಿಗೆ ತಾನೇ ಊಟ ಬಡಿಸಿಕೊಂಡು ತಿನ್ನುವಂತೆ ಹೇಳಿದ್ದಾಳೆ ಎನ್ನಲಾಗಿದೆ.ಇದರಿಂದ ಆಕ್ರೋಶಗೊಂಡ ಪತಿ ಮನು ಪತ್ನಿ ಗೌರಮ್ಮಳನ್ನು ಥಳಿಸಿ ಕತ್ತು ಹಿಸುಕಿ ಕೊಲೆ ಮಾಡಿದ್ದಾಗಿ ತಿಳಿದು ಬಂದಿದೆ. ಈ ಕೊಲೆ ವೈಯಕ್ತಿಕ ಜಗಳದಿಂದ ನಡೆದಿರಬಹುದು ಎಂದು ಶಂಕಿಸಲಾಗಿದೆ. ಮೃತ ಗೌರಮ್ಮ ಶಿಕಾರಿಪುರದ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದಳು. ಗೌರಮ್ಮಳ ತಂದೆ ಈ ಕುರಿತು ದೂರು ನೀಡಿದ್ದು,ಶಿಕಾರಿಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಂದು ಕೊರತೆ ದೂರು ದಾಖಲಿಸಿ

ಶಿವಮೊಗ್ಗ: ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದಂತೆ ಯಾವುದೇ ಅಡಚಣೆ. ಕುಂದು ಕೊರತೆಗಳಿದ್ದಲ್ಲಿ ನಗರದ ಸಾರ್ವಜನಿಕರು ದೂ.ಸಂ. 08182 273000 ಮತ್ತು ಮೊ.761955584 ಕ್ಕೆ ದೂರುಗಳನ್ನು ದಾಖಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಗ್ರಾಹಕರ ಸೇವಾ ಕೇಂದ್ರ, ನಿರಂತರ ನೀರು ಸರಬರಾಜು ಯೋಜನೆ, ಕನನೀಸ ಮತ್ತು ಒಳ ಚರಂಡಿ ಮಂಡಳಿ, ಮೊದಲನೇ ಮಹಡಿ ವಿಭಾಗ ಕಚೇರಿ ಆವರಣ ಬಾಲರಾಜ್ ಅರಸ್ ರಸ್ತೆ ಸಂಪರ್ಕಿಸಬಹುದೆಂದು ಎಂದು ಶಿವಮೊಗ್ಗ ಕನನೀಸ ಮತ್ತು ಒಳ ಚರಂಡಿ ಮಂಡಳಿ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

{ ಬಸವರಾಜ ಬೊಮ್ಮಾಯಿ } ಸಂಸದ

ಈ ಸರಕಾರದಲ್ಲಿ ಸರಕಾರಿ ಅಧಿಕಾರಿಗಳು ಒತ್ತಡದಲ್ಲಿ ಬದುಕುತ್ತಿದ್ದಾರೆ. ವಾಲ್ಮೀಕಿ ನಿಗಮದ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡರು, ಯಾದಗಿರಿಯಲ್ಲಿ ಅಧಿಕಾರಿ ಆತ್ಮಹತ್ಯೆ ಬೆಳಗಾವಿಯಲ್ಲಿ ಎಸ್‌ಡಿಎ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಿಗ್ಗಾವಿಯಲ್ಲಿ ಅಧಿಕಾರಿಗಳು ಬೇಸತ್ತು ಹೋಗಿದ್ದಾರೆ. ಶಿಗ್ಗಾವಿಯಲ್ಲಿ ಸೋತ ಅಭ್ಯರ್ಥಿ ವಸೂಲಿಗೆ ನಿಂತಿದ್ದಾರೆ.



ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನ

ನದಿ ಮೂಲ ಸಂಸ್ಕೃತಿ ಉಳಿಸಬೇಕಾದ ಹೊಣೆ ಯುವಕರು ಸೇರಿದಂತೆ ಎಲ್ಲರ ಜವಾಬ್ದಾರಿ

ಶಿವಮೊಗ್ಗ: ನದಿ ಮೂಲ ಸಂಸ್ಕೃತಿಯನ್ನು ಉಳಿಸಬೇಕಾದ ಹೊಣೆ ಯುವಕರು ಸೇರಿದಂತೆ ಎಲ್ಲರ ಜವಾಬ್ದಾರಿಯಾಗಿದೆ ಎಂದು ಬೆಕ್ಕಿನ ಕಲ್ಮಠದ ಡಾ. ಶ್ರೀಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಹೇಳಿದರು.

ಸೋಮವಾರ ನಿರ್ಮಲ ತುಂಗಾಭದ್ರಾ ಅಭಿಯಾನದ ಅಂಗವಾಗಿ ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನ, ಪರ್ಯಾವರಣ ಟ್ರಸ್ಟ್ ಇವರ ಸಂಯುಕ್ತಾಶ್ರಯದಲ್ಲಿ ಕುವೆಂಪು ರಂಗಮಂದಿರದ ಆವರಣದಲ್ಲಿ ಆಯೋಜಿಸಿದ್ದ ಯುವ ಜಾಗೃತಿ ಕಾರ್ಯಕ್ರಮ ಮತ್ತು ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು.

ನೀರು ಸಂಸ್ಕೃತಿಯ ಪ್ರತೀಕವೇ ಆಗಿದೆ. ಅದರಲ್ಲೂ ತುಂಗಾ, ಭದ್ರಾ, ಸಿಂಧೂ, ಕಾವೇರಿ ಮುಂತಾದ ಎಲ್ಲಾ ನದಿಗಳು ಭಾರತೀಯ ಸಂಸ್ಕೃತಿಯ ಅಂಗವಾಗಿವೆ. ನಾಗರಿಕತೆಗಳು ಕೂಡ ಇಲ್ಲಿ ಹುಟ್ಟಿಕೊಂಡಿವೆ. ನೀರು ಜೀವಜಲ. ಅದನ್ನು ಉಳಿಸಬೇಕಾದ ಹೊಣೆ ಕೂಡ ನಮ್ಮದೇ ಆಗಿದೆ. ಇಂದು ನದಿಗಳೆಲ್ಲವೂ ಕಲುಷಿತಗೊಂಡಿವೆ. ಇವುಗಳನ್ನು ಕಾಪಾಡುವ ಹಿನ್ನೆಲೆಯಲ್ಲಿ ಎಲ್ಲರೂ ಪ್ರಯತ್ನಿಸಬೇಕು. ಮುಖ್ಯವಾಗಿ ಯುವಕರು ಇದರಲ್ಲಿ ಮುಖ್ಯಪಾತ್ರ ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಸಾವಿರಾರು ಯುವಕರು ಭಾಗವಹಿಸಿ ನದಿಗಳ ಸಂರಕ್ಷಣೆಗಾಗಿ ಘೋಷಣೆಯ ಮೂಲಕ ಕುವೆಂಪು ರಂಗಮಂದಿರದಿಂದ ಹೊನ್ನಾಳಿ ರಸ್ತೆಯ ಚಟ್ನಳ್ಳಿಯವರೆಗೆ ಪಾದಯಾತ್ರೆ ನಡೆಸಲಾಯಿತು. ಗಂಗಾ ಸ್ನಾನ- ತುಂಗಾ ಪಾನ, ಶುದ್ಧ ನೀರು ನಮ್ಮೆಲ್ಲರ ಹಕ್ಕು, ಶುದ್ಧ ನೀರು ಕುಡಿಯದ ದೇಹ ಬದುಕುವುದೇ ಸಂದೇಹ, ಶುದ್ಧ ನೀರು ಸ್ವಚ್ಛತೆಯ ಸಂಕೇತ, ನದಿಗಳನ್ನು ಕಾಪಾಡಿ ಎಂಬ ಘೋಷಣೆಯ ಭಿತ್ತಿಪತ್ರ ಹಿಡಿದು ಪಾದಯಾತ್ರೆಯಲ್ಲಿ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಶಾಸಕ ಎಸ್.ಎನ್. ಚನ್ನಬಸಪ್ಪ, ವಿಧಾನ ಪರಿಷತ್ ಸದಸ್ಯರಾದ ಡಿ.ಎಸ್. ಅರುಣ್, ಡಾ. ಧನಂಜಯ ಸರ್ಜಿ, ಪರಿಸರವಾದಿ ಬಿ.ಎಂ. ಕುಮಾರಸ್ವಾಮಿ, ಆರ್.ಎಸ್.ಎಸ್. ಮುಖಂಡ ಪಟ್ಟಾಭಿರಾಮ್, ನವದೆಹಲಿಯ ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನದ ಕಾರ್ಯಕಾರಿ ಸಮಿತಿ ಸದಸ್ಯ ವಿವೇಕ್ ತ್ಯಾಗಿ ಇದ್ದರು.

ಕುವೆಂಪು ರಂಗಮಂದಿರದ ಆವರಣದಲ್ಲಿ ಯುವ ಜಾಗೃತಿ ಕಾರ್ಯಕ್ರಮ ಮತ್ತು ಪಾದಯಾತ್ರೆಗೆ ಶ್ರೀಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಚಾಲನೆ ನೀಡಿದರು.

ಋತ್ವಿಜರಿಂದ ತುಂಗೆಗೆ ಆರತಿ ಕಾರ್ಯಕ್ರಮ

ಶಿವಮೊಗ್ಗ: ತುಂಗಾ ನದಿ ಮಲಿನವಾಗುತ್ತಿದೆ. ಉಗಮ ಸ್ಥಾನದಿಂದ ಅಂತ್ಯದವರೆಗೆ ಸಾಕಷ್ಟು ಕಡೆ ಕೊಳಚೆ ನೀರು ಸೇರುತ್ತಿದೆ. ಅದನ್ನು ತಡೆಯುವ ಜತೆಗೆ ಹೊಸ ಸೆಲೆಗಳು ಬಂದು ನದಿಯನ್ನು ಸೇರಿಕೊಳ್ಳುವಂತೆ ಮಾಡಬೇಕು ಎಂದು ಕೂಡ್ಲಿ ಶೃಂಗೇರಿ ಮಠದ ಶ್ರೀಅಭಿನವ ಶಂಕರ ಭಾರತೀ ಸ್ವಾಮೀಜಿ ಹೇಳಿದರು. ತುಂಗಾರತಿ ಸಭಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಮುಚ್ಚಿ ಹೋಗಿರುವ ಸೆಲೆಗಳನ್ನೂ ಹುಡುಕಿ ನೀರು ನದಿಗೆ ಹರಿಯುವಂತೆ ಮಾಡಬೇಕಿದೆ. ಈ ಒಂದು ಸತ್ಕಾರ್ಯಕ್ಕೆ ಪ್ರತಿಯೊಬ್ಬರು ಕೈಜೋಡಿಸಬೇಕು ಎಂದು ಹೇಳಿದರು. ರಾಸಾಯನಿಕ ಬಳಕೆಯಿಂದ ಮಳೆ ನೀರನ್ನು ಮಣ್ಣು ಹಿಡಿದುಕೊಳ್ಳುತ್ತಿಲ್ಲ. ಮಣ್ಣು ಸಾರವನ್ನು ಕಳೆದುಕೊಳ್ಳುತ್ತಿದೆ. ನದಿ ಪಾತ್ರದಲ್ಲಿ ಗಿಡಮರಗಳನ್ನು ಬೆಳೆಸದಿರುವುದು ಇದಕ್ಕೆ ಮುಖ್ಯ ಕಾರಣ. ಹಾಗಾಗಿ ಮುಂದಿನ ದಿನಗಳಲ್ಲಿ ಹೆಚ್ಚು ಗಿಡಮರಗಳನ್ನು ಬೆಳೆಸಬೇಕು. ಸುತ್ತಮುತ್ತಲಿನ ಪರಿಸರವನ್ನು ಕಾಪಾಡಿಕೊಳ್ಳಲು ಎಲ್ಲರೂ ಮುಂದಾಗ ಬೇಕಿದೆ ಎಂದರು. ಶಾಸಕ ಎಸ್.ಎನ್. ಚನ್ನಬಸಪ್ಪ, ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್, ಡಾ. ಧನಂಜಯ ಸರ್ಜಿ, ಮಾಜಿ ಶಾಸಕ ಕೆ.ಬಿ. ಪ್ರಸನ್ನಕುಮಾರ್, ಮಾಜಿ ಎಂಎಲ್‌ಸಿ ಆರ್. ಕೆ.ಸಿದ್ದರಾಮಣ್ಣ, ನವದೆಹಲಿಯ ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನದ ಕಾರ್ಯಕಾರಿ ಸಮಿತಿ ಸದಸ್ಯ ವಿವೇಕ್ ತ್ಯಾಗಿ, ಅಭಿಯಾನದ ಪ್ರಮುಖರಾದ ಪ್ರೊ.ಬಿ.ಎಂ. ಕುಮಾರಸ್ವಾಮಿ, ಎಂ.ಶಂಕರ್ ಇತರರಿದ್ದರು. ತುಂಗಾ ಆರತಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಶಿವಮೊಗ್ಗದಲ್ಲಿನ ಕೋರ್ಪಲಯ್ಯನ ಮಂಟಪ, ವಿದ್ಯುತ್ ದೀಪಗಳಿಂದ ಝಗಮಗಿಸುತ್ತಿದ್ದವು. ತುಂಗೆ, ಸಾಲು ಸಾಲು ಹಣತೆಗಳ ಬೆಳಕು, ಕಣ್ಮನ ಸೆಳೆದ ಬಾಣ ಬಿರುಸುಗಳ ಪ್ರದರ್ಶನ, ಋತ್ವಿಜರಿಂದ ತುಂಗೆಗೆ ಆರತಿ ಕಾರ್ಯಕ್ರಮ ಕಣ್ಮನ ಸೆಳೆಯಿತು.

ಹೊಸಬಾಳೆ ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿ ಕಾರ್ಯಕ್ರಮ

ಹೊಸಬಾಳೆ ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿ ಕಾರ್ಯಕ್ರಮವನ್ನು ತಾಪಂ ಮಾಜಿ ಅಧ್ಯಕ್ಷ ಎಚ್. ಗಣಪತಿ ಹುಲ್ತಿಕೊಪ್ಪ ಉದ್ಘಾಟಿಸಿದರು.

ಸೊರಬ: ಗ್ರಾಮೀಣ ಭಾಗದ ಸರಕಾರಿ ಶಾಲೆಗಳ ಬೆಳವಣಿಗೆಗೆ ಸರಕಾರ ಹಲವು ಯೋಜನೆಗಳನ್ನು ಜಾರಿಗೆ ತರುವ ಮೂಲಕ ಶಿಕ್ಷಕ ಕೊರತೆ ನೀಗಿಸಲು ಇಲಾಖೆಯಿಂದ ಕ್ರಮ ವಹಿಸಲಾಗುತ್ತಿದೆ ಎಂದು ತಾಪಂ ಮಾಜಿ ಅಧ್ಯಕ್ಷ ಎಚ್. ಗಣಪತಿ ಹುಲ್ತಿಕೊಪ್ಪ ಹೇಳಿದರು.

ತಾಲೂಕಿನ ಹೊಸಬಾಳೆ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಕ್ಷೇತ್ರ ಸಂಪನ್ಮೂಲ ಕೇಂದ್ರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಗ್ರಾಪಂ ಸಹಯೋಗದಲ್ಲಿ ನಡೆದ ಹೊಸಬಾಳೆ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿದರು.

ಸರಕಾರಿ ಶಾಲೆಗಳಿಗೆ ಹೆಚ್ಚು ಅನುದಾನವನ್ನು ನೀಡುವ ಮೂಲಕ ಶಾಲೆಗಳ ಸರ್ವೋತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. ಕ್ಷೇತ್ರದ ಶಾಸಕ ಎಸ್. ಮಧುಬಂಗಾರಪ್ಪ ಅವರು ಶಿಕ್ಷಣ ಸಚಿವ ತರುವಾಯ ಶಿಕ್ಷಣ ವ್ಯವಸ್ಥೆಯಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತರುತ್ತಿದ್ದಾರೆ ಎಂದರು.

ದಾನಿಗಳಾದ ಶಿವಪ್ಪನಾಯಕ ಹಳೆ ವಿದ್ಯಾರ್ಥಿ ಸಂಘದ ಸದಸ್ಯರು ಮತ್ತು ಎಸ್‌ಡಿಎಂಸಿ ಸದಸ್ಯರು, ಗ್ರಾಮಸಮಿತಿ ಸದಸ್ಯರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸರಕಾರದ 'ಗಣಿತ ಗಣಕ' ಕಾರ್ಯಕ್ರಮದ 'ಸೆಲ್ಫಿ ಕಾರ್ನರ್' ಗಮನ ಸೆಳೆಯಿತು.

> **ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಲು ಪ್ರತಿಭಾಕಾರಂಜಿ ಉತ್ತಮ ವೇದಿಕೆಯಾಗಿದೆ. ಮಕ್ಕಳಲ್ಲಿನ ಕೌಶಲ್ಯ ಗುರುತಿಸಿ ಪ್ರೋತ್ಸಾಹಿಸಬೇಕಾದ ಹೊಣೆ ಶಿಕ್ಷಕರು ಮತ್ತು ಪೋಷಕರ ಮೇಲಿದೆ. ಪ್ರಸ್ತುತ ಸರಕಾರ ಮಕ್ಕಳ ಕೌಶಲ ಗುರುತಿಸಿ ಬೆಳೆಸಲು ಹಲವಾರು ಕಾರ್ಯಕ್ರಮಗಳ ಮೂಲಕ ಮಕ್ಕಳಿಗೆ ವಿವಿಧ ಅವಕಾಶಗಳು ಮತ್ತು ಸೌಲಭ್ಯಗಳನ್ನು ನೀಡುತ್ತಿದೆ.**
> **-ಎಚ್.ಗಣಪತಿ ಹುಲ್ತಿಕೊಪ್ಪ** ತಾಪಂ ಮಾಜಿ ಅಧ್ಯಕ್ಷ

ಸಿಆರ್‌ಪಿ ಶಿವಕುಮಾರ ಮಾತನಾಡಿದರು. ಶೋಭಾ ಯೋಗಿಶ್, ಉಪಾಧ್ಯಕ್ಷ ಭುಜೇಂದ್ರ, ಸದಸ್ಯ ಸತ್ಯನಾರಾ ಯಣ, ಹಾಪ್ ಕಾಮ್ಸ್ ಅಧ್ಯಕ್ಷ ಕೆ.ವಿ. ಗೌಡ, ಎಸ್‌ಡಿಎಂಸಿ ಅಧ್ಯಕ್ಷ ಮಂಜುನಾಥ, ಉಪಾ ಧ್ಯಕ್ಷೆ ಮಂಗಳಾ ಚೌಡಪ್ಪ, ಅಧ್ಯಕ್ಷ ವೀರ ಭದ್ರಪ್ಪ, ಬಿಆರ್‌ಸಿ ದಯಾನಂದ ಕಲ್ಲೇರ್, ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಅಧ್ಯಕ್ಷ ಎನ್. ಗಣಪತಿ, ಪ್ರಾಥಮಿಕ ಶಾಲಾ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸತ್ಯನಾರಾಯಣ ಮತ್ತಿತರರಿದ್ದರು. ಕೃಷ್ಣಮೂರ್ತಿ ನಿರೂಪಿಸಿದರು.

ಸೊರಬ ತಾಲೂಕಿನ ಹೊಸಬಾಳೆ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಹೊಸಬಾಳೆ ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿ ಕಾರ್ಯಕ್ರಮದಲ್ಲಿ ಛದ್ಮವೇಷ ಸ್ಪರ್ಧೆಯಲ್ಲಿ ಪಾಲ್ಗೊಂಡ ಕಾಸರಗುಪ್ಪೆಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಎಸ್.ಕೆ. ಸಾಹಿತ್ಯ ಧರಿಸಿದ್ದ ಲಕ್ಷ್ಮೀ ವೇಷ ಎಲ್ಲರ ಗಮನ ಸೆಳೆಯಿತು.

ಹೊಸನಗರ ಇತ್ತಿಚೆಗೆ ಚಿತ್ರದುರ್ಗದಲ್ಲಿ ನಡೆದ ರಾಜ್ಯ ಮಟ್ಟದ ಅಬಾಕಸ್ ಸ್ಪರ್ಧೆಯಲ್ಲಿ ಹೊಸನಗರದ ಐಡಿಇಎಎಲ್ ಸಂಸ್ಥೆಯ 17ಮಕ್ಕಳು ಭಾಗವಹಿಸಿದ್ದು, 17 ಮಕ್ಕಳು ಪ್ರಶಸ್ತಿ ಪಡೆಯುವುದರೊಂದಿಗೆ ಹೊಸನಗರ ತಾಲೂಕಿಗೆ ಕೀರ್ತಿ ತಂದಿದ್ದಾರೆ. ಕರ್ನಾಟಕ ಬ್ಯಾಂಕ್ ಮೇಲ್ಭಾಗದಲ್ಲಿರುವ ಐಪಿಎ ಹೊಸನಗರದ ಮುಖ್ಯಸ್ಥೆ ವಿದ್ಯಾ ಮಂಜುನಾಥ್ ಗುಡಿಗಾರ್ ರಾಜ್ಯ ಮಟ್ಟದಲ್ಲಿಯೇ ಪ್ರಥಮ ಸ್ಥಾನ ಪಡೆದಿದ್ದಾರೆ.

ವಂಶವಾಹಿನಿ ತಾಳಮದ್ದಲೆ ಕಾರ್ಯಕ್ರಮ ಅನುಕರಣೀಯ

ಸಾಗರ: ಗುಣಮಟ್ಟದ ಕಲಾ ಸಂಘಟನೆಯನ್ನು ಸಕ್ರೀಯವಾಗಿ ನಿರಂತರ ಮಾಡುವುದು ಸುಲಭದ ಮಾತಲ್ಲ ಅದು ಪ್ರವಾಹದ ಎದುರು ಈಜಿದಂತೆ ಎಂದು ನಗರ ಸಭೆಯ ಸದಸ್ಯ ಕೆ.ಆರ್. ಗಣೇಶ್ ಪ್ರಸಾದ್ ಹೇಳಿದರು.

ಶ್ರೀರಾಜರಾಜೇಶ್ವರಿ ಕೃಪಾಪೋಷಿತ ವಂಶವಾಹಿನಿ ಯಕ್ಷಮೇಳ ಗುಂಡೂಮನೆಯವರಿಂದ ಇಲ್ಲಿನ ನೃತ್ಯ ಭಾಸ್ಕರ ಸಭಾಂಗಣದಲ್ಲಿ ಆಯೋಜನೆಗೊಂಡಿದ್ದ 4 ತಿಂಗಳ ಮಹಿಮೆ ಶೀರ್ಷಿಕೆಯ ಪಾಕ್ಷಿಕ ತಾಳಮದ್ದಲೆ ಸಮಾರೋಪ ಮತ್ತು ಕಲಾಭಿವಂದನೆ ಕಾರ್ಯಕ್ರಮದಲ್ಲಿ ಅವರು ದಿಕ್ಸೂಚಿ ಮಾತನಾಡಿದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಎಸ್.ಎಸ್. ಮೋಹನ್ ಮಾತನಾಡಿ, ಪ್ರಚಲಿತವಲ್ಲದ ಪೌರಾಣಿಕ ಕತೆಯೊಳಗಿರುವ ಸಣ್ಣ ಸಣ್ಣ ವಿಷಯಗಳನ್ನು ಪ್ರಸಂಗವಾಗಿಸಿ ನಿಶ್ಚಿತ ಸಮಯ ಮಿತಿಯೊಳಗೆ ಪ್ರೇಕ್ಷಕರಿಗೆ ಉಣಬಡಿಸಿರುವ ವಂಶವಾಹಿನಿಯ ತಾಳಮದ್ದಲೆ ರಂಗಕ್ಕೊಂದು ಅನುಕರಣೀಯ ಮಾದರಿ ಎಂದರು.

ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಾಲತೇಶಪ್ಪ ಮಾತನಾಡಿ, ಸಂಘಟನೆಯ ಹಿಂದಿನ ಪರಿಶ್ರಮ ತಿಳಿದವರಿಗೆ ಮಾತ್ರ ಗೊತ್ತು. ಒಂದು ಕಾರ್ಯಕ್ರಮ ಯಶಸ್ವಿಗೊಳಿಸುವುದು ವಿಶೇಷವಲ್ಲ ಆದರೆ ಕಡಿಮೆ ಅವಧಿಯಲ್ಲಿ 25 ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವುದು ದೊಡ್ಡ ಸಾಧನೆ ಎಂದರು.

ಸಾಗರನೃತ್ಯ ಭಾಸ್ಕರ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಲಾಭಿವಂದನೆಯಲ್ಲಿ ವಂಶವಾಹಿನಿ ಕಲಾವಿದರಿಗೆ ಸನ್ಮಾನಿಸಿದರು.

> **ಪ್ರವಾಹದ ಜತೆಗೆ ತೇಲಿ ಹೋಗುವುದಕ್ಕೆ ಪ್ರಯಾಸಪಡಬೇಕಿಲ್ಲ ಆದರೆ ವಿರುದ್ಧ ಈಜಿ ಯಶಸ್ಸು ಕಂಡರೆ ಮಾತ್ರ ಸಾಧನೆ. ಹಾಗೆಯೇ ಟೀಕೆ , ಟಿಪ್ಪಣಿ ಎಲ್ಲವನ್ನೂ ಮೀರಿ ಸಂಘಟನೆಗೆ ಮಾತ್ರ ಆದ್ಯತೆ ಕೊಟ್ಟು ಉತ್ತಮ ಕಾರ್ಯಕ್ರಮಗಳನ್ನು ಸಮಾಜಕ್ಕೆ ಕೊಡುತ್ತಿರುವ ವಂಶವಾಹಿನಿ ತಂಡ ನಿರಂತರ 25 ಕಾರ್ಯಕ್ರಮಗಳನ್ನು ನೀಡಿ ಹೊಸ ದಾಖಲೆ ಬರೆದಿದೆ.**
> **-ಕೆ.ಆರ್. ಗಣೇಶ್ ಪ್ರಸಾದ್,** ಸದಸ್ಯ

ನಗರ ಸಭೆಯ ಸ್ಥಳೀಯ ಸದಸ್ಯ ಟಿ.ಡಿ. ಮೇಘರಾಜ್ ಮಾತನಾಡಿ, ಮೌಲ್ಯಗಳನ್ನು ಮರೆತು ನಮ್ಮ ಸಂಸ್ಕೃತಿಯ ವಿರುದ್ಧ ದಿಕ್ಕಿನತ್ತ ಓಡುತ್ತಿರುವ ಯುವ ಜನತೆಗೆ ಕಾನೂನು, ಲಾಟಿ ಸರಿ ದಾರಿಗೆ ತರುತ್ತದೆಯೋ ಇಲ್ಲವೋ ಗೊತ್ತಿಲ್ಲ ಆದರೆ ಇಂತಹ ಕಾರ್ಯಕ್ರಮಗಳು ಸಂಸ್ಕಾರ ಕಲಿಸುವುದಂತೂ ಸತ್ಯ ಎಂದರು.

ಇದೇ ವೇಳೆ ಗಣ್ಯರು ವಂಶವಾಹಿನಿಯ ಇಡೀ ತಂಡವನ್ನು ಸನ್ಮಾನಿಸಿದರು. ವಂಶವಾಹಿನಿ ಗೌರವಾಧ್ಯಕ್ಷ ಸುಬ್ರಾಯ ಹೆಗಡೆ ಗುಂಡೂಮನೆ ಅಧ್ಯಕ್ಷತೆವಹಿಸಿದ್ದರು. ನಂತರ ರಮೇಶ್ ಹೆಗಡೆ ಗುಂಡೂಮನೆ ರಚಿತ ಗೋಮಹಿಮೆ ಪ್ರಸಂಗದ ತಾಳಮದ್ದಲೆ ನಡೆಯಿತು. ಹಿಮ್ಮೇಳದಲ್ಲಿ ಸೂರ್ಯನಾರಾಯಣ, ಸುಜನ್‌ಗಣೇಶ್ ಹೆಗಡೆ, ಮಂಜುನಾಥ್ ಗುಡ್ಡೆದಿಂಬ, ಶ್ರೀವತ್ಸ ಹಾಗೂ ಮುಮ್ಮೇಳದಲ್ಲಿ ಅರುಣ್ ಬೆಂಕಟವಳ್ಳಿ, ರವಿಶಂಕರ ಭಟ್, ಅಶೋಕ ಕುಮಾರ್ ಹೆಗಡೆ, ಪ್ರತೀಕ್ ಬೆಂಕಟವಳ್ಳಿ ಇದ್ದರು.

ವೈಚಾರಿಕ ಚಳವಳಿ ಅಗತ್ಯವಿದೆ: ಎನ್.ರವಿಕುಮಾರ್

ಶಿವಮೊಗ್ಗ: ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸೈದ್ಧಾಂತಿಕ ವೈರುದ್ಯಗಳನ್ನು ಎದುರಿಸುತ್ತಿರುವ ಈ ಹೊತ್ತಿನಲ್ಲಿ ಬಸವಾದಿಶರಣರು ಮತ್ತು ವಚನಗಳನ್ನು ಉಳಿಸಿಕೊಳ್ಳಲು ಮತ್ತೊಂದು ವೈಚಾರಿಕ ಚಳವಳಿ ಅಗತ್ಯವಿದೆ ಎಂದು ಪ್ರಗತಿಪರ ಚಿಂತಕ ಎನ್. ರವಿಕುಮಾರ್ (ಟೆಲೆಕ್ಸ್) ಹೇಳಿದರು.

ಬಸವಕೇಂದ್ರದ ವತಿಯಿಂದ ನಡೆಯುತ್ತಿರುವ ಚಿಂತನಕಾರ್ತಿಕದಲ್ಲಿ ಅತಿಥಿಗಳಾಗಿ ಮಾತನಾಡುತ್ತಿದ್ದ ಅವರು, 12ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ, ಮೌಢ್ಯ, ಕಂದಾಚಾರಗಳ ವಿರುದ್ಧ ಬಸವಣ್ಣನವರು ಕಟ್ಟಿದ ವೈಚಾರಿಕ ಚಳವಳಿ ಕ್ರಾಂತಿಕಾರಿ ಪರಿವರ್ತನೆಗೆ ಕಾರಣವಾಯಿತು. ಕಲ್ಯಾಣದಲ್ಲಿ ನಡೆದದ್ದು ಕ್ರಾಂತಿಯಲ್ಲ. ಸಾಮಾಜಿಕ , ಸಾಂಸ್ಕೃತಿಕ, ಧಾರ್ಮಿಕ ಪರಿವರ್ತನೆಯ ಅರಿವಿನ ವಿರುದ್ಧ ವೈದಿಕಶಾಹಿಗಳು, ಯಥಾಸ್ಥಿತಿವಾದಿಗಳು ನಡೆಸಿದ ದೊಂಬಿಯೇ ಆಗಿತ್ತು. ಸಮಸಮಾಜದ ಬಸವಧರ್ಮ ಅಥವಾ ವಚನಗಳ ಚಳವಳಿಗಳು ಜಗತ್ತಿನಲ್ಲಿ ಜನಸಾಮಾನ್ಯರೆ ಕಟ್ಟಿದ ಚಳವಳಿಯಾಗಿದೆ ಎಂದರು.

> **ಇವತ್ತಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ತಲ್ಲಣಗಳಿಗೆಲ್ಲಾ ವಚನಗಳು ಪರಿಹಾರವಾಗಿವೆ. ಆದರೆ ಬಸವಣ್ಣ ಮತ್ತು ವಚನಗಳನ್ನು ವೈದಿಕನೆಲೆಯಲ್ಲಿ ತಮ್ಮವನ್ನಾಗಿಸುವ ಅಥವಾ ಸಾಂಸ್ಕೃತಿಕ ರೂಪಾಂತರಗೊಳಿಸುವ ದೊಡ್ಡ ಹುನ್ನಾರ ನಡೆದಿದ್ದು, ಇದನ್ನು ತಡೆಯುವಲ್ಲಿ ಮತ್ತೊಂದು ವೈಚಾರಿಕ ಚಳವಳಿಗೆ ಬಹುಜನರು ಮುಂದಾಗಬೇಕು.**
> **-ಎನ್. ರವಿಕುಮಾರ್** ಪ್ರಗತಿಪರ ಚಿಂತಕ

ಬಸವಕೇಂದ್ರದ ವತಿಯಿಂದ ಚಿಂತನಕಾರ್ತಿಕದಲ್ಲಿ ಅತಿಥಿಗಳಾಗಿ ಪ್ರಗತಿಪರ ಚಿಂತಕ ಎನ್. ರವಿಕುಮಾರ್(ಟೆಲೆಕ್ಸ್) ಮಾತನಾಡಿದ್ದರು.

12ನೇ ಶತಮಾನದಲ್ಲಿ ಇದ್ದ ಜಾತಿ ತಾರತಮ್ಯ, ಶೋಷಣೆ, ಧಾರ್ಮಿಕ ಕಂದಾಚಾರಗಳು 21 ನೇ ಶತಮಾನದಲ್ಲೂ ಇನ್ನಷ್ಟು ಉಗ್ರವಾಗಿ , ಆಕ್ರಮಣಕಾರಿಯಾಗಿ ಮುನ್ನಡೆಯುತ್ತಿರುವುದು ಸಮಸಮಾಜ ನಿರ್ಮಾಣದ ಬಸವತತ್ವಕ್ಕೆ ದೊಡ್ಡ ಅಡ್ಡಿಯಾಗಿದೆ. ವೈದಿಕ ಪ್ರೇಣಿತ ಮತ್ತು ಬಸವಪ್ರೇಣಿತ ವಿಚಾರಧಾರೆಗಳ ನಡುವೆ ಸಂಘರ್ಷ ನಡೆಯುತ್ತಿದ್ದು, ಕಲ್ಯಾಣದಲ್ಲಿ ಬಸವಾದಿಶರಣನ್ನು ಕೊಂದಂತೆ, ವಚನಗಳನ್ನು ಸುಟ್ಟ ಮನೋಧರ್ಮವೇ ಇಂದೂ ಕೂಡ ಇದೇ ಹಾದಿಯನ್ನು ಅನುಸರಿಸುತ್ತಿರುವುದು ಆತಂಕಕಾರಿ ಸಂಗತಿ ಕಳವಳ ವ್ಯಕ್ತಪಡಿಸಿದರು.

ಉಪನ್ಯಾಸಕ ಡಾ.ಕಲೀಮುಲ್ಲಾ ಮಾತನಾಡಿ, ಜಗತ್ತಿನಲ್ಲಿ ಪ್ರೀತಿ ಸೇರಿದಂತೆ ಎಲ್ಲವೂ ಒಳ್ಳೆಯದಿದೆ. ಆದರೆ ಅದನ್ನು ನಾವು ಹೇಗೆ ಸ್ವೀಕರಿಸುತ್ತೇವೆ ಎನ್ನುವುದೇ ಅನಂತ ಲೋಕ. ನಮ್ಮೊಳಗೊಂದು ಲೋಕವಿದ್ದು, ಅದು ಅಂತರ್ ಮುಖಿಯಾಗಿರುತ್ತದೆ ಎಂದರು.

ಗ್ರಾಹಕರ ವ್ಯಾಜ್ಯ ಪ್ರಾಧಿಕಾರದ ನ್ಯಾಯಾಧೀಶೆ ಪ್ರೇಮಾ ಹಾಲಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಬಸವಕೇಂದ್ರ ಡಾ. ಬಸವಮುರುಳುಸಿದ್ದಸ್ವಾಮೀಜಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಚಿಂತನಕಾರ್ತಿಕ ಸೇವಾರ್ಥಿಗಳಾದ ಅ.ಮ.ಶಿವಮೂರ್ತಿ ಮತ್ತು ಕುಟುಂಬ ಅತಿಥ್ಯವಹಿಸಿತ್ತು.

ಕಳೂರು ಕ್ಷೇತ್ರಕ್ಕೆ ಶಶಿಕಲಾ ನಾಮಪತ್ರ

ಎಂ.ಗುಡ್ಡೆಕೊಪ್ಪ ಗ್ರಾಮ ಪಂಚಾಯತಿಯ ಆವರಣದಲ್ಲಿ ಕಳೂರು ಕ್ಷೇತ್ರದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಶಶಿಕಲಾರವರು ನಾಮಪತ್ರ ಸಲ್ಲಿಸಿದರು.

ಹೊಸನಗರ: ತಾಲೂಕಿನ ಎಂ.ಗುಡ್ಡೆಕೊಪ್ಪ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಳೂರು ಕ್ಷೇತ್ರಕ್ಕೆ ನ.23ರಂದು ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿ ಶಶಿಕಲಾರಾಮು ಅವರು ತಮ್ಮ ಉಮೇದುಗಾರಿಕೆಗಾಗಿ ನಾಮಪತ್ರ ಸಲ್ಲಿಸಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಎಂ.ಗುಡ್ಡೆಕೊಪ್ಪ ಗ್ರಾಮ ಪಂಚಾಯತಿ ಸದಸ್ಯರ ಚುನಾವಣೆ ನಡೆದಿದ್ದು, ಕಳೂರು ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ಅಭ್ಯರ್ಥಿ ರಶ್ಮೀಯವರು ಗೆಲುವು ಸಾಧಿಸಿದ್ದು, ಅವರಿಗೆ ಆಶಾ ಕಾರ್ಯಕರ್ತೆಯಾಗಿ ಕೆಲಸ ಸಿಕ್ಕಿದೆ. ಅವರು ತಮ್ಮ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ತೆರವು ಆಗಿರುವ ಸ್ಥಾನಕ್ಕೆ ನ. 23ರಂದು ಚುನಾವಣೆ ನಡೆಯಲಿದ್ದು ಶಶಿಕಲಾ ಅವರು ಸದಸ್ಯ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಬೆಂಬಲಿಗರೊಂದಿಗೆ ಎಂ ಗುಡ್ಡೆಕೊಪ್ಪ ಗ್ರಾಮ ಪಂಚಾಯಿತಿಗೆ ಆಗಮಿಸಿ ನಾಮಪತ್ರ ಸಲ್ಲಿಸಿದ್ದಾರೆ.

ಈ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಮೌಳಿ ಗೌಡ, ಪ್ರದಾನ ಕಾರ್ಯದರ್ಶಿ ಸದಾಶಿವ ಶ್ರೇಷ್ಠಿ, ಟೌನ್ ಘಟಕದ ಅಧ್ಯಕ್ಷ ಗುರುರಾಜ್, ಗ್ರಾಮ ಪಂಚಾಯಿತಿ ಸದಸ್ಯರಾದ ಬೃಂದಾವನ ಪ್ರವೀಣ್, ದಿವ್ಯ ಪ್ರವೀಣ್, ಮಹೇಂದ್ರ, ರಘುಶೆಟ್ಟಿ, ಶಂಕರಪ್ಪ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ವೀರ ವನಿತೆ ಒನಕೆ ಓಬವ್ವ ಜಯಂತ್ಯುತ್ಸವ

ಸೊರಬ: ಸಮಯ ಪ್ರಜ್ಞೆ ಮತ್ತು ಪರಾಕ್ರಮದಿಂದ ವೈರಿ ಸೈನಿಕರನ್ನು ಸದೆಬಡಿದ ಒನಕೆ ಓಬವ್ವ ಇಂದಿನ ಪೀಳಿಗೆಗೆ ಪ್ರೇರಣೆ ಆಗಿದ್ದಾರೆ ಎಂದು ತಹಸೀಲ್ದಾರ್ ಮಂಜುಳಾ ಬಿ. ಹೆಗಡಾಳ್ ಹೇಳಿದರು. ಸೋಮವಾರ ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ, ತಾಪಂ, ಪುರಸಭೆ, ವಿವಿಧ ಇಲಾಖೆಗಳು ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಮತ್ತು ತಾಲೂಕು ಛಲವಾದಿ ಸಮಾಜದ ವತಿಯಿಂದ ಹಮ್ಮಿಕೊಂಡ ವೀರ ವನಿತೆ ಒನಕೆ ಓಬವ್ವ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಅಧ್ಯಕ್ಷತೆ ವಹಿಸಿದ್ದರು. ಒನಕೆ ಓಬವ್ವನ ಧೈರ್ಯ ಮತ್ತು ಸಾಹಸ ಪ್ರಸ್ತುತ ದಿನಮಾನಗಳಲ್ಲಿ ಮಹಿಳೆಯರಿಗೆ ಮಾದರಿಯಾಗಿದೆ ಎಂದರು. ವೀರ ವನಿತೆ ಒನಕೆ ಓಬವ್ವ ಅವರ ಜೀವನ ಮತ್ತು ಸಾಹಸದ ಕುರಿತು ಉಪನ್ಯಾಸಕ ಡಾ. ಉಮೇಶ್ ಭದ್ರಾಪುರ ಉಪನ್ಯಾಸ ನೀಡಿದರು. ಛಲವಾದಿ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಮಂಜಪ್ಪ ಹಸವಿ, ತಾಲೂಕು ಕಚೇರಿಯ ಶಿರಸ್ತೆದಾರ್ ಎಸ್. ನಿರ್ಮಲಾ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಇಕ್ಬಾಲ್ ಜಾತಿಗೇರ್, ದಲಿತ ಸಂಘರ್ಷ ಸಮಿತಿಯ ವಿಭಾಗೀಯ ಸಂಚಾಲಕ ಗುರುರಾಜ್, ದಲಿತ ಮುಖಂಡ ಶ್ಯಾಮಣ್ಣ ತುಡನೀರು, ತಾಲೂಕು ಕಚೇರಿಯ ನಾಗರತ್ನಾ, ವಿಕ್ರಂ ಹೆಬ್ಬಾರ್, ಬಿ.ಜೆ. ವಿನೋದ್ ವಿವಿಧ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು. ಸುರೇಶ್ ಸ್ವಾಗತಿಸಿ, ಬಿ.ಜೆ. ವಿನೋದ್ ವಂದಿಸಿ, ಎಸ್. ರಾಘ ವೇಂದ್ರ ನಿರೂಪಿಸಿದರು.

ಸಂತೃಪ್ತಿಗಿಂತ ಮಿಗಿಲಾದ ಸಂಪತ್ತಿಲ್ಲ: ರಂಭಾಪುರಿ ಶ್ರೀ

ಭದ್ರಾವತಿ: ಮನುಷ್ಯನ ಮನಸ್ಸು ಸಿರಿವಂತವಾದರೆ ಸಂಪತ್ತು ಇಲ್ಲದಿದ್ದರೂ ನಾವು ಸಿರಿವಂತರೆ. ಮನಸ್ಸೇ ಬಡವಾಗಿದ್ದರೆ ನಮ್ಮಲ್ಲಿ ಸಂಪತ್ತು ಇದ್ದರೂ ನಾವು ಬಡವರೇ. ಸಂತೃಪ್ತಿಗಿಂತ ಶ್ರೇಷ್ಟವಾದ ಸಂಪತ್ತಿಲ್ಲವೆಂದು ಬಾಳೆಹೊನ್ನೂರು ಶ್ರೀರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಸೋಮವಾರ ನಗರದ ಸಹ್ಯಾದ್ರಿ ಬಡಾವಣೆಯಲ್ಲಿ ಜರುಗಿದ ಇಷ್ಟಲಿಂಗ ಮಹಾಪೂಜಾ ಹಾಗೂ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

> **ಆಶೆ ಕಳೆದುಕೊಂಡು ಬದುಕಬಹುದು. ಆದರೆ ಆಸಕ್ತಿ ಕಳೆದುಕೊಂಡು ಬದುಕಬಾರದು. ಆಡುವ ಮಾತುಗಳಿಗೆ ಕೊಲ್ಲುವ ಮತ್ತು ಕಾಪಾಡುವ ಸಾಮರ್ಥ್ಯ ಎರಡೂ ಇದೆ. ಮಾತುಗಳಲ್ಲಿ ಕರುಣೆ ಹಾಗೂ ನೈಜತೆ ಯಿದ್ದರೆ ಬದುಕು ಬಲಗೊಳ್ಳುತ್ತದೆ. ಹಣವನ್ನು ಇವತ್ತಲ್ಲ ನಾಳೆಯಾದರೂ ಸಂಪಾದಿಸಬಹುದು.**
> **-ಶ್ರೀರಂಭಾಪುರಿ ಡಾ.ವೀರಸೋಮೇಶ್ವರ** ಜಗದ್ಗುರುಗಳು

ಇಷ್ಟಲಿಂಗ ಮಹಾಪೂಜಾ ಹಾಗೂ ಧರ್ಮ ಜಾಗೃತಿ ಸಮಾರಂಭದಲ್ಲಿ ಶ್ರೀರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಸಾನ್ನಿಧ್ಯ ವಹಿಸಿದ್ದರು.

ಸಮಯ ಸ್ನೇಹ ಆರೋಗ್ಯ ಇವುಗಳಿಗೆ ಬೆಲೆ ಕಟ್ಟಲಾಗದು. ಜೀವನದ ಕೆಟ್ಟ ಘಟನೆಗಳನ್ನು ಮರೆತು ಬಿಡಬೇಕು. ಆದರೆ ಅದರಿಂದ ಕಲಿತ ಪಾಠಗಳನ್ನು ಯಾವಾಗಲೂ ಮರೆಯಬಾರದು. ದೇವರು ಮತ್ತು ಶ್ರೀ ಗುರುವನ್ನು ಯಾವತ್ತಿಗೂ ಮರೆಯಬಾರದೆಂದರು. ಈ ಪವಿತ್ರ ಸಮಾರಂಭದಲ್ಲಿ ಎಡೆಯೂರು ರೇಣುಕ ಶಿವಾಚಾರ್ಯ ಸ್ವಾಮಿಗಳು, ಮಳಲಿಮಠದ ಡಾ.ನಾಗಭೂಷಣ ಶಿವಾಚಾ ರ್ಯರು, ಬಿಳಕಿ ಹಿರೇಮಠದ ರಾಚೋ ಟೇಶ್ವರ ಶಿವಾಚಾರ್ಯರು ಪಾಲ್ಗೊಂಡು ಉಪದೇಶಾಮೃತವನ್ನಿತ್ತರು.

ಇದೇ ಸಂದರ್ಭದಲ್ಲಿ ಲಿಂ.ಬಿ.ಎಚ್. ಮಹದೇವಪ್ಪ ನವರ 10 ನೇ ವರ್ಷದ ಪುಣ್ಯಾರಾಧನೆ ಅಂಗವಾಗಿ ವಿವಿಧ ಕಾರ್ಯಕ್ರಮಗಳು ಜರುಗಿದವು. ಬಿಜೆಪಿ ಮುಖಂಡ ಕೂಡ್ಲಿಗೆರೆ ಹಾಲೇಶ್, ಉದ್ಯಮಿ ಬಿ. ಕೆ.ಜಗನ್ನಾಥ ಪಾಲ್ಗೊಂಡಿದ್ದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದಘೋಷ, ಚನ್ನಗಿರಿಯ ಡಾ. ಕೇದಾರ ಶಿವಶಾಂತವೀರ ಶಿವಾಚಾರ್ಯರಿಂದ ಪ್ರಾರ್ಥನೆ ಜರುಗಿತು. ತಾವರೆಕೆರೆ ಡಾ.ಅಭಿನವ ಸಿದ್ದಲಿಂಗ ಶಿವಾಚಾರ್ಯರು ನಿರೂಪಿಸಿದರು, ಮನು ಸ್ವಾಗತಿಸಿದರು. ಸ್ವಾಮಿ ವಂದನಾರ್ಪಣೆ ಸಲ್ಲಿಸಿದರು.

ವಿಶ್ವ ಮಧುಮೇಹ ದಿನಾಚರಣೆ ಇಂದು

ಶಿವಮೊಗ್ಗ: ವಿನ್‌ಲೈಫ್, ಮೆಟ್ರೋ ಆಸ್ಪತ್ರೆ, ಡಯಾಬಿಟಿಸ್, ವೆಲ್‌ನೆಸ್ ಸೆಂಟರ್ ಹಾಗೂ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮಧುಮೇಹ ದಿನಾಚರಣೆಯ ಅಂಗವಾಗಿ ನ.12ರ ಬೆಳಿಗ್ಗೆ 10ರಿಂದ 1 ಗಂ. ಕುವೆಂಪು ರಂಗಮಂದಿರದಲ್ಲಿ ಜಿಲ್ಲೆಯ ಆಶಾ ಕಾರ್ಯಕರ್ತೆಯರಿಗೆ ತರಬೇತಿ ಮತ್ತು ಕಾರ್ಯಗಾರ ಏರ್ಪಡಿಸಲಾಗಿದೆ ಎಂದು ವಿನ್‌ಲೈಫ್‌ನ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಮೆಟ್ರೋ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಪೃಥ್ವಿ ಬಿ.ಸಿ. ತಿಳಿಸಿದರು. ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಕಾರ್ಯಾಗಾರದಲ್ಲಿ ಮಧುಮೇಹ 360 ಎಲ್ಲಾ ಆಯಾಮದಲ್ಲೂ ಮಧುಮೇಹದೊಂದಿಗೆ 100 ವರ್ಷ ಬಾಳಿ. ಇದರ ಬಗ್ಗೆ ಸಮಾಲೋಚನೆ , ಉಪನ್ಯಾಸ, ತುರ್ತು ಜೀವರಕ್ಷಕ ತರಬೇತಿ, ಸಮತೋಲನ ಆಹಾರ ಪದ್ಧತಿ, ಮೆಡಿಕಲ್ ಯೋಗ ಥೆರಪಿ ಬಗ್ಗೆ ಸವಿಸ್ತಾರವಾಗಿ ತಿಳಿಸಲಾಗುವುದು ಎಂದರು. ಇದೀಗ ಎಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ಡಯಾಬಿಟಿಸ್‌ನ ಕುರಿತು ಸಂಪೂರ್ಣ ಮತ್ತು ನಿರಂತರ ಮಾಹಿತಿಗಾಗಿ ಕ್ಯೂಆರ್ ಸ್ಕಾನರ್ ಕೋಡ್ನು ಬಿಡುಗಡೆ ಮಾಡಲಾಗುವುದು ಎಂದರು. ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಗುರುದತ್ ಹೆಗಡೆ, ಜಿಲ್ಲಾ ರಕ್ಷಣಾಧಿಕಾರಿ ಬಿ.ಕೆ.ಮಿಥುನ್‌ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಸ್.ನಟರಾಜ್, ಆರ್‌ಸಿಹೆಚ್ ಅಧಿಕಾರಿ ಡಾ.ಓ.ಮಲ್ಲಪ್ಪ ಇತರರು ಉಪಸ್ಥಿತರಿದ್ದರು.

ಅನುದಿನವೂ ವಿರಾಮಕ್ಕೆ ಒಂದು ನೆಪ
ಆರಾಮ
ವಿಶ್ವವಾಣಿ
ಬೆಂಗಳೂರು | ಮಂಗಳವಾರ | 12 - 11 - 2024
@vishwavaninews

ಇಡೀ ದಿನ ಕಿತ್ತಾಡಿಕೊಳ್ಳುತ್ತಿರೋ ಅತ್ತೆ-ಸೊಸೆಯರು ಸಂಜೆ ಹೊತ್ತಿಗೆ ಅಕ್ಕ ಪಕ್ಕ ಕೂತು ತಮ್ಮದೇ ಮನೆ ಕಥೆ ಅನ್ನೋ ಹಾಗೆ ನೋಡುವಾಗ ಎಲ್ಲೋ ಒಂದು ಕಡೆ ಧಾರಾವಾಹಿಗಳು ಮನೆ-ಮನಸ್ಸನ್ನು ಒಂದು ಮಾಡುತ್ತವೆ ಅನ್ನಿಸುತ್ತದೆ. ಕಷ್ಟಗಳ ಸರಮಾಲೆಯಲ್ಲಿ ಸಿಲುಕಿರೋ ಎಷ್ಟೋ ಹೆಣ್ಣುಮಕ್ಕಳಿಗೆ ತಾವು ದಿನನಿತ್ಯ ನೋಡೋ ಧಾರಾವಾಹಿಯ ಹಿರೋಯಿನ್ ಹಾಗೇ ತಾವೂ ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸಬಲ್ಲೆವು ಅನ್ನೋ ಧೈರ್ಯ ಕೊಡುತ್ತವೆ.

ಚಿತ್ತ ವಿಹಾರ

ಮಿತಿ ಇರಲಿ ಬಯಕೆಗಳಿಗೆ...

ಮನುಷ್ಯನ ಅತ್ಯಂತ ಸಹಜವೆನ್ನುವ ಗುಣಗಳಲ್ಲಿ ಸಾಧ್ಯವಾದಷ್ಟು ಎಲ್ಲವೂ ನನ್ನ ಪಾಲಿಗಿರಲಿ ಎನ್ನುವುದು. ನಮ್ಮ ಬದುಕಿಗೆ ತೀರ ಅಗತ್ಯವಾಗಿ ಬೇಕಾಗಿರಲಿ, ಇಲ್ಲದೇ ಒಂಚೂರು ಅಗತ್ಯ ಇಲ್ಲದೇ ಇರಲಿ, ಒಟ್ಟಿನಲ್ಲಿ ನನಗೆ ಇರಲಿ ಎಲ್ಲವೂ ಎಂಬ ಸಣ್ಣದೊಂದು ದುರಾಸೆ ಆಗಾಗ ಇಣುಕುತ್ತಲೇ ಇರುತ್ತದೆ. ಇಂತಹ ಅನಗತ್ಯ ಸಂಗತಿಗಳ ಬೆಂಬತ್ತಿ ನಮ್ಮೆಲ್ಲ ಸಮಯ, ಶ್ರಮ, ನೆಮ್ಮದಿ, ಆಯುಷ್ಯ ದಂತಹ ಅಮೂಲ್ಯವಾದದ್ದನ್ನೆಲ್ಲ ವಿವೇಚನೆ ಇಲ್ಲದೇ ಕಳೆದುಕೊಂಡು ಬಿಡುತ್ತೇವೆ. ಯಾವು ದೋ ಕ್ಷಣಿಕ ವ್ಯಾಮೋಹದ ಸೆಳೆತಕ್ಕೆ ಸಿಲುಕಿ ಬದುಕಿನ ತುಂಬೆಲ್ಲ ನೋವು ಅನುಭವಿಸುತ್ತೇವೆ. ನಮ್ಮನ್ನೆ ನಾವು ಸಂಕಷ್ಟಕ್ಕೀಡು ಮಾಡಿಕೊಳ್ಳುತ್ತೇವೆ. ಇಂತಹದೊಂದು ಸಂದರ್ಭದಲ್ಲಿ ನಾವು ಒಂದಷ್ಟು ಸಂಯಮದಿಂದ ವರ್ತಿಸಬೇಕಾಗುತ್ತದೆ. ಎಲ್ಲ ದೃಷ್ಟಿಕೋನಗಳಿಂದ ನಮ್ಮ ಸುತ್ತಲಿನ ಸಂಗತಿಗಳನ್ನು ಅವಲೋಕಿಸಬೇಕಾಗುತ್ತದೆ.

ತನಗೆ ಸಾಕಾಗುವಷ್ಟು ಮಾಂಸವನ್ನು ತಿಂದ ನಂತರವೂ ಒಂದು ಕಾಗೆ ಒಂದು ಬಾರಿ ತನ್ನ ಕೊಕ್ಕಿನಲ್ಲಿ ಮಾಂಸದ ಚೂರನ್ನು ಇಟ್ಟುಕೊಂಡು ಆಕಾಶದಲ್ಲಿ ಹಾರಾಡುತ್ತಿತ್ತು. ಇತರ ಹತ್ತು ಹಲವು ಕಾಗೆಗಳು ಅದನ್ನು ತೀವ್ರವಾಗಿ ಬೆನ್ನಟ್ಟಿದವು. ಕಾಗೆಯ ಮೇಲೆ ತೀವ್ರವಾದ ಆಕ್ರಮಣಕ್ಕೆ ಮುಂದಾದವು. ಅನಿರೀಕ್ಷಿತವಾಗಿ ಎದುರಾದ ಸಮಸ್ಯೆಯಿಂದಾಗಿ ಕಾಗೆಗೆ ತುಂಬ ಭಯವಾ ಯಿತು. ಅದು ತನ್ನ ವೇಗವನ್ನು ಹೆಚ್ಚಿಸಿಕೊಂಡಿತು. ಮಾಂಸದ ತುಂಡನ್ನು ಇನ್ನಷ್ಟು ಬಿಗಿಯಾಗಿ ಕಚ್ಚಿಹಿಡಿದು ತಪ್ಪಿಸಿಕೊಳ್ಳಲು ತುಂಬ ಪ್ರಯತ್ನಿ ಸಿತು. ಪ್ರಾಣಹರಣದ ಭಯ ಅನುಭವಿಸುತ್ತಲೇ ಇನ್ನಷ್ಟು ವೇಗವಾಗಿ ಹಾರತೊಡಗಿತು. ಅಕಸ್ಮಿಕ ವಾಗಿ ಕಾಗೆಯ ಕೊಕ್ಕಿನಲ್ಲಿದ್ದ ಮಾಂಸದ ತುಂಡು ಕೆಳಕ್ಕೆ ಜಾರಿ ಬಿದ್ದಿತು. ಉಳಿದೆಲ್ಲ ಕಾಗೆಗಳು ಅದರ ಬೆನ್ನು ಬಿಟ್ಟು ಬಿದ್ದ ಮಾಂಸದ ತುಂಡಿನತ್ತ ಹಾರಿಹೋದವು. ಆಗ ಕಾಗೆಗೆ ಮಾಂಸವನ್ನು ಕಳೆದುಕೊಂಡಿದ್ದಕ್ಕಾಗಿ ಅಪಾಯ ತಪ್ಪಿತು ಎಂದು ಅರ್ಥವಾಗಿತ್ತು.

ಇದು ಬದುಕಿನ ವಾಸ್ತವಿಕ ಸಂಗತಿಗಳಲ್ಲಿ ಬಹುಮುಖ್ಯವಾದದ್ದು. ಅತಿಯಾದ ನಮ್ಮ ಬಯಕೆಗಳು, ಎಲ್ಲವೂ ನನಗೇ ಇರಲಿ ಸ್ವಾರ್ಥಪರ ನಿಲುವುಗಳು ನಮ್ಮನ್ನು ತೀರ ಸಂಕಷ್ಟಗಳಿಗೆ ಒಳಗು ಮಾಡುತ್ತವೆ. ನಾವು ನಮಗೆ ಎಷ್ಟು ಅಗತ್ಯ, ಯಾವುದು ಅನಗತ್ಯ ಎಂಬ ವಿವೇಚನೆಯನ್ನು ರೂಢಿಸಿಕೊಳ್ಳುವುದು ಬಹುಮುಖ್ಯವಾದ ಸಂಗತಿ. ಬೇಕು-ಬೇಡಗಳ ನಡುವಿನ ಸೂಕ್ಷ್ಮವಾಗಿರುವ ಅಂತರವನ್ನು ಚೆನ್ನಾಗಿ ಅರ್ಥೈಯಿಸಿ ಕೊಳ್ಳಬೇಕು. ಇಹದ ಪ್ರಪಂಚದಲ್ಲಿ ಆಸೆಗಳಿರದ್ದರೆ ಬದುಕು ಮುನ್ನಡೆಸುವುದು ಅಸಾಧ್ಯವೇ ಸರಿ. ಹಾಗಂತ ಕೇವಲ ಆಸೆಗಳ ಪೂರೈಕೆಯೇ ನಮ್ಮ ಬದುಕಿನ ಪರಮಾರ್ಥವೂ ಆಗಿರಬಾರದು. ಅಂತೆಯೇ ಅನುಭವಿಗಳು ಸಾಕು ಎಂಬುದು ಸಿರಿತನವಾದರೆ ಬೇಕು ಎಂಬುವುದೇ ಬಡತನ ಮಾತು ಅರ್ಥಪೂರ್ಣ. ಸಾಧ್ಯವಾದಷ್ಟು ನಮ್ಮ ಅಸಂಗತ ಬಯಕೆಗಳಿಗೆ ಒಂದಷ್ಟು ಬೇಲಿ ಹಾಕಬೇಕು. ಇದಕ್ಕಿಂತ ಬಹುಮುಖ್ಯವಾಗಿ ನಾವು ಬಯಕೆ ಮತ್ತು ತ್ಯಾಗಗಳ ನಡುವಿನ ಮಧ್ಯಮ ಮಾರ್ಗವನ್ನು ಅನುಸರಿಸುವುದು ತುಂಬ ಶ್ರೇಷ್ಠವಾದ ಸಂಗತಿಯಾಗಿದೆ.

● ಮಹಾದೇವ ಬಸರಕೋಡ

ಸಾಮರ್ಥ್ಯಕ್ಕೆ ಸವಾಲು

ಯಾವುದೇ ಸಂಸ್ಥೆ ಇರಬಹುದು, ಸಂಘಟನೆ ಇರಬಹುದು, ಚೆನ್ನಾಗಿ ದುಡಿಯುವವರಿಗೆ ಹೆಚ್ಚು ಕೆಲಸದ ಹೊರೆ ಬೀಳುವುದು ಸಾಮಾನ್ಯ. ಅನೇಕ ಬಾರಿ ಹೆಚ್ಚಿನ ಕೆಲಸದ ಹೊರೆ ನಿಜಕ್ಕೂ ಹೊರೆಯೆನಿಸುವುದುಂಟು. ಕೆಲವೊಮ್ಮೆ ಭಾರ ಹೆಚ್ಚಾಗಿ ಬಳಲಿ ಸೋತ ಅನುಭವ ಆಗುವುದೂ ಉಂಟು. ಅನಿವಾರ್ಯವಾಗಿ ಮಾಡಬೇಕಾದ ಕೆಲಸಗಳನ್ನು ಸಮರ್ಥವಾಗಿ ನಿಭಾಯಿಸಲಾಗದಿದ್ದಾಗ ಭಾರ ಇನ್ನಷ್ಟು ಹೆಚ್ಚಾದಂತೆನಿಸಿಬಿಡುತ್ತದೆ. ಆದರದನ್ನು ಸಾಮರ್ಥ್ಯಕ್ಕೆ ಸವಾಲು ಎಂದು ಪರಿಗಣಿಸಿ, ಸ್ವೀಕರಿಸಿದರೆ ಸೋಲು - ಗೆಲುವುಗಳನ್ನು ಮೀರಿ ಕಾರ್ಯದಕ್ಷತೆ ವೃದ್ಧಿಸುವುದಂತು ನಿಜ. ಕಾರ್ಯ ಬಾಹುಳ್ಯವನ್ನು ವಿಸ್ತರಿಸಿಕೊಳ್ಳುತ್ತಾ ಮಾಡುವ ಕೆಲಸ, ಕೇವಲ ಆದಾಯಕ್ಕಾಗಿ ಅಷ್ಟೇ ಅಲ್ಲ, ಆನಂದಕ್ಕಾಗಿಯೂ ಹೌದು ಎಂಬ ಮನಸ್ಥಿತಿ ಬೆಳೆದರೆ, ಸಂತೃಪ್ತಿಯ ಸೆಲೆ ಹೃದಯ ಮನಸ್ಸುಗಳಲ್ಲಿ ಹರಿದು, ಮುಂದಿನ ಕೆಲಸಗಳಿಗೆ ಸ್ಫೂರ್ತಿಯಾಗುತ್ತದೆ. ತಿಂದು, ತಿರುಗಿ, ಕಾಲಕ್ಷೇಪ ಮಾಡಿದಾಗ ಮಾತ್ರ, ಮೆದುಳಿನಲ್ಲಿ ಡೊಪಮೈನ್ ಸಂದೇಶವಾಹಕ ಉತ್ಪತ್ತಿಯಾಗಿ, ಮನಸ್ಸು ಸಂತಸದಿಂದಿರಲು ಸಾಧ್ಯ ಎಂಬ ನಂಬಿಕೆ ಸತ್ಯಕ್ಕೆ ದೂರ. ಹಿಂಜರಿಕೆ, ಅನುಮಾನ, ಆತ್ಮವಿಶ್ವಾಸದ ಕೊರತೆ, ಅತಿಯಾದ ಆತ್ಮವಿಶ್ವಾಸ, ಹೆಚ್ಚೆನಿಸುವ ಅಹಂಕಾರದಂತಹ ಅನೇಕ ವಿಚಾರಗಳು ಆನಂದದ ಚಿಲುಮೆ ಚಿಮ್ಮದಂತೆ ತಡೆಹಿಡಿಯುತ್ತವೆ. ಈ ತಡೆಗೋಡೆಗಳನ್ನು ಕಿತ್ತೆಸೆಯುವ ಉಪಾಯವೇ ಕೆಲಸ. ಸಾಮರ್ಥ್ಯಕ್ಕೆ ಮಿತಿಯನ್ನು ವಿಧಿಸಿಕೊಳ್ಳದೆ, ಸಂಶಯ, ಸಂದೇಹಗಳಿಗೊಳಗಾಗದೆ, ಕಾರ್ಯತತ್ಪರ ರಾದರೆ, ಕೆಲಸದ ಗುಣಮಟ್ಟವು ವೃದ್ಧಿಯಾಗಿ, ವ್ಯಕ್ತಿತ್ವದ ಗುಣಮಟ್ಟವೂ ವರ್ಧಿಸುವುದು ಖಚಿತ. ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಪಡೆದ ಕಾರ್ಯಗಳ ಹಿಂದೆ ಅವಿರತ ಶ್ರಮ ಇದ್ದೆ ಇರುತ್ತದೆ. ಅಭೂತಪೂರ್ವವಾಗಿ ಯಶಸ್ಸು ಪಡೆದ ಕೆಲಸಗಳು, ಮುಂದಿನ ಜನಾಂಗಕ್ಕೆ ಮಾದರಿಯಾಗಿ ನಿಲ್ಲುತ್ತವೆ. ಆ ಕೆಲಸಗಳನ್ನು ಸಾಧಿಸಿದ ಸಾಧಕರು ನಿದರ್ಶನವಾಗಿ, ಅವರ ಮಾನಸಿಕ ಏಕಾಗ್ರತೆ, ಅವರು ಸಾಗಿದ ದಾರಿ, ಏರಿದ ಎತ್ತರ ಎಲ್ಲವೂ ಭವಿಷ್ಯದಲ್ಲಿ ಪ್ರೇರಣಾದಾಯಿಯಾಗಿ ತಲೆಮಾರುಗಳಿಗೂ ಹರಿಯುತ್ತಾ ಹೋಗುತ್ತವೆ.

● ಮಾಯಾ ಬಾಲಚಂದ್ರ

ಸೀರಿಯಲ್ ಸುತ್ತ-ಮುತ್ತ ಒಂದು ಸೀರಿಯಸ್ ಸುತ್ತು!

ಬಹುತೇಕ ಮನೆಗಳಲ್ಲಿ ಸಂಜೆಯಾಗುತ್ತಿಂದಂತೆ, ಕೆಲಸ ಮುಗಿಸಿ ಮನೆಗೆ ಬಂದ ಗಂಡನಿಗೂ, ದಿನವಿಡೀ ಮನೆಕೆಲಸ ಮಾಡಿ ಬಳಲಿ ಬೆಂಡಾದ ಹೆಂಡತಿಗೂ ಒಂದು ವಿಷಯಕ್ಕೆ ಜಗಳ ಆಗೋದು ಮಾಮೂಲಿ. ಕೊನೆಗೂ ಪಾಪ, ಬೆಳಿಗ್ಗೆಯಿಡೀ ಆಚೆ ಕೆಲಸ ಮಾಡಿ ಬಂದಿರೋರು ಅನ್ನೋ ಸಾಫ್ಟ್ ಕಾರ್ನರ್‌ನಲ್ಲಿ ಹೆಂಡತಿ ಸೋಲುತ್ತಾಳೆ. ಅಥವಾ ಪಾಪ,

ತೆರೆ ಮರೆ ಕತೆ

● ಟಿ.ಎಸ್.ಕೃತಿಕಾರಾಣಿ, ಯಲ್ಲಾಪುರ

ಬೆಳಿಗ್ಗೆಯಿಂದ ಮನೆಯ ಎಲ್ಲ ಕೆಲಸ ಮಾಡ್ಕೊಂಡು, ಎಲ್ಲರ ಕಾಳಜಿ ಮಾಡೋ ಹೆಂಡತಿಗೆ ಸ್ವಲ್ಪನಾದ್ರೂ ಮನರಂಜನೆ ಸಿಗಲಿ ಅನ್ನೋ ದೃಷ್ಟಿಯಿಂದ ಗಂಡ ಬಿಟ್ಟುಕೊಡುತ್ತಾನೆ. ಈ ಜಗಳ ಇತ್ಯರ್ಥ ಆಗಬೇಕಾದರೆ, ಒಂದೋ ಹೆಂಡತಿ ಮಣಿಯಬೇಕು, ಇಲ್ಲ ಗಂಡ ಮಣಿಯಬೇಕು ಅದೇ ತಾನೇ ಸಂಸಾರ ಸಾರ.

ಇಷ್ಟೆಲ್ಲ ಹೇಳಿ, ಅದ್ಯಾವುದಕ್ಕೆ ಈ ದಂಪತಿ ಜಗಳವಾಡುತ್ತಾರೆ ಅನ್ನುವುದನ್ನೇ ಹೇಳಿಲ್ಲ. ಸಂಸಾರದಲ್ಲಿ ಇಂತಹ ಪಾತ್ರವಹಿಸುವ ವಿಷಯ ಏನಿರಬಹುದು? ಇನ್ನೇನಿಲ್ಲ ಈ ಜಗಳ ರಿಮೋಟಿಗಾಗಿ, ತಮ್ಮ ನೆಚ್ಚಿನ ಚಾನೆಲ್‌ಗಾಗಿಯೇ ಆಗಿರುತ್ತದೆ. ಸಾಮಾನ್ಯವಾಗಿ ಗಂಡಸರು ಬೈಯ್ಯುವ, ಹೆಂಗಸರು ಆರಾಧಿಸುವ ಧಾರಾವಾಹಿಯ ಬಗ್ಗೆ ಹೇಳ ಹೊರಟಿದ್ದೇನೆ.

ಪ್ರತೀ ಮನೆಯಲ್ಲಿ, ಪ್ರತೀ ಕುಟುಂಬದಲ್ಲಿ, ಪ್ರತೀ ಸಂಸಾರದಲ್ಲಿ ಈ ಧಾರಾವಾಹಿಗಳು ವಹಿಸುವ ಪಾತ್ರ ಮುಖ್ಯವೆನಿಸುತ್ತದೆ.ಧಾರಾವಾಹಿಗಳಲ್ಲಿ ಮೋಸ ಮಾಡೋದು, ಇನ್ನೇನೋ ಕೆಟ್ಟದ್ದು ಮಾಡೋದು, ಇಂಥಹ ಋಣಾತ್ಮಕತೆಯನ್ನೇ ತೋರಿಸುತ್ತಾರೆ ಎಂದು ಹಲವರು ಬೈದುಕೊಳ್ಳೋದುಂಟು. ಆದರೇ, ಒಮ್ಮೆ ಯೋಚಿಸಿ, ಇಡೀ ದಿನ ಕಿತ್ತಾಡಿಕೊಳ್ಳುತ್ತಿರೋ ಅತ್ತೆ-ಸೊಸೆಯರು ಸಂಜೆ ಹೊತ್ತಿಗೆ ಅಕ್ಕ ಪಕ್ಕ ಕೂತು ತಮ್ಮದೇ ಮನೆ ಕಥೆ ಅನ್ನೋ ಹಾಗೆ ನೋಡುವಾಗ ಎಲ್ಲೋ ಒಂದು ಕಡೆ ಧಾರಾವಾಹಿಗಳು ಮನೆ-ಮನಸ್ಸನ್ನು ಒಂದು ಮಾಡುತ್ತವೆ ಅನ್ನಿಸುತ್ತದೆ. ಕಷ್ಟಗಳ ಸರಮಾಲೆಯಲ್ಲಿ ಸಿಲುಕಿರೋ ಎಷ್ಟೋ ಹೆಣ್ಣುಮಕ್ಕಳಿಗೆ ತಾವು ದಿನನಿತ್ಯ ನೋಡೋ ಧಾರಾವಾಹಿಯ ಹಿರೋಯಿನ್ ಹಾಗೇ ತಾವೂ ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸಬಲ್ಲೆವು ಅನ್ನೋ ಧೈರ್ಯ ಕೊಡುತ್ತವೆ. ಕಷ್ಟ ತಮಗೊಂದೇ ಬರೋದಿಲ್ಲ ಅನ್ನೋ ಸಾಂತ್ವನ ನೀಡುತ್ತವೆ.

ಸಿನಿಮಾ-ಧಾರಾವಾಹಿ ಬೇರೆಬೇರೆ

ಅಂತಹ ಒಂದು ಧಾರಾವಾಹಿಯ ಹಿಂದೆ ಏನೆಲ್ಲ ಆಗುತ್ತದೆ, ಹೇಗೆ ಧಾರಾವಾಹಿಗಳು ಪ್ರತಿದಿನ ಪ್ರತೀಮನೆಗೆ ಸರಿಯಾದ ಸಮಯಕ್ಕೇ ಹಾಜರಾಗುತ್ತವೆ, ವರ್ಷಾನುಗಟ್ಟಲೇ ಬಿಡುವಿಲ್ಲದೇ ಪ್ರಸಾರವಾಗಿಯೇ ಆಗುತ್ತವೆ? ಹೀಗೆ ಆಗಬೇಕಾದರೆ ಅದರ ಹಿಂದಿನ ಶ್ರಮವೇನು? ಅದರ ಹಿಂದೆ ಎಷ್ಟು ಕೈಗಳು ಕೆಲಸ ಮಾಡಿವೆ? ಎಷ್ಟು ಜನರ ಬೆವರು-ರಕ್ತ ಹರಿದಿವೆ, ಎಷ್ಟು ತಲೆ-ಬಿಸಿಯಾಗಿವೆ? ಎಷ್ಟು ಜನರ-ಎಷ್ಟು ದಿನದ ನಿದ್ದೆ ಹಾಳಾಗಿವೆ ಅನ್ನೋದು ಬಹುಷಃ ಯಾರಿಗೂ ಗೊತ್ತೇ ಆಗಿರುವುದಿಲ್ಲ. ಆ ಕುರಿತು ಕಲ್ಪನೆಯೂ ಯಾರಿಗೂ ಬಂದಿರಲಿಕ್ಕಿಲ್ಲ. ಸಾಮಾನ್ಯವಾಗಿ, ಜನ ಧಾರಾವಾಹಿಯನ್ನೂ, ಸಿನಿಮಾವನ್ನೂ ಒಂದೇ ತಕ್ಕಡಿಯಲ್ಲಿ ಹಾಕಿ ತೂಗುತ್ತಾರೆ. ಆದರೆ ಎರಡೂ ಕ್ಷೇತ್ರಗಳೂ ಯಾವ ದಿಕ್ಕಿನಲ್ಲೂ, ಯಾವ ರೀತಿಯಿಂದಲೂ ಸಂಬಂಧವೇ ಇಲ್ಲದೇ ಇರೋ ವಿಷಯಗಳು. ಒಂದು ಕಾದಂಬರಿ, ಹಾಗೂ ಒಂದು ಸಿನಿಮಾ ಹೇಗೇ ಭಿನ್ನವೋ ಹಾಗೇಯೇ ಧಾರಾವಾಹಿಯೂ ಸಂಪೂರ್ಣ ಭಿನ್ನವಾದ ಕ್ಷೇತ್ರ.

ವರ್ಷದ ನಂತರ ಬರುವ ಪರದೆ ಮೇಲೆ

ಒಂದು ಧಾರಾವಾಹಿಯ ಒಂದು ದಿನದ ಸಂಚಿಕೆ (30 ನಿಮಿಷದ ಎಪಿಸೋಡ್) ಪ್ರಸಾರವಾಗಬೇಕಾದರೆ,

ಸರಿ ಸುಮಾರು 70 ಜನರು ಮೂರು ಹಗಲು, ಮೂರು ರಾತ್ರಿ, ಕತ್ತೆ ಹಾಗೆ ದುಡಿದಿರಬೇಕು. ಒಂದು ಕಥೆ ಸೃಷ್ಟಿಯಾಗೋಕೆ ಒಬ್ಬ ಬರಹಗಾರನ ತಲೆ 5-6 ತಿಂಗಳು ಕಥೆಯ ಕುರಿತು, ಕಥೆಯಲ್ಲಿನ ಪಾತ್ರಗಳ ಕುರಿತು ಎಂಟು ದಿಕ್ಕುಗಳಲ್ಲಿ ಯೋಚಿಸಿ, ನೂರಾರು ಸಾಧ್ಯತೆಗಳನ್ನ ಪರಾಮರ್ಶಿನಿ, ಕಥೆಯನ್ನ ಹೆಣೆಯಬೇಕು. ಇಲ್ಲಿನ ಸವಾಲೆಂದರೆ, ಈಗಾಗಲೇ ಇರುವ ನೂರೈವತ್ತು ಧಾರಾವಾಹಿಗಿಂತಲೂ ವಿಭಿನ್ನವಾಗಿ, ವರ್ಷಗಟ್ಟಲೇ ಕಥೆ ಓಡಿದರೂ ದಿನವೂ ಇಂಟ್ರೆಸ್ಟಿಂಗ್ ಅನ್ನಿಸೋ ಥರದ ಪಾತ್ರಗಳನ್ನ ಬರಹಗಾರ ಸೃಷ್ಟಿಸಿರಬೇಕು. ಹೀಗೆ ಸೃಷ್ಟಿಯಾದ ಕಥೆ ಇನ್ನೊಂದಷ್ಟು ಜನರ ಒಪ್ಪಿಗೆ ಪಡೆದು ಮುಂದಿನ ಹಂತಕ್ಕೆ ಸಿದ್ಧವಾಗುತ್ತದೆ. ಈಗ ಕಥೆಯನ್ನ ಕಥೆಗಾರನಂತೆಯೇ ಜೀವಿಸಬಲ್ಲ ಡೈರೆಕ್ಟರ್, ಸ್ಕ್ರೀನ್‌ಪ್ಲೇ ರೈಟರ್ ಮತ್ತು ಡೈಲಾಗ್ ರೈಟರ್ ಸಿಗಬೇಕು. ಜೊತೆಗೆ ಪಾತ್ರಗಳಿಗೆ ಸಮರ್ಥವಾಗಿ ಜೀವತುಂಬಿಸೋ ನಟರು ಸಿಗಬೇಕು. ಈ ಥರಹದ ವಿಷಯಗಳಲ್ಲಿ ರಾಜಿಯಾಗೋಕೇ ಸಾಧ್ಯವೇ ಇಲ್ಲ. ಅದೆಲ್ಲ ನಿರ್ಧಾರವಾದಮೇಲೇ, ಪ್ರಮೋಷನ್‌ಗೋಸ್ಕರ ಒಂದು ಹಂತದ ಶೂಟೀಂಗ್ ಶುರುವಾಗುತ್ತದೆ. ಅದಾಗಿ ಒಂದು ವಾರಕ್ಕೋ ಹದಿನೈದು ದಿನಕ್ಕೋ ಟಿವಿಯಲ್ಲಿ ಹೊಸಾ ಕಥೆ- ಶೀಘ್ರದಲ್ಲಿ ಅನ್ನೋ ಪ್ರೋಮೋ ಕಾಣಿಸತೊಡಗುತ್ತದೆ. ಇಲ್ಲಿಗೆ ಈ ಕಥೆ, ಕಥೆಗಾರನ ತಲೆಯಲ್ಲಿ ಹುಟ್ಟಿಯೇ ಸುಮಾರು ಒಂದು ವರ್ಷ ಕಳೆದಿರುತ್ತದೆ.

ಧಾರಾವಾಹಿ ಒಂದು ಯಜ್ಞ

ಒಮ್ಮೆ ಶೀಘ್ರದಲ್ಲಿ ಅನ್ನೋದು ಜನರ ಕಣ್ಣಿಗೆ ಬೀಳುತ್ತಿದ್ದಂತೆಯೇ, ಧಾರಾವಾಹಿಯ ಹಿಂದೆ ಕೆಲಸ ಮಾಡುತ್ತಿರುವ ಎಲ್ಲರ ಎದೆಯಲ್ಲೂ ಪುಕುಪುಕು ಶುರುವಾಗಿರುತ್ತದೆ. ಮೊದಲು ಒಂದು ರೀತಿಯ ಭಯವಿದ್ದರೆ, ಆಮೇಲೆ ಇನ್ನೊಂದು ರೀತಿಯದ್ದೇ ಗಾಬರಿಯಿರುತ್ತದೆ. ಏಕೆಂದರೆ ಈ ಧಾರಾವಾಹಿ ಅನ್ನೋದು ಒಂದು ಜವಾಬ್ದಾರಿ, ಅದೊಂದು



ಸಂಘಟನೆ. ಅದೊಂದಷ್ಟು ಜನ ಸೇರಿ ಮಾಡಬೇಕಾದ ಯಜ್ಞ. ಇಲ್ಲಿ ನಡುವಲ್ಲಿ ಎಂತೆಂತ್ತದ್ದೋ ಸಮಸ್ಯೆಗಳು, ಅವಾಂತರಗಳು, ಮನಸ್ತಾಪಗಳು, ನಟರ ಕಾಲ್‌ಶೀಟ್ ಸಮಸ್ಯೆ, ಮಳೆ-ಬಿಸಿಲು ಹವಾಮಾನ ವೈಪರಿತ್ಯ, ಒಬ್ಬರಿಗೆ ಅನಾರೋಗ್ಯ, ಹಬ್ಬ-ಹರಿದಿನ ಹೀಗೆ ಒಂದು ಧಾರಾವಾಹಿಗೆ ಸಾವಿರಾರು ಸವಾಲುಗಳಿರುತ್ತವೆ. ಅವನ್ನೆಲ್ಲ ಮೀರಿ, ಈ ಸಂಘಟನೆಯು ಪ್ರತಿದಿನವೂ ಮೂವತ್ತು ನಿಮಿಷ ಟಿವಿ ಪರದೆಯ ಮೇಲೆ ತಮ್ಮ ಕೆಲಸವನ್ನ ಹಾಜರುಪಡಿಸಲೇಬೇಕು.

ನಟರ ಹಳವಂಡ

ಇದೆಲ್ಲ ಹೊರತುಪಡಿಸಿ, ನಟರಿಗೆ ಕಲಾವಿದರಿಗೆ ಇನ್ನೂ ಬೇರೇಯದೇ ರೀತಿಯ ತಲೆನೋವಿರುತ್ತದೆ. ಅನುಭವವಿರುವ ಹಿರಿಯ ಕಲಾವಿದರಿಗೆ ಪೋಷಕ ಪಾತ್ರಗಳೇ ಕಟ್ಟಿಟ್ಟ ಬುತ್ತಿ, ಆದರೆ ಹಿರಿತೆರೆ, ಕಿರುತೆರೆಯಲ್ಲಿ ಎಷ್ಟೋ ವರ್ಷ ಕಾಣಿಸಿಕೊಂಡವರಿಗೆ ಚಿಕ್ಕದೊಂದು ಪಾತ್ರ ಸಿಕ್ಕಿರುತ್ತದೆ. ಅವರ ಪಾತ್ರ ಯಾವಾಗಬೇಕಾದರೂ ಪ್ರಾಮುಖ್ಯತೆ ಪಡೆದುಕೊಳ್ಳಬಹುದು, ಇಲ್ಲ ಕಳೆದುಕೊಳ್ಳಬಹುದು, ಎಲ್ಲವೂ ಬರಹಗಾರರ ಕೈಯಲ್ಲಿದೆ. ಖಾಸಗೀ ಜೀವನದಲ್ಲಿ ಎಂತಹುದೇ ತೊಂದರೆಯಲ್ಲಿದ್ದರೂ ಕ್ಯಾಮೆರಾ ಮುಂದೆ ನಗಬೇಕು ಖುಷಿಯಲ್ಲಿದ್ದಾಗಲೂ ಅಳಬೇಕು ಇನ್ನು ಟಿವಿಯಲ್ಲಿ ಪ್ರತೀದಿನ ಕಾಣುವ ವಿಲನ್ ಅಂದರೆ ಖಳನಾಯಕ/ಖಳನಾಯಕಿ ಪಾತ್ರಧಾರಿಗೆ ಹೊರಗೆಲ್ಲೋ ರಸ್ತೆಯಲ್ಲಿ ಕಾಣಿಸಿಕೊಂಡಾಗ ಬೈಗುಳ ತಪ್ಪಿದ್ದಲ್ಲ. ಇಂತಹ ಹಲವು ಸವಾಲುಗಳು ಕ್ಯಾಮರಾ ಮುಂದಿರುವವರಿಗೂ ಇದ್ದೇ ಇದೆ.

ಕ್ಯಾಮೆರಾ ಹಿಂದಿನ ಕಾರುಬಾರು

ಕಥೆಗಾರ ಪ್ರತಿದಿನವೂ ತಾನಂದುಕೊಂಡಂತೆಯೇ ಕಥೆ ಪ್ರಸಾರವಾಗುತ್ತಿದೆಯೇ ಅನ್ನುವುದನ್ನ ಖಾತರಿಪಡಿಸಿಕೊಳ್ಳೋದರ ಜೊತೆಗೆ ಮುಂದಿನ ಕಥಾವಸ್ತುವನ್ನ ಸಿದ್ಧಪಡಿಸಿಕೊಳ್ಳಬೇಕು, ಈ ಕಥೆಗೆ ಸನ್ನಿವೇಷಗಳನ್ನ ಹೆಣೆದು, ಪಾತ್ರಗಳನ್ನ ಬಳಸಿಕೊಂಡು ಒಂದು ನೀಲನಕ್ಷೆಯನ್ನ ಸ್ಕ್ರೀನ್‌ಪ್ಲೇ ರೈಟರ್ ಸಿದ್ಧ ಮಾಡಿದರೆ, ಅದನ್ನಿಟ್ಟುಕೊಂಡು ಭಾವನೆ ತುಂಬಿ, ಆಯಾ ಪಾತ್ರಗಳಿಗೆ, ಸನ್ನಿವೇಷಕ್ಕೆ ತಕ್ಕಂತೆ ಸಂಭಾಷಣೆ ಬರೆಯೋದು ಡೈಲಾಗ್ ರೈಟರ್ ಕೆಲಸ. ಅದಾದಮೇಲೆ ಡೈರೆಕ್ಟರ್ ಶೂಟಿಂಗ್ ಸೆಟ್‌ನಲ್ಲಿನ ಸವಾಲುಗಳನ್ನ ಎದುರಿಸಿ, ನಟರನ್ನೆಲ್ಲ ಸಂಬಾಳಿಸಿಕೊಂಡು ಇರೋದನ್ನ ಇರೋ ಹಾಗೇಯೇ ಶೂಟ್ ಮಾಡಿಕೊಡಬೇಕು, ಅದಾದಮೇಲೆ ವೀಡಿಯೋ ಎಡಿಟರ್ ತನ್ನ ಕೈ ಚಳಕ ತೋರಿಸಿ, ಹಿನ್ನೆಲೆಗೆ ಯಾವ ಹಾಡು, ಯಾರ್ಯಾರ ಪ್ರತಿಕ್ರಿಯ ಹೇಗೆ ಸೇರಿಸಬೇಕು ಅನ್ನೋದನ್ನೆಲ್ಲ ನೋಡಿಕೊಳ್ಳುತ್ತಾರೆ. ಇಲ್ಲಿಗೆ 'ತೋಂತನನನ ಧೀಂತನನನ' ಅನ್ನೋ ಸೀರಿಯಲ್ ಸಿದ್ಧವಾಗುತ್ತದೆ.

ಇದು ಕ್ಯಾಮೆರಾ ಹಿಂದೆ ನಡೆಯೋ ಕಾರುಬಾರು.

ಸುಖಾಸುಮ್ಮನೆ ಧಾರಾವಾಹಿಗಳಿಗೆ ಬಯ್ಯುವವರಿಗೆ, ಒಂದೇ ಒಂದೂ ಸಂಚಿಕೆಯನ್ನೂ ಪೂರ್ಣವಾಗಿ ನೋಡದೇ ಕಮೆಂಟ್ ಹಾಕುವವರಿಗೆ ಅದರ ಹಿಂದಿನ ಕಷ್ಟ ಸುಖಗಳು ಗೊತ್ತಿರಲಿ.

ಧಾರಾವಾಹಿ ಇರೋದೇ ಹೀಗೆ

ಸುಖಾಸುಮ್ಮನೆ ಧಾರಾವಾಹಿಗಳಿಗೆ ಬಯ್ಯುವವರಿಗೆ, ಒಂದೇ ಒಂದೂ ಸಂಚಿಕೆಯನ್ನೂ ಪೂರ್ಣವಾಗಿ ನೋಡದೇ ಕಮೆಂಟ್ ಹಾಕುವವರಿಗೆ, ಓಟಿಟಿಯಲ್ಲಿ ಸೀರೀಸ್‌ಗಳನ್ನ ನೋಡಿಕೊಂಡು ಇದನ್ಯಾಕೆ ಹಾಗೆ ಮಾಡಬಾರದು ಅಂದುಕೊಳ್ಳುವವರಿಗೆ, ಫೇಸ್‌ಬುಕ್- ಇನ್‌ಸ್ಟಾಗ್ರಾಮಿನಲ್ಲಿ ಚಿಕ್ಕ ಪ್ರೋಮೋ ನೋಡಿಕೊಂಡು 'ಈ ಧಾರಾವಾಹಿ ಕಥೆ ಎಲ್ಲಿಗೂ ಸಾಗೋದೇ ಇಲ್ಲ' ಅನ್ನೋರಿಗೆ, ಯಾವುದೋ ಒಂದು ಸೀನ್ ನೋಡಿಕೊಂಡು ಸೀರಿಯಲ್ ಕಥೆಗಳಲ್ಲಿ ಲಾಜಿಕ್ಕೇ ಇರೋದಿಲ್ಲ ಅಂತ ಬೈದುಕೊಳ್ಳೊರಿಗೆ, ಸಿನಿಮಾಗಳ ಹಾಗೇ ಇದ್ಯಾಕೆ ಮುಗಿದುಹೋಗಬಾರದು ಅಂತ ಹೇಳೊರಿಗೆಲ್ಲ ಒಂದು ಕಿವಿಮಾತು ಧಾರಾವಾಹಿಗಳು ಇರೋದೇ ಹೀಗೆ. ಅದೇ ಒಂದು ಭಿನ್ನವಾದ ಮಾಧ್ಯಮ, ಧಾರಾವಾಹಿಗೆ ಅದರದ್ದೇ ಆಗ ಜಾನರ್‌ಗಳು, ಅದರದ್ದೇ ಆದ ಸ್ವರೂಪ, ಚೌಕಟ್ಟು ಇದ್ದೇ ಇರುತ್ತದೆ. ಬೇರೊಂದನ್ನ ಇದರೊಟ್ಟಿಗೆ ಹೋಲಿಸೋದು ತಪ್ಪು. ಎಷ್ಟೋ ಜನರಿಗೆ ಇದು ಮನರಂಜನೆಯ ಮೂಲ, ತಮ್ಮ ದಿನಚರಿಯ ಒಂದು ಭಾಗ, ತಮ್ಮ ಜೀವನದ ಏಕತಾನತೆಯಿಂದ ಕೆಲವು ಗಂಟೆಗಳ ಬಿಡುಗಡೆ, ಹೊರಗಿನ ಜಗತ್ತಿನ ಅರಿವಿಲ್ಲದವರಿಗೆ ಜ್ಞಾನದ ಮೂಲ ಇನ್ನು ಕೆಲವರಿಗೆ ಜೀವ- ಜೀವನ. ಆ ಸತ್ಯವನ್ನ ಒಪ್ಪಿಕೊಂಡು, ಅದನ್ನು ಇದ್ದ ಹಾಗೇಯೇ ಸ್ವೀಕರಿಸಿ. ಸಾಧ್ಯವಾದರೆ ನೋಡಿ, ಈ ಕಲೆಯನ್ನ ಪ್ರೋತ್ಸಾಹಿಸಿ, ಇಲ್ಲವಾದರೆ ಸುಮ್ಮನಿದ್ದುಬಿಡಿ.

ಶೂನ್ಯದಿಂದ ಸಾಧನೆ ಮಾಡಿದ ಸಾಧಕರ ಬದುಕು ನಮ್ಮಗೆ ಆದರ್ಶವಾಗಬೇಕು, ಬಣ್ಣದ ಬದುಕಲ್ಲ!

ಮೌಲ್ಯಾಧಾರಿತ ವ್ಯಕ್ತಿಗಳು ಆದರ್ಶವಾಗಬೇಕು

● ಡಾ.ಶ್ರೀಧರ ಗೌಡರ

ನಮಗೆ ಆದರ್ಶ ಯಾರಾಗಿರಬೇಕು ಎಂಬ ಪ್ರಶ್ನೆ ಇಂದಿನ ವಿದ್ಯಾರ್ಥಿಗಳಿಗೆ ಕೇಳಿದರೆ, ಕೆಲವು ವಿದ್ಯಾರ್ಥಿಗಳು ಶಿಕ್ಷಕರನ್ನು, ಸ್ವಾತಂತ್ರ್ಯ ಹೋರಾಟಗಾರರನ್ನು, ಆಧ್ಯಾತ್ಮಿಕ ಗುರುಗಳನ್ನು, ತಮ್ಮ ಮನೆಯ ಹಿರಿಯರನ್ನು, ತಂದೆ-ತಾಯಿಯವರನ್ನು ಹೇಳುವರು. ಇನ್ನೂ ಕೆಲವರು ರಾಜಕೀಯ ಮುಖಂಡರನ್ನು, ಚಲನಚಿತ್ರ ನಟ, ನಟಿಯರನ್ನು, ಶ್ರೀಮಂತರನ್ನು, ವ್ಯಾಪಾರಿಗಳನ್ನು ಹೇಳಬವುದು.

ಆದರೆ, ನಮ್ಮ ಜೀವನಕ್ಕೆ ಸರಿಯಾದ ಆದರ್ಶ ಯಾರಾಗಬೇಕು? ವ್ಯಕ್ತಿಗಳಲ್ಲ, ತತ್ವಗಳಾಗಬೇಕು. ತತ್ವಗಳನ್ನು ಪ್ರತಿಪಾದನೆ ಮಾಡಿ ನುದಿದಂತೆ ನಡೆದ ಸಾಧಕರು. ಅವರ ತತ್ವಗಳೇ ಶಾಶ್ವತ ಮೌಲ್ಯಗಳಾಗಿರುತ್ತವೆ. ವಚನಗಳ ಮೂಲಕ ವೈಚಾರಿಕ ಮೌಲ್ಯಗಳನ್ನು ಬಿತ್ತಿದ 12ನೇ ಶತಮಾನದ ಬಸವಾದಿ ಶರಣರು, ಕೀರ್ತನೆಗಳ ಮೂಲಕ ಸುಂದರ ಬದುಕು ಕಟ್ಟಿಕೊಳ್ಳಲು ಮೌಲ್ಯಗಳನ್ನು ತಿಳಿಸಿದ ಕೀರ್ತನಾಕಾರರು, ಶೂನ್ಯದಿಂದ ಸಾಧನೆ ಮಾಡಿದ ಸಾಧಕರ ಬದುಕು ನಮಗೆ ಆದರ್ಶವಾಗಬೇಕು. ಹೊರತು ಬಣ್ಣದ ಬದುಕಲ್ಲ!

ಇತಿಹಾಸ ನಿರ್ಮಿಸಿರಬೇಕು

ಬರೆಯಲು ಬರೆದ ರಾಮಕೃಷ್ಣ ಪರಮಹಂಸರು ಸ್ವಾಮಿ ವಿವೇಕಾನಂದನಂತ ಶಿಷ್ಯನನ್ನು ಜಗತ್ತಿಗೆ ನೀಡಿದರು. ಸಾಮಾನ್ಯ ಎಂಜಿನಿಯರ್ ಆಗಿದ್ದ ವರ್ಗೀಸ್

ಕುರಿಯನ್ ಅಮುಲ್ ಎಂಬ ಕಂಪನಿಯ ಮೂಲಕ ಕ್ಷೀರ ಕ್ರಾಂತಿ ಮಾಡಿದರು, ಅಸ್ಸಾಂ ರಾಜ್ಯದ ಜಾದವ್ ಪಾಯೆಂಗ್ 1400 ಎಕರೆ ಭೂಮಿಯಲ್ಲಿ ಕಾಡು ಬೆಳೆಸಿದು, ಮಕ್ಕಳಿಲ್ಲದ ಸಾಲುಮರದ ತಿಮ್ಮಕ್ಕ ಗಿಡಗಳನ್ನೇ ಮಕ್ಕಳೆಂದು ಬೆಳೆಸಿದ್ದು, ಬಿಹಾರದ ದಶರಥ ಮಾಂಝಿ ಗುಡ್ಡ ಕೊರೆದು ರಸ್ತೆ ನಿರ್ಮಿಸಿದ್ದು, ಬೀದಿ ದೀಪದ ಕೆಳಗೆ ಕುಳಿತು ಅಧ್ಯಯನ ಮಾಡಿದ ಎಸ್. ಎಂ. ವಿಶ್ವೇಶ್ವರಯ್ಯ, ಅಬ್ದುಲ್ ಕಲಾಂ, ಬಿ.ಆರ್.ಅಂಬೇಡ್ಕರ್ ಮುಂತಾದವರು ನಮಗೆ ಆದರ್ಶವಾಗಬೇಕು.

ಅರಿತಿರಬೇಕು

ಜೀವನದುದ್ದಕ್ಕೂ ಅರಿವನ್ನು ಪಡೆಯಲು, ಪಡೆದ ಅರಿವನ್ನು ಹಂಚಲು ಪ್ರಯಾಸಪಟ್ಟ ಸಾಕ್ರೆಟಿಸ್ ತಾನು ನಂಬಿದ ಮೌಲ್ಯಕ್ಕಾಗಿ ಸಾವನ್ನೂ ಸಂತೋಷದಿಂದ ಸ್ವೀಕರಿಸಿದ ಅವನ ಚಿಂತನೆಗಳೂ ನಮಗೆ ಇಂದಿಗೂ ಬೆಳಕಾಗುವಂಥವು. ಸಾಮಾನ್ಯವ್ಯಕ್ತಿಗಳಾಗಿ ಹುಟ್ಟಿ ಕಠಿಣ ಪರಿಶ್ರಮ, ಛಲದಿಂದ ಜೀವನದಲ್ಲಿ ಸಾಧನೆ ಮಾಡಿದ, ತತ್ವ ಸಿದ್ಧಾಂತಗಳಿಂದ ಬುದಕಿತ್ತಿರುವ ಸಾಧಕರು ಆದರ್ಶವಾಗಬೇಕು. ಬಹಿರಂಗದಲ್ಲಿ ಶುದ್ಧರಾಗಿ ಅಂತರಂಗದಲ್ಲಿ ಕಲ್ಮಶವಾಗಿರುವವರಲ್ಲ.

ಮೌಲ್ಯಾಧಾರಿತ ಜೀವನ ಬದುಕಿಗೆ ಬೆಲೆ ತರುತ್ತದೆ. ಮೌಲ್ಯಾಧಾರಿತ ಬದುಕು ರೂಪಿಸಿಕೊಳ್ಳಲು ಪ್ರೇರಣೆ ನೀಡಿದ, ಅಸತ್ಯದಿಂದ ಸತ್ಯದಡೆಗೆ, ಅಜ್ಞಾನದಿಂದ ಬೆಳಕಿನಡೆಗೆ ಹೊಗಲು ಪ್ರೇರಣೆ ನೀಡಿದ ಮೌಲ್ಯಗಳು, ವ್ಯಕ್ತಿಗಳು ನಮಗೆ ಆದರ್ಶವಾಗಬೇಕು.

ಇನ್ನೂ ಇದೆ 1753ರ ಮನೆ

● ಡಾ. ಉಮಾಮಹೇಶ್ವರಿ ಎನ್.

ಮೆಸೆಚ್ಯುಸೆಟ್ಸ್‌ನ ವಿಲಿಯಮ್ಸ್ ಟೌನ್‌ನ ರಸ್ತೆಯೊಂದರ ಬದಿಯಲ್ಲಿ ಓಡಾಡುವಾಗ 1753ಯ ಮನೆ ಎಂಬ ಫಲಕ ಕಾಣಿಸಿತು. ಅದರ ಬದಿಯಲ್ಲಿಯೇ ಮರದಿಂದ ತಯಾರಾದ ಚಿಕ್ಕ ಮನೆಯೊಂದು ಗೋಚರಿಸಿತು. ಮನೆಯ ವಿವರಗಳನ್ನು ಕುತೂಹಲದಿಂದ ಓದಿದಾಗ ತಿಳಿದ ವಿಷಯಗಳು ಉಪಯುಕ್ತವಾಗಿದ್ದವು.

ಇದು ಬರ್ಕ್ ಶೈರ್ ಭಾಗದಲ್ಲಿ ಹದಿನೆಂಟನೇ ಶತಮಾನದ ಮಧ್ಯದಲ್ಲಿ ಇಲ್ಲಿ ವಲಸೆ ಬಂದು ನೆಲೆಸಿದವರು ಕಟ್ಟಿಕೊಂಡ ಮನೆಗಳ ಮಾದರಿ. ವಿಲಿಯಮ್ಸ್ ಟೌನ್‌ನ ಎರಡು ಶತಕಗಳು ಪೂರೈಸಿದ ಸಂದರ್ಭದಲ್ಲಿ 1953ರಲ್ಲಿ ಸ್ಥಳೀಯ ನಾಗರಿಕರ ಶ್ರಮದಾನದ ಫಲವಾಗಿ ಎದ್ದು ನಿಂತ ಚಿಕ್ಕ ಮನೆ. ಇದು ವಿಲಿಯಮ್ಸ್ ಟೌನ್‌ನ ಹಿಸ್ಟರಿ ಮ್ಯೂಸಿಯಂನ ಅಧೀನದಲ್ಲಿದೆ.

1750ರ ನಂತರ ವಿಲಿಯಮ್ಸ್ ಟೌನ್ ಮತ್ತು ಪಕ್ಕದ ನಾರ್ತ್ ಆಡಮ್ಸ್ ಜಾಗಗಳಲ್ಲಿ ನೆಲೆಸಬೇಕಾದರೆ ಜನರು ಸ್ಥಳೀಯ ಆಡಳಿತದೊಡನೆ ಕರಾರುಪತ್ರ ಮಾಡಿಸಿಕೊಳ್ಳಬೇಕಾಗಿತ್ತು. ಕಟ್ಟಿಕೊಳ್ಳುವ ಮನೆ 1518 ಅಡಿಗಳ ವಿಸ್ತೀರ್ಣ ಹಾಗೂ ಏಳು ಅಡಿಗಳ ಎತ್ತರವಿರಬೇಕಾಗಿತ್ತು. ಸುತ್ತಲೂ ಸುಮಾರು 5 ಎಕರೆಗಳಷ್ಟು ಖಾಲಿ ಜಾಗ ಇರಬೇಕಾಗಿತ್ತು. ಹಾಗಾದಲ್ಲಿ ಮಾತ್ರ ಅವರ ಹೆಸರಿಗೆ ಜಾಗ ವರ್ಗಾವಣೆಯಾಗುತ್ತಿತ್ತು. ಈ ಕಾರಣದಿಂದಾಗಿ ಈ ಮನೆಗಳಿಗೆ ರೆಗ್ಯುಲೇಶನ್ ಹೌಸಸ್ ಎಂಬ ಅನ್ವರ್ಥನಾಮ ಅನ್ವಯವಾಯಿತು. ಹತ್ತಿರದ ಮೆಸೆಚ್ಯುಸೆಟ್ಸ್

ಫೋರ್ಟ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದ ಸೈನಿಕರು ಈ ತರಹದ ಮನೆಗಳ ಒಡೆಯರಾಗಿದ್ದರು.

1953 ರಲ್ಲಿ ಮಾದರಿ ಮನೆಯನ್ನು ನಿರ್ಮಿಸುವಾಗ, 1753ರಲ್ಲಿ ಬಳಸಿದ ಕಚ್ಚಾವಸ್ತುಗಳು, ಉಪಕರಣಗಳು ಮತ್ತು ವಿಧಾನಗಳನ್ನು ಉಪಯೋಗಿಸಲಾಯಿತು. ತಾತ್ಕಾಲಿಕ ನಿರ್ಮಿತಿ ಎಂದು ಕಟ್ಟಲಾದ ಈ ಪುಟ್ಟಮನೆ ಬಹಳಷ್ಟು ಜನಪ್ರಿಯವಾದುದರಿಂದ ಕಾಲಕಾಲಕ್ಕೆ ರಿಪೇರಿಗೊಂಡು ಇನ್ನೂ ಸುಸ್ಥಿತಿಯಲ್ಲಿದೆ.

ಈಗಿನ ಕಾಲದ ಮನೆಗಳಿಗೆ ಹೋಲಿಸಿದರೆ ಅತಿ ಚಿಕ್ಕದಾಗಿದೆ. ಓಕ್ ಮರಗಳನ್ನು ಬಳಸಲಾಗಿದೆ. ಒಂದು ಬದಿ ಬಾಗಿಲು ಹಾಗೂ ಒಂದು ಕಿಟಕಿ ಇದ್ದರೆ ಇನ್ನೊಂದು ಗೋಡೆಯಲ್ಲಿ ಒಂಟಿ ಕಿಟಕಿ ಇದೆ. ಛಾವಣಿಯಲ್ಲಿರುವ ಕಲ್ಲಿನ ಹೊಗೆಕೊಳವೆ ಆಕರ್ಷಕವಾಗಿದೆ. ಮುಂಚೆ ಇದರ ಒಳಗೆ ಹೋಗಿ ನೋಡುವ ಸಾಧ್ಯತೆಯೂ ಇತ್ತಂತೆ. ಈಗಿನ ದಿನಗಳಲ್ಲಿ ವಿಶೇಷ ಸಂದರ್ಭಗಳಲ್ಲಿ ಹಾಗೂ ಶಾಲಾ ಮಕ್ಕಳ ಭೇಟಿಗಾಗಿ ಮಾತ್ರ ತೆರೆದಿರುತ್ತದಂತೆ. ಸ್ಥಳೀಯ ವಲಸಿಗರ

ಬದುಕು ಆಗಿನ ಕಾಲದಲ್ಲಿ ಹೇಗಿತ್ತು ಎಂಬುದನ್ನು ತಿಳಿಸಲು ಶಾಲಾವಿದ್ಯಾರ್ಥಿಗಳನ್ನು ಕರೆತರುವುದು ನಿಜವಾಗಿಯೂ ಪ್ರಶಂಸನೀಯ. ಮೊದಲೇ ಕಾದಿರಿಸಿದರೆ ಇಲ್ಲಿ ಉಳಿದುಕೊಳ್ಳುವ ಸೌಲಭ್ಯವನ್ನೂ ಪಡೆದುಕೊಳ್ಳಬಹುದಂತೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
12.11.2024 ಮಂಗಳವಾರ
vishwavani.news

ದಿನ ದರ್ಶಿಕೆ

ಕಾರ್ತಿಕ ಮಾಸ, ಶುಕ್ಲ ಪಕ್ಷ, ಏಕಾದಶಿ ತಿಥಿ, ಪೂರ್ವ ಭಾದ್ರಪದ ನಕ್ಷತ್ರ, ಹರ್ಷನ ಯೋಗ, ವಿಷ್ಟಿ ಕರಣ, ಮೀನ ರಾಶಿ, ತುಲಾ ಲಗ್ನ, ಹೇಮಂತ ಋತು, ದಕ್ಷಿಣಾಯನ, ಕ್ರೋಧಿ ನಾಮ ಸಂವತ್ಸರ, ವಿಕ್ರಂಶಕ ಸಂವತ್ಸರ

ಮನೆಮದ್ದು

10 ರಿಂದ 12 ತಾಜಾ ಕರಿಬೇವಿನ ಎಲೆಗಳು, 1 ಕಪ್ ನೀರು, ಜೇನುತುಪ್ಪ ತೆಗೆದುಕೊಳ್ಳಿ. ನೀರನ್ನು ಕುದಿಸಿ ಮತ್ತು ಅದಕ್ಕೆ ಕರಿಬೇವಿನ ಎಲೆಗಳನ್ನು ಸೇರಿಸಿ. 5 ರಿಂದ 7 ನಿಮಿಷಗಳ ಕಾಲ ಕಡಿಮೆ ಉರಿಯಲ್ಲಿ ಕುದಿಸಿ. ಆ ನೀರನ್ನು ಅರ್ಧಕ್ಕೆ ಇಳಿಸುವಷ್ಟು ಕುದಿಸಿ. ಇದರಿಂದ ಕೊಲೆಸ್ಟ್ರಾಲ್, ಮಧುಮೇಹ, ತೂಕಗಳೆಲ್ಲ ನಿಯಂತ್ರಣದಲ್ಲಿರುತ್ತದೆ.

ಸೌಂದರ್ಯ ಸೂತ್ರ



ಒಂದು ಬಾಣಲೆಗೆ ಹಾಲು ಮತ್ತು ಅಕ್ಕಿ ಹಿಟ್ಟನ್ನು ಸೇರಿಸಿ ಮತ್ತು 5 ನಿಮಿಷಗಳ ಕಾಲ ಚೆನ್ನಾಗಿ ಬೇಯಿಸಿ. ಮಿಶ್ರಣವನ್ನು ತಣ್ಣಗಾಗಲು ಬಿಡಿ. ನಂತರ ಟೀಸ್ಪೂನ್ ಜೇನುತುಪ್ಪವನ್ನು ಮಿಶ್ರಣ ಮಾಡಿ. ಈ ಮಿಶ್ರಣವನ್ನು ಮುಖಕ್ಕೆ ಹಚ್ಚಿ ಮಸಾಜ್ ಮಾಡಿ. ಅದನ್ನು ಒಣಗಲು ಬಿಡಿ ಮತ್ತು ಮುಖವನ್ನು ತಣ್ಣೀರಿನಿಂದ ತೊಳೆಯಿರಿ.

ದಿನ ಭವಿಷ್ಯ

ಮೇಷ: ಗಾಳಿಯಲ್ಲಿ ಮನೆ ಕಟ್ಟುವುದು ಸಹಾಯ ಮಾಡಲಾರದು. ಕುಟುಂಬದ ನಿರೀಕ್ಷೆಗಳನ್ನು ಪೂರ್ಣಗೊಳಿಸಲು ಏನಾದರೂ ಮಾಡಬೇಕು.

ವೃಷಭ: ಚೈತನ್ಯದಿಂದ ತುಂಬಿರುತ್ತೀರಿ, ಅಸಾಮಾನ್ಯವಾದದ್ದೇನಾದರೂ ಸಾಧಿಸುತ್ತೀರಿ. ಇಂದು ಎಲ್ಲರೂ ನಿಮ್ಮ ಮಾತಿನ ಹಾಗೇ ನಡೆದುಕೊಳ್ಳುತ್ತಾರೆ.

ಮಿಥುನ: ಬಸುರಿಯು ಕಾಳಜಿ ವಹಿಸಬೇಕು. ದಿನದ ಉತ್ತರಾರ್ಧದಲ್ಲಿ ವಿಶ್ರಾಂತಿ ತೆಗೆದುಕೊಳ್ಳ ಬಯಸುತ್ತೀರಿ.

ಕಟಕ: ಖಿನ್ನತೆಯನ್ನು ಹೊಡೆದೋಡಿಸಿ ಇದು ಪ್ರಗತಿಗೆ ಅಡ್ಡಿಪಡಿಸುತ್ತಿದೆ. ನಿಮ್ಮ ತಂದೆಯ ಯಾವುದೇ ಸಲಹೆ ಕೆಲಸದ ಸ್ಥಳದಲ್ಲಿ ಪ್ರಯೋಜನ ನೀಡುತ್ತದೆ.

ಸಿಂಹ: ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು ಮತ್ತು ಭಯವನ್ನು ಸಾಧ್ಯವಾದಷ್ಟೂ ಬೇಗ ತೊಡೆದುಹಾಕಬೇಕು.

ಕನ್ಯಾ: ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ಇಂದು ಆನಂದಿಸಬಹುದು.

ತುಲಾ: ಕೈಗೊಂಡ ಧರ್ಮಾರ್ಥ ಕಾರ್ಯವು ಮಾನಸಿಕ ಶಾಂತಿ ಮತ್ತು ಆರಾಮ ತರುತ್ತದೆ. ಇತರರ ಮೇಲೆ ಹೆಚ್ಚು ಖರ್ಚು ಮಾಡಬಯಸುತ್ತೀರಿ.

ವೃಶ್ಚಿಕ: ಇಂದು ಮಾಡಿದ ಹೂಡಿಕೆ ಅಭ್ಯುದಯ ಮತ್ತು ಆರ್ಥಿಕ ಭದ್ರತೆ ಹೆಚ್ಚಿಸುತ್ತದೆ. ಕುಟುಂಬದ ಕಲ್ಯಾಣಕ್ಕಾಗಿ ಕೆಲಸ ಮಾಡಿ.

ಧನು: ದೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಸಾಧ್ಯವಾದಷ್ಟು ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ.

ಮಕರ: ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದಾದರೂ ಬದುಕನ್ನು ಲಘುವಾಗಿ ತೆಗೆದುಕೊಳ್ಳಬೇಡಿ.

ಕುಂಭ: ಮಕ್ಕಳ ನಿಮ್ಮ ಸಂಜೆಯನ್ನು ಉಲ್ಲಾಸಮಯ ವಾಗಿಸುತ್ತಾರೆ. ಮಂಕು ಕವಿದ ಮತ್ತು ಒತ್ತಡದ ದಿನಕ್ಕೆ ಮಂಗಳ ಹಾಡಲು ಸಂತೋಷಕೂಟ ಯೊಜಿಸಿ

ಮೀನ: ಒತ್ತಡವನ್ನು ತೊಡೆದುಹಾಕಬಹುದು. ಆರ್ಥಿಕ ನಿರ್ಬಂಧಗಳನ್ನು ತಪ್ಪಿಸಲು ಬಜೆಟ್‌ಗೆ ಅಂಟಿಕೊಳ್ಳಿ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- ಪಕ್ಷಿಪ್ರೇಮಿ ಸಲೀಂ ಅಲಿ ಹುಟ್ಟಿದ ಹಬ್ಬ
- ರಾಷ್ಟ್ರೀಯ ಪಕ್ಷಿಗಳ ದಿನ
- ಇಂದು ನ್ಯಾ. ಸಂಜೀವ್ ಖನ್ನಾ ಸುಪ್ರೀಂ ಕೋರ್ಟ್‌ನ 51 ನೇ ಮುಖ್ಯನ್ಯಾಯಾಧೀಶರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಚಿತ್ರಸ್ಫೂರ್ತಿ

ವ್ಯಾಘ್ರಾಚಲ ಬೆಟ್ಟದ ತಪ್ಪಲಿನ ಒಂದು ಸುಂದರವಾದ ವಿಹಂಗಮ ನೋಟ. ದೂರದವರೆಗೆ ಹಬ್ಬಿಕೊಂಡಿರುವ ಹಸಿರು ಹೊಲಗಳು, ನೀಲಿ ಆಕಾಶದಲ್ಲಿ ತೇಲುತ್ತಿರುವ ಬಿಳಿ ಮೋಡಗಳು, ದೂರದಲ್ಲಿ ಕಾಣುವ ನೀರಿನ ಹರಿವು, ವಿವಿಧ ಬಗೆಯ ಮರ-ಗಿಡಗಳು, ಅಂಕುಡೊಂಕಾದ ರಸ್ತೆಗಳು ಹಾಗೂ ಹುಲ್ಲುಗಾವಲುಗಳು ಈ ಪ್ರದೇಶಕ್ಕೆ ಒಂದು ವಿಶಿಷ್ಟವಾದ ಸೌಂದರ್ಯವನ್ನು ನೀಡಿವೆ. ಚಿತ್ರ,ಬರಹ: ಹೊಸ್ಮನೆ ಮುತ್ತು

ಪಾರ್ವತಿಯ ಶಾಪದಿಂದ ಸಮುದ್ರ ಉಪ್ಪಾದ ಕಥೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ದಕ್ಷಯಜ್ಞದಲ್ಲಿ ಬಲಿಯಾದ ಶಿವನ 'ಸತಿ' ಮರುಜನ್ಮದಲ್ಲಿ ಪರ್ವತ ರಾಜನ ಮಗಳು ಪಾರ್ವತಿಯಾಗಿ ಜನಿಸಿದಳು. ಪಾರ್ವತಿ ಬೆಳೆದಂತೆ ಅವಳ ಸೌಂದರ್ಯ ಅಗಾಧವಾದ, ಶಕ್ತಿ -ಧೈರ್ಯ- ಬುದ್ಧಿಮತ್ತೆಯಲ್ಲಿ ಅವಳನ್ನು ಮೀರಿಸುವವರು ಯಾರೂ ಇರಲಿಲ್ಲ. ಇನ್ನು ಬಾಲಕಿಯಾಗಿದ್ದಾಗಲೇ ಪಾರ್ವತಿ ಶಿವನನ್ನು ಮನದಲ್ಲಿ ವರಿಸಿದ್ದಳು. ವಿವಾಹವಾಗುವುದಾದರೆ ಶಿವನನ್ನೇ ಎಂದು ಸಂಕಲ್ಪ ಮಾಡಿದಳು. ಶಿವನನ್ನು ಒಲಿಸಿಕೊಳ್ಳಲು ಪರ್ವತಕ್ಕೆ ಹೋಗಿ ಕಠಿಣ ತಪಸ್ಸು ಮಾಡಿದಳು. ಆ ದೀರ್ಘ ತಪಸ್ಸಿನ ಅವಧಿಯಲ್ಲಿ ಆಹಾರ ತ್ಯಜಿಸಿದಳು ಆಮೇಲೆ ಹಣ್ಣು ಕೆಲವು ದಿನಗಳಾದ ಮೇಲೆ ಅದನ್ನೂ ಬಿಟ್ಟು ಕೇವಲ ಎಲೆಗಳನ್ನು ತಿಂದಳು.

ಬಿಸಿಲಲ್ಲಿ ಬೆಂಕಿಯ ಮೇಲೆ, ಚಳಿಗಾಲದಲ್ಲಿ ನೀರಿನ ಮೇಲೆ ನಿಂತು ತಪಸ್ಸು ಮಾಡುತ್ತಿದ್ದಳು. ಅವಳ ಕಠಿಣ ತಪಸ್ಸಿನಿಂದ ಅವಳ ಮುಖದಲ್ಲಿ ಕಾಂತಿ ಮತ್ತು ಸೌಂದರ್ಯದ ಪ್ರಭೆ ಹೆಚ್ಚಿ ಆ ಪ್ರಭಾವ ಸುತ್ತಲೂ ಹರಡಿತ್ತು. ಅದೆಷ್ಟು ಎಂದರೆ ಸಮುದ್ರ ರಾಜನ ದೃಷ್ಟಿ ಆಕೆಯ ಸೌಂದರ್ಯದ ಮೇಲೆ ಬಿದ್ದು ಅವಳಲ್ಲಿ ಆಕರ್ಷಿತನಾಗಿ ವಿವಾಹವಾಗಲು ಆಸೆ ಪಟ್ಟನು.

ಪಾರ್ವತಿಯ ತಪಸ್ಸು ಮುಗಿಯುವ ತನಕ ಕಾದಿದ್ದ ಸಮುದ್ರ ರಾಜ. ತಪಸ್ಸು ಮುಗಿಯುತ್ತಿದ್ದಂತೆ ಅವಳ ಮುಂದೆ ಬಂದು, ತಾನು ಅವಳನ್ನು ವಿವಾಹವಾಗುವ ಪ್ರಸ್ತಾಪವನ್ನು ಮುಂದಿಟ್ಟನು. ಪಾರ್ವತಿ ಸಹಜವಾಗಿ ಹೇಳಿದಳು 'ಸಮುದ್ರರಾಜ ನಾನು ಶಿವನ ವಿನಃ ಬೇರೆ ಯಾರನ್ನೂ ವಿವಾಹವಾಗಲಾರೆ. ಶಿವನನ್ನೇ ನನ್ನ ಪತಿ ಎಂದು ನಿರ್ಧರಿಸಿದ್ದೇನೆ' ಎಂದಳು. ಈ ಮಾತನ್ನು ಕೇಳಿ ಸಮುದ್ರ ರಾಜ ತನ್ನ ಘನತೆ ಗೌರವಕ್ಕೆ ಅವಮಾನವಾಗುವಂತೆ ಈ ಮಾತು ಹೇಳಿದ್ದಾಳೆ ಎಂದು ತಪ್ಪಾಗಿ ಭಾವಿಸಿದನು. ಹಾಗೆ ಪಾರ್ವತಿಯನ್ನು ಮೆಚ್ಚಿಸಲು ತನ್ನನ್ನು ಹೊಗಳಿಕೊಳ್ಳುತ್ತಾ, 'ಪಾರ್ವತಿ ನನ್ನಲ್ಲಿ ಬೇಕಾದಷ್ಟು ಸಂಪತ್ತು ಇದೆ. ಮುತ್ತು, ರತ್ನ, ಹವಳ, ತುಂಬಿದ ಬೆಟ್ಟಗಳು ಅಡಗಿದೆ ಶಾಶ್ವತವಾಗಿರುವಂತಹ ಸಿಹಿ ನೀರು ನನ್ನೊಳಗಿದೆ. ಬಾಯಾರಿದವರಿಗೆ, ಜಲಚರಗಳಿಗೆ, ಪಶು ಪಕ್ಷಿಗಳಿಗೆ ನೀರುಣಿಸುತ್ತೇನೆ. ಭೂಮಂಡಲಕ್ಕೆ ನಾನೆಂದರೆ ತುಂಬಾ ಇಷ್ಟ. ನನ್ನೊಳಗೆ ಜಗತ್ತಿನಲ್ಲಿರುವ ಸಣ್ಣ ಗಾತ್ರ ಮೀನಿನಿಂದ ತಿಮಿಂಗಲದಂತ ದೊಡ್ಡ ಗಾತ್ರದ ಜಲಚರಗಳೂ ಇವೆ. ನಾನು ಆಳತೆಗೂ ಸಿಗದಂತೆ ವಿಶಾಲವಾಗಿದ್ದೇನೆ. ನನ್ನ ಆಳ ಅಗಲ ಯಾರೂ ಅಳೆಯಲಾರರು. ಇಂಥ ಸಮುದ್ರ ರಾಜ ನಾನು ನೀನು ನನ್ನನ್ನು ವಿವಾಹವಾದರೆ ಈ ಸಂಪತ್ತು ಎಲ್ಲವೂ ನಿನ್ನದೇ ಆಗುತ್ತದೆ' ಎಂದನು.

'ನೀನು ವಿವಾಹವಾಗುವ ಶಿವನಲ್ಲಿ ಏನಿದೆ? ಅವನಿಗೇನು ಮನೆಯೇ, ಮಠವೇ, ವಸ್ತ್ರವೇ, ಆಭರಣವೇ, ಅಂದವಿಲ್ಲ, ಅಲಂಕಾರವಿಲ್ಲ ಸತ್ತವರ ಮಧ್ಯ ಸ್ಮಶಾನದಲ್ಲಿ ಅವನ ವಾಸ, ಮೈತುಂಬ ಬೂದಿ ಬಳಿದುಕೊಂಡಿರುತ್ತಾನೆ. ಪ್ರೀತಿ- ಪ್ರೇಮ- ರಸಿಕತೆ ಎಂದರೇನು ಗೊತ್ತಿಲ್ಲ. ಎಲ್ಲರಿಗಿಂತ ಹಿರಿಯ ಅವನಿಗೆ ಏನೂ ಬೇಡ ಯಾವಾಗಲೂ ಧ್ಯಾನದಲ್ಲಿ ಮಗ್ನನಾಗಿರುತ್ತಾನೆ. ನನ್ನನ್ನು ವಿವಾಹವಾಗು ಈ ಭೂಮಂಡಲದ ಒಡತಿ ನೀನಾಗುವೆ. ನನ್ನೊಂದಿಗೆ ಸುಖದಿಂದ ಇರುವೆ' ಎಂದು ಶಿವನನ್ನು ಹೀಯಾಳಿಸಿದನು.

ಸಮುದ್ರ ರಾಜನ ಅಹಂಕಾರದ ಮಾತುಗಳು, ಶಿವನಿಂದನೆ ಕೇಳಿದ ಪಾರ್ವತಿಗೆ ಕೋಪ ಬಂದಿತು. ಶಿವನಿಗೆ ಅವಮಾನ ಮಾಡುತ್ತಿದ್ದ ಸಮುದ್ರ ರಾಜನನ್ನು ಶಪಿಸಲು ಮುಂದಾದಳು ಸಮುದ್ರ ರಾಜ ಕೇಳು, ಗೊತ್ತು ಗುರಿಯಿಲ್ಲದೆ ನಿನ್ನನ್ನು ಹೊಗಳಿಕೊಳ್ಳುತ್ತಾ ನನ್ನ ಪತಿಯನ್ನು ಅವಮಾನ ಮಾಡಿರುವೆ. ನನಗೆ ನೋವು ದುಃಖ ಮಾಡಿದ ನಿನ್ನೊಳಗಿರುವ ಸಿಹಿ ನೀರು ಯಾರಿಗೂ ಕುಡಿಯಲು ಬರದಂತೆ ಈ ಕ್ಷಣದಿಂದಲೇ ಉಪ್ಪಾಗಲಿ ಎಂದು ಶಪಿಸಿದಳು. ಆಗಿನಿಂದ ಸಮುದ್ರದ ನೀರು ಉಪ್ಪಾಯಿತು. ಸಮುದ್ರ ರಾಜನಲ್ಲಿ ಸಂಪತ್ತು ಎಷ್ಟಿದ್ದರೇನು? ತನ್ನ ಅಹಂಕಾರದ ಮಾತಿನಿಂದ ಶಿವನನ್ನು ನಿಂದಿಸಿದ ಕಾರಣ ಪಾರ್ವತಿಯ ಶಾಪಕ್ಕೆ ಗುರಿಯಾಗಿ ಅಗಾದವಾದ ಸಾಗರದ ಸಿಹಿ ನೀರು ಉಪ್ಪಾಗಿ ಯಾರೂ ಕುಡಿಯದಂತಾಯಿತು. ನಾವು ಎಷ್ಟೇ ಗುಣ ಸಂಪನ್ನರಾಗಿದ್ದರೂ ಅಹಂಕಾರ ಒಂದಿದ್ದರೆ ಎಲ್ಲ ಗುಣಗಳೂ ಗೌಣವಾಗುತ್ತವೆ. ಅಹಂಕಾರ ನಮ್ಮನ್ನೇ ನಿರ್ನಾಮ ಮಾಡುತ್ತದೆ.

ಒಂದೊಳ್ಳೆ ಮಾತು

ಪ ದ ಬಂ ಧ



ಎಡದಿಂದ ಬಲಕ್ಕೆ:

1. ಸೇಡು ತೀರಿಸಿಕೊಳ್ಳುವುದು (4)
4. ಉಕ್ಕಿನ ಸಲಾಕೆಗೆ ಹೀಗೆನ್ನಬಹುದು (2)
6. ಅಗಡಿ ಕುಳಿತ ಕಾಡು (3)
8. ಒಂದೆಡೆ ನಿಲ್ಲದೆ ಅಲೆಯುವವನು (4)
9. ದೀಪಕ್ಕೆ ಮುತ್ತಿಕೊಳ್ಳುವ ಮಿಂಚುಹುಳ (3)
10. ಮಹಾಭಾರತದ ಒಂದು ಪಾತ್ರದಂತೆ ಕಾಣುವ ಕಿವಿ (2)
11. ಮಹಿಳೆಗೆ ಮತ್ತೊಂದು ಹೆಸರು (3)
13. ಪಾಕದ ಮಧ್ಯೆ ಕಾಪಾಡುವವನು ಇದ್ದಾನೆ (3)
17. ರಾಕ್ಷಸರ ಶಿಲ್ಪಿ (2)
18. ಹೊಗಳಿಕೆ ಅಥವಾ ಸ್ತುತಿಗೆ ಇನ್ನೊಂದು ಹೆಸರು (3)
19. ಮತ್ತೊಂದು. ಶಿರದಿಂದ ಆರಂಭವಾದ ಪೀಳಿಗೆ (4)
21. ಶರದ ಮಧ್ಯೆಯೇ ಇದ್ದಾನೆ ಬೇಡ (3)
23. ಕೀರ್ತಿಗೆ ಮತ್ತೊಂದು ಹೆಸರು (2)
24. ಒಳಮನಸ್ಸು (4)

ಎಡದಿಂದ ಬಲಕ್ಕೆ:

2. ಮೈಯೆಲ್ಲಾ ಹಳದಿ ಬಣ್ಣಕ್ಕೆ ತಿರುಗಿಕೊಳ್ಳುವ ರೋಗ (3)
3. ಕಡೆಗೆ ತಂಡ ಸಾಲ (2)
5. ಬಂಧನದಿಂದ ವಿಮೋಚನೆ (4)
6. ಮತ್ತೊಂದು ಬಿನ್ನಹ (3)
7. ಕಷ್ಟದ ಸಮಯವೆಂದರ್ಥ (4)
8. ಸಮುದ್ರಕ್ಕೆ ಪರ್ಯಾಯ ಪದವೇ (3)
12. ಹಿಡಿತವಿಲ್ಲದ ಎಂದರ್ಥ (4)
14. ಬಾಡು ಅಥವಾ ಸೀದುಹೋಗು (3)
15. ಸೋಲು ನಾಲ್ಕು ಅಕ್ಷರಗಳಲ್ಲಿ ಬಂದಿದೆ (4)
16. ಮನಸ್ಸಿನ ಉತ್ಸುಕತೆ (3)
20. ಆನೆಯನ್ನು ನಡೆಸುವವನು (3)
22. ಕ್ಷಾಮಕ್ಕೆ ಮತ್ತೊಂದು ಹೆಸರು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಬಹುಮಾನ 3. ಉತ್ತೇಜನ 5. ಪರಾಗ 6. ಪಾರಂಗತ 8. ಮಮಕಾರ 10. ಮಗಳು 11. ಸರಳು 14. ವನಸುಮ 16. ಅನಿಯತ 17. ದಹನ 18. ವರ್ತಮಾನ 19. ಲತಾಗೃಹ

ಮೇಲಿನಿಂದ ಕೆಳಕ್ಕೆ: 1. ಬಡಪಾಯಿ 2. ನಪತ 3. ಉಗಮ 4. ನವರತ್ನ 7. ಗಹಗಹಿಸು 9. ಮಚ್ಚರದಾನಿ 12. ಅವಯವ 13. ನತಗೆಹ 15. ಮದನ 16. ಅನಲ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಹಿಂದಕ್ಕೆ ಹರಿಯುವ ನದಿ



ಮೆಕ್ಸಿಕೋದಲ್ಲಿರುವ ಚಿಕಾಗೋ ನದಿ, ವಿರುದ್ಧ ದಿಕ್ಕಿನಲ್ಲಿ ಹರಿಯುವ ವಿಶ್ವದ ಏಕೈಕ ನದಿಯೆಂದು ಹೆಸರಾಗಿದೆ. ಚಿಕಾಗೋ ಡೌನ್‌ಟೌನ್ ಮೂಲಕ ಹರಿಯುವ ಚಿಕಾಗೋ ನದಿಯು ಹಲವಾರು ಕಾಲುವೆಗಳ ಮೂಲಕ ಹರಿಯುತ್ತದೆ ಮಾತ್ರವಲ್ಲದೆ, ಪ್ರಪಂಚದಲ್ಲೇ ಹಿಂದಕ್ಕೆ ಹರಿಯುವ ಏಕೈಕ ನದಿಯಾಗಿದೆ. ಮಿಚಿಗನ್ ಸರೋವರದ ನೀರು ಸರಬರಾಜಿನಿಂದ ಕೊಳಚೆ ನೀರನ್ನು ಬೇರೆಡೆಗೆ ತಿರುಗಿಸಲು, ನೈರ್ಮಲ್ಯದ ಕಾರಣಗಳಿಗಾಗಿ ಇಲ್ಲಿ ರಿವರ್ಸಲ್ ತಂತ್ರವನ್ನು ಅಳವಡಿಸಲಾಗಿದೆ. ಈ ವಿಶಿಷ್ಟ ತಂತ್ರಜ್ಞಾನ ಗಮನಾರ್ಹ ಎಂಜಿನಿಯರಿಂಗ್ ಸಾಧನೆ ಎಂದು ಗುರುತಿಸಲ್ಪಟ್ಟಿದೆ.

ಪುಸ್ತಕ ಲೋಕ

ಎಲ್ಲಾ ಓಕೆ ಟೆನ್ಷನ್ ಯಾಕೆ?

ಲೇಖಕ ಸುಂದರ್ ಬಾಬು ಪುಸ್ತಕ ಎಲ್ಲಾ ಓಕೆ ಟೆನ್ಷನ್ ಯಾಕೆ? ಜಗತ್ತಿನಲ್ಲಿ ಟೆನ್ಷನ್‌ಗೆ ಗುರಿಯಾಗದ ಮನುಷ್ಯ ಇರುವುದಿಲ್ಲ ಎಂದರೆ ಅದು ಅತಿಶಯೋಕ್ತಿ ಆಗಲಾರದು. ಪ್ರತಿಯೊಬ್ಬರೂ ಒಂದಲ್ಲ ಒಂದು ಬಾರಿ ಮಾನಸಿಕ ಉದ್ವೇಗಕ್ಕೆ ಒಳಗಾಗುತ್ತಾನೆ/ಳೆ ಎಂಬುದನ್ನು ಎಲ್ಲರೂ ಒಪ್ಪಲೇಬೇಕು. ಈ ಟೆನ್ಷನ್ನಿಂದ ಶರೀರ ಹಾಗೂ ಮನಸ್ಸಿನ ಮೇಲೆ ಆಗುವ ಪರಿಣಾಮ ಅಷ್ಟಿಷ್ಟಲ್ಲ. ಹಾಗಿದ್ದರೂ ನೆಮ್ಮದಿಯಾಗಿ ಬಾಳಲು ಸಾಕಷ್ಟು ಅವಕಾಶಗಳಿವೆ. ತಮಗೆ ಎದುರಾಗಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಮಾಡದೇ ಒತ್ತಡಕ್ಕೆ ಒಳಗಾಗುವವರು ಕೆಲವರಾದರೆ, ಯಾವುದೇ ಸಣ್ಣಪುಟ್ಟ ಸಮಸ್ಯೆ ಗಳಿಗೆ ಅಲ್ಲಲ್ಲೇ ಪರಿಹಾರ ಕಂಡುಕೊಂಡು ನಿರಾಳವಾಗುವವರು ಕೆಲವರು. ಟೆನ್ಷನ್‌ನಿಂದ ಮುಕ್ತಿ ಪಡೆಯುವುದು ಹೇಗೆ? - ಈ ಕೃತಿಯಲ್ಲಿ ಈ ಪ್ರಶ್ನೆಗೆ ಉತ್ತರಗಳಿವೆ.

ಟ್ವೀಟ್‌ಮೆಂಟ್

ದೀಪು ಗೌಡ್ರು: ಮೆದುಳಿನ ಪ್ರತಿಯೊಂದು ನ್ಯೂರಾನ್‌ಗಳಿಗೂ ತುಂಬಬೇಕು. ಆಗ ಒಂಚೂರು ಬದಲಾವಣೆ ಕಾಣಬಹುದು. ಇದರ ಜೊತೆಗೆ ಸಂವಿಧಾನದ ಪ್ರಸ್ತಾವನೆಯನ್ನು ಬರೆದಿದ್ದು ಒನ್ ಅಂಡ್ ಒನ್ಲಿ ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್ ಅಂತ ಪ್ರತಿದಿನ ಮಕ್ಕಳಿಗೆ ತಿಳಿಸಬೇಕು. -ಹೂವಯ್ಯ

ಹರೀಶ್: ಮೊದಲು ರಾಜಕಾರಣಿಗಳು ಹಾಗೂ ಅವರ ಮಕ್ಕಳು ಓದಲಿ. ಆಮೇಲೆ ಬೇರೆ ಮಕ್ಕಳಿಗೆ ದಿನ ಓದಿಸುವಿರಂತೆ ರಾಜಕೀಯ ಸೇವೆ ಅಧಿಕಾರ ಅಲ್ಲ, ಐಷಾರಾಮಿ ಜೀವನ ಅಲ್ಲ. ಮಕ್ಕಳ, ಮಕ್ಕಳ, ಮಕ್ಕಳಿಗೆ ಆಗುವಷ್ಟು ಸಂಪಾದನೆ ಮಾಡು ವ್ಯಾಪಾರ ಅಲ್ಲ ಅಂತ.

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಸುದ್ದಿಯಲ್ಲಿ ಕಂಡ ರಾಖಿಗರ್ಹಿ ಎಲ್ಲಿ ಕಂಡುಬರುತ್ತದೆ?

- ಎ. ಗುಜರಾತ್.
- ಬಿ. ಬಿಹಾರ್.
- ಸಿ. ಕರ್ನಾಟಕ.
- ಡಿ. ಹರಿಯಾಣ.



ಉತ್ತರ: ಡಿ. ಹರಿಯಾಣ.

ಮಾಹಿತಿ

ಹರಪ್ಪನ್ ಸಂಸ್ಕೃತಿಯ ವಿಶ್ವದ ಅತಿದೊಡ್ಡ ವಸ್ತುಸಂಗ್ರಹಾಲಯವನ್ನು ರಾಖಿಗರ್ಹಿಯಲ್ಲಿ ನಿರ್ಮಿಸಲಾಗುತ್ತಿದೆ. ಇದು ಹರಿಯಾಣದ ಹಿಸ್ಸಾರ್ ಜಿಲ್ಲೆಯ ಒಂದು ಹಳ್ಳಿಯಾಗಿದ್ದು, ಸಿಂಧೂ ಕಣಿವೆಯ ನಾಗರಿಕತೆಯ ಕಾಲದ ಪುರಾತತ್ವ ತಾಣಕ್ಕೆ ಹೆಸರುವಾಸಿಯಾಗಿದೆ. ವಿಶ್ವ ದರ್ಜೆಯ ಈ ವಸ್ತುಸಂಗ್ರಹಾಲಯವು 5000 ವರ್ಷಗಳಷ್ಟು ಹಳೆಯದಾದ ಸಿಂಧೂ ಕಣಿವೆಯ ಕಲಾಕೃತಿಗಳನ್ನು ಪ್ರದರ್ಶಿಸುತ್ತದೆ. ಕ್ರಿಸ್ತಪೂರ್ವ 2600-1900 ರವರೆಗೆ ರಾಖಿಗರ್ಹಿ ಸಿಂಧೂ ಕಣಿವೆಯ ನಾಗರಿಕತೆಯ ಭಾಗವಾಗಿತ್ತು. ಗ್ರಾಮದಲ್ಲಿ ಪತ್ತೆಯಾದ ಅಸ್ಥಿಪಂಜರಗಳಲ್ಲಿ ಚಿಪ್ಪಿನ ಬಳೆಗಳು, ತಾಮ್ರದ ಕನ್ನಡಿ ಮತ್ತು ಅರೆಬೆಲೆಯ ಕಲ್ಲಿನ ಮಣಿಗಳು ಸೇರಿವೆ.

ಬದಲಾದ ಊರಲ್ಲಿ ಏಕತೆ ಆಹಾರದಲ್ಲಿ

• ಶ್ರೀಲಕ್ಷ್ಮಿ

ವಿವಿಧತೆಯಲ್ಲಿ ಏಕತೆಯನ್ನು ಕಾಣುವ ನಾಡು ಭಾರತ! ಈ ಕುರಿತಾಗಿ ಶಾಲಾ ಕಾಲೇಜುಗಳಲ್ಲಿ ಕೊಡುತ್ತಿದ್ದ ವಿಷಯಕ್ಕೆ ಪ್ರಬಂಧಗಳನ್ನು ಬರೆದಿರುತ್ತೇವೆ ಅಥವಾ ಈ ವಿಷಯದ ಬಗ್ಗೆ ಆಶುಬಾಷಣ ಸ್ಪರ್ಧೆಯಲ್ಲಿಯೂ ಮಾತನಾಡಿರುತ್ತೇವೆ. ಅಂದು ಈ ವಿಷಯಕ್ಕೆ ಉದಾಹರಣೆಯಾಗಿ ಕೊಡುತ್ತಿದ್ದುದು ವಿವಿಧ ಧರ್ಮಗಳು, ಭಾಷೆಗಳು, ಆಚರಣೆಗಳು, ಸಂಸ್ಕೃತಿಗಳು ಇತ್ಯಾದಿಗಳಲ್ಲಿ ಏಕತೆಯನ್ನು ಕಾಣುವುದು ಎಂಬುದಾಗಿ. ಆದರೀಗ ಈ ವಿವಿಧತೆಗಳ ಪಟ್ಟಿಗೆ ಸೇರಿ, ಏಕತೆಯನ್ನು ಎತ್ತಿ ಹಿಡಿಯುತ್ತಿರುವುದು 'ಆಹಾರ ಪದ್ಧತಿ'.

ಪಕ್ಕದ ರಾಜ್ಯದ ಅಥವ ಊರಿನ ಪ್ರಸಿದ್ಧ ಆಹಾರ ಯಾವುದೆಂಬುದು ತಿಳಿದಿರದ ಕಾಲದಿಂದ ಬಹಳ ದೂರ ಬಂದಿರುವೆವು. ಪುಟ್ಟ ಮಕ್ಕಳು ಸಹ ಯಾವ ಪ್ರಾಂತ್ಯದ ಆಹಾರವೆಂಬುದನ್ನು ಸುಲಭವಾಗಿ ಗುರುತಿಸಿಬಿಡುತ್ತಾರೆ. 'ಥ್ಯಾಂಕ್ಸ್ ಟು ಟೆಕ್ನಾಲಜಿ' ಅನ್ನಬೇಕೋ? ಅಥವಾ 'ಲವ್ ಫಾರ್ ಫುಡ್' ಅನ್ನಬೇಕೋ? ತಿಳಿದಿಲ್ಲ. ಅಂದೆಲ್ಲ ಅವರವರ ಪ್ರಾಂತ್ಯದಲ್ಲಿ ಬೆಳೆದ ಪದಾರ್ಥಗಳನುಸಾರ ಆಹಾರವನ್ನು ತಯಾರಿಸಿಕೊಳ್ಳುತ್ತಿದ್ದರು. ಊರಿಂದ ಊರಿಗೆ ಸಾಮಾನು ಸರಬರಾಜಾಗುವ ವ್ಯವಸ್ಥೆ ಬಂದ ನಂತರ ಪದಾರ್ಥಗಳ ಆಮದು, ರಫ್ತಿನಿಂದಾಗಿ ಎಲ್ಲರಿಗೂ ಎಲ್ಲೆಡೆಯು ಎಲ್ಲವೂ ಸಿಗುವಂತಾಯಿತು. ಇದು ಪದಾರ್ಥಗಳ ಲಭ್ಯತೆಯ ಮೊದಲ ಹೆಜ್ಜೆಯಾದರೆ, ಮುಂದಿನ ಹೆಜ್ಜೆಯಾದದ್ದು ಒಂದು ಪ್ರಾಂತ್ಯದ ಅಡುಗೆಯನ್ನು ಎಲ್ಲರಿಗೂ ಪರಿಚಯಿಸಿದ ಹೋಟೆಲ್‌ಗಳು ಅಸ್ತಿತ್ವಕ್ಕೆ ಬಂದದ್ದು. ಉದಾಹರಣೆಗೆ ಉಡುಪಿ ಹೋಟೆಲ್ಗಳಲ್ಲಿ ಇಡ್ಲಿ, ವಡೆ, ದೋಸೆ ಇತ್ಯಾದಿ ದಕ್ಷಿಣ ಭಾರತದ ಖಾದ್ಯಗಳು ಸಿಗುತ್ತದೆ ಎಂಬುದು ಮನವರಿಕೆಯಾಯಿತು.

ಹೀಗೆ ಒಂದು ಪ್ರಾಂತ್ಯದ ಆಹಾರ ಮತ್ತೊಂದೆಡೆ ಪ್ರಚಲಿತವಾಗಲು ಆರಂಭವಾಯಿತು. ಪಾಕ ಪುಸ್ತಕಗಳನ್ನು ಓದಿ, ಪ್ರಯೋಗ ಮಾಡುವ ದಿನಗಳು ಇದ್ದವು ಎಂದರೆ ಈಗಿನ ಇನ್‌ಸ್ಟಾ ಯುಗದವರು ನಂಬುವರೇ? ಶಿಕ್ಷಣ ನಿಮಿತ್ತ, ಉದ್ಯೋಗ ನಿಮಿತ್ತ ಊರಿಂದೂರಿಗೆ ಜನರ ಓಡಾಟ ಹೆಚ್ಚಾದಂತೆ ಅಲ್ಲಿಯ ಆಹಾರ ಪದ್ಧತಿಗೆ ಕ್ರಮೇಣ ಒಗ್ಗಿ ಹೋದರು. ರೊಟ್ಟಿ ತಿನ್ನುತ್ತಿದ್ದವರಿಗೆ ರೋಟಿ ಪರಿಚಯವಾಯ್ತು, ರಾಗಿ ಮುದ್ದೆ ಆರೋಗ್ಯಯುತ ರಾಗಿ ಬಾಲ್ ಆಗಿ ಎಲ್ಲೆಡೆ ತಲುಪಿತು, ಸಂಜೆಯ ಕಾಫಿ ಟೀ ಜೊತೆಗೆ ಸ್ನಾಕ್ಸ್ ಹೆಸರಿನ ಸಮೋಸ, ಕಚೋರಿ, ಡೋಕ್ಲ, ವಡಾ ಪಾವ್ ಪಶ್ಚಿಮ ಭಾರತಕ್ಕೆ ಮಾತ್ರ ಸೀಮಿತವಾಗುಳಿದಿಲ್ಲ. ದೋಸೆಯು ದೊಸಾ ಆಗಿ ಹಲವರಿಗೆ ರುಚಿಸಿತು, ಬಿರಿಯಾನಿ ಸುವಾಸನೆ ಹೈದೆರಾಬಾದ್ ಆಚೆಗೂ ಪಸರಿಸಿದೆ, ಇಡ್ಲಿ-ವಡೆ ತಿನ್ನುವವರು ಮದ್ರಾಸಿಗರು ಎನ್ನುತ್ತಿದ್ದವರು ಈಗ ಅದುವೇ 'ಹೆಲ್ತಿ ಬ್ರೇಕ್ ಫಾಸ್ಟ್ 'ಎಂದು ತಿನ್ನುತ್ತಾ ದಿನ ವನ್ನು ಪ್ರಾರಂಭಿಸುವರು. ಹಬೆಯಲ್ಲಿ ಬೇಯುವ ಮೊಮೋಸ್ ಈಶಾನ್ಯ ರಾಜ್ಯಗಳ ತಿನಿಸಾಗಿಯಷ್ಟೆ ಉಳಿದಿಲ್ಲ. ಹೀಗೆ ಆಹಾರ ಪದ್ಧತಿಗಳು ಒಂದೇ ಕಡೆಗೆ ಸೀಮಿತವಾಗದೆ, ಗಡಿ ಪ್ರಾಂತ್ಯಗಳನ್ನು ದಾಟಿ ಹೊರಬಂದಿದೆ.

ಎಷ್ಟೋ ಹೊರ ದೇಶದ ತಿನಿಸುಗಳನ್ನೆ ನಮ್ಮ ಆಹಾರ ಪದ್ಧತಿಯಾಗಿ ಅಳವಡಿಸಿಕೊಂಡಿರುವ ನಮಗೆ ನಮ್ಮ ದೇಶಿಯ ಆಹಾರ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಸುಲಭವೇ ಸರಿ. ಪಾಕ ಪುಸ್ತಕಗಳನ್ನು ಓದಿ, ಕಲಿತು ಮಾಡುತ್ತಿದ್ದ ಸಮಯದಿಂದ ಹಿಡಿದು ಲಕ್ಷಾಂತರ ಕುಕಿಂಗ್ ಬ್ಲಾಗ್ ಅವತರಿಸಿರುವ ಕಲಾದವರೆಗೂ ಹೊಸ ರುಚಿಯನ್ನು ಸವಿಯಲು ಹಂಬಲಿಸುವವರು ನಾವು. 'ಫೂಡೀ' ಎಂಬ ಬಿರುದನ್ನು ನಮಗೆ ನಾವೆ ಕೊಟ್ಟುಕೊಂಡು ಹಲವು ಬಗೆಯ ತಿಂಡಿ ತಿನಿಸುಗಳನ್ನು ಸವಿಯಲು ಪ್ರಖ್ಯಾತ ಹೋಟೆಲ್‌ಗಳನ್ನು ಹುಡುಕುತ್ತಾ ಹೋಗುವೆವು. ಪೊಂಗಲ್ ಅನ್ನು ಕಿಚ್ಡಿ ಎಂದು, ಭತೂರವನ್ನು ಪೂರಿ ಎಂದು, ಮಜ್ಜಿಗೆ ಹುಳಿಯನ್ನು ಅವಿಯಲ್ ಎಂದು, ಪಾಯಸವನ್ನು ಖೀರ್ ಎಂದು, ಪುರನ್ ಪೋಳಿ ಅನ್ನು ಒಬ್ಬಟ್ಟು ಎಂದು ಕರೆಯುತ್ತಾ 'ದೇವನೊಬ್ಬ, ನಾಮ ಹಲವು' ಎನ್ನುವ ರೀತಿ ಒಂದೇ ತರಹದ ಖಾದ್ಯವನ್ನು ಹಲವು ಹೆಸರಿನೊಂದಿಗೆ ಆಸ್ವಾದಿಸುತ್ತಿರುವ ನಾವು ಆಹಾರದಲ್ಲಿ ಏಕತೆಯನ್ನು ಎತ್ತಿ ತೋರಿಸುತ್ತಿದ್ದೇವೆ. ನಿಜ ತಾನೆ?

• ವಾಣಿ ಮೈಸೂರು

ಟ್ರೆಂಡ್ ಆಗೋಗಿದೆ! ಅವರು ಬ್ರಾಂಡೆಡ್ ಫೋನ್ ತಕೊಂಡ್ರು, ಇವರು ಬ್ರಾಂಡೆಡ್ ಬಟ್ಟೆ ಹಾಕೊತಾರೆ, ಹೀಗೆ ಒಂದಷ್ಟು ಪಟ್ಟಿಗಳ ರಾಶಿ. ನಾನು ಹೀಗೆ ಇರ್ಬೇಕು ಹಾಗೆ ಬದುಕಬೇಕು. ಇರೋ ವಾಸ್ತವ ಮರೆತು ಏನೋ ದೊಡ್ಡ ಸಾಧನೆ ಮಾಡುವ ಭ್ರಮೆಗೆ ಸಿಲುಕಿ ಬ್ರಾಂಡೆಡ್ ಹಿಂದೆ ಬಿದ್ದು ಅಗತ್ಯಕ್ಕಿಂತ ಮೀರಿ ದುಂದು ವೆಚ್ಚ ಮಾಡಿ ಸಾಲಗಾರರಾಗಿ ಕ್ರೆಡಿಟ್ ಕಾರ್ಡ್ ಇಂಟ್ರೆಸ್ಟ್, ಇಎಂಐ ಅಥವಾ ಮಾಡಿದ ಸಾಲಕ್ಕೆ ಬಡ್ಡಿ ಕಟ್ಟೋಕು ಆಗದೆ ಇರೋ ನೆಮ್ಮದಿ ಮರ್ಯಾದೆ ಕಳೆದು ಕೊಳ್ಳದ? ಸಾಲ ಅನ್ನೋ ತಕ್ಕಡಿ ತೂಗ್ತಾ ಇದ್ರೆ ಜೀವನವು ಬ್ಯಾಲೆನ್ಸ್ ಇಲ್ದೆ ಇರೋ ಗಾಳಿಪಟದಂತೆ ಸಿಕ್ಕಿದ ಕಡೆ ಹಾರಿ ಹೋಗಿ ಬದುಕು ಹರಿದು ಹೋಗುವುದರಲ್ಲಿ ಸಂದೇಹವೇ ಇಲ್ಲ. ನಾವು ಗುರುತಿಸಿಕೊಳ್ಳುವುದೇ ಆದರೆ ನಮ್ಮತನವ ಗುರುತಿಸಿಕೊಂಡು ಹೋದಾಗ ನಮ್ಮ ತನಕ್ಕೆ ಬೆಲೆ. ಹಾಸಿಗೆ ಇದ್ದಷ್ಟೇ ಕಾಲು ಚಾಚು ಬೇಕು ಎನ್ನುವ ಗಾದೆಯ ಮಾತಿನಂತೆ ಇರುವಷ್ಟರಲ್ಲೇ ಸಂತೃಪ್ತಿ ಕಾಣುತ್ತ ಬದುಕನ್ನು ಕಟ್ಟಿಕೊಳ್ಳಬೇಕು. ಮತ್ತೊಬ್ಬರ ಬದುಕಿಗೆ ಹೋಲಿಕೆ ಮಾಡಿ ಬದುಕಲು ಹೋದಷ್ಟು ನಷ್ಟವೇ ಹೊರೆತು ಲಾಭವಂತೂ ಇಲ್ಲ. ಎಷ್ಟು ಇರುತ್ತೆ ಅಷ್ಟರಲ್ಲಿ ಖುಷಿ ಕಾಣುವವರು ಹೃದಯ ಶ್ರೀಮಂತರೆ ಏಕೆಂದರೆ ಖುಷಿಗಿಂತ ಹಣ ಯಾವುದು ಅಲ್ವಾ? ನಮ್ಮತನ ನಮ್ಮ ಜೊತೆ ಇದ್ದಾಗಲೇ ನೆಮ್ಮದಿಯೂ ನಮ್ಮ ಜೊತೆ ಇರುತ್ತದೆ. ಆಸೆಗಳು ಜಾಸ್ತಿನೇ, ಹಾಗಂತ ಕಡಿವಾಣ ಹಾಕದೆ ಹೋದರೆ ನೆಮ್ಮದಿಯು ಕೈ ಜಾರಿ ಹೋಗುವುದರಲ್ಲಿ ಹೆಚ್ಚು ಸಮಯವೇ ಬೇಡ. ಇರುವಷ್ಟೇ ಖುಷಿ ನನ್ನದು ಇದ್ದಷ್ಟೇ ನೆಮ್ಮದಿ.

ಸಮಾಚಾರ ಸಣ್ಣದಲ್ಲ

ಲಯಕ್ಕೆ ಮರಳಲು ಸಿಂಧು, ಲಕ್ಷ್ಯ ತಯಾರಿ

ಕುಮಮೊಟೊ (ಜಪಾನ್): ಭಾರತದ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಮಂಗಳವಾರ ಆರಂಭವಾಗುವ ಕುಮಮೊಟೊ ಮಾಸ್ಟರ್ಸ್ ಜಪಾನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಲಯಕ್ಕೆ ಮರಳುವ ವಿಶ್ವಾಸದಲ್ಲಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಿರಾಶಾ ದಾಯಕ ಪ್ರದರ್ಶನ ನೀಡಿದ್ದ ಸಿಂಧು ಮತ್ತು ಲಕ್ಷ್ಯ ಸೇನ್ ಅವರು ತಮ್ಮ ಸಹಜ ಆಟ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಸಿಂಧು, ಡೆನ್ಮಾರ್ಕ್ ಓಪನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು. ಲಕ್ಷ್ಯ ಸೇನ್ ಆರ್ಕ್ಟಿಕ್ ಸೂಪರ್ 500 ಮತ್ತು ಡೆನ್ಮಾರ್ಕ್ ಓಪನ್ ಟೂರ್ನಿಗಳಲ್ಲಿ ಬೇಗನೇ ಹೊರಬಿದ್ದಿದ್ದರು. ಫಿನ್ಲೆಂಡ್‌ನಲ್ಲಿ ನಡೆದ ಆರ್ಕ್ಟಿಕ್ ಓಪನ್‌ನಲ್ಲಿ ಹೈದರಾಬಾದ್‌ನ ಆಟಗಾರ್ತಿ, ಕೆನಡಾದ ಮಿಚೆಲ್ ಲೀ ವಿರುದ್ಧ ಮೊದಲ ಸುತ್ತಿನಲ್ಲೇ ಸೋತು ಆಘಾತ ಅನುಭವಿಸಿದ್ದರು. ಒಡೆನ್ಸ್‌ನಲ್ಲಿ ನಡೆದ ಟೂರ್ನಿ ಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದರು. ಆದರೆ, ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಗ್ರೆಗೋರಿಯಾ ಮರಿಸ್ಕಾ ತಾಂಜುಂಗ್ (ಇಂಡೊನೇಷ್ಯಾ) ಎದುರು ನಿರ್ಣಾಯಕ ಗೇಮ್‌ನಲ್ಲಿ ಭಾರತೀಯ ಆಟಗಾರ್ತಿ ಎಡವಿದ್ದರು. ಈ ಹಿನ್ನಡೆಗಳ ಹೊರತಾಗಿಯೂ ಸಿಂಧು ತಮ್ಮ ತಯಾರಿ ಬಗ್ಗೆ ಆತ್ಮವಿಶ್ವಾಸ ಹೊಂದಿದ್ದಾರೆ. ನೂತನ ಕೋಚ್‌ಗಳಾದ ಅನೂಪ್ ಶ್ರೀಧರ್ ಮತ್ತು ಕೊರಿಯಾದ ದಿಗ್ಗಜ ಲೀ ಸೀಯುನ್ ಮಾರ್ಗದರ್ಶನದಲ್ಲಿ ಕಠಿಣ ಅಭ್ಯಾಸದಲ್ಲಿ ತೊಡಗಿದ್ದಾರೆ. ಸಿಂಧು, ಈ ಟೂರ್ನಿಯ ಮೊದಲ ಸುತ್ತಿನಲ್ಲಿ ಎಂಟನೇ ಶ್ರೇಯಾಂಕದ ಬುಸಾನನ್ ಒಂಗ್ಬಾ ಮ್ರುಂಗ್ಫನ್ (ಥಾಯ್ಲೆಂಡ್) ಅವರನ್ನು ಎದುರಿಸಲಿ ದ್ದಾರೆ. 23 ವರ್ಷ ವಯಸ್ಸಿನ ಲಕ್ಷ್ಯ, ಮೊದಲ ಸುತ್ತಿನಲ್ಲಿ ಮಲೇಷ್ಯಾದ ಲಿಯಾಂಗ್ ಜುನ್ ಹಾವೊ ಅವರನ್ನು ಎದುರಿಸಲಿದ್ದಾರೆ. ಮಹಿಳಾ ಡಬಲ್ಸ್ ವಿಭಾಗದಲ್ಲಿ ತ್ರಿಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಕಣಕ್ಕಿಳಿಯಲಿದ್ದಾರೆ.

ಮ್ಯಾರಾಥಾನ್: ಸಚಿನ್‌ಗೆ ಪ್ರಶಸ್ತಿ

ಮಂಗಳೂರು: ಉಡುಪಿಯ ಸಚಿನ್ ಹಾಗೂ ಅಸ್ಸಾಮ್‌ನ ಬಿಜೋಯಾ ಬರ್ಮನ್ ಅವರು ನಿವಿಯಸ್ ಮಂಗಳೂರು ಮ್ಯಾರಥಾನ್ 2024 ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಮುಕ್ತ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು. 42.2 ಕಿ.ಮೀ ದೂರವನ್ನು ಸಚಿನ್ 2 ಗಂಟೆ 43 ನಿಮಿಷ 55 ಸೆಕೆಂಡ್‌ಗಳಲ್ಲಿ ಕ್ರಮಿಸಿದರು. ಬಿಜೋಯಾ ಬರ್ಮನ್ ಅವರು 3 ಗಂಟೆ 38 ನಿಮಿಷ 8 ಸೆಕೆಂಡ್‌ಗಳಲ್ಲಿ ಓಟ ಮುಗಿಸಿದರು. ಪುರುಷರ ಮುಕ್ತ ವಿಭಾಗದಲ್ಲಿ ಸೂರಜ್ ಪ್ರಸಾದ ಮತ್ತು ದಿಲೀಪ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ರೋಹಿತ್ ಜೊತೆಗಿನ ಸಂಬಂಧ ಉತ್ತಮವಾಗಿದೆ | ನ್ಯೂಜಿಲೆಂಡ್ ಸಾಮರ್ಥ್ಯಕ್ಕೆ ತಕ್ಕದಾದಷ್ಟು ಆಡಿಲ್ಲ: ಗಂಭೀರ್

ಮುಖಭಂಗದ ನಂತರ ಗಂಭೀರ ಮಾತು



ಮುಂಬೈ: ತವರಿನಲ್ಲಿ ನ್ಯೂಜಿಲೆಂಡ್ ವಿರುದ್ಧ ವೈಟ್‌ವಾಷ್ ಮುಖಭಂಗ ಅನುಭವಿಸಿದ ನಂತರ ಭಾರತ ಕ್ರಿಕೆಟ್ ತಂಡದ ಮುಖ್ಯಕೋಚ್ ಗೌತಮ್ ಗಂಭೀರ್ ಅವರು ಮೊದಲ ಬಾರಿಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದಾರೆ. ಟೀಂ ಇಂಡಿಯಾ ಮೂರೂ (ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್) ವಿಭಾಗಗಳಲ್ಲಿ ವೈಫಲ್ಯ ಅನುಭವಿಸಿತು ಎಂದು ಒಪ್ಪಿಕೊಂಡಿದ್ದಾರೆ.

'ನಾವು ಚೆನ್ನಾಗಿ ಆಡಲಿಲ್ಲ ಎಂಬುದನ್ನು ಖಂಡಿತಾ ಒಪ್ಪಿಕೊಳ್ಳುತ್ತೇವೆ. ನಮ್ಮ ತಂಡವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ನಾನಿಲ್ಲಿ ಕುಳಿತಿಲ್ಲ. ನಾವು ಮೂರೂ ವಿಭಾಗಗಳಲ್ಲಿ ವೈಫಲ್ಯ ಅನುಭವಿಸಿದೆವು. ಅವರು (ನ್ಯೂಜಿಲೆಂಡ್) ನಮಗಿಂತ ಹೆಚ್ಚು ವೃತ್ತಿಪರರಾಗಿ ಆಡಿದರು. ನಾವು ಅದನ್ನು ಒಪ್ಪುತ್ತೇವೆ. ಟೀಕೆಗಳನ್ನು ಸ್ವೀಕರಿಸುತ್ತಾ ಮುನ್ನಡೆಯುತ್ತೇವೆ. ಪ್ರತಿದಿನ ಸುಧಾರಣೆಗೊಳ್ಳುವತ್ತ ಸಾಗುತ್ತೇವೆ' ಎಂದಿದ್ದಾರೆ. 'ನಾಯಕ ರೋಹಿತ್ ಶರ್ಮಾ ಜೊತೆಗಿನ ನನ್ನ ಸಂಬಂಧ ಉತ್ತಮವಾಗಿದೆ. ಈ ಮೂರು ಪಂದ್ಯ ಗಳಿಗೂ ಮುನ್ನ ನಾವು ಕಾನ್ಪುರದಲ್ಲಿ (ಬಾಂಗ್ಲಾದೇಶ ವಿರುದ್ಧ) ಅದ್ಭುತವಾಗಿ ಆಡಿದ್ದೆವು. ನ್ಯೂಜಿಲೆಂಡ್ ಎದುರು ಸಾಮರ್ಥ್ಯಕ್ಕೆ ತಕ್ಕಂತೆ ನಾವು ಆಡಿಲ್ಲ ಎಂಬುದು ಗೊತ್ತಿದೆ. ಆದರೆ, ಅದು ನಮ್ಮ ಸಂಬಂಧದಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಇದೇ ತಿಂಗಳು ಆಸ್ಟ್ರೇಲಿಯಾದಲ್ಲಿ ಆರಂಭವಾಗಲಿರುವ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿ ಕುರಿತು, 'ಆಸ್ಟ್ರೇಲಿಯಾ ನಮ್ಮ ಹೊಸ ಎದುರಾಳಿ ಮತ್ತು ಅದು ಹೊಸ ಸರಣಿ. ಖಂಡಿತವಾಗಿಯೂ ನಾವು ಜಯ ಸಾಧಿಸುತ್ತೇವೆ ಎಂಬ ವಿಶ್ವಾಸದೊಂದಿಗೆ ತೆರಳುತ್ತಿದ್ದೇವೆ. ಟೀಕೆಗಳಿಂದ ಎದೆಗುಂದುವುದಿಲ್ಲ. ಭಾರತ ತಂಡದ ಕೋಚ್ ಆಗಿರುವುದು ಹೆಮ್ಮೆಯ ಸಂಗತಿ ಎಂದರು.

ಮೊದಲ ಟೆಸ್ಟ್‌ಗೆ ಬುಮ್ರಾ ನಾಯಕ

ಆಸ್ಟ್ರೇಲಿಯಾ ವಿರುದ್ಧದ ಐದು ಪಂದ್ಯಗಳ ಸರಣಿಯು ಇದೇ 26ರಿಂದ ಆರಂಭವಾಗಲಿದೆ. ಮೊದಲ ಪಂದ್ಯವು ಪರ್ತ್‌ನಲ್ಲಿ ನಡೆಯಲಿದೆ. ಒಂದು ವೇಳೆ ಆ ಪಂದ್ಯಕ್ಕೆ ರೋಹಿತ್ ಲಭ್ಯ ವಾಗದಿದ್ದರೆ, ವೇಗಿ-ಉಪನಾಯಕ ಜಸ್ಪ್ರೀತ್ ಬುಮ್ರಾ ತಂಡ ಮುನ್ನಡೆಸಲಿದ್ದಾರೆ ಎಂದು ಗಂಭೀರ್ ಖಚಿತಪಡಿಸಿದ್ದಾರೆ.

ಮಾಧ್ಯಮದವರೊಂದಿಗೆ ಗಂಭೀರ್ ದೂರವಿರಲಿ

ದೆಹಲಿ: ಮಾಧ್ಯಮದವರೊಂದಿಗೆ ಸಂವಾದ ನಡೆಸುವ ಸಂದರ್ಭದಲ್ಲಿ ಭಾರತ ಕ್ರಿಕೆಟ್ ತಂಡದ ಮುಖ್ಯಕೋಚ್ ಗೌತಮ್ ಗಂಭೀರ್ ಅವರಿಗೆ ಸರಿಯಾದ ನಡವಳಿಕೆ ಮತ್ತು ಪದಗಳ ಕೊರತೆಯಿದೆ ಎಂದು ಟೀಮ್ ಇಂಡಿಯಾದ ಮಾಜಿ ಕ್ರಿಕೆಟಿಗ ಸಂಜಯ್ ಮಂಜ್ರೇಕರ್ ವ್ಯಂಗ್ಯವಾಡಿದ್ದಾರೆ. ಮುಂಬರುವ ಬಾರ್ಡರ್-ಗವಾಸ್ಕರ್ ಟ್ರೋಫಿ ಹಾಗೂ ಈಚೆಗೆ ಮುಕ್ತಾಯಗೊಂಡ ನ್ಯೂಜಿಲೆಂಡ್ ವಿರುದ್ಧ ಟೆಸ್ಟ್ ಸರಣಿಯಲ್ಲಿ ವಿರಾಟ್ ಕೊಹ್ಲಿ-ರೋಹಿತ್ ಶರ್ಮಾ ಅವರ ಪ್ರದರ್ಶನದ ಬಗ್ಗೆ ಗಂಭೀರ್ ಮೊಂಡುತನದಿಂದ ಪ್ರತಿಕ್ರಿಯಿಸಿದ್ದಾರೆ ಎಂದು ಮಂಜ್ರೇಕರ್ ಗುಡುಗಿದ್ದಾರೆ. ಗಂಭೀರ್ ಅವರನ್ನು ಮಾಧ್ಯಮಗಳಿಂದ ದೂರ ವಿಡಿ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯನ್ನು (ಬಿಸಿಸಿಐ) ಒತ್ತಾಯಿಸುತ್ತೇನೆ. ಜತೆಗೆ, ಗಂಭೀರ್ ಅವರು ತೆರೆಮರೆಯಲ್ಲಿ ಕೆಲಸ ಮಾಡುವುದು ಉತ್ತಮ ಎಂದು ಮಂಜ್ರೇಕರ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಮಾಧ್ಯಮದವರೊಂದಿಗೆ ಸಂವಾದ ನಡೆಸಲು ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಮತ್ತು ಆಯ್ಕೆ ಸಮಿತಿಯ ಅಧ್ಯಕ್ಷ ಅಜಿತ್ ಅಗರ್ಕರ್ ಸೂಕ್ತ ಎಂದು ಮಂಜ್ರೇಕರ್ ಸಲಹೆ ನೀಡಿದ್ದಾರೆ. ಗಂಭೀರ್ ಅವರ ಯಾವ ಹೇಳಿಕೆ ಆಕ್ಷೇಪಾರ್ಹವಾಗಿತ್ತು ಎಂಬುದನ್ನು ಮಂಜ್ರೇಕರ್ ತಮ್ಮ ಪೋಸ್ಟ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿಲ್ಲ ಎಂದು ಪಿಟಿಐ ವರದಿ ಮಾಡಿದೆ.

ಆಸ್ಟ್ರೇಲಿಯಾಗೆ ಸ್ವೀನಿ ನಾಯಕ

ಸಿಡ್ನಿ: ಆಸ್ಟ್ರೇಲಿಯಾದ ಯುವ ಬ್ಯಾಟರ್ ನೇಥನ್ ಮ್ಯಾಕ್ ಸ್ವೀನಿ ಅವರು ಭಾರತ ಎದುರಿನ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಆರಂಭಿಕ ಬ್ಯಾಟರ್ ಆಗಿ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ. ಭಾನುವಾರ ಕ್ರಿಕೆಟ್ ಆಸ್ಟ್ರೇಲಿಯಾ ಪ್ರಕಟಿಸಿರುವ ತಂಡದಲ್ಲಿ ಮ್ಯಾಕ್ ಸ್ಥಾನ ಪಡೆದಿದ್ದಾರೆ. ಅವರು ಉಸ್ಮಾನ್ ಖ್ವಾಜಾ ಜೊತೆಗೆ ಇನಿಂಗ್ಸ್ ಆರಂಭಿಸಲಿದ್ದಾರೆ. ಇದೇ 22ರಿಂದ ಪರ್ತ್‌ನಲ್ಲಿ ಮೊದಲ ಪಂದ್ಯ ಆರಂಭವಾಗಲಿದೆ.

ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಸ್ಕಾಟ್ ಬೊಲ್ಯಾಂಡ್, ಅಲೆಕ್ಸ್ ಕ್ಯಾರಿ, ಜೋಶ್ ಹ್ಯಾಜಲ್ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಉಸ್ಮಾನ್ ಖ್ವಾಜಾ, ಮಾರ್ನಸ್ ಲಾಬುಷೇನ್, ನೇಥನ್ ಲಯನ್, ಮಿಚೆಲ್ ಮಾರ್ಷ್, ನೇಥನ್ ಮ್ಯಾಕ್‌ಸ್ವೀನಿ, ಸ್ಟೀವನ್ ಸ್ಮಿತ್, ಮಿಚೆಲ್ ಸ್ಟಾರ್ಕ್.

ಬಿಸಿಸಿಐ ವಿರುದ್ಧ ಸಿಎಎಸ್‌ಗೆ ಪಾಕ್ ಕ್ರಿಕೆಟ್ ಮಂಡಳಿ ಮೇಲ್ಮನವಿ

ಭಾರತದ ಜತೆ ಪಂದ್ಯ ಆಡಲ್ಲ: ಪಾಕ್

ಕರಾಚಿ: ಪಾಕಿಸ್ತಾನದ ಆತಿಥ್ಯದಲ್ಲಿ ಮುಂದಿನ ವರ್ಷ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿಗೆ ಸಂಬಂಧಿಸಿದಂತೆ ಬಿಸಿಸಿಐ ಈಗಾಗಲೇ ತನ್ನ ನಿಲುವನ್ನು ತಿಳಿಸಿದೆ. ಯಾವುದೇ ಕಾರಣಕ್ಕೂ ಪಾಕ್‌ಗೆ ಭಾರತ ತಂಡ ಪ್ರಯಾಣಿಸುವುದಿಲ್ಲ, ಟೂರ್ನಿ ಹೈಬ್ರಿಡ್ ಮಾದರಿಯಲ್ಲಿ ನಡೆಸಿದರೆ ಮಾತ್ರ ಭಾಗಿಯಾಗುವುದಾಗಿ ಐಸಿಸಿಗೆ ಮತ್ತು ಪಾಕ್ ಕ್ರಿಕೆಟ್ ಮಂಡಳಿಗೆ ತಿಳಿಸಿದೆ. ಇದರ ಬೆನ್ನಲ್ಲೇ ಪಾಕಿಸ್ತಾನ ಕೂಡ ಭಾರತಕ್ಕೆ ಸೆಡ್ಡು ಹೊಡೆಯಲು ಮುಂದಾಗಿದೆ. ಭಾರತ ತಂಡ ಪಾಕ್‌ಗೆ ಬಾರದಿದ್ದರೆ, ಇನ್ನು ಮುಂದೆ ಪಾಕ್ ತಂಡ ಭಾರತ ವಿರುದ್ಧ ಆಡುವುದಿಲ್ಲ ಎಂದು ಹೇಳಿದೆ.

ಪಾಕಿಸ್ತಾನ ಸರಕಾರ ಕೂಡ ಈ ವಿಚಾರದಲ್ಲಿ ಮಧ್ಯ ಪ್ರವೇಶಿಸಿದ್ದು ಯಾವುದೇ ಕಾರಣಕ್ಕೂ ಹೈಬ್ರಿಡ್ ಮಾದರಿಯ ಟೂರ್ನಿಗೆ ಒಪ್ಪಿಗೆ ಸೂಚಿಸಬಾರದು ಎಂದು ಪಾಕ್ ಕ್ರಿಕೆಟ್ ಮಂಡಳಿಗೆ ನಿರ್ದೇಶನ ನೀಡಿದೆ ಎಂದು ತಿಳಿದುಬಂದಿದೆ. ಇನ್ನೊಂದೆಡೆ ಬಿಸಿಸಿಐ ವಿರುದ್ಧ ಕೋರ್ಟ್ ಆಫ್ ಆರ್ಬಿಟ್ರೇಷನ್ ಫಾರ್ ಸ್ಪೋರ್ಟ್ಸ್‌ಗೆ ಮೇಲ್ಮನವಿ ಸಲ್ಲಿಸಲು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಸಜ್ಜಾಗಿದೆ ಎನ್ನಲಾಗಿದೆ.

ಚಾಂಪಿಯನ್ಸ್ ಟ್ರೋಫಿಗಾಗಿ ನಮ್ಮ ಸಿದ್ಧತೆಗಳು ಸಹಜವಾಗಿ ನಡೆಯುತ್ತಿವೆ ಮತ್ತು ಅದೇ ಶೈಲಿಯಲ್ಲಿ ಮುಂದುವರಿಯುತ್ತದೆ. ಭಾರತವು ಹಿಂದೆ ಸರಿಯಲು ನಿರ್ಧರಿಸಿದರೆ, ನಾವು ಕೂಡ ಮುಂದಿನ ದಿನಗಳಲ್ಲಿ ಭಾರತ ವಿರುದ್ಧದ ಐಸಿಸಿ ಪಂದ್ಯಗಳನ್ನು ಆಡುವುದಿಲ್ಲ ಎಂದು ಪಾಕ್ ಕ್ರಿಕೆಟ್ ಮಂಡಳಿ ಐಸಿಸಿಗೆ ತನ್ನ ನಿಲುವನ್ನು ತಿಳಿಸಿರುವುದಾಗಿ ವರದಿಯಾಗಿದೆ.

ಉಭಯ ದೇಶಗಳ ರಾಜತಾಂತ್ರಿಕ ಕಿತ್ತಾಟದಿಂದ ಟೂರ್ನಿಯನ್ನು ನಡೆಸುವುದು ಐಸಿಸಿಗೆ ನುಂಗಲಾರದ ತುತ್ತಾಗಿದೆ. ಟೂರ್ನಿ ನಡೆಯುವ 100 ದಿನ ಮುಂಚಿತವಾಗಿ ವೇಳಾಪಟ್ಟಿಯನ್ನು ಪ್ರಕಟಿಸಬೇಕಿದ್ದು, ಮುಂದಿನ ದಿನಗಳಲ್ಲಿ ಏನಾಗಲಿದೆ ಎಂದು ಕಾದು ನೋಡಬೇಕಿದೆ. ಸದ್ಯ ಐಸಿಸಿ ಎರಡೂ ದೇಶಗಳ ಕ್ರಿಕೆಟ್ ಮಂಡಳಿ ಜತೆ ಚರ್ಚೆ ನಡೆಸುತ್ತಿದೆ.

ಪಾಕಿಸ್ತಾನ ಕ್ರಿಕೆಟ್ ಮಂಡಳಿ ಪ್ರಕಟಿಸಿದ ವೇಳಾಪಟ್ಟಿ ಪ್ರಕಾರ ಪಂದ್ಯಾವಳಿ ಫೆಬ್ರವರಿ 19 ರಿಂದ ಮಾರ್ಚ್ 9 ರವರೆಗೆ ನಡೆಯಲಿದ್ದು, ಲಾಹೋರ್, ರಾವಲ್ಪಿಂಡಿ ಮತ್ತು ಕರಾಚಿಯಲ್ಲಿ ಪಂದ್ಯಗಳನ್ನು ನಿಗದಿಪಡಿಸಿದೆ. ಭಾರತಕ್ಕೆ ಗಡಿ ಸಾಮೀಪ್ಯ ಇರುವ ಕಾರಣ ಲಾಹೋರ್‌ನಲ್ಲಿ ಭಾರತದ ಪಂದ್ಯಗಳನ್ನು ಯೋಜಿಸಿದೆ. ಪಂದ್ಯಾವಳಿಯಲ್ಲಿ ಭಾರತದ ಮೂರು ಗುಂಪು-ಹಂತದ ಪಂದ್ಯಗಳನ್ನು ಫೆಬ್ರವರಿ 20 (ಬಾಂಗ್ಲಾದೇಶ ವಿರುದ್ಧ), ಫೆಬ್ರವರಿ 23 (ಪಾಕಿಸ್ತಾನ ವಿರುದ್ಧ), ಮತ್ತು ಮಾರ್ಚ್ 2 (ನ್ಯೂಜಿಲೆಂಡ್ ವಿರುದ್ಧ) ರಂದು ನಿಗದಿಪಡಿಸಲಾಗಿದೆ.

ಯೂನಿವರ್ಸಲ್ ಫಸ್ಟ್ ಏಜ್ ಮಕ್ಕಳ ಚೆಸ್ ಪಂದ್ಯವಳಿ ಉದ್ಘಾಟನೆ

ಚೆಸ್ ಯೋಚನಾ ಶಕ್ತಿ ಹೆಚ್ಚಿಸುತ್ತದೆ: ಪ್ರಣವ್

ಬೆಂಗಳೂರು: ನಮ್ಮ ವ್ಯಕ್ತಿತ್ವವನ್ನು ಬೆಳೆಸಲು ಚೆಸ್ ಅತ್ಯುತ್ತಮ ಆಟವಾಗಿದೆ ಎಂದು ಚೆಸ್‌ನಲ್ಲಿ 16 ವರ್ಷದೊಳಗಿನವರ ವಿಶ್ವ ಚಾಂಪಿಯನ್ ಆಗಿರುವ ಕರ್ನಾಟಕದ ಕಿರಿಯ ಗ್ರ್ಯಾಂಡ್ ಮಾಸ್ಟರ್ ಪ್ರಣವ್ ಆನಂದ್ ಅವರು ಹೇಳಿದ್ದಾರೆ.

ಅವರು ಭಾನುವಾರ ಕೆಎಸ್‌ಸಿಎ ಮತ್ತು ಬುಯುಡಿಸಿಎ ಆಶ್ರಯದಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ಐಕ್ಯೂಎಸಿ ಉಪಕ್ರಮದಡಿ ಕೋಳೂರಿನ ಯೂನಿವರ್ಸಲ್ ಕ್ಯಾಂಪಸ್‌ನಲ್ಲಿ ಯೂನಿವರ್ಸಲ್ ಫಸ್ಟ್ ಏಜ್ ವಯೋಮಾನದ ಮಕ್ಕಳ ಚೆಸ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು. ಚೆಸ್‌ನಲ್ಲಿ ಸಾಧನೆಗೆ ನಿರಂತರ ಅಭ್ಯಾಸ ಅಗತ್ಯ ಎಂದು ಅವರು ಹೇಳಿದರು.

ಯುಜಿಐ ಅಧ್ಯಕ್ಷ ಆರ್.ಉಪೇಂದ್ರ ಶೆಟ್ಟಿ ಮಾತನಾಡಿ, ಚೆಸ್ ವಿಶ್ವಕ್ಕೆ ಭಾರತ ನೀಡಿದ ಶ್ರೇಷ್ಠ ಕೊಡುಗೆಯಾಗಿದೆ. ಮಕ್ಕಳ ಕೌಶಲ್ಯ, ಮಾನಸಿಕ ಸಾಮರ್ಥ್ಯವನ್ನು ಚುರುಕುಗೊಳಿಸುವುದರೊಂದಿಗೆ ಅವರ ಶೈಕ್ಷಣಿಕ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆಗೆ ಚೆಸ್ ಸಹಕಾರಿ ಎಂದು ಅವರು ಅಭಿಪ್ರಾಯಪಟ್ಟರು.

9-19 ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಸ್ಪರ್ಧೆ ನಡೆಯಿತು.

ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಜೆ ಸಂತೋಷ್ ಶೆಟ್ಟಿ, ಯುನಿವರ್ಸಲ್ ಪಿಯು ಕಾಲೇಜಿನ ಪ್ರಾಂಶುಪಾಲ ನವೀನ್ ಪ್ರದಾದ್, ಐಕ್ಯೂಎಸಿ ಸಂಯೋಜಕಿ ಸುಚಿತ್ರಾ ಶೆಟ್ಟಿ, ದೈಹಿಕ ಶಿಕ್ಷಣ ನಿರ್ದೇಶಕ ಜಲಕ್ ಶರ್ಮಾ, ಕೆಡಿಸಿಎ ಸಂಸ್ಥಾಪಕ ಅಧ್ಯಕ್ಷ ಜಯಪಾಲ ಚಂದಾಡಿ, ಬುಯುಡಿಸಿಎ ಅಧ್ಯಕ್ಷೆ ಸೌಮ್ಯ ಎಂ.ಯು ಉಪಸ್ಥಿತರಿದ್ದರು.

ವಿಟಾಕೀಸ್

ಅಮೃತಾಂಜನ್ ಹಚ್ಚಿದ ಗೌರವ್ ಶೆಟ್ಟಿ

ಇಂದು ಸಿನಿಮಾದಂತೆಯೇ ಕಿರುಚಿತ್ರಗಳು ಕೂಡ ಗಮನಸೆಳೆಯುತ್ತಿವೆ. ಅದರಲ್ಲಿಯೂ ಕಾಮಿಡಿ ಕಥೆಯ ಶಾರ್ಟ್ ಮೂವೀಸ್ ಎಲ್ಲರ ಅಚ್ಚುಮೆಚ್ಚಾಗಿವೆ. ಅಂತಹ ಕಿರುಚಿತ್ರಗಳಲ್ಲಿ ಅಮೃಂತಾಜನ್ ಕೂಡ ಒಂದು. ಈ ಕಿರುಚಿತ್ರದಲ್ಲಿ ನಟಿಸಿದ ಗೌರವ್ ಶೆಟ್ಟಿ ಎಲ್ಲರ ಅಚ್ಚುಮೆಚ್ಚಾದರು. ಹೌದು, ಅಮೃತಾಂಜನ್ ಗೌರವ್‌ಗೆ ನಟನಾಗಿ ಗೌರವ ತಂದುಕೊಟ್ಟಿತು. ಕಿರುಚಿತ್ರಗಳ ಮೂಲಕವಾಗಿಯೇ ಗೌರವ್ ಪ್ರಸಿದ್ಧಿ ಪಡೆದಿದ್ದಾರೆ. ಚಂದನವನದಲ್ಲಿಯೂ ಮಿಂಚುತ್ತಿದ್ದಾರೆ.

- **ವಿ.ಸಿನಿಮಾಸ್: ನಟನೆಯ ಅಭಿರುಚಿ ಮೂಡಿದ್ದು ?**

ಗೌರವ್ ಶೆಟ್ಟಿ: ನಾನು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗ ನಾಟಕಗಳಲ್ಲಿ ನಟಿಸುತ್ತಿದ್ದೆ, ಅಂದೇ ಮುಂದೊಂದು ದಿನ ನಾನು ಒಬ್ಬ ಕಲಾವಿದನಾಗಿ ಗುರುತಿಸಿಕೊಳ್ಳಬೇಕು ಎಂಬ ಆಸೆ ಮನದಲ್ಲಿ ಮೂಡಿತು. ಬರು ಬರುತ್ತಾ ಅದು ಗಾಢವಾಯಿತು. ಆ ಬಳಿಕ ನಾನೇ ಸ್ವತಃ ಒಂದು ಕಿರುಚಿತ್ರವನ್ನು ನಿರ್ದೇಶಿಸಿದೆ. ಅದನ್ನು ನೋಡಿ ನನ್ನ ಸ್ನೇಹಿತರು ನೀನೆಗೆ ಸಿನಿಮಾ ರಂಗಕ್ಕೆ ಹೋಗಬಾರದು ಎಂದರು. ಅಂದಿನಿಂದ ಸಿನಿಮಾದಲ್ಲಿ ಅವಕಾಶ ಅರಸಲು ಆರಂಭಿಸಿದೆ. ಹಲವು ಆಡಿಷನ್‌ನಲ್ಲಿ ಪಾಲ್ಗೊಂಡೆ, ಕೊನೆಗೂ ಕಿರುಚಿತ್ರಗಳಲ್ಲಿ ನಟಿಸುವ ಅವಕಾಶ ಸಿಕ್ಕಿತು.

- **ವಿ.ಸಿ: ಅಮೃತಾಂಜನ್ ಹಚ್ಚಿದ್ದು ಹೇಗೆ?**

ಗೌರವ್: ಹೀಗೆ ಆಡಿಷನ್‌ಗೆ ತೆರಳಿದ್ದಾಗ, ಮೋಹಿತ್ ಅವರು ಕಿರುಚಿತ್ರ ನಿರ್ದೇಶನ ಮಾಡಲು ರೆಡಿಯಾಗುತ್ತಿದ್ದರು. ಆ ಕಿರುಚಿತ್ರದಲ್ಲಿ ನಟಿಸಲು ನನಗೆ ಅವಕಾಶ ಸಿಕ್ಕಿತು. ಅಲ್ಲಿಂದ ನನ್ನ ಕಿರುಚಿತ್ರದ ಪಯಣ ಆರಂಭವಾಯಿತು. ಆ ಬಳಿಕ ಮೋಹಿತ್ ಸ್ನೇಹಿತರಾದ ಅಮಿತ್ ರಾಜ್, ಬಾಯ್ ಬಡ್ಡಿ ಕಿರುಚಿತ್ರ ನಿರ್ದೇಶಿಸುತ್ತಿದ್ದರು. ಆ ಕಿರುಚಿತ್ರಕ್ಕೆ ನನ್ನನ್ನೇ ಮುಖ್ಯ ಪಾತ್ರಕ್ಕೆ ಆಯ್ಕೆ ಮಾಡಿ ಕೊಂಡರು. ಬಾಯ್ ಬಡ್ಡಿ ನನಗೆ ಬ್ರೇಕ್ ನೀಡಿತು. ಅಲ್ಲಿಂದ ಚಂದನವನಕ್ಕೆ ಎಂಟ್ರಿಕೊಟ್ಟೆ. ಡಾರ್ಲಿಂಗ್ ಕೃಷ್ಣ ನಟನೆಯ ಲವ್ ಬರ್ಡ್ಸ್ ಚಿತ್ರದಲ್ಲಿ ನಟಿಸುವ ಅವಕಾಶವೂ ಸಿಕ್ಕಿತು. ಈ ಚಿತ್ರದಲ್ಲಿ ನನ್ನದು ಚಿಕ್ಕ ಪಾತ್ರವಾದರೂ ಮಹತ್ವದ ಪಾತ್ರವೇ ಆಗಿತ್ತು.

- **ವಿ.ಸಿ : ನಿಮ್ಮ ಮುಂದಿನ ಸಿನಿಮಾಗಳು ?**

ಗೌರವ್: ಇನ್ನೇನು ತೆರೆಗೆ ಬರಲು ಸಿದ್ಧವಾಗಿರುವ ಆರಾಮ್ ಅರವಿಂದ ಸ್ವಾಮಿ ಚಿತ್ರದಲ್ಲಿಯೂ ನಟಿಸಿದ್ದೇನೆ. ಈ ಸಿನಿಮಾದಲ್ಲಿ ನನ್ನ ಪಾತ್ರ ಚಿದುದ್ದಕ್ಕೂ ಸಾಗುತ್ತದೆ. ಇದರ ಜತೆಗೆ ವಿರಾಟ್ ನಾಯಕರಾಗಿ ನಟಿಸುತ್ತಿರುವ ರಾಯಲ್ ಚಿತ್ರದಲ್ಲಿಯೂ ಅಭಿನಯಿಸಿದ್ದೇನೆ, ಈಗಷ್ಟೇ ಸೆಟ್ಟೇರಿರುವ ರಾಜ್ ಬಿ ಶೆಟ್ಟಿ ನಟನೆಯ ರಕ್ಕದಪುರದೋಳ್ ಸಿನಿಮಾದಲ್ಲಿ ಒಂದು ಪ್ರಮುಖ ಪಾತ್ರ ಸಿಕ್ಕಿದೆ. ಆ ಬಳಿಕ ಅಮೃತಾಂಜನ್ ಸಿನಿಮಾ ಸೆಟ್ಟೇರಲಿದೆ.

ಕಾಮಿಡಿ ಡೈಲಾಗ್ ಇಷ್ಟ

ಇದುವರೆಗು ನಾನು ಸುಮಾರು ಮೂವತ್ತಕ್ಕೆ ಹೆಚ್ಚು ಕಿರುಚಿತ್ರಗಳಲ್ಲಿ ನಟಿಸಿದ್ದೇನೆ. ನಾನು ಮಂಡ್ಯದ ಹೈದ, ಹಾಗಾಗಿ ಗ್ರಾಮೀಣ ಸೊಗಡಿನ ಸಂಭಾಷಣೆ ನನಗೆ ಬಲು ಸುಲಭ. ಅದರಲ್ಲಿಯೂ ಕಾಮಿಡಿ ಡೈಲಾಗ್ ಎಂದರೆ ಬಲು ಇಷ್ಟ.

ಭೈರತಿಗೆ ಬಹುಪರಾಕ್

ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅಭಿನಯದ ಭೈರತಿ ರಣಗಲ್ ಇದೇ ವಾರ ರಾಜ್ಯಾದ್ಯಂತ ಭರ್ಜರಿಯಾಗಿ ತೆರೆಗೆ ಬರಲಿದೆ. ಈ ಚಿತ್ರದ ಪ್ರೀ ರಿಲೀಸ್ ಇವೆಂಟ್ ಅದ್ದೂರಿಯಾಗಿ ನೆರವೇರಿತು. ಬೆಂಗಳೂರಿನಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಡಾಲಿ ಧನಂಜಯ, ನೀನಾಸಂ ಸತೀಶ್, ವಿಜಯ ರಾಘವೇಂದ್ರ, ಸುಧಾರಾಣಿ, ಶ್ರುತಿ, ರಕ್ಷಿತಾ ಪ್ರೇಮ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್ ಎಂ ಸುರೇಶ್, ಮಾಜಿ ಅಧ್ಯಕ್ಷರಾದ ಸಾ ರಾ ಗೋವಿಂದು, ನಿರ್ಮಾಪಕರಾದ ಸೂರಪ್ಪ ಬಾಬು, ಕೆ.ಪಿ. ಶ್ರೀಕಾಂತ್, ನಿರ್ದೇಶಕರಾದ ಬಹದ್ದೂರ್ ಚೇತನ್, ಪವನ್ ಒಡೆಯರ್ ಸೇರಿದಂತೆ ಸ್ಯಾಂಡಲ್‌ವುಡ್‌ನ ಹಲವಾರು ಪಾಲ್ಗೊಂಡು ಭೈರತಿ ರಣಗಲ್ ಚಿತ್ರಕ್ಕೆ ಶುಭ ಕೋರಿದರು. ಭೈರತಿ ರಣಗಲ್ ಮಫ್ತಿಯ ಪ್ರೀಕ್ವೆಲ್ ಆಗಿದೆ, ಈ ಚಿತ್ರದಲ್ಲಿ ಶಿವಣ್ಣ ರೋಣಾಪುರದ ಪವರ್ ಫುಲ್ ಭೈರತಿ ರಣಗಲ್ ಆಗಿ ಮಿಂಚಿದ್ದಾರೆ.

ಒಳ್ಳೆಯ ಸಿನಿಮಾ ನಿರ್ದೇಶನ ಮಾಡಿದ ಸಂತಸವಿದೆ. ಶಿವಣ್ಣ ಇರುವಲ್ಲಿ ಎನರ್ಜಿ ಇರುತ್ತದೆ. ಅದೇ ಎನರ್ಜಿ ಚಿತ್ರವನ್ನು ಅಂದುಕೊಂಡಂತೆ ನಿರ್ದೇಶಿಸಲು ಸಾಧ್ಯವಾಯಿತು ಎಂದು ನಿರ್ದೇಶಕ ನರ್ತನ್ ಹೇಳಿದರು. ರುಕ್ಮಿಣಿ ವಸಂತ್ ನಾತಕಿಯಾಗಿ ನಟಿಸಿದ್ದು, ಛಾಯಾಸಿಂಗ್ ಶಿವಣ್ಣನ ತಂಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅವಿನಾಶ್, ಬಾಬು ಹಿರಣಯ್ಯ, ದೇವರಾಜ್, ಗೋಪಾಲಕೃಷ್ಣ ದೇಶಪಾಂಡೆ, ಮಧು ಗುರುಸ್ವಾಮಿ, ರೋಸ್ ಶಬೀರ್, ಪ್ರತಾಪ್ ಮುಂತಾದವರು ಚಿತ್ರದ ತಾರಾ ಗಣದಲ್ಲಿದ್ದಾರೆ. ರವಿ ಬಸ್ರೂರ್ ಸಂಗೀತ ನಿರ್ದೇಶಿಸಿದ್ದು, ನವೀನ್ ಕುಮಾರ್ ಛಾಯಾ ಗ್ರಹಣದ ಜವಾಬ್ದಾರಿ ನಿರ್ವಹಿಸಿದ್ದಾರೆ. ಶಿವಣ್ಣ ಅಭಿನಯದ ಸೂಪರ್ ಹಿಟ್ ಚಿತ್ರ ಜನುಮದ ಜೋಡಿ ಚಿತ್ರ ಕೂಡ 1996ರ ನವೆಂಬರ್ 15ರಂದೇ ತೆರೆಗೆ ಬಂದಿತ್ತು. ಈಗ ಭೈರತಿ ರಣಗಲ್ ಅದೇ ದಿನ ದಂದು ರಿಲೀಸ್ ಆಗುತ್ತಿರುವುದು ವಿಶೇಷ. ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜಕುಮಾರ್ ಚಿತ್ರ ನಿರ್ಮಾಣ ಮಾಡಿದ್ದಾರೆ.



ಮಫ್ತಿ ಚಿತ್ರದ ಪ್ರೀಕ್ವೇಲ್ ಆಗಿ ಭೈರತಿ ರಣಗಲ್ ಮೂಡಿಬಂದಿದೆ. ನಿರ್ದೇಶಕ ನರ್ತನ್ ಒಳ್ಳೆಯ ಸಿನಿಮಾ ನಿರ್ದೇಶನ ಮಾಡಿದ್ದಾರೆ. ಭೈರತಿ ರಣಗಲ್ ಅಭಿಮಾನಿಗಳ ಹೃದಯಕ್ಕೆ ಹತ್ತಿರವಾಗುತ್ತಾನೆ ಎಂಬ ನಂಬಿಕೆ ನನಗಿದೆ. ಇಡೀ ಚಿತ್ರತಂಡದ ಶ್ರಮದಿಂದ ಭೈರತಿ ರಣಗಲ್ ಅದ್ಭುತವಾಗಿ ಸಿದ್ಧವಾಗಿದೆ. ನಮ್ಮ ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜ ಕುಮಾರ್ ನಿರ್ಮಿಸಿರುವ ಎರಡನೇ ಚಿತ್ರವಿದು. ಇಪ್ಪತ್ತೆಂಟು ವರ್ಷಗಳ ಹಿಂದೆ ನವೆಂಬರ್ 15 ರಂದೇ ನನ್ನ ಜನುಮದ ಜೋಡಿ ಚಿತ್ರ ನರ್ತಕಿ ಥಿಯೇಟರ್‌ನಲ್ಲಿ ಬಿಡುಗಡೆಯಾಗಿತ್ತು. ಅದರ ನಿರ್ದೇಶಕರು ನಾಗಾಭರಣ, ಭೈರತಿ ರಣಗಲ್ ಕೂಡ ನವೆಂಬರ್ 15 ರಂದು ನರ್ತಕಿ ಚಿತ್ರ ಮಂದಿರದಲ್ಲೇ ಬಿಡುಗಡೆಯಾಗುತ್ತಿದೆ. ಇದರ ನಿರ್ದೇಶಕರು ನರ್ತನ್. ಆ ಚಿತ್ರವನ್ನು ನನ್ನ ಅಮ್ಮ ನಿರ್ಮಿಸಿದ್ದರು, ಈ ಸಿನಿಮಾವನ್ನು ನನ್ನ ಮಡದಿ ನಿರ್ಮಾಣ ಮಾಡಿದ್ದಾರೆ ಎಂಬುದು ಸಂತಸ ತಂದಿದೆ.

ಡಿಸೆಂಬರ್‌ನಲ್ಲಿ ಧೀರ ಭಗತ್‌ರಾಯ್

ಟ್ರೇಲರ್‌ನಲ್ಲಿ ಕುತೂಹಲ ಮೂಡಿಸಿರುವ ಧೀರ ಭಗತ್‌ರಾಯ್ ತೆರೆಗೆ ಸಿದ್ಧವಾಗಿದೆ. ಡಿಸೆಂಬರ್ 6 ರಂದು ಪುಷ್ಪ 2 ರಿಲೀಸ್ ಆಗುತ್ತಿದೆ. ಅಂದೇ ಪುಷ್ಪನ ಎದಿರು ಭಗತ್‌ರಾಯ್ ತೊಡೆ ತಟ್ಟಲಿದ್ದಾನೆ. ಭೂ ಸುಧಾರಣಾ ಕಾಯ್ದೆ ಜಾರಿಗೆ ಬಂದಾಗ ಭೂಮಿ ಪಡೆಯಲು ರೈತರು, ಬಡವರು ಯಾವೆಲ್ಲಾ ಸಮಸ್ಯೆಗಳನ್ನು ಎದುರಿಸಿದರು ಎಂಬ ಕಥೆ ಚಿತ್ರದಲ್ಲಿದೆ. ಅದರ ಜತೆಗೆ ಸಮಾಜದಲ್ಲಿನ ಅನ್ಯಾಯಗಳ ವಿರುದ್ಧ ಹೋರಾಡುವ ಧೀರನಾಗಿ ಭಗತ್ ರಾಯ್ ಮಿಂಚಲಿದ್ದಾನೆ. ಎಸ್.ಕರ್ಣನ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ರಾಕೇಶ್ ದಳವಾಯಿ ನಾಯಕನಾಗಿ ನಟಿಸಿದ್ದಾರೆ. ಉಳಿದಂತೆ ಶರತ್ ಲೋಹಿತಾಶ್ವ, ಎಂ.ಕೆ.ಮಠ, ನೀನಾಸಂ ಅಶ್ವತ್ಥ್, ಸುಧೀರ್ ಕುಮಾರ್, ಸುಚಿತ್ರಾ ನಾರಾಯಣ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ಧೀರ ಭಗತ್‌ರಾಯ್ ನಮ್ಮ ನೆಲದ ಕಥೆಯಾಗಿದ್ದು ಎಲ್ಲಾ ಕಾಲಕ್ಕೂ ಹೊಂದುವ ಸಂದೇಶ ಚಿತ್ರದಲ್ಲಿದೆ. ಈಗಾಗಲೇ ನಮ್ಮ ಸಿನಿಮಾ ಟ್ರೇಲರ್ ಮೂಲಕ ಪ್ರೇಕ್ಷಕರ ಮನಗೆದ್ದಿದೆ. ಪುಷ್ಪ ಚಿತ್ರದ ಮುಂದೆ ತೆರೆಗೆ ಬಂದರೂ ನಮ್ಮ ಚಿತ್ರವನ್ನು ಸಿಪ್ರಿಯರು ಮೆಚ್ಚಿ ಆಶೀರ್ವಧಿಸುತ್ತಾರೆ ಎಂಬ ನಂಬಿಕೆ ನನಗಿದೆ ಎನ್ನುತ್ತಾರೆ ನಿರ್ದೇಶಕ ಕರ್ಣನ್. ವೈಟ್ ಲೋಟಸ್ ಎಂಟರ್‌ಟೇನ್‌ಮೆಂಟ್ ಮತ್ತು ಓಂ ಸಿನಿಮಾ ಎಂಟರ್‌ಟೇನ್‌ಮೆಂಟ್ ಬ್ಯಾನರ್‌ನಲ್ಲಿ ಧೀರ ಭಗತ್‌ರಾಯ್ ನಿರ್ಮಾಣವಾಗಿದೆ.

ಅರವಿಂದ್ ಸ್ವಾಮಿಗೆ ಬರೀ ಟೆನ್ಷನ್

ತೆರೆಗೆ ಸಿದ್ಧವಾಗಿರುವ ಆರಾಮ್ ಅರವಿಂದ್ ಸ್ವಾಮಿ ಸಿನಿಮಾದ ಟ್ರೇಲರ್ ರಿಲೀಸ್ ಆಗಿದೆ. ಕಾಮಿಡಿ ಜತೆಗೆ ಎಮೋಷನ್, ಆ್ಯಕ್ಷನ್ ಅಂಶಗಳೂ ಚಿತ್ರದಲ್ಲಿ ಬೆರೆತಿವೆ. ಆರಾಮ್ ಅರವಿಂದ್ ಸ್ವಾಮಿ ಟ್ರೇಲರ್‌ನಲ್ಲಿಯೂ ಮೋಡಿ ಮಾಡಿದ್ದಾನೆ. ನೋಡೋದಕ್ಕೆ ಫುಲ್ ಆರಾಮ್ ಆಗಿರುವ ಅರವಿಂದ್ ಸ್ವಾಮಿ ಲೈಫ್‌ನಲ್ಲಿ ಬರೀ ಟೆನ್ಷನ್‌ಗಳೇ ತುಂಬಿವೆ. ಪ್ರೀತಿ, ಮದುವೆ, ದುಡ್ಡ, ಫ್ಯಾಮಿಲಿ ಸುತ್ತ ಚಿತ್ರದ ಕಥೆ ಸಾಗುತ್ತದೆ. ಆರಾಮ್ ಅರವಿಂದ್ ಸ್ವಾಮಿ ಕೌಟುಂಬಿಕ ಕಥೆಯ ಸಿನಿಮಾ ಎಂಬುದು ಟ್ರೇಲರ್‌ನಲ್ಲಿ ಸ್ಪಷ್ಟವಾಗಿದೆ. ನಮ್ ಗಣಿ ಬಿಕಾಂ ಪಾಸ್, ಗಜಾನನ ಆಂಡ್ ಗ್ಯಾಂಗ್ ಚಿತ್ರಗಳ ಮೂಲಕ ಭರವಸೆ ಮೂಡಿಸಿರುವ ನಿರ್ದೇಶಕ ಅಭಿಷೇಕ್ ಶೆಟ್ಟಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಈ ಹಿಂದೆ ಮಾಸ್ ಪಾತ್ರಗಳಲ್ಲಿ ಮನಗೆದ್ದಿದ್ದ ಅನೀಶ್, ಆರಾಮ್ ಅರವಿಂದ್ ಸ್ವಾಮಿಯಲ್ಲಿ ಕಾಮಿಡಿ ಜತೆಗೆ ಸೆಂಟಿಮೆಂಟ್‌ನಲ್ಲಿ ಮಿಂಚಿದ್ದಾರೆ. ಮಿಲನಾ ನಾಗರಾಜ್, ಹೃತಿಕಾ ಶ್ರೀನಿವಾಸ್ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಅರ್ಜುನ್ ಜನ್ಯ ಈ ಚಿತ್ರದ ಹಾಡುಗಳಿಗೆ ಸಂಗೀತ ಸಂಯೋಜಿದ್ದಾರೆ. ವೈವಿಬಿ ಶಿವಸಾಗರ್ ಛಾಯಾಗ್ರಹಣ, ಉಮೇಶ್ ಆರ್.ಬಿ ಸಂಕಲನ ಈ ಚಿತ್ರಕ್ಕಿದೆ. ಶ್ರೀಕಾಂತ್ ಪ್ರಸನ್ನ ಹಾಗೂ ಪ್ರಶಾಂತ್ ರೆಡ್ಡಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಆರಾಮ್ ಅರವಿಂದ್ ಸ್ವಾಮಿ ಚಿತ್ರ ಇದೇ 22 ರಂದು ರಿಲೀಸ್ ಆಗಲಿದೆ.